ಕರ್ನಾಟಕ ಸಾಹಿತ್ಯ ಅಕಾಡೆಮಿ

# ಹಾ.ಮಾ.ನಾಯಕ

## ಡಾ.ಪದ್ಮಾಶೇಖರ್



ಅಕಾಡೆಮಿ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ

# ಹಾ.ಮಾ. ನಾಯಕ

ಪ್ರಧಾನ ಸಂಪಾದಕರು
ಪ್ರೊ. ಮಾಲತಿ ಪಟ್ಟಣಶೆಟ್ಟಿ

ಸಂಪಾದಕರು
ಪ್ರೊ. ಕೆ.ಎಸ್. ಮಧುಸೂದನ

ಲೇಖಕರು
ಡಾ. ಪದ್ಮಾಶೇಖರ್

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.
ದೂರವಾಣಿ: 080–22211730/22106460
www.karnatakasahithyaacademy.org
Email: sahithya.academy@gmail.com

# HA.MA. NAYAKA

**Written by: Dr. Padmashekhar.**


Published by
**C.H.Bhagya**
Registrar
Karnataka Sahithya Academy
Kannada Bhavana
J.C.Road, Bengaluru-560 002.



© ಕರ್ನಾಟಕ ಸಾಹಿತ್ಯ ಅಕಾಡೆಮಿ



| | |
|---|---|
| ಪುಟಗಳು | : xii+೧೩೮ |
| ಬೆಲೆ | : ₹ ೧೪೫/– |
| ಮೊದಲ ಮುದ್ರಣ | : ೨೦೧೬ |
| ಪ್ರತಿಗಳು | : ೫೦೦ |
| ಮುಖಪುಟ ವಿನ್ಯಾಸ | : ಅರುಣ್ ಕುಮಾರ್ ಜಿ. |

| | |
|---|---|
| Pages | : xii+138 |
| Price | : ₹ 145/- |
| First impression | : 2016 |
| Copies | : 500 |

**ಪ್ರಕಾಶಕರು:**
**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.

**ಮುದ್ರಕರು:**
ಸರ್ಕಾರಿ ಕೇಂದ್ರ ಮುದ್ರಣಾಲಯ
ಆರ್.ವಿ.ಕಾಲೇಜ್ ಅಂಚೆ
8ನೇ ಮೈಲಿ, ಮುತ್ತುರಾಯನಗರ
ಜ್ಞಾನಭಾರತಿ, ಮೈಸೂರು ರಸ್ತೆ
ಬೆಂಗಳೂರು–560 059.
080– 28483133 / 28484518

# ಅಧ್ಯಕ್ಷೀಯ ನುಡಿ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ಥಾಪಿತವಾಗಿದ್ದು 1961ರಲ್ಲಿ. ಅದು ಭಾಷಾವಾರು ಪ್ರಾಂತ ರಚನೆಯಾಗಿ ನಾಡು ನುಡಿ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರ ಕುತೂಹಲ, ಅಭಿಮಾನ, ಪ್ರೀತಿ ಸ್ಫೋಟಗೊಂಡ ಸಮಯ. ನಾಡು ನುಡಿ, ಸಂಸ್ಕೃತಿಗಳನ್ನು ಹೊಸದಾಗಿ ಕಟ್ಟಿ ಬೆಳೆಸುವ ಹುಮ್ಮಸ್ಸಿನ ದಿನಗಳಾಗಿದ್ದವು ಅವು. ಜನರ ಬೇಡಿಕೆಗೆ ಸ್ಪಂದಿಸಿ ಅಂದಿನ ಸರಕಾರವು ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಅಂದು ಶಿಕ್ಷಣ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಎಸ್.ಆರ್. ಕಂಠಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದ್ದನ್ನು ನಾವು ಇಂದು ಕೃತಜ್ಞತೆಗಳೊಂದಿಗೆ ನೆನೆಯಬೇಕು. ಆನಂತರದ ಅಧ್ಯಕ್ಷತೆಯನ್ನು ಶ್ರೀ ಕೆ.ವಿ. ಶಂಕರಗೌಡ, ಶ್ರೀ ಕೆ.ಎಚ್. ಶ್ರೀನಿವಾಸ್ ಹಾಗೂ ಶ್ರೀ ಆರ್. ಗುಂಡೂರಾವ್‌ರಂಥ ಹಿರಿಯ ರಾಜಕಾರಣಿಗಳು ಸಾಹಿತ್ಯ ಅಕಾಡೆಮಿಯ ಸೂತ್ರಧಾರಿತ್ವ ವಹಿಸಿ ಸಮರ್ಥವಾಗಿ ಮುನ್ನಡೆಸಿದರು.

ಕನ್ನಡದ ದಿಗ್ಗಜ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯರು, ಶ್ರೀರಂಗರು ಅಕಾಡೆಮಿಗೆ ಭದ್ರಬುನಾದಿ ಹಾಕಲು ಪ್ರಯತ್ನಿಸಿದರು. ನಂತರ ಅಧ್ಯಕ್ಷರಾದ ಡಾ. ಹಾ.ಮಾ. ನಾಯಕ, ಡಾ. ನಿಸಾರ್ ಅಹಮದ್ ಮತ್ತು ಡಾ. ಜಿ.ಎಸ್. ಶಿವರುದ್ರಪ್ಪ ಅವರುಗಳು ಅಕಾಡೆಮಿಗೆ ಖಚಿತವಾದ ರೂಪರೇಷೆಗಳ ಚೌಕಟ್ಟನ್ನು ನಿರ್ಮಿಸಿದರು. ಸಮಯದ ಬೇಡಿಕೆಗಳಿಗನುಸಾರವಾಗಿ ಹೊಸ ಯೋಜನೆಗಳನ್ನು ಕೈಗೊಂಡರು. ಅವರು ಪ್ರಕಟಿಸಿದ ಉತ್ತಮೋತ್ತಮ ಗ್ರಂಥಗಳು ಇಂದಿಗೂ ಬೇಡಿಕೆಯಲ್ಲಿವೆ. ನಂತರ ಅಧ್ಯಕ್ಷ ಸ್ಥಾನ ಸ್ವೀಕರಿಸಿದ ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಶಾಂತರಸ ಮತ್ತು ಡಾ. ಗುರುಲಿಂಗ ಕಾಪಸೆಯವರಂಥ ಹಿರಿಯ ಸುಪ್ರಸಿದ್ಧ ಸಾಹಿತಿಗಳು ತಮ್ಮ ನಿಷ್ಠೆ, ಪರಿಶ್ರಮಗಳಿಂದಾಗಿ ಅಕಾಡೆಮಿಗೆ ಘನತೆ, ಗೌರವ ತಂದುಕೊಟ್ಟರು. ಡಾ. ಗೀತಾ ನಾಗಭೂಷಣ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯರಂಥ ಸಾಹಿತಿ, ವಿದ್ವಾಂಸರು ಸಾಹಿತ್ಯ ಅಕಾಡೆಮಿಯ ತೇರನ್ನು ಮುನ್ನಡೆಸಿದರು. ಇವರೆಲ್ಲರ ಸೇವೆಯನ್ನು ಕೃತಜ್ಞತೆಗಳೊಂದಿಗೆ ಸ್ಮರಿಸುತ್ತೇನೆ.

ನನ್ನ ಅವಧಿಯಲ್ಲಿ (2014–17) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವದ ಉದ್ಘಾಟನೆಯನ್ನು ಶಿವಮೊಗ್ಗೆಯಲ್ಲಿ ಆಗಸ್ಟ್ 3, 2014 ರಂದು ಸಕಲ ಸಡಗರಗಳೊಂದಿಗೆ ನೆರವೇರಿಸಲಾಯ್ತು.

ಡಾ. ಕೆ.ವಿ. ನಾರಾಯಣರಂಥ ಹಿರಿಯ ಸಾಹಿತಿ, ವಿದ್ವಾಂಸರು ಈ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಇದೇ ವೇದಿಕೆಯಲ್ಲಿ ಡಾ. ಗುರುಲಿಂಗ ಕಾಪಸೆ, ಡಾ. ಗಿರಡ್ಡಿ ಗೋವಿಂದರಾಜ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರನ್ನು ಸನ್ಮಾನಿಸಲಾಯ್ತು (ಡಾ. ನಿಸಾರ್ ಅಹಮದ್ ಮತ್ತು ಡಾ. ಗೀತಾ ನಾಗಭೂಷಣ ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯ್ತು). ಆ ನಂತರ ಮುಂದಿನ ಎರಡು ವರ್ಷದ ಅವಧಿಯಲ್ಲಿ ಸುವರ್ಣ ಸಂಭ್ರಮದ ಯೋಜನೆಯಡಿ ಕವಿಗೋಷ್ಠಿ, ಕಮ್ಮಟ ಹಾಗೂ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗಿತ್ತು.

ಸುವರ್ಣ ಮಹೋತ್ಸವದ ಅಂಗವಾಗಿ ಸಮಾರೋಪ ಸಂದರ್ಭದಲ್ಲಿ ನಾಲ್ಕು ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದಿದ್ದೇವೆ.

1. ಸಾಹಿತ್ಯ ಅಕಾಡೆಮಿಯ ಹಿಂದಿನ ಹದಿನೆಂಟು ಜನ ಅಧ್ಯಕ್ಷರ ಪರಿಚಯ, ಸಾಹಿತ್ಯ ಸಾಧನೆ ಮತ್ತು ಸಾಹಿತ್ಯ ಅಕಾಡೆಮಿಗೆ ಅವರ ಸೇವೆ ಕುರಿತ ಪುಸ್ತಕ ಮಾಲೆಯನ್ನು ಪ್ರಕಟಿಸಿದ್ದೇನೆ.
2. ಕಳೆದ ಅರ್ಧ ಶತಮಾನದ ಕಾಲಾವಧಿಯಲ್ಲಿ ಸಾಹಿತ್ಯ ಅಕಾಡೆಮಿಯ ಕೆಲಸ ಕಾರ್ಯಗಳು ಜನಮನದ ಮೇಲೆ ಬೀರಿದ ಪರಿಣಾಮ ಕುರಿತ "ಪರಿಣಾಮ ಅಧ್ಯಯನ" ಗ್ರಂಥವನ್ನು ಪ್ರಕಟಿಸಿದ್ದೇನೆ.
3. ಸಾಹಿತ್ಯ ಅಕಾಡೆಮಿಯನ್ನು ಕುರಿತ ಸಾಕ್ಷ್ಯಚಿತ್ರ ನಿರ್ಮಾಣ.
4. ಕನ್ನಡ ಸಾಹಿತ್ಯ ಸಂವೇದನೆ ಕುರಿತ ರೂಪಕದ ರಂಗಪ್ರಯೋಗ.

ಸುವರ್ಣ ಮಹೋತ್ಸವದ ಉದ್ಘಾಟನೆ ಹಾಗೂ ಈ ಮಹೋತ್ಸವದ ನೆನಪಿಗಾಗಿ ಹಮ್ಮಿಕೊಂಡಿದ್ದ ಸರಣಿ ಕಾರ್ಯಕ್ರಮಗಳಲ್ಲದೆ, ಈಗ ಸಮಾರೋಪ ಸಮಾರಂಭಗಳಲ್ಲಿ ಪಾಲ್ಗೊಂಡ ಎಲ್ಲ ಸಾಹಿತಿಗಳಿಗೆ, ವಿದ್ವಾಂಸರಿಗೆ, ಕಲಾವಿದರಿಗೆ ಮತ್ತು ಸುವರ್ಣ ಮಹೋತ್ಸವದ ಎಲ್ಲ ಕಾರ್ಯಕ್ರಮಗಳಿಗೆ ಸಲಹೆ ನೀಡಿದ ತಜ್ಞ ಸಾಹಿತಿಗಳಾದ ಡಾ. ಹಂ.ಪ. ನಾಗರಾಜಯ್ಯ, ಡಾ. ಕೆ.ವೈ. ನಾರಾಯಣಸ್ವಾಮಿ ಮತ್ತು ಅಕಾಡೆಮಿಯ ಸದಸ್ಯರಾದ ಶ್ರೀಮತಿ ಬಿ.ಟಿ. ಜಾಹ್ನವಿ ಅವರುಗಳನ್ನು ಮನಃಪೂರ್ವಕ ನೆನೆಯುತ್ತೇನೆ. ನಮ್ಮ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ ಮತ್ತು ಜಂಟಿ

ನಿರ್ದೇಶಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಅವರುಗಳಿಗೆ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಎಲ್ಲ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನದಲ್ಲಿ ತರಲು ಅಪಾರ ಪರಿಶ್ರಮ ವಹಿಸಿದ ರಿಜಿಸ್ಟ್ರಾರರಾದ ಶ್ರೀಮತಿ ಸಿ.ಎಚ್. ಭಾಗ್ಯ ಅವರಿಗೂ ಹೃದಯಪೂರ್ವಕ ವಂದನೆಗಳು. ಸಾಹಿತ್ಯ ಅಕಾಡೆಮಿಯ ಸಿಬ್ಬಂದಿಗಳಾದ ಶ್ರೀಮತಿ ಟಿ. ಸೌಭಾಗ್ಯ, ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ವಿ. ಹರೀಶ್‌ಕುಮಾರ್, ಶ್ರೀ ಕೃಷ್ಣಪ್ಪ ಡಿ., ಶ್ರೀ ಹರೀಶ್ ಮತ್ತು ಶ್ರೀಮತಿ ಎಸ್.ಜಿ. ಸುಚಿತ್ರ ಇವರೆಲ್ಲರೂ ಕೈಜೋಡಿಸದಿದ್ದರೆ ಇಂಥ ಬೃಹತ್ ಕಾರ್ಯಕ್ರಮಗಳು ಅಸಾಧ್ಯ. ಇವರೆಲ್ಲರ ನಿಷ್ಠೆ, ಪರಿಶ್ರಮಗಳನ್ನು ಮನಃಪೂರ್ವಕ ನೆನೆಯುತ್ತೇನೆ. ಹಾಗೆಯೇ ಮುದ್ರಣ ಕಾರ್ಯ ನಿರ್ವಹಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರು ಹಾಗೂ ಅಧಿಕಾರಿ/ ಸಿಬ್ಬಂದಿಗಳೆಲ್ಲರನ್ನೂ ನಾನಿಲ್ಲಿ ಕೃತಜ್ಞತೆಗಳೊಂದಿಗೆ ನೆನೆಯುತ್ತೇನೆ.

2016

**ಮಾಲತಿ ಪಟ್ಟಣಶೆಟ್ಟಿ**
ಅಧ್ಯಕ್ಷರು

## ಸಂಪಾದಕೀಯ

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಗೆ ಇದು ಅಪರಂಜಿ ವರುಷ. ಐವತ್ತು ವರುಷ ತುಂಬಿದ ಈ ಸಾರ್ಥಕ ಸಾಧನೆಯ ಸಂದರ್ಭದಲ್ಲಿ ಸಂಸ್ಥೆಯು ತನ್ನನ್ನು ಈ ಎತ್ತರಕ್ಕೆ ಬೆಳೆಸಿದ ಹಿಂದಿನ ಅಧ್ಯಕ್ಷರುಗಳ ಸಾಧನೆಗಳನ್ನು ಕುರಿತು ಹೊತ್ತಗೆಗಳನ್ನು ಹೊರತರುತ್ತಿರುವುದು ಸಂತಸದ ಸಂಗತಿ. ಆರಂಭಕ್ಕೆ ಮಂತ್ರಿ ಮಹೋದಯರುಗಳು ಅಧ್ಯಕ್ಷರಾಗಿದ್ದುಕೊಂಡು ಸಂಸ್ಥೆಯನ್ನು ಮುನ್ನೋಟದಿಂದ ನಡೆಸಿದರು. ನಂತರ ಅಧ್ಯಕ್ಷರ ಸ್ಥಾನಕ್ಕೆ ನಾಡಿನ ಹಿರಿಯ ಸಾಹಿತಿ ಮುತ್ಸದ್ದಿಗಳನ್ನು ಆಯ್ಕೆ ಮಾಡುವ ಕ್ರಮ ಜಾರಿಗೆ ಬಂತು. ಹೀಗಾಗಿ ಈ ಪ್ರತಿಷ್ಠಿತ ಅಕಾಡೆಮಿಗೆ ಇದುವರೆಗೆ 18 ಮಂದಿ ಅಧ್ಯಕ್ಷರಾಗಿ ಅಕಾಡೆಮಿಯನ್ನು ಭಾರತ ದೇಶದ ಗಮನಾರ್ಹ ಸಾಹಿತ್ಯ ಸಂಸ್ಥೆಯನ್ನಾಗಿ ಬೆಳೆಸಿದ್ದಾರೆ.

'ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ' ಎನ್ನುವ ನಾಮನಿರ್ದೇಶನದಡಿ ಈ ಪುಸ್ತಕಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿದೆ. ಒಂದು ಸಂಸ್ಥೆ ನಾಡಿನೊಳಗೆ ಸರ್ವಾಂಗೀಣವಾಗಿ, ಸಮೃದ್ಧವಾಗಿ ಬೆಳೆದು ನಾಡಿನ ಜನರ ಮೇಲೆ ದೀರ್ಘಕಾಲಿಕ ಪ್ರಭಾವವನ್ನು ಬೀರಬೇಕಾದರೆ ಅದರ ಮುಂಚೂಣಿಯಲ್ಲಿ ನಿಂತು ನಡೆಸುವ ಅಧ್ಯಕ್ಷೀಯ ಸ್ಥಾನದ ಪಾತ್ರ ಮಹತ್ವವಾದದ್ದು. ಹಾಗೆಯೇ ಒಂದು ಸಂಸ್ಥೆಯ ಇತಿಹಾಸದಲ್ಲಿ ಐವತ್ತು ವರ್ಷಗಳ ಕಾಲಮಾನ ಕೂಡ ಒಂದು ಮೈಲಿಗಲ್ಲು. ಹೀಗಾಗಿ ಇಂತಹ ಸಂದರ್ಭದಲ್ಲಿ ಅಕಾಡೆಮಿಯನ್ನು ಸಮರ್ಥವಾಗಿ ನಡೆಸಿದ ಹಿಂದಿನ ಅಧ್ಯಕ್ಷರುಗಳಾಗಿದ್ದ ನಾಡಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯ, ಶ್ರೀ ಆದ್ಯ ರಂಗಾಚಾರ್ಯ, ಶ್ರೀ ಹಾ.ಮಾ. ನಾಯಕ, ಪ್ರೊ. ಕೆ.ಎಸ್. ನಿಸಾರ್ ಅಹಮದ್, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಗುರುಲಿಂಗ ಕಾಪಸೆ, ಡಾ. ರಾ.ಶಿ. (ಎಂ. ಶಿವರಾಂ), ಡಾ. ಶಾಂತರಸ, ನಾಡೋಜ ಗೀತಾ ನಾಗಭೂಷಣ, ಪ್ರೊ. ಎಂ.ಎಚ್. ಕೃಷ್ಣಯ್ಯ ಮುಂತಾದವರುಗಳ ಸಾಧನೆಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸುತ್ತಿರುವುದು ಸೂಕ್ತವೂ, ಸಮಂಜಸವೂ ಆಗಿದೆ. ಈ ಕೃತಿಗಳನ್ನು ಶ್ರದ್ಧೆಯಿಂದ ರಚಿಸಿದ ನಾಡಿನ ವಿವಿಧ ಭಾಗದ ಬರಹಗಾರರಾದ ಶಾ.ಮಂ. ಕೃಷ್ಣರಾವ್, ಕೆ.ಎಂ. ವಿಜಯಲಕ್ಷ್ಮಿ, ಡಾ. ಪದ್ಮಾಶೇಖರ್, ಡಾ. ರಾಮಚಂದ್ರ ಗಣಾಪುರ, ಶೂದ್ರ ಶ್ರೀನಿವಾಸ್, ಎಸ್. ಮಾರುತಿ, ಪ್ರೊ. ಮಲ್ಲಿಕಾರ್ಜುನ ಹಿರೇಮಠ, ಡಾ. ಗುರುಪಾದ ಮರಿಗುದ್ದಿ, ಡಾ. ಪ್ರಭು ಖಾನಾಪುರೆ, ಡಾ. ಪ್ರಮೀಳಾ ಮಾಧವ್, ಡಾ. ಎಲ್.ಜಿ. ಮೀರಾ ಈ ಎಲ್ಲರಿಗೂ ಕೃತಜ್ಞತೆಗಳು.

..

ಈ ಜವಾಬ್ದಾರಿಯನ್ನು ನನಗಿತ್ತು ಈ ಕಾರ್ಯದಲ್ಲಿ ಸಂಪೂರ್ಣ ನೆರವು ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ, ರಿಜಿಸ್ಟ್ರಾರ್ ಸಿ.ಎಚ್. ಭಾಗ್ಯ ಹಾಗೂ ಅಕಾಡೆಮಿ ಸಿಬ್ಬಂದಿ ವರ್ಗಕ್ಕೆ ನನ್ನ ನಮ್ರ ಪ್ರಣಾಮಗಳು.

ಪ್ರೊ. ಕೆ.ಎಸ್. ಮಧುಸೂದನ
ಸಂಪಾದಕರು

# ಅರಿಕೆ

ಎರಡು ಅವಧಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಅಧ್ಯಕ್ಷರಾಗಿ ಅದಕ್ಕೆ ಅವರ ಅವಧಿಯಲ್ಲಿ ಕಾಯಕಲ್ಪ ನೀಡಿದ ನಾಯಕರನ್ನು ಕುರಿತು ಒಂದು ಪುಸ್ತಕ ಹೊರತರಲು ತೀರ್ಮಾನಿಸಿದ ಅಕಾಡೆಮಿಯ ಸದಸ್ಯರೆಲ್ಲ ಅಭಿನಂದನಾರ್ಹರು. ಮುಖ್ಯವಾಗಿ ಅದರ ಅಧ್ಯಕ್ಷರಾದ ಹೆಸರಾಂತ ಲೇಖಕಿ, ಕವಿಯತ್ರಿ ಮಾಲತಿ ಪಟ್ಟಣಶೆಟ್ಟಿ ಅವರಿಗೆ ಈ ಗೌರವ ಸಲ್ಲಬೇಕು. ನಾಯಕರ ಬಗೆಗೆ ಬರೆಯಲು ನನಗೆ ಅವಕಾಶ ಕಲ್ಪಿಸಿದ್ದು ಸಂತೋಷ ತಂದಿದೆ. ನಾಯಕರು ನನಗೆ ಪಾಠ ಹೇಳಿದ ಗುರುಗಳು ಮಾತ್ರವಲ್ಲ, ನನ್ನ ಬದುಕನ್ನೇ ರೂಪಿಸಿದವರು.

ಈಗಾಗಲೇ ನಾಯಕರನ್ನು ಕುರಿತ ಅನೇಕ ಪುಸ್ತಕಗಳು ಪ್ರಕಟವಾಗಿವೆ. ಇತ್ತೀಚೆಗೆ ಅವರ ತಮ್ಮ ಪ್ರೊ. ಎಚ್.ಎಸ್. ಈಶ್ವರ ಅವರು 'ಹಾಮಾನಾ ನನ್ನ ದೊಡ್ಡಣ್ಣ' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ನಾಯಕರನ್ನು ಕುರಿತ ನಮ್ಮದೇ 'ಕನ್ನಡದ ಕಾರಣಿಕ ಹಾಮಾ ನಾಯಕ' ಹೊರಬಂದಿದೆ. ನಾಯಕರ ಬಗ್ಗೆ ಬರೆದ ಕಿರುಲೇಖನ ಸಂಗ್ರಹಗಳು 'ನಮ್ಮ ನಾಯಕರು', 'ಶಬ್ದಾಂಜಲಿ' ಮುಂತಾದುವಿವೆ. ಚಂದ್ರಯ್ಯನಾಯ್ಡು, ರಮೇಶ್ ಮೊದಲಾದವರು ನಾಯಕರ ಬಗ್ಗೆ ಬರೆದು ಪ್ರಕಟಿಸಿದ್ದಾರೆ. ಆದರೂ ನಾಯಕರ ಪೂರ್ಣವ್ಯಕ್ತಿತ್ವ ಅನಾವರಣಗೊಂಡಿದೆ ಎಂದು ನನಗೆ ಅನಿಸುವುದಿಲ್ಲ. ಏಕೆಂದರೆ, ಹಾಮಾನಾ ಅವರ ವ್ಯಕ್ತಿತ್ವವೇ ಅಂಥದು. ಸುಲಭಗ್ರಾಹ್ಯವಾದುದಲ್ಲ, ಸುಲಭಸಾಧ್ಯವಾದುದಲ್ಲ. ಪ್ರಸ್ತುತ ಕೃತಿಯೂ ಈ ನಿಟ್ಟಿನಲ್ಲಿ ಒಂದು ಪ್ರಯತ್ನ ಅಷ್ಟೆ.

ನನಗೆ ಈ ಪುಸ್ತಕ ಬರೆಯಲು ಸಿಕ್ಕ ಸಮಯ ಬಹಳ ಕಡಿಮೆ. ಹೀಗಾಗಿ, ಪರಾಮರ್ಶನದಲ್ಲಿ ನಮೂದಿಸಿರುವ ಕೆಲವು ಪುಸ್ತಕಗಳ ಮಾಹಿತಿಯನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಆ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ನನ್ನ ಪತಿ ಭಾಷಾವಿಜ್ಞಾನದ ನಿವೃತ್ತ ಪ್ರಾಧ್ಯಾಪಕರಾದ ಡಾ: ಸೋಮಶೇಖರಗೌಡ ಅವರಿಗೆ ಮಾತುಗಳಲ್ಲಿ ಏನನ್ನೂ ಹೇಳಲು ಸಾಧ್ಯವಾಗುವುದಿಲ್ಲ. ನನ್ನ ಬದುಕಿನ, ಬರಹದ ಬೆನ್ನುಹುರಿಯೇ ಅವರು. ಇತ್ತೀಚೆಗೆ, ಕವಿಯಾಗಿ ಹೆಸರು ಮಾಡಿರುವ ನನ್ನ ಮಗ ಪ್ರೀತಮ್ ಎಸ್. ಗೌಡ ನನ್ನನ್ನು ಕಟ್ಟೆಚ್ಚರದಿಂದ ಜತನ ಮಾಡುತ್ತಿದ್ದಾನೆ. ಸೊಸೆ ಅಂಕಿತಾಪ್ರೀತಮ್ ನನ್ನ ನೆಮ್ಮದಿಗೆ ಕಾರಣವಾಗಿದ್ದಾಳೆ. ಹಿರಿಯರಾದ ಹ.ಕ. ರಾಜೇಗೌಡ, ಡಿ.ಕೆ. ರಾಜೇಂದ್ರ, ರಾಗೌ, ಮಿತ್ರರಾದ ಪ್ರೊ. ಜಯಪ್ರಕಾಶಗೌಡ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಪ್ರೊ. ಶ್ರೀನಿವಾಸ ವರಖೇಡಿ, ಬಸವರಾಜ್ ಕಲ್ಗುಡಿ, ಪ್ರೊ. ವೈ.ಎಸ್.

ಸಿದ್ದೇಗೌಡ, ಪ್ರಕಾಶ್ ಪಾಗೋಜಿ, ಎಂ. ಶಿವಮೂರ್ತಿ –ಇವರನ್ನು ನೆನಪಿಸಿಕೊಳ್ಳಬೇಕು.

ಹಸ್ತಪ್ರತಿಯನ್ನು ಅಂದವಾಗಿ ಡಿಟಿಪಿಗೆ ಅಳವಡಿಸಿದ ಮಂಗಲ ಗಣೇಶ್ ಅವರಿಗೆ, ಮುದ್ರಿಸಿದವರಿಗೆ, ಮುಖ್ಯವಾಗಿ ಸಾಹಿತ್ಯ ಅಕಾಡೆಮಿಯ ಎಲ್ಲ ಆಡಳಿತ ವರ್ಗಕ್ಕೆ, ರಿಜಿಸ್ಟ್ರಾರ್ ಶ್ರೀಮತಿ ಭಾಗ್ಯ ಅವರಿಗೆ ನಾನು ಆಭಾರಿ.

೧೬.೦೨.೨೦೧೬

ಮೈಸೂರು

**ಡಾ. ಪದ್ಮಾಶೇಖರ್**

## ಪರಿವಿಡಿ


| | |
|---|---|
| ಅಧ್ಯಕ್ಷರ ನುಡಿ | iii |
| ಅರಿಕೆ | vii |
| 1. ಹಾಮಾನಾ ಎಂದರೆ... | 1–5 |
| 2. ಹಾಮಾನಾ ಕುರಿತು... | 6–27 |
| 3. ಹಾಮಾನಾ ಹುಟ್ಟೂರು, ಪರಿಸರ | 28–30 |
| 4. ಹಾಮಾನಾ ಬಾಲ್ಯ, ವಿದ್ಯಾಭ್ಯಾಸ | 31–37 |
| 5. ಹಾಮಾನಾ ಕುಟುಂಬ | 38–42 |
| 6. ಹಾಮಾನಾ ಮುಂದುವರಿದ ಶಿಕ್ಷಣ | 43–45 |
| 7. ಹಾಮಾನಾ ವಿವಿಧ ಹುದ್ದೆಗಳಲ್ಲಿ | 46–53 |
| 8. ಹಾಮಾನಾ ತಜ್ಞತೆಯ ಕ್ಷೇತ್ರಗಳು | 54–71 |
| 9. ಹಾಮಾನಾ ಸಾಹಿತ್ಯಕೃಷಿ | 72–109 |
| 10. ಹಾಮಾನಾ ಮತ್ತು ಕನ್ನಡ | 110–117 |
| ಪರಾಮರ್ಶನ ಗ್ರಂಥಗಳು | 118–119 |
| ಅನುಬಂಧ | 129–138 |

## ೧. ಹಾಮಾನಾ ಅಂದರೆ....

ಹಾಮಾ ನಾಯಕರನ್ನು ಒಮ್ಮೆ ಕಂಡವರು, ಅವರನ್ನು ಮಾತಾಡಿಸಿದವರು, ಅವರ ಭಾಷಣವನ್ನು ಕೇಳಿದವರು ಅವರನ್ನು ಮರೆಯುವುದು ಸಾಧ್ಯವಿಲ್ಲ. ಏಕೆಂದರೆ ಅವರ ಆಕಾರದಲ್ಲಿ ಅಂಥ ಸೆಳೆತವಿತ್ತು, ಅವರ ಮಾತಿನಲ್ಲಿ ಅಂಥ ಮೋಡಿ ಇತ್ತು. ಅವರೊಬ್ಬ ಸ್ಪುರದ್ರೂಪಿ. "ಮಟ್ಟಸವಾದ ಗುಂಡಾದ ಶರೀರ. ಅದಕ್ಕೆ ಒಪ್ಪುವ ಖಾದಿ ಜುಬ್ಬ. ಪ್ಯಾಂಟಿನಂಥ ಬಿಳಿ ಪೈಜಾಮ. ಮಂದಸ್ಮಿತ ವದನ. ನಕ್ಕರೆ ಸುಳಿಪಲ್ಲ ಬೆಳಕು. ವಿಶಾಲ ಹಣೆ. ಹುಬ್ಬಿನಲ್ಲಿ ಅಲ್ಲಲ್ಲಿ ಬಿಳಿಕೂದಲು. ತಲೆಯಿಂದ ಇಳಿಬಿದ್ದ ಮಂಜಿನರೇಖೆಗಳಂಥ ಗುಂಗುರು ಬೆಳ್ಳಿ ಕೂದಲ ರಾಶಿ. ಸಪ್ಪಳವಿಲ್ಲದ ಪುಟ್ಟ ನಡೆ. ನಡೆಗೊಂದು ಸೊಬಗು. ನುಡಿಯಲ್ಲಿ ಕನ್ನಡದ ದನಿ. ನಡೆನುಡಿ ಹೀಗೆ ಮಧುರ. ಎಲ್ಲಿದ್ದರೂ ಎದ್ದುಕಾಣುವ ಸುಂದರ–ಸೌಜನ್ಯ ವಿನಯಗಳ ಸಾಕ್ಷಾತ್ಕಾರ. ಇದು ಮೇಲ್ನೋಟಕ್ಕೆ ಬಿಡಿಸಬಹುದಾದ ಹಾಮಾನಾ ಅವರ ಚಿತ್ತಾರ."(ಪದ್ಮಾಶೇಖರ್, ಕನ್ನಡದ ಕಾರಣಿಕ ಹಾಮಾನಾ, ೨೦೧೨).

ಹಾಮಾನಾ ಅವರ ಜನಪ್ರಿಯತೆಯಂತೂ ಅಸದೃಶವಾದುದು. ಅವರೊಬ್ಬ 'ತಾರಾಮೌಲ್ಯ'ವಿದ್ದ ಕನ್ನಡದ ಅಪರೂಪದ ಸಾಹಿತಿ. ಅವರು ಜನಪ್ರಿಯ ಸಾಹಿತ್ಯ ಪ್ರಕಾರಗಳಲ್ಲಿ ಕೆಲಸ ಮಾಡಿದವರಲ್ಲ. ಕಥೆ, ಕಾದಂಬರಿ, ಕಾವ್ಯ ರಚಿಸಿದವರಲ್ಲ. ಅವರೊಬ್ಬ ವಾಗ್ಮಿ ಆಗಿದ್ದರು. ಅಂಕಣಕಾರರಾಗಿದ್ದರು. ಕನ್ನಡದ ಕಟ್ಟಾಳಾಗಿದ್ದರು. ಆದರೆ ಕ್ರಿಯಾಶೀಲತೆ, ನೈಜಪ್ರತಿಭೆ, ಅಸಾಮಾನ್ಯ ಬುದ್ಧಿವಂತಿಕೆ, ನೈತಿಕ ಧೈರ್ಯ, ದಕ್ಷತೆಗಳು ಅವರನ್ನು ಇತರ ಸಾಹಿತಿಗಳಿಂದ ಬೇರ್ಪಡಿಸಿದ್ದವು. ತಳುಕಿನ ಸ್ವಭಾವ ಅವರದಾಗಿರಲಿಲ್ಲ. ಒಳಗೊಂದು ಹೊರಗೊಂದು ಅವರಲ್ಲಿರಲಿಲ್ಲ. ನೇರ ನಡೆ, ನಿಷ್ಠುರ ಮಾತು. ಅವರು ಕನ್ನಡಸಾಕ್ಷಿಯ ಸಂಕೇತವಾಗಿದ್ದರು. ಪ್ರಾಮಾಣಿಕತೆ, ಪಾರದರ್ಶಕತೆಯ ಪ್ರತೀಕವಾಗಿದ್ದರು. ಕಾರಂತರಂಥವರೇ ಅವರನ್ನು ಕನ್ನಡದ ಮಾನದಂಡ, ಅಳತೆಗೋಲು ಎಂದಿದ್ದಾರೆ. ಕನ್ನಡ ನಾಡು, ನುಡಿ, ನೆಲ, ಜಲಗಳ ವಿಷಯದಲ್ಲಿ ಅವರ ಮಾತಿಗೆ ಸದಾ ಮನ್ನಣೆ ಇತ್ತು. ಅಧಿಕೃತತೆ ಇತ್ತು. ಕನ್ನಡದ ವಿಷಯ ಬಂದಾಗ ಅವರು ಮೈಮೇಲೆ ಬಂದಂತೆ ಆಡುತ್ತಾರೆ ಎಂದು ಅವರ ಆಪ್ತಮಿತ್ರ, ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರೇ ಟೀಕಿಸಿದ್ದುಂಟು. ಒಂದರ್ಥದಲ್ಲಿ ಚಿಂತಕರೂ, ಜಾಗೃತ ಮನಸ್ಸಿನವರೂ ಸಮತೋಲನ ಮನಸ್ಸಿನವರೂ ಆದ ನಾಯಕರು ಕನ್ನಡದ ವಿಷಯ ಬಂದಾಗ ಅವುಗಳನ್ನೆಲ್ಲ ಮೀರಿದ ಪ್ರತಿಕ್ರಿಯೆ

ತೋರಿಸುತ್ತಿದ್ದರು. ಈ ಬಗ್ಗೆ ಅಳುಕು, ಆತಂಕ, ಭಯ ಅವರನ್ನೆಂದೂ ಯಾರನ್ನೂ ಎದುರುಹಾಕಿಕೊಳ್ಳಲು ಹಿಂಜರಿಯುವಂತೆ ಮಾಡುತ್ತಿರಲಿಲ್ಲ. ಅವರೊಬ್ಬ ಕನ್ನಡದ ಧೀರೋದ್ಧಾತ ನಾಯಕರಾಗಿದ್ದರು.

"ನಾಯಕರ ವ್ಯಕ್ತಿತ್ವವನ್ನು ಸೂಕ್ಷ್ಮತೆ, ಸಂಯಮ, ಶಿಸ್ತು, ಸಮಯಪಾಲನೆ, ಅಧ್ಯಯನಶೀಲತೆ, ಬಹುಜ್ಞತೆ, ಸಜ್ಜನಿಕೆ, ಅಂತಃಕರಣಗಳು ರೂಪಿಸಿದ್ದವು. ಆಡಳಿತದಲ್ಲಿ ದಕ್ಷತೆ, ಸಮಯನಿಷ್ಠೆ, ಕ್ರಿಯಾಶೀಲತೆ, ಕಾರ್ಯತತ್ಪರತೆಗಳು ಯಾವಾಗಲೂ ಆದರ್ಶವಾಗಿದ್ದವು. ಎಚ್ಚರಿಕೆಯ ವಿಷಯಗಳಾಗಿದ್ದವು. ಮಾತನಾಡಿ ಕೆಲವೊಮ್ಮೆ, ಮಾತನಾಡದೆ ಕೆಲವೊಮ್ಮೆ ಕೆಲಸ ಮಾಡಿಸುತ್ತಿದ್ದರು. ಅವರು ಕೆಲಸ ಮಾಡುತ್ತಿದ್ದ ರೀತಿ, ಕೆಲಸ ಮಾಡಿಸುತ್ತಿದ್ದ ರೀತಿ–ಎಲ್ಲವೂ ಇವತ್ತಿಗೂ ದಂತಕಥೆಗಳಾಗಿವೆ."(ರಾಗೌ, ಡಾ. ಹಾಮಾನಾ ಕನ್ನಡಪರ ನಿಲುವುಗಳು, ೨೦೧೩).

"ಜೀವನ ಎನ್ನುವುದು ದೊಡ್ಡ ದೊಡ್ಡ ಘಟನೆಗಳಿಂದ ಮಾತ್ರವಲ್ಲ, ಸಣ್ಣಸಣ್ಣ ಘಟನೆಗಳಿಂದಲೂ ಆಗಿದೆ ಎಂಬುದನ್ನು ಅವರು ಮನವರಿಕೆ ಮಾಡಿಕೊಡುತ್ತಿದ್ದರು. ಬದುಕು ದೊಡ್ಡದು ಎಂಬುದನ್ನು ಅವರು ಸದಾ ತೋರಿಸಿಕೊಡುತ್ತಿದ್ದರು. ನಾಯಕರು ಯಾವೊತ್ತೂ ಒಂದು ಮಾದರಿಯಾಗಿದ್ದರು; ಒಂದು ಆದರ್ಶವಾಗಿದ್ದರು." (ರಾಗೌ, ಅದೇ ಪು.VII).

ನಾಯಕರ ಜನಪ್ರಿಯತೆ ವರ್ಗಾತೀತವಾದುದಾಗಿತ್ತು. ಸಾಹಿತಿಗಳು, ಸಂತರು, ಕನ್ನಡ ಕಾರ್ಯಕರ್ತರು, ಕಾರ್ಮಿಕರು, ವಿದ್ಯಾರ್ಥಿಗಳು, ಅವರಿಗಿಂತ ಹಿರಿಯರು, ಅವರಿಗಿಂತ ಕಿರಿಯರು ನಿರ್ಮಾತ್ಸರದಿಂದ, ಅಭಿಮಾನದಿಂದ ಅವರನ್ನು ಆದರಿಸುತ್ತಿದ್ದರು, ಗೌರವಿಸುತ್ತಿದ್ದರು. ಕುಟುಂಬದವರಿಗೆ ಅವರು 'ದೊಡ್ಡಣ್ಣ', ಕನ್ನಡಿಗರಿಗೆ 'ದೊಡ್ಡಯ್ಯ', ಓರಗೆಯವರಿಗೆ 'ಆತ್ಮೀಯ', ಹಿರಿಯ ಸಾಹಿತಿಗಳಿಗೆ ನೆಚ್ಚಿನ 'ನಾಯಕ', ಕಿರಿಯ ಸಾಹಿತಿಗಳಿಗೆ ಅಭಿಮಾನದ 'ಆರಾಧಕ'. ಒಟ್ಟಾರೆ ಕನ್ನಡದ ಕಾರಣಿಕ. ಪ್ರಸಿದ್ಧ ವಿಮರ್ಶಕರಾದ ಜಿ.ಎಚ್. ನಾಯಕರು ಹೇಳಿರುವಂತೆ "ಕಥೆ–ಕಾದಂಬರಿಗಳನ್ನು ಬರೆಯದೆ ವಿಚಾರಶೀಲ ಸಾಹಿತ್ಯದ ಬರವಣಿಗೆಯ ಮೂಲಕವೇ ಇಷ್ಟು ಪ್ರಸಿದ್ಧಿ ಮತ್ತು ಜನಪ್ರಿಯತೆಯನ್ನು ಪಡೆದ ಕನ್ನಡದ ಸಾಹಿತಿ ಬಹುಶಃ ಬೇರೆ ಯಾರೂ ಇಲ್ಲ."

ನಾಯಕರಿಗೆ ಸುಖಾಸುಮ್ಮನೆ ಬಂದುದಲ್ಲ ಜನಪ್ರೀತಿ. ತಮ್ಮ ಬದುಕು ಮತ್ತು ಬರಹವನ್ನು ಅವರು ಕನ್ನಡಕ್ಕಾಗಿ ಮುಡಿಪಾಗಿಟ್ಟವರು. ತಮ್ಮದೇ

ಸ್ಥಾನಮಾನ, ಘನತೆ–ಗೌರವಗಳನ್ನು ಕನ್ನಡ ಕಟ್ಟುವುದಕ್ಕಾಗಿ ಬಳಸಿಕೊಂಡವರು. ಆ ಮೂಲಕ ಕನ್ನಡದ ಕ್ಷಿತಿಜವನ್ನು ವಿಸ್ತರಿಸಿದವರು. ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಥಾನಗ್ರಾಹಿ ಆಗಿಸಿದವರು. 'ಕನ್ನಡ ನನ್ನ ಮೊದಲ ಪ್ರೀತಿ, ಎರಡನೆಯ ಪ್ರೀತಿಯೂ ಅದೇ, ಆದ್ದರಿಂದ ಇಲ್ಲಿ ಸವತಿ ಮಾತ್ಸರ್ಯಕ್ಕೆ ಎಡೆಯಿಲ್ಲ' ಎನ್ನುವ ಮೂಲಕ ತಮ್ಮ ಅತೀವ ಕನ್ನಡ ಪ್ರೀತಿಯನ್ನು ಪ್ರಕಟಿಸಿದವರವರು. 'ಕರ್ನಾಟಕದಲ್ಲಿ ಕನ್ನಡವೇ ಪ್ರಥಮ, ಪ್ರಧಾನ, ರಾಜ, ರಾಣಿ, ರಾಜಕುಮಾರ ಎಲ್ಲ' ಎನ್ನುವ ಅವರು 'ಪ್ರತಿಯೊಬ್ಬ ಕನ್ನಡಿಗನೂ ಪ್ರತಿಯೊಂದು ಅಂಗುಲದಲ್ಲಿಯೂ ಕನ್ನಡಿಗನಾಗಬೇಕು', ಏಕೆಂದರೆ 'ಭಾಷೆಯನ್ನು ಬಿಟ್ಟು ಬದುಕು ಇರುವುದಿಲ್ಲ ಎಂಬುದನ್ನು ನಾವು ಮರೆಯಬಾರದು' ಎಂಬ ಎಚ್ಚರಿಕೆಯ ಗಂಟೆ ಬಾರಿಸಿದವರು. ಹೀಗಾಗಿ ಕನ್ನಡದ ಕಟ್ಟಾಳುಗಳ ಪಟ್ಟಿಯಲ್ಲಿ ಇವರು 'ಬೆಳ್ಳಿಕೂದಲಿನ ಬಂಗಾರದ ಮನುಷ್ಯ'. ಅಗ್ರಪಂಕ್ತಿಯ ಹರಿಕಾರ.

ಕನ್ನಡದ ನಾಯಕರೆಂದೇ ಪ್ರಸಿದ್ಧರಾದ ಡಾ. ಹಾಮಾನಾ ಅವರು ಇಪ್ಪತ್ತನೆಯ ಶತಮಾನದಲ್ಲಿ ಕನ್ನಡ ಕಟ್ಟುವ ಕೆಲಸದಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡವರು. ಅವರನ್ನು ಕೇವಲ ಪ್ರಾಧ್ಯಾಪಕರೆಂದೋ ಸಾಹಿತಿ ಎಂದೋ ಕರೆದು ತೃಪ್ತಿಪಡುವಂತಿಲ್ಲ. ಅವರಿಗೆ ಕನ್ನಡವೆಂದರೆ ಒಂದು ಸಂಸ್ಕೃತಿ. ಒಂದು ಜನಸಂಸ್ಕೃತಿಯ ಎಲ್ಲ ಮಗ್ಗುಲುಗಳ ಏಳ್ಗೆಯನ್ನು ತಮ್ಮ ಜೀವನದ ಧ್ಯೇಯವಾಗಿಸಿಕೊಂಡು ತಮ್ಮ ಅಂತಿಮ ದಿನದವರೆಗೂ ದುಡಿದವರು. ರಾಜಕಾರಣದ ಇಚ್ಛಾಶಕ್ತಿಯ ಕೊರತೆಯಿಂದಾಗಿ ಕನ್ನಡ ಬದುಕಿಗೆ, ಸಂಸ್ಕೃತಿಗೆ ಆಗುತ್ತಿದ್ದ ಅನ್ಯಾಯವನ್ನು ಅವರೆಂದೂ ಮೌನವಾಗಿ ಸಹಿಸಿದವರಲ್ಲ.

ಕನ್ನಡದ ಕೆಲಸ ಆಗಬೇಕಿದ್ದರೆ ನಾಯಕರು ಯಾವ ಮಾರ್ಗವನ್ನು ಬೇಕಾದರೂ ತುಳಿಯುತ್ತಿದ್ದರು. ಸ್ನೇಹದಿಂದಾಗಲೀ, ಪ್ರತಿಭಟನೆಯಿಂದಾಗಲೀ, ತಮ್ಮ ಶೀತಲ ನಡೆಯಿಂದಾಗಲೀ ಕನ್ನಡದ ಕೆಲಸವನ್ನು ಸಾಧಿಸಲು ಯತ್ನಿಸುತ್ತಿದ್ದರು. ಕನ್ನಡದ ಕೆಲಸಕ್ಕೆ ರೈತ, ಕಾರ್ಮಿಕ, ಅಧಿಕಾರಿ, ರಾಜಕಾರಣಿ ಇತ್ಯಾದಿ ಸಮಾಜದ ಎಲ್ಲ ವರ್ಗದ ಜನರು ಸಜ್ಜಾಗಬೇಕೆಂದು, ದುಡಿಯಬೇಕೆಂದು ಹೇಳುತ್ತಿದ್ದರು. ಈ ಬಗೆಯ ಸಮಷ್ಟಿಯ ದುಡಿಮೆಯಿಂದಲೇ ಜನಸಂಸ್ಕೃತಿ ಸಮರ್ಥವಾಗಿ ಅರಳುತ್ತದೆಯೆಂದು ಸಹಜವಾಗಿ ಗುರ್ತಿಸಿದ್ದರು. ಈ ನೆಲೆಯಿಂದ ನಾಯಕರ ಸಾಹಿತಿಯ

ಮುಖಕ್ಕಿಂತ ಅವರ 'ಕನ್ನಡ ಕಾರ್ಯಕರ್ತನ' ವ್ಯಕ್ತಿತ್ವವೇ ಹೆಚ್ಚು ತೂಕವಾದುದು. ಈ ನಿಟ್ಟಿನಲ್ಲಿ ಅವರು ಅನಕೃ, ರಾಮಮೂರ್ತಿಯವರ ಮುಂದುವರಿದ ರೂಪವಾಗಿದ್ದರು. ಎಳವೆಯಿಂದಲೇ ಸಾಹಿತ್ಯ ಮತ್ತು ಸಾಹಿತಿಗಳೊಂದಿಗೆ ಅವರಿಗಿದ್ದ ಒಡನಾಟದ ಫಲವಾಗಿ ಅವರೊಬ್ಬ ಸಮರ್ಪಣ ಮನೋಧರ್ಮದ ಕಾರ್ಯಕರ್ತನಾಗಿ, ಸಾಹಿತ್ಯ-ಸಂಸ್ಕೃತಿಗಳ ವ್ಯಾಪಕ ಅರಿವುಳ್ಳ ಸಮದರ್ಶಿಯಾಗಿ ಕಾಣುತ್ತಾರೆ.

ನವೋದಯದ ಹೆಮ್ಮರಗಳಾದ ಮಾಸ್ತಿ, ಬೇಂದ್ರೆ, ಕಾರಂತ, ಪುತಿನ, ಗೊರೂರು ಮುಂತಾದವರೊಡನಿದ್ದ ಆತ್ಮೀಯ ಸಂಬಂಧ, ಪ್ರಗತಿಶೀಲ ಲೇಖಕರಾದ ಕಟ್ಟೀಮನಿ, ನಿರಂಜನ, ತರಾಸು, ಅನಕೃ ಅವರ ಜೊತೆ ಸಾಧಿಸಿದ್ದ ಸ್ನೇಹಸಂಬಂಧ; ಭೈರಪ್ಪ, ನಿಸಾರ್, ಕಣವಿ ಅವರೊಡನಿದ್ದ ಸೋದರ ಸಂಬಂಧಗಳು ಅನನ್ಯವಾದವುಗಳಾದ್ದರಿಂದ ಹಾಮಾನಾ ಅವರು ಕನ್ನಡ ಸಾಹಿತಿಗಳ ಬರೆಹ ಮತ್ತು ಬದುಕುಗಳನ್ನು ತುಂಬ ಹತ್ತಿರದಿಂದ ಬಲ್ಲವರಾಗಿದ್ದರು. ಹಾಮಾನಾ ಅವರ ಮೇಲೆ ಕುವೆಂಪು ಅವರ ಸಾಹಿತ್ಯ ಮತ್ತು ವ್ಯಕ್ತಿತ್ವಗಳುಂಟುಮಾಡಿದ್ದ ಪ್ರಭಾವವನ್ನು ವಿಶೇಷವಾಗಿ ಹೇಳಬೇಕಿಲ್ಲ. ನವ್ಯದ ಎಲ್ಲ ಲೇಖಕರನ್ನು ಅವರು ನಿಕಟವಾಗಿ ಬಲ್ಲವರಾಗಿದ್ದರು. ಈ ಹಿನ್ನೆಲೆಯಿಂದ ಅವರಿಗೆ ಇಪ್ಪತ್ತನೆಯ ಶತಮಾನದ ಎಲ್ಲ ಸಾಹಿತ್ಯ ಚಳವಳಿಗಳ ಬಗ್ಗೆ ಸಮರ್ಥವಾಗಿ ಮಾತನಾಡಬಲ್ಲ ಶಕ್ತಿ ಇತ್ತು. ಕನ್ನಡವನ್ನು ಜಾಗತಿಕ ನೆಲೆಯಿಂದ ನೋಡುವ, ಕನ್ನಡವನ್ನು ಜಾಗತಿಕ ನೆಲೆಗೆ ಪರಿಚಯಿಸುವ, ಕನ್ನಡವನ್ನು ಆ ನೆಲೆಗೆ ಸರಿಸಮನಾಗಿ ಕಟ್ಟುವ ಕೆಲಸ ಮಾಡಲು ಇದರಿಂದ ಅವರಿಗೆ ಸಾಧ್ಯವಾಯಿತು. ತಳಸಂಸ್ಕೃತಿಯ ನೆಲೆಯಿಂದ ಬದುಕನ್ನು ವಿಮರ್ಶಿಸುವ, ಇಂದಿನ ಮಾನದಂಡಗಳಿಗಿಂತ, ತಳಸಂಸ್ಕೃತಿಯನ್ನು ಜಾಗತಿಕ ನೆಲೆಯ ಆಶಯಗಳಿಗನುಗುಣವಾಗಿ ಅನಾವರಣಗೊಳಿಸುವ ಪದ್ಧತಿ ಅಂದಿನ ಕಾಲಧರ್ಮದ ಒಂದು ಭಾಗವಾಗಿತ್ತು. ನಾಯಕರ ಈ ಕೆಲಸದಿಂದ ಕನ್ನಡಕ್ಕೆ ಮತ್ತು ಕನ್ನಡ ಲೇಖಕರಿಗೆ ರಾಷ್ಟ್ರೀಯ ಮಟ್ಟದಲ್ಲಿ ಅನೇಕ ಗೌರವಗಳು ಲಭ್ಯವಾದವು. ಎತ್ತರದ ಸ್ಥಾನಗಳಲ್ಲಿ, ದೆಹಲಿಯ ದರ್ಬಾರುಗಳಲ್ಲಿ ತಮ್ಮ ವ್ಯಕ್ತಿತ್ವ ಸಹಜವಾದ ಪ್ರಭಾವಗಳಿಂದಾಗಿ ಕನ್ನಡಕ್ಕೆ ಸ್ಥಾನ ದೊರಕಿಸಲು ಅವರಿಗೆ ಸಾಧ್ಯವಾಯಿತು.

ನಾಯಕರು ನೂರಕ್ಕೆ ನೂರರಷ್ಟು ಸಮಕಾಲೀನರಾಗಿದ್ದರು. ಸ್ಥಿತಿಗೆ ತಕ್ಕ ಪ್ರತಿಕ್ರಿಯೆ ಅವರಿಂದ ಸಹಜವಾಗಿ ಹೊರಹೊಮ್ಮುತ್ತಿತ್ತು. ಈ

ಸ್ಥಿತಿಪ್ರಜ್ಞೆಯಿಂದಾಗಿಯೋ, ಕಾದಿರುವಾಗಲೇ ಕುಟ್ಟಿಕೊಳ್ಳುವ ಕ್ರಿಯೆಯಿಂದಾಗಿಯೋ, ಅನೇಕ ಕನ್ನಡದ ಕೆಲಸಗಳು ಸುಲಭದಿಂದಾದವು. ಎಪ್ಪತ್ತರ ದಶಕದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಾದ ರಚನಾತ್ಮಕ ಕೆಲಸಗಳಲ್ಲಿ ಇವರ ಪಾಲು ದೊಡ್ಡದು. ಹಿರಿಯ ಸಾಹಿತಿ ದೇ. ಜವರೇಗೌಡರೊಡಗೂಡಿ ಇವರು ಆ ಸಂಸ್ಥೆಯನ್ನು ಕಟ್ಟಿದ ರೀತಿ ನೆನೆಯುವಂಥದು.

ಶಿಸ್ತು ಹಾಮಾನಾ ಅವರ ವ್ಯಕ್ತಿತ್ವದ ಬಹುದೊಡ್ಡ ಆಸ್ತಿ. ಅದು ಹೊರನೋಟಕ್ಕೆ ಸ್ವಲ್ಪ ಕಠಿಣವೆಂದು ಕಂಡರೂ ಅದರ ಹಿಂದೆ ನಾಯಕರ ಕಾಯಕನಿಷ್ಠೆ ಎದ್ದುಕಾಣುತ್ತಿತ್ತು. ದುಡಿಮೆ ಅವರ ಉಸಿರಾಗಿತ್ತು. ಅವರ ಓದು ಅಗಾಧವಾದುದು. ಕನ್ನಡ ಮಾತ್ರವಲ್ಲದೆ, ಭಾರತೀಯ ಸಾಹಿತ್ಯದ ಪರಿಚಯವನ್ನು ವಿವಿಧ ಮೂಲಗಳಿಂದ ಬಹಳ ಅನತಿ ಕಾಲದಲ್ಲೇ ಮಾಡಿಕೊಳ್ಳುತ್ತಿದ್ದರು. ಅವರ ಈ ಶಕ್ತಿಯನ್ನು ಅವರ ವಿಸ್ತಾರವಾದ ಅಂಕಣ ಬರೆಹಗಳನ್ನು ಓದಿದಾಗ ಅರಿಯಬಹುದು. ಸಾಂದರ್ಭಿಕ ಸೃಷ್ಟಿಗಳಾದ, ಸ್ಥಿತಿಚಿತ್ರಗಳಾದ ಈ ಬರೆಹಗಳಲ್ಲಿ ಸಮಕಾಲೀನ ಬದುಕನ್ನು ಹಿಡಿದಿಡುವ ಅವರ ಭಾಷೆ ಮತ್ತು ಶೈಲಿಗಳು ಅಧ್ಯಯನಯೋಗ್ಯವಾದವು. ಪರಿಚಯಾತ್ಮಕ ನೆಲೆಯಲ್ಲಿ ಪಡಿಮೂಡುವ ಈ ಬರೆಹಗಳು ಅನೇಕ ಸಂದರ್ಭಗಳಲ್ಲಿ ವಿಮರ್ಶೆಯ ಎತ್ತರಕ್ಕೂ ಏರಿ ನಾಯಕರ ಶಕ್ತಿಯನ್ನು ತೋರುತ್ತಿದ್ದವು. ವಸ್ತುನಿಷ್ಠತೆ ನಾಯಕರ ಒಟ್ಟು ಬರೆಹದ ಪ್ರಧಾನಗುಣವಾದರೂ, ಅನೇಕ ಸಂದರ್ಭಗಳಲ್ಲಿ ಪಕ್ಷ ಮತ್ತು ವ್ಯಕ್ತಿಗಳ ಪರ ವಹಿಸಿ ಮಾತನಾಡಿದ್ದೂ ಉಂಟು. ಅವರು ಏನೇ ಬರೆಯಲಿ, ಮಾತನಾಡಲಿ ಅಲ್ಲಿ ನಾಯಕರ 'ನಾಯಕತ್ವ'ದ ಅಚ್ಚು ಮೂಡುತ್ತಿತ್ತು." (ಪ್ರೊ. ಶಿವರಾಮು ಕಾಡನಕುಪ್ಪೆ, 'ಹಾಮಾನಾ ಸಾಹಿತ್ಯಾವಲೋಕನ', ೨೦೦೩, ಪು. IV-VI)

# ೨. ಹಾಮಾನಾ ಕುರಿತು....

"ಜನರ ಕಣ್ಣಿಗೆ ಸುಲಭವಾಗಿ ಬೀಳದೆ ಹೋಗಬಹುದಾಗಿದ್ದ ಎಷ್ಟೋ ವ್ಯಕ್ತಿಗಳ ಬಗೆಗೆ ನಾಯಕರು ಬರೆದಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪಡೆದ ಪ್ರಸಿದ್ಧರಿಂದ ತೊಡಗಿ, ಪ್ರಾಥಮಿಕ ಶಾಲೆಯ ಒಬ್ಬ ಅನಾಮಧೇಯ ಅಧ್ಯಾಪಕನವರೆಗೆ, ಬಹುಬಗೆಯ ವ್ಯಕ್ತಿಗಳನ್ನು ಅವರು ಕನ್ನಡಿಗರಿಗೆ ಪರಿಚಯಿಸಿಕೊಟ್ಟಿದ್ದಾರೆ." **–ಎಸ್. ಅನಂತನಾರಾಯಣ**

"ಹಾಮಾನಾ ಅವರದು ತುಂಬ ಆಕರ್ಷಕವಾದ, ಒಂದು ರೀತಿಯಿಂದ ಅನನ್ಯವಾದ, ವ್ಯಕ್ತಿತ್ವ. ಈ ವ್ಯಕ್ತಿತ್ವದ ಸಾಮಾಜಿಕ ಮುಖವನ್ನಷ್ಟೇ ನಾನು ನೋಡಿದ್ದರೂ, ಅವರ ಗುಣ ಪಕ್ಷಪಾತ, ಸ್ಪಷ್ಟವಾದೀತ್ವ, ಹೊಣೆಗಾರಿಕೆಯ ಅರಿವು, ಕನ್ನಡದ ಬಗ್ಗೆ ಬದ್ಧತೆ, ಪ್ರಖರ ಸಮಾಜಪ್ರಜ್ಞೆ –ಇಂಥ ಅನೇಕ ಗುಣಗಳನ್ನು ಅಲ್ಲಿ ನಾನು ಗುರುತಿಸಿದ್ದೇನೆ." **–ಜಿ.ಎಸ್. ಆಮೂರ**

"ತಮ್ಮ ಪಾಂಡಿತ್ಯ, ಪ್ರತಿಭೆ, ಅಪ್ರತಿಮ ವ್ಯಕ್ತಿತ್ವ ಹಾಗೂ ಜನಪ್ರಿಯತೆಯಿಂದ ಮೆರೆಯುತ್ತಿರುವ ಹಾಮಾ ನಾಯಕರ ಬದುಕು, ಸಾಧನೆ ಚಿಂತನೆಗೆ ಯೋಗ್ಯವಾದುದು, ಮಾರ್ಗದರ್ಶನಕ್ಕೆ ಅರ್ಹವಾದುದು." **–ಆರ್ಯಾಂಬ ಪಟ್ಟಾಭಿ**

"ಹಾಮಾನಾ ಎಂದೊಡನೆ ಅಲೆಅಲೆಯಾಗಿ ತೇಲಿಬರುವ ನೆನಪು ಹಂಸದ ಗರಿಯಂತಹ ಬಿಳಿಯುಡುಗೆಯ, ಬಿಳಿಕೂದಲಿನ, ಗೌರವವರ್ಣದ, ಸರ್ವಾಂಗದಲ್ಲೂ ಮಂದಹಾಸವನ್ನು ಹರಡುತ್ತ ಮೆದುನಡೆಯಲ್ಲಿ ಬರುವ ಒಬ್ಬರು ಶಾಂತಿದೂತರದು." **–ಎಂ.ಕೆ. ಇಂದಿರಾ**

"ಒಂದುನೂರಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದ; ಇಲ್ಲವೇ ಸಂಪಾದಿಸಿದ ಡಾ. ನಾಯಕರ ಕ್ರಿಯಾಶೀಲ ವ್ಯಕ್ತಿತ್ವ ಹಾಗೂ ಪ್ರತಿಭೆಗಳು ಅಸಾಮಾನ್ಯವಾಗಿವೆ. ಅವರು ಒಳ್ಳೆಯ ವಿದ್ವಾಂಸರು. ಒಳ್ಳೆಯ ಬೋಧಕರು, ಒಳ್ಳೆಯ ಸಂಪಾದಕರು, ಒಳ್ಳೆಯ ಸಾಹಿತಿಗಳು ಹಾಗೂ ಈ ಮಾತು ಮುಖ್ಯ– ನಾಡು ನುಡಿಗಳಿಗೆ ತನ್ನನ್ನೇ ಸಮರ್ಪಿಸಿಕೊಂಡ ಒಳ್ಳೆಯ ಕನ್ನಡಿಗರಾಗಿದ್ದಾರೆ." **–ಸು.ರಂ. ಎಕ್ಕುಂಡಿ**

"ಹಾಮಾನಾ ದಾಕ್ಷಿಣ್ಯಪರರಲ್ಲ. ಸ್ನೇಹಿತರಿಗೆ ಕೂಡ ಇವರು ಅಪ್ರಿಯವಾದ ಸತ್ಯವನ್ನು ನೇರವಾಗಿ ನುಡಿಯಬಲ್ಲರು. ಹೀಗೆ ಮಾಡಿಯೂ ಸ್ನೇಹ ಉಳಿಸಿಕೊಳ್ಳಬಲ್ಲರು. ಕೃತಕವಾದ ಗತ್ತು ಶ್ರೀಮದ್ಗಾಂಭೀರ್ಯಗಳಿಲ್ಲ. ಆದರೆ ಗೌರವವನ್ನು ಎಂದೂ ಬಿಟ್ಟುಕೊಡುವವರಲ್ಲ. ಹದಿನೆಂಟನೆಯ ಶತಮಾನದಲ್ಲಿದ್ದ ಸುಪ್ರಸಿದ್ಧ ವಿದ್ವಾಂಸ ಸ್ಯಾಮ್ಯುಯಲ್ ಜಾನ್ಸನ್‌ನನ್ನು ಕುರಿತ ಮಾತು

ಹಾಮಾನಾ ಅವರಿಗೂ ಚೆನ್ನಾಗಿ ಒಪ್ಪುತ್ತದೆ. Nothing of the bear but the skin of it." **–ಎಚ್ಚೆಸ್ಕೆ.**

"ನಾನು ಬಹಳ ಸಣ್ಣವನು ಎಂದು ತೋರಿಸಿಕೊಟ್ಟವರು ಡಾ. ಹಾಮಾ ನಾಯಕ ಅವರು ತಮ್ಮ ದೊಡ್ಡ ಗುಣಗಳಿಂದ, ದೊಡ್ಡ ಮನಸ್ಸಿನಿಂದ, ಹೃದಯವೈಶಾಲ್ಯದಿಂದ. ಅವರು ಎಲ್ಲರಿಗೂ ಬೆಲ್ಲದಂತಹವರು, ಹಾಮಾನಾ ಗುಣವನ್ನು ಗೌರವಿಸುತ್ತಾರೆ." **–ಎನ್ಕೆ**

"ಅವರು ಖಡಾಖಂಡಿತವಾಗಿ ಮಾತನಾಡುತ್ತಾರೆ ನಿಜ. ಆದರೆ ಮಾತು ವಸ್ತುನಿಷ್ಠ. ನಾಟಕೀಯತೆ ಅವರಿಗೆ ಒಗ್ಗದು. ಅಧಿಕಾರ ದುರ್ಮದಾಂಧರಿಗಂತೂ ಅವರ ಮಾತು ಸಿಡಿಲೆರಗಿದಂತೆ." **–ಕಂಠೀರಾವ್**

"ಅವರ ಮಾತು ನಿಖರ, ಉಡುಗೆ ತೊಡುಗೆ ಸರಳ. ಯಾರೂ ಕೇಳದೆಯೆ ಮಾರ್ಗದರ್ಶನ ನೀಡುವ ದೊಡ್ಡತನ. ಅವರ ಪರಿಚಯ, ವ್ಯಕ್ತಿತ್ವ ಯಾರ ಮೇಲಾದರೂ ಪ್ರಭಾವ ಬೀರಲಾರದೆ ಇರದು." **–ಕಮಲಾಮೂರ್ತಿ**

"ಡಾ. ಹಾಮಾ ನಾಯಕ ಕರ್ನಾಟಕದ ಸರ್ವಾಂಗೀಣ ಪುರೋಭಿವೃದ್ಧಿಗೆ ಟೊಂಕ ಕಟ್ಟಿನಿಂತ ಸೋಲರಿಯದ ಸೇನಾನಿ." **–ಕಮಲಾ ಹಂಪನಾ**

"ಒಮ್ಮೆ ಕಂಡರೆ ಇನ್ನೊಮ್ಮೆ ಕಾಣಬೇಕೆನಿಸುವ ಬೆಳ್ಳಿಕೂದಲಿನ ನಿಲುವು, ಒಮ್ಮೆ ಕೇಳಿದರೆ ಇನ್ನೊಮ್ಮೆ ಕೇಳಬೇಕೆನಿಸುವ ಅಚ್ಚುಕಟ್ಟಾದ ಮಾತುಗಾರಿಕೆ, ಒಮ್ಮೆ ಓದಿದರೆ ಇನ್ನೊಮ್ಮೆ ಓದಬೇಕೆನಿಸುವ ಲವಲವಿಕೆಯ ಬರೆವಣಿಗೆ. ಇವುಗಳಿಗೆ ಮಿಗಿಲಾಗಿ 'ಸರಿಯಾಗಿ ಕೆಲಸ' ಮಾಡುವ ಕಾರ್ಯವೈಖರಿ –ಇವು ಹಾಮಾನಾ ಸ್ಥಾಯಿ, ಸಂಚಾರಿ." **–ಎಂ.ಎಂ. ಕಲಬುರ್ಗಿ**

"ನಮ್ಮಲ್ಲಿ ಹಿರಿಯತನವನ್ನು ಬಯಸುವವರು ನೂರು ಜನರಿದ್ದರೆ ಹುಟ್ಟಿನಿಂದ ಹಿರಿಯರಾಗಿರುವವರು ಕೆಲವೇ ಜನರು. ಡಾ. ಹಾಮಾ ನಾಯಕರು ಎರಡನೆಯ ವರ್ಗದ ಜನ. ಯಾರೂ ಹೇಳದೆ ಸಾಹಿತ್ಯಲೋಕದ ಯಜಮಾನಿಕೆ ಅವರ ಪಾಲಿಗೆ ಬಂದಿದೆ." **–ಕೀರ್ತಿನಾಥ ಕುರ್ತಕೋಟಿ**

"ಗರ್ವಪಡದುಪಕಾರಿ, ದರ್ಪಬಿಟ್ಟಧಿಕಾರಿ, ನಿರ್ವಿಕಾರದ ನಯನದಿಂ ನೋಳ್ಪುದಾರಿ" ಎಂಬ ಡಿವಿಜಿ ಯವರ ಮಾತು ನಾಯಕರಿಗೆ ನೂರಕ್ಕೆ ನೂರು ಅನ್ವಯಿಸುತ್ತದೆ. ಅವರು ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆದ ಅಪ್ರತಿಮ ವಿದ್ವಾಂಸರು. ವಿಶ್ವವಿದ್ಯಾನಿಲಯದ ಕುಲಪತಿತ್ವದಂಥ ಅನೇಕ ಉನ್ನತ ಅಧಿಕಾರ

ಸ್ಥಾನಗಳನ್ನು ಅಲಂಕರಿಸಿದವರು. ಅನೇಕ ಗ್ರಂಥಗಳನ್ನು ಬರೆದ ಖ್ಯಾತ ಲೇಖಕರು. ಅನೇಕ ರಾಷ್ಟ್ರಮಟ್ಟದ ಸಭೆ, ಸಮ್ಮೇಳನ, ಸಮಿತಿಗಳಲ್ಲಿ ಪ್ರತಿಷ್ಠಿತ ಪ್ರಭಾವಶಾಲಿ ಸ್ಥಾನಗಳಲ್ಲಿ ಕೆಲಸ ಮಾಡುವವರು, ಪ್ರಧಾನಮಂತ್ರಿ, ಮುಖ್ಯಮಂತ್ರಿಗಳಂಥವರಿಗೆ ಸಲಹೆಗಾರರು. ಇಷ್ಟೆಲ್ಲ ಇದ್ದರೂ ಸಾಮಾನ್ಯ ಮನುಷ್ಯನಲ್ಲಿ ಆತ್ಮೀಯ ಸ್ನೇಹವನ್ನು ಬಯಸುವ, ಬೆಳೆಸುವ ಸರಳ ಸಹೃದಯಿಗಳು. ಋಷಿಯಂತೆ ಸರಳ ನಿರಾಡಂಬರ ಜೀವನಶೈಲಿಯನ್ನು ಬೆಳೆಸಿಕೊಂಡವರು. ಇಂಥವರು ನಾಡಿಗೇ ಭೂಷಣಪ್ರಾಯರು. **–ಬಿ.ವಿ. ಕೆದಿಲಾಯ**

"ನಾಯಕರ ಬಗೆಗೆ ಹೇಳುವುದಾದರೆ ಅವರಿಗಿಂತ ದೊಡ್ಡ ಪಂಡಿತರು ಇರಬಹುದು, ಆದರೆ ಅವರಂಥ ಪ್ರಾಮಾಣಿಕರು ವಿರಳ... ನಾಯಕರಲ್ಲೂ ದೌರ್ಬಲ್ಯಗಳಿವೆ, ಅವರೂ ಮನುಷ್ಯರೇ; ಅವರು ಪರಿಪೂರ್ಣರೆಂದರೆ ಅದನ್ನು ಅವರೇ ಮೊದಲು ನಿರಾಕರಿಸುತ್ತಾರೆ! ಆದರೆ ಇಷ್ಟುಮಾತ್ರ ಖಚಿತ: ಉಳಿದ ಬಹಳ ಜನರಿಗಿಂತ, ತಾವು ದೊಡ್ಡವರೆಂದು ಭಾವಿಸಿದ ಅಥವಾ ಭ್ರಮಿಸಿದ ಅನೇಕರಿಗಿಂತ ನಾಯಕರು ದೊಡ್ಡವರು." **–ಸಿಪಿಕೆ**

"ಪಂಪನು ವೀರಶ್ರೀ, ವಚಶ್ರೀ, ವಾಯಶ್ರೀ ಮುಂತಾಗಿ ತನ್ನ ಗುಣಗಳನ್ನು ವರ್ಣಿಸಿಕೊಂಡಿದ್ದಾನೆ. ಅವಕ್ಕೆ ವಿಚಾರಶ್ರೀ, ಹೃದಯಶ್ರೀ, ಕಾರ್ಯಶ್ರೀಗಳನ್ನು ಸೇರಿಸಿದರೆ ಹಾಮಾನಾ ಅವರ ವ್ಯಕ್ತಿತ್ವವಾಗುತ್ತದೆ." **–ಕೆ. ಕೃಷ್ಣಮೂರ್ತಿ**

"ಸಮರ್ಥ ಸಾಹಿತಿಯಾಗಿ, ಶಿಸ್ತಿನ ಅಂಕಣಕಾರರಾಗಿ, ಚತುರ ಮಾತುಗಾರರಾಗಿ, ದಕ್ಷ ಆಡಳಿತಗಾರರಾಗಿ ನಾಯಕರು ನಮಗೆಲ್ಲ ಹೆಮ್ಮೆಯ ನಾಯಕರಾಗಿದ್ದಾರೆ... ಅಕ್ಷರಗಳಲ್ಲಿ ಅಮರದ ವ್ಯಕ್ತಿತ್ವ ಅವರದು. ಬರೆಹದಲ್ಲಿ ಅವರನ್ನು ಭಟ್ಟಿ ಇಳಿಸುವುದು ಅಸಾಧ್ಯ. ಕನ್ನಡದ ಬಗ್ಗೆ ಅಧಿಕಾರಯುತವಾಗಿ ಮಾತನಾಡುವ ನಾಯಕರ ಮಾತು ಹರಿತವಾದರೂ ಮನಸ್ಸು ಮೃದು. ನಿರ್ದಾಕ್ಷಿಣ್ಯ ಮನೋಭಾವದ ನಾಯಕರು ಹಟವಾದಿಯಾದರೂ ಪ್ರೀತಿಯ ಸ್ನೇಹಿತರು." **–ಜಿ. ಗೀತಾ ನಾಗಭೂಷಣ**

"ನಾನು ಕಂಡ ಕೆಲವೇ Genuine Gentlemenರಲ್ಲಿ ಡಾ. ಹಾ.ಮಾ. ನಾಯಕರೊಬ್ಬರು. ಅವರ ಶೀಲದಂತೆಯೇ ಅವರ ಶೈಲಿ ಸರಸ. ಗದ್ಯ ಅಷ್ಟೇ ಹೃದ್ಯ." **–ಗೌರೀಶ ಕಾಯ್ಕಿಣಿ**

“ಡಾ. ಹಾ ಮಾ ನಾಯಕರನ್ನು ಕುರಿತು ಬರೆಯುವುದು ಸುಲಭವೂ ಹೌದು ಮತ್ತು ಕಷ್ಟವೂ ಹೌದು. ಕನ್ನಡದ ನೇತಾರರಾಗಿ, ವಿದ್ವಾಂಸರಾಗಿ, ಅಂಕಣಕಾರರಾಗಿ, ಪ್ರಾಧ್ಯಾಪಕರಾಗಿ, ಸ್ನೇಹಿತರಾಗಿ, ಜಾನಪದ ತಜ್ಞರಾಗಿ, ಶಿಕ್ಷಣವೇತ್ತರಾಗಿ – ಒಂದೊಂದೂ ಕ್ಷೇತ್ರದಲ್ಲಿ ಸೀಮೆ ಕಟ್ಟಿದವರು, ಹೊಸ ಸೀಮೆಗಳನ್ನು ಸೃಷ್ಟಿಸಿದವರು. ಇವುಗಳಲ್ಲಿ ಯಾವೊಂದು ಕ್ಷೇತ್ರವನ್ನು ತಗೊಂಡು ಅದರಲ್ಲಿಯ ಅವರ ಸಾಧನೆಗಳನ್ನು ಹೇಳಿದರೂ ಸಾಕು; ಲೇಖನವಾಗುತ್ತದೆ. ಅವರನ್ನು ಕುರಿತು ಬರೆಯುವಲ್ಲಿ ಕಷ್ಟ ಎಲ್ಲಿದೆ ಎಂದರೆ –ಇವೆಲ್ಲವನ್ನು ಮೀರಿಯೂ ಹಾಮಾನಾ ಅವರಲ್ಲಿ ಇನ್ನೂ ಹೇಳದೇ ಇದ್ದದ್ದು ಉಳಿಯುತ್ತದೆ.” **–ಚಂದ್ರಶೇಖರ ಕಂಬಾರ**

“ಹಾಮಾನಾ ಅವರು ದಾಪುಗಾಲು ಹಾಕುತ್ತ, ಎತ್ತರದ ವ್ಯಕ್ತಿಯಾಗಿ ಬೆಳೆದರು. ಉತ್ತಮ ಭಾಷಣಕಾರರಾಗಿ ನಾಡಿನ ಉದ್ದಗಲಕ್ಕೂ ಮೆರೆದರು. ಒಂದು ವಿಶ್ವವಿದ್ಯಾನಿಲಯದ ಕುಲಪತಿಯೂ ಆದರು. ಇಲ್ಲಿಯತನಕ ಅಂಕಣ ಬರಹ ಸಾಹಿತ್ಯವೇ ಅಲ್ಲ ಎಂದು ಹೀಗಳೆಯುತ್ತಿದ್ದ ಕಾಲದಲ್ಲಿ ಅಂಕಣದ ಹಲವಾರು ಸಂಪುಟಗಳನ್ನು ಹೊರತಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸುವಂತೆ ಮಾಡಿದ್ದು ಅವರ ಪ್ರತಿಭೆಗೆ ಹಾಗೂ ಕ್ರಿಯಾಶೀಲತೆಗೆ ಸಾಕ್ಷಿ ನುಡಿಯುತ್ತದೆ.” **–ಚದುರಂಗ**

“ಡಾ. ಹಾ ಮಾ ನಾಯಕರು ಕನ್ನಡದ ಓರ್ವ ಉದ್ದಾಮ ಸಾಹಿತಿಗಳು ಎಂಬುದರಿಂದಲೇ ಅವರು ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾನವನ್ನು ಗಳಿಸಿದ್ದಾರೆ... ಅವರು ಯಾವುದೇ ವಿಚಾರವನ್ನು ಕುರಿತು ಬರೆಯುವಾಗ, ಮಾತನಾಡುವಾಗ ಭಾವಾವೇಶಕ್ಕೆ ಒಳಗಾಗದೆ, ವಾಗಾಡಂಬರವಿಲ್ಲದೆ, ಪಾಂಡಿತ್ಯ ಪ್ರದರ್ಶನವಿಲ್ಲದೆ ಖಚಿತವಾಗಿ ಸಂಕ್ಷಿಪ್ತವಾಗಿ ಪ್ರತಿಪಾದಿಸುವ ಅವರ ಗುಣ ಮೆಚ್ಚತಕ್ಕದ್ದು.” **–ಕೋ. ಚನ್ನಬಸಪ್ಪ**

“ನಾಯಕರ ಕಾರ್ಯೋತ್ಸಾಹ, ಕಾರ್ಯದಕ್ಷತೆ ಹಾಗೂ ಕಾರ್ಯಕ್ಷಮತೆಗಳನ್ನು ಕಂಡಾಗ ನಾನು ಒಂದು ಬಗೆಯ ಮುಗ್ಧತೆಗೆ ಒಳಗಾಗುವುದುಂಟು. ಅಕಾದೆಮಿ ಅಥವಾ ಅಧ್ಯಯನ ಸಂಸ್ಥೆಗಳ ಕಾರ್ಯಕಲಾಪಗಳೇ ಇರಲಿ, ಅವರಿಗೆ ಪ್ರಿಯವಾದ ಗ್ರಂಥ ಪ್ರಕಟಣೆಯೇ ಆಗಿರಲಿ ಅಲ್ಲೆಲ್ಲ ಒಂದು ಶಿಸ್ತು, ಸಮಯನಿಷ್ಠೆ, ಅಚ್ಚುಕಟ್ಟು ಒಡಮೂಡಿ ಅವರದೇ ಆದ ಸೌಜನ್ಯದಿಂದ ಮೆರುಗು ಪಡೆದುಕೊಂಡುಬಿಡುತ್ತವೆ. ನಾಲ್ಕು ಸಾಲಿನ ಪತ್ರವೇ ಇರಲಿ, ಇಲ್ಲವೇ ನಾಲ್ಕು ಮಾತು ಆಡುವುದರಲಿರಲಿ ಅವರ

ಈ ಒಪ್ಪ ಓರಣಕ್ಕೆ ಎಂದೂ ವ್ಯತ್ಯಯವಾಗಿರುವುದನ್ನು ನಾನು ಕಂಡಿಲ್ಲ." –**ಚೆನ್ನವೀರ ಕಣವಿ**

"ನಾಯಕರ ಹೆಸರನ್ನು ಕರ್ನಾಟಕದ ಆದ್ಯಂತ, ಕರ್ನಾಟಕದ ಗಡಿಯಾಚೆ, ಸಮಗ್ರ ಭಾರತದಲ್ಲಿ, ಅಷ್ಟೇಕೆ ಒಟ್ಟು ವಿಶ್ವಸಾಹಿತ್ಯ ಕ್ಷಿತಿಜದಲ್ಲಿ ಕೇಳದವರಾರು? ನಾಯಕರದು ಆಳವಾದ, ವ್ಯಾಪಕವಾದ ವಿದ್ವತ್ತು. ನಿರೂಪಣೆಯಲ್ಲಿನ ಸ್ಪಷ್ಟತೆ, ಖಚಿತತೆಗಳು ಅವರ ಪಾಲಿನ ವಿದ್ವತ್ತಿಗೆ ಸಾಕ್ಷಿ ಹೇಳುವಂಥವು. ಸರಳತೆ ಮತ್ತು ಸೌಜನ್ಯ, ಅವರಲ್ಲಿ ಹಾಸುಹೊಕ್ಕಾಗಿರುವ ಮಾನವೀಯ ಮೌಲ್ಯಗಳು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅವರ ಹೃದಯದ ಸಿರಿವಂತಿಕೆ ಅವರ ವ್ಯಕ್ತಿತ್ವಕ್ಕೆ ಭವ್ಯತೆಯನ್ನು ತಂದುಕೊಟ್ಟಿದೆ." –**ಸಿ.ಎನ್. ಜಯಲಕ್ಷ್ಮೀದೇವಿ**

"ಹಾಮಾನಾ ಅವರು ಸಾಹಿತ್ಯ ಆಸಕ್ತರಿಗೆ, ಸಾಹಿತಿಗಳಿಗೆ ಸಂಜೀವನಿಯಂತಿದ್ದಾರೆ. ಬೆಳೆದ ಆಲದ ಮರ ಹಕ್ಕಿ ಪಕ್ಷಿಗಳಿಗೆ ಆಶ್ರಯ ಕೊಡುವುದರ ಜೊತೆಗೆ ನೆರಳು ಗಾಳಿಯನ್ನು ಕೊಟ್ಟು ಅನೇಕ ಜೀವಿಗಳನ್ನು ಸಂತುಷ್ಟಗೊಳಿಸುತ್ತದೆ. ಹಾಗೆ ಹಾಮಾನಾ ಅವರು ದೊಡ್ಡ ಆಲದಮರ." –**ಜಯಶೀಲಾ ಬಿ. ಬೆಳಲದವರ**

"ಬಾನುಲಿಗೆ ಸಂಬಂಧಿಸಿದ ಹತ್ತಾರು ಚಟುವಟಿಕೆಗಳಲ್ಲಿ ಡಾ. ಹಾ.ಮಾ. ನಾಯಕರು ಭಾಗವಹಿಸುತ್ತಲೇ ಬಂದಿದ್ದಾರೆ. ಅವರ ವಿದ್ವತ್ತು, ಅನುಭವ, ಪ್ರಾಮಾಣಿಕ ಸಲಹೆಗಳ ಲಾಭ ಪ್ರಸಾರ ಕ್ಷೇತ್ರದ ಹಿರಿ–ಕಿರಿಯರಿಗೆಲ್ಲ ದೊರೆತಿದೆ." –**ಜ್ಯೋತ್ಸ್ನಾ ಕಾಮತ್**

"ಹಾ ಮಾ ನಾಯಕರು ಆಗ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು. ಅವರಿಗೆ ಸಂಸ್ಥೆಯ ಗೋಡೆ, ಕಿಟಕಿ, ಬಾಗಿಲು, ದೀಪ, ಫ್ಯಾನುಗಳೆಲ್ಲವೂ ತಮ್ಮ ಮನೆಯವೋ ಎಂಬಂಥ ಕಾಳಜಿ. ಸಹೋದ್ಯೋಗಿಗಳ ಸಂಸ್ಥೆಯಲ್ಲಿ ದೀಪ ಹಾಕಿ ಮರೆಯುವುದು, ಫ್ಯಾನು ತಿರುಗಿಸಿ ನಡೆಯುವುದು, ಕಿಟಕಿ ಬಾಗಿಲುಗಳನ್ನು ಗಾಳಿಗೆ ಹೊಡೆಸುವುದು ಇತ್ಯಾದಿಗಳನ್ನು ಅವರು ಸಹಿಸುತ್ತಿರಲಿಲ್ಲ. ಕೂಡಲೇ ಸೇವಕರನ್ನು ಕಳಿಸಿ ಎಚ್ಚರಿಸುತ್ತಿದ್ದರು ಅಥವಾ ಸರಿಪಡಿಸುತ್ತಿದ್ದರು." –**ಎನ್.ಎಸ್. ತಾರಾನಾಥ್**

"ನಾಯಕರಿಗೆ ಯಾರೇ ಪತ್ರ ಬರೆದರೂ ಕೂಡಲೇ ಅವರಿಂದ ಉತ್ತರ ಬರುತ್ತದೆ. ಚಿಕ್ಕ ಕಾರ್ಡಿನಲ್ಲಿ ಚೊಕ್ಕ ಬರೆಹ. ವಿಷಯದ ಒಕ್ಕಣೆಯೂ ಎಷ್ಟು

ಬೇಕೋ ಅಷ್ಟು ಮಾತ್ರ. ಚಿಕ್ಕ ಚಿಕ್ಕ ವಾಕ್ಯಗಳು. ಸುಂದರ ಶೈಲಿ, ಅಕ್ಷರಗಳೋ ಬಲು ಮುದ್ದು." **–ಪಿ.ಆರ್. ತಿಪ್ಪೇಸ್ವಾಮಿ**

"ನಾಯಕರ ಸಾಹಿತ್ಯಕ ನಿಲುವುಗಳ ಕುರಿತು ನನಗೆ ಭಿನ್ನಾಭಿಪ್ರಾಯ ಇರೋದು ಸಾಧ್ಯ. ನನ್ನ ಕವಿತೆಗಳನ್ನು ಅವರು ಇಷ್ಟಪಡುತ್ತಾರೆಂಬ ವಿಶ್ವಾಸ ನನಗಿಲ್ಲ. ಅದೇ ರೀತಿ, ಅವರೊಬ್ಬ ಶ್ರೇಷ್ಠ ಭಾಷಾವಿಜ್ಞಾನಿಯೋ, ಸೃಜನಶೀಲ ಸಾಹಿತಿಯೋ ಆಗದೆ, ಅಂಕಣ ಬರೆಹದಲ್ಲೆ ತಮ್ಮ ವ್ಯಕ್ತಿತ್ವವನ್ನು ತೊಡಗಿಸಿರುವುದು ನಾನು ಇಷ್ಟಪಡುವ ಸಂಗತಿಯಲ್ಲ." **–ಕೆ.ವಿ. ತಿರುಮಲೇಶ್**

"ನಾಯಕರ ಪ್ರಥಮ ಸಂದರ್ಶನದಲ್ಲೇ ಇವರೊಬ್ಬ ಬೇರೆ ವ್ಯಕ್ತಿ– Quick above the average, ಎತ್ತರದಲ್ಲಿ ಎತ್ತರದವರು ಎಂಬ ಭಾವನೆ ನನ್ನ ಮನದಲ್ಲಿ ಬೇರೂರಿತು. ಅವರ ನೇರ ನುಡಿ, ಅದರಂತೆ ನಡೆ, ಕಾರ್ಯನಿಷ್ಠೆ, ಶಿಕ್ಷಣ ಕ್ಷೇತ್ರದಲ್ಲಿ ಶುಚಿತ್ವ ಹಾಗೂ ಔನ್ನತ್ಯ ಕಾಯ್ದುಕೊಂಡು ಹೋಗಬೇಕೆನ್ನುವ ಅವರ ತವಕ, ಇವಕ್ಕೆಲ್ಲ ಕಿರೀಟಪ್ರಾಯವಾಗಿದ್ದ ಅವರ ಪ್ರಭಾವೀ ವ್ಯಕ್ತಿತ್ವ, ಸ್ಫುರದ್ರೂಪ ಇವುಗಳಿಗೆ ನಾನು ಮಾರುಹೋದೆನೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.... ನಾಯಕರು ವಾಗ್ಭೂಷಣರು, ಸ್ವಚ್ಛವಾದ ಸಾಹಿತ್ಯ ನಿರ್ಮಿಸಿದವರು, ಹೆಸರಾಂತ ಅನುವಾದಕರು, ಎಲ್ಲಕ್ಕೂ ಮಿಗಿಲಾಗಿ ಗುಣಗ್ರಾಹಿಗಳು." **–ಕೆ.ಎಸ್. ದೇಶಪಾಂಡೆ**

"ಕನ್ನಡ ಮಾಧ್ಯಮದ ಇವರ ಅಚಲವಾದ ನಿಲುವು ನನಗೆ ತುಂಬ ಸಮಾಧಾನ ತಂದಿದೆ. ಯಾವ ವಿಷಯದಲ್ಲೇ ಆಗಲಿ ತಮಗೆ ಸರಿ ತೋರಿದ್ದನ್ನು ನಿರ್ಭಿಡೆಯಾಗಿ ನಿರ್ದಾಕ್ಷಿಣ್ಯವಾಗಿ ಪ್ರತಿಪಾದಿಸುವ ದಿಟ್ಟತನವೇ ನಾಯಕರಲ್ಲಿದೆ. ಅಖಿಲ ಭಾರತ ವ್ಯಾಪ್ತಿಯುಳ್ಳ ಕೆಲವೇ ಕೆಲವು ವಿರಳ ಕನ್ನಡಿಗ ವಿದ್ವಾಂಸರಲ್ಲಿ ಇವರೊಬ್ಬರು. ಇವರು ಸರಸಿಗಳು, ಆಲೋಚನಾಪರರು, ದಕ್ಷರು ಹಾಗೂ ಸ್ನೇಹಪರರು.

ಹಾಮಾ ನಾಯಕರ ಗದ್ಯ ಅವರಿಗೇ ವಿಶಿಷ್ಟವಾದದ್ದು. ಸರಸವಾಗಿ ಬರೆಯಲಿ, ಪ್ರೌಢವಾಗಿ ಬರೆಯಲಿ, ಗಂಭೀರ ವಿಷಯಗಳನ್ನು ಕುರಿತೇ ಬರೆಯಲಿ ತನ್ನ ಸರಳತನವನ್ನು ವೈದುಷ್ಯವನ್ನು ಸ್ವಾರಸ್ಯವನ್ನೂ ಓಘವನ್ನೂ ಔಚಿತ್ಯವನ್ನೂ ಕಳೆದುಕೊಳ್ಳುವುದಿಲ್ಲ. ಇದೊಂದು ಅಪೂರ್ವ ಸಾಧನೆ." **– ಪು.ತಿ.ನ.**

"ಕಂಡುದನಾಡುವ ಈ ಖಂಡಿತವಾದಿ
ತೂಕ ಬಣ್ಣಗಳನರಿತು
ತಕ್ಕಡಿ ತೂಗುವ ಪಕ್ಕಾ ವ್ಯಾಪಾರಿ
ಕನ್ನಡದ ಮಾತು ಬಂದಾಗ
ಕುರ್ಚಿಯನ್ನೂ ಲೆಕ್ಕಿಸದ ಮರ್ಜಿ
ಕಂಕಣ ಕಟ್ಟಿ ದೀಕ್ಷೆ ತೊಟ್ಟು
ಅಂಕಣದ ಜಾತಕ ಬರೆದ ಜ್ಯೋತಿಷಿ." **–ಟಿ.ಎನ್. ನಾಗರತ್ನ**

"ನಾವು ಬಯಸಿದ್ದಕ್ಕೆ ಅಸ್ತು ಎನ್ನುವ ದಾಕ್ಷಿಣ್ಯದ ಸ್ವಭಾವದವರಲ್ಲ ನಾಯಕರು. ಅವರು ಸತ್ಯಶೀಲ ಸಮಯಪ್ರಜ್ಞೆ ಉಳ್ಳ ವಸ್ತುನಿಷ್ಠ ಸ್ವಭಾವದವರು. ಆಡಂಬರರಹಿತ ಸರಳತನ ಅವರ ವೈಶಿಷ್ಟ್ಯ. ಸ್ನೇಹಕ್ಕಾಗಿ ಅವರು ತಮ್ಮ ವಸ್ತುನಿಷ್ಠೆಯನ್ನು ಬಲಿಗೊಡುವವರಲ್ಲ. ವಿಚಾರಭೇದವಿದ್ದರೂ ಅದನ್ನು ಸ್ನೇಹಕಂಟಕವಾಗದಂತೆ ನೋಡಿಕೊಳ್ಳುವುದು ನಾಯಕರ ರೀತಿ. ಎಲ್ಲರಿಗೂ ಅದು ಸಾಧಿಸೀತೆಂದು ನಾನು ಹೇಳಲಾರೆ." **–ಸಿ.ಕೆ. ನಾಗರಾಜರಾವ್**

"ವೈಯಕ್ತಿಕ ಸಂಬಂಧದಲ್ಲಿ ನಾಯಕರದು ಸರಳ ನಿಷ್ಕಪಟ ವ್ಯವಹಾರ. ಹೊರಗಿನವರಿಗೆ ಸ್ವಲ್ಪ ಕಠಿಣ ಎಂಬಂತೆ ಕಂಡರೂ ಅವರು ಒಪ್ಪಿಕೊಂಡ ಹಿತೈಷಿ ಮಿತ್ರರೆಲ್ಲ ಅವರ ಪ್ರೇಮಲ ಸ್ವಭಾವವನ್ನು ಬಲ್ಲರು. ಸುಸಂಸ್ಕೃತ ಹರಟೆ ಮತ್ತು ಉದಾರ ಸಜ್ಜನಿಕೆ ಅವರ ವೈಶಿಷ್ಟ್ಯ." **–ಎಚ್.ವಿ. ನಾಗೇಶ್**

"ದೇಜಗೌ–ಹಾಮಾನಾ ಯುಗ್ಮ ಕನ್ನಡದ ಸರ್ವಾಂಗ ಸುಂದರ ಅಭ್ಯುದಯದ ಸಲುವಾಗಿ ಮಾಡುತ್ತಿದ್ದ ಕೆಲಸ ಇವರಿಬ್ಬರ ನಡುವಿನ ಪ್ರಾಯದವನಾಗಿದ್ದ ನನಗೆ ಆದರ್ಶಪ್ರಾಯವಾಗಿತ್ತು, ಉತ್ಸಾಹದಾಯಕವಾಗಿತ್ತು. ಅವರ ನನ್ನ ಸಂಬಂಧ ಸದಾ ಪ್ರೀತಿ ಗೌರವಪೂರ್ವಕವಾದದ್ದು, ಸ್ವಾರ್ಥರಹಿತವಾದದ್ದು ಮತ್ತು ಕನ್ನಡದ ಹಿತ ಕುರಿತದ್ದು. ಇಂಥಲ್ಲಿ ವೃತ್ತಿಸಂಬಂಧ ಕೇವಲ ಆಕಸ್ಮಿಕವಾಗುತ್ತದೆ. ಎಂದೇ ಇಂದಿಗೂ ಹಾಮಾನಾ ಎಂದರೆ ಮೈಮನ ನಮನ ಅರ್ಪಿಸುತ್ತವೆ." **–ಜಿ.ಟಿ. ನಾರಾಯಣರಾವ್**

"ಡಾ. ಹಾಮಾನಾ ಅವರು ತಮ್ಮ ನಿಶಿತಮತಿಯ ಆಲೋಚನೆ ಹಾಗೂ ತಾವು ಕಂಡುಂಡ ಅನುಭವಗಳನ್ನು ಅಭಿವ್ಯಕ್ತಿಸಲು ಬರವಣಿಗೆಯನ್ನು ಸಾಧನವಾಗಿ ಬಳಸಿಕೊಂಡವರು. ಅವರಿಗೆ ಈ ಕಲೆ ಚನ್ನಾಗಿ ಕರಗತವಾಗಿದೆ. ಭಾವೋನ್ಮಾದದ ಸಾಹಿತಿಯದಾಗದೇ, ಶಾಸ್ತ್ರದ ನೆಲೆಗಟ್ಟಿನಲ್ಲಿ ಚಿಂತಿಸುವ ಶುಷ್ಕ

ಬರಹವಾಗದೆ, ಅವರ ಚಿಂತನೆ ಹಾಗೂ ಬರವಣಿಗೆ ನಿಜಕ್ಕೂ ಒಂದು ಹೊಸ ಆಯಾಮವನ್ನು ಪಡೆದುಕೊಂಡಿದೆ. ಇದರಿಂದಲೇ ಸಮಕಾಲೀನ ಅಂಕಣ ಬರೆಹಗಾರರಲ್ಲಿ ಹೆಚ್ಚು ಯಶಸ್ವಿಯಾದವರು ಇವರು. ಕನ್ನಡ ನಾಡಿನ ಕನ್ನಡ ನುಡಿಯ ಕನ್ನಡಿಗರ ಬಗ್ಗೆ ಅವರಿಗೆ ಇರುವ ಕಳಕಳಿ, ಅಭಿಮಾನ ಅವರ ಬರವಣಿಗೆಯಂತೆಯೇ ಹೆಚ್ಚು ಕೀರ್ತಿಯನ್ನು ತಂದುಕೊಟ್ಟಿದೆ." **–ನಿರುಪಮಾ**

"ಡಾ. ಹಾ ಮಾ ನಾಯಕರ ನಡೆನುಡಿ ನನಗೆ ತುಂಬ ಪ್ರಿಯ. ಅವರ ಶಿಷ್ಯನಾಗಿದ್ದೆ ಎಂಬುದೇ ಒಂದು ಹೆಮ್ಮೆ. ಅವರ ನಿಯಮ, ನಿಷ್ಠೆ, ಸರಳ ರೇಖೆಯಂಥ ಗುಣ, ಸುಸಂಸ್ಕೃತ ನಡವಳಿಕೆ ನಮ್ಮ ನಡುವಿನ ಆದರ್ಶ. ಅವರೊಬ್ಬ ಅಪರೂಪದ ಆಚಾರ್ಯ." **–ನೀ ಗಿರಿಗೌಡ**

"ನಾಯಕರು ಎಷ್ಟೋ ಬಿಗುವಿನ ವೇಳೆ ಸಭಿಕರನ್ನು ನಿಯಂತ್ರಣಕ್ಕೆ ತಂದ ಪವಾಡ ಮೆರೆದಿದ್ದಾರೆ. ಅವರ ವ್ಯಕ್ತಿತ್ವ ನನಗಂತೂ ಒಂದು ವಿಸ್ಮಯವೇ. ಇಷ್ಟು ಮೆದುವಾಗಿ ತೋರುವ ಇವರು, ಮದದಾನೆಗಳ ಹಿಂಡಿನಂತಿದ್ದ ಸಭೆಯನ್ನು ತಮ್ಮ ಮಾತಿನ ಅಂಕುಶದಿಂದ ನಿಯಂತ್ರಣಕ್ಕೆ ತಂದದ್ದೇ ಸೋಜಿಗ. ಅವರ ವ್ಯಕ್ತಿತ್ವದ ಆಳವನ್ನೇ ಅರಿಯಲು ಸಾಧ್ಯವಿಲ್ಲ. ಅವರಂತಹ 'ಸೌಜನ್ಯಶಕ್ತಿ' ಪಡೆದವರು ಬಲು ಅಪರೂಪ. ಪೂಜ್ಯರು ಲೇಖಕಿಯರಿಗೆ ಹಿರಿಯ ಅಣ್ಣ ಇದ್ದಂತೆ." **–ನೀಳಾದೇವಿ**

"ಹಾಮಾನಾ ಅವರ ಪ್ರವೃತ್ತಿ ಗಂಭೀರ; ಓದು ಅಪಾರ; ಬರವಣಿಗೆ ಅಸ್ಖಲಿತ; ಕಾರ್ಯನಿರ್ವಹಣೆ ಚಾರಿತ್ರಿಕ. ಅವನ್ನೆಲ್ಲ ಇಷ್ಟು ಚಿಕ್ಕ ಬರೆಹದಲ್ಲಿ ಸೆರೆಹಿಡಿಯಲು ಎಂದಾದರೂ ಸಾಧ್ಯವೇ? ಡಾ. ಹಾಮಾನಾ ಏಕೀಕೃತ ಕರ್ನಾಟಕವನ್ನು ಕಟ್ಟುವಲ್ಲಿ ಅಪಾರವಾಗಿ ಶ್ರಮಿಸಿದ ಮಹನೀಯರ ಅಗ್ರಪಂಕ್ತಿಗೆ ಸೇರಿದವರು. ನನಗಂತೂ ಅವರು ಪಾಯಿಜಾಮಾ ಜುಬ್ಬಾ ಧರಿಸಿ ತಲೆಗೂದಲನ್ನು ನೀಳವಾಗಿ ಇಳಿಬಿಟ್ಟು ನಾಡಿನ ಉದ್ದಗಲಕ್ಕೂ ಸಂಚರಿಸುವ ಕನ್ನಡದ ಮಿಶನರಿಯಂತೆ ತೋರಿಬರುತ್ತಾರೆ." **–ಎಂ.ಬಿ. ನೇಗಿನಹಾಳ**

"ಹಾಮಾನಾ ಅಂದರೆ ನಮಗೆ ಪ್ರೀತಿ, ವಿಶ್ವಾಸ, ಗೌರವ, ಆದರ, ಅಭಿಮಾನಗಳು. ಇವರು ಸಾಹಿತ್ಯದಲ್ಲಿ, ದಕ್ಷ ಆಡಳಿತದಲ್ಲಿ ನಡೆನುಡಿಯಲ್ಲಿ ಎಷ್ಟು ಎತ್ತರದ ವ್ಯಕ್ತಿಯಾದರೂ ಯಾರಲ್ಲಿಯೂ ಇವರಿಗೆ ಚಿಕ್ಕವರು, ಇವರು ದೊಡ್ಡವರು ಎಂಬ ಭೇದವಿಲ್ಲ." **–ಎ. ಪಂಕಜ**

"ಎಂಥವರನ್ನೂ ಆಕರ್ಷಿಸುವ ಆತ್ಮೀಯ ಮುಗುಳುನಗೆ... ಸಹಜ ಸರಳ ಮಾತುಕತೆ... ಎತ್ತರದ ವ್ಯಕ್ತಿತ್ವ ನನ್ನ ಮನಸ್ಸಿನ ಮೇಲೆ ಒಮ್ಮೆಲೆ ಪ್ರಭಾವ ಬೀರಿದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ." **–ಎಸ್. ಪಂಕಜ**

"ಅಂಕಣದ ಬರವಣಿಗೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದವರು ನಮ್ಮಲ್ಲಿ ಹಲವರಿದ್ದಾರೆ. ಇದು ನಮ್ಮ ಪುಣ್ಯ. ಆದರೆ ನಾಯಕರ ಬರವಣಿಗೆಯ ರೀತಿಯೇ ಬೇರೆ. ಅದರ ಆರಂಭ, ಅದರ ಬೆಳವಣಿಗೆ, ಅದರ ಶಿಖರ, ಅದರ ಮುಕ್ತಾಯ –ಇವುಗಳೇ ಒಂದು ಸೊಗಸು. ಆ ಸೊಬಗು, ಆ ಸ್ವಾರಸ್ಯ, ಆ ವೈವಿಧ್ಯ ಇವುಗಳನ್ನು ನಾನು ಅನ್ಯತ್ರ ಕಂಡಿಲ್ಲ. ಒಂದು ಅಂಗುಲದ ದಂತದ ಶಕಲದ ಮೇಲೆ ಚಿತ್ರಿಸುವಂಥ ಕುಸುರಿ ಕೆಲಸದ ಒಂದು ಕೌಶಲ ಇಲ್ಲಿ ಕಾಣಬರುತ್ತದೆ.

ಈ ಬರಹಗಳು ಒಂದು ರೀತಿಯ ಗದ್ಯದ ಭಾವಗೀತೆಗಳೆಂದೇ ಹೇಳಬೇಕು. ಇವು ಹಾಗೆ ಅರ್ಥಗರ್ಭಿತವಾಗಿವೆ. ಭಾವ ಪ್ರಖರವಾಗಿವೆ. ಧ್ವನಿ ಪ್ರಚುರವಾಗಿವೆ. ಇವುಗಳೆಲ್ಲದರಲ್ಲಿಯೂ ಅವರದೇ ಆದ ಒಂದು ನಾಯಕಮುದ್ರೆ ಬಿದ್ದಿರುವುದನ್ನು ನಾವು ಕಾಣುತ್ತೇವೆ.

ಎಷ್ಟು ಅಡಕವಾಗಿ ಹೇಳಬೇಕಾದುದೆಲ್ಲವನ್ನೂ ಹೇಳಿ ಮುಗಿಸಿದರೋ ಎನ್ನುವಂತೆ ಇವರ ಬರವಣಿಗೆ ಇದೆ. ಇದು ಖಚಿತವಾಗಿಯೂ ತರ್ಕಬದ್ಧವಾಗಿಯೂ ಇರುತ್ತದೆ ಎನ್ನುವುದನ್ನು ಯಾರೂ ಗುರುತಿಸಬಲ್ಲರು.

ಇವರ ಬರವಣಿಗೆಯ ಹಾಗೆಯೇ ಇವರ ಮಾತು ಖಚಿತವಾದದ್ದು; ಸ್ಪಷ್ಟವಾದದ್ದು; ಅಚ್ಚುಕಟ್ಟಾದದ್ದು. ಮನಸ್ಸು ಹೇಗಿದ್ದರೆ ಮಾತು ಹಾಗಿರುತ್ತದೆ ಎನ್ನುವುದನ್ನು ಇಂತಹ ಬರವಣಿಗೆಯಿಂದ ಕಾಣಬಹುದು. ನಾಯಕರ ಮಾತು ಮನಸ್ಸು ಇವೆರಡೂ ಸ್ವಚ್ಛ." **–ಎಸ್.ವಿ. ಪರಮೇಶ್ವರ ಭಟ್ಟ**

"ವ್ಯಕ್ತಿಯನ್ನು ಅವರ ವ್ಯಕ್ತಿತ್ವದಿಂದ ಗುರುತಿಸುತ್ತೇವೆ. ಅಳೆಯುತ್ತೇವೆ. ಅಪ್ಪಟ ಹೃದಯದ ಶ್ರೀಮಂತ ಲಕ್ಷಣ ಡಾ. ಹಾ.ಮಾ. ನಾಯಕರದು. ಯಾವುದೇ ಕೆಲಸ ಮಾಡಲಿ ಶಿಸ್ತು, ನಿಯಮಬದ್ಧ ನಿಲುವು, ಅಚ್ಚುಕಟ್ಟುತನ ಮೆಚ್ಚುವಂತಹದ್ದು. ಹಿರಿಕಿರಿಯರೆನ್ನದೆ ಎಲ್ಲರೊಡನೆ ಬೆರೆಯುವ ಅವರ ಹೃದಯವೈಶಾಲ್ಯತೆಗೆ, ಅವರ ಸ್ವಭಾವಕ್ಕೆ, ಅವರ ಸೌಜನ್ಯಕ್ಕೆ ನಾನು ಮಾರುಹೋಗಿದ್ದೇನೆ. ಹಾಗೂ ಸತ್ಯ ನಿಷ್ಠುರವಾಗಿ ಕಂಡರೂ ಹೇಳಬೇಕಾದ್ದನ್ನು

ಹೇಳುವ ಅವರ ದಿಟ್ಟ ಹಾಗೂ ಪ್ರಾಮಾಣಿಕ ನಿಲುವು ನನಗೆ ಹೆಚ್ಚು ಪ್ರಿಯ." – **ಪ್ರೇಮಾ ಭಟ್**

"ನಾಯಕರು ಒಬ್ಬ ಮಾದರಿ ಆಡಳಿತಗಾರರು. ಸಾಮಾನ್ಯವಾಗಿ ಅಧಿಕಾರಿಗಳೆನಿಸಿಕೊಂಡವರು ದುಡಿಮೆ, ಪ್ರಾಮಾಣಿಕತೆ, ಸಮಯನಿಷ್ಠೆ – ಇವೆಲ್ಲವನ್ನೂ ಸಹೋದ್ಯೋಗಿಗಳಿಂದ ನಿರೀಕ್ಷಿಸುತ್ತಾರೆ. ಸ್ವತಃ ಇವುಗಳಿಗೆ ಬದ್ಧರಾಗಿರುವುದು ವಿರಳ. ಆದರೆ ನಾಯಕರ ವಿಚಾರದಲ್ಲಿ ನಡೆನುಡಿಗಳಲ್ಲಿ ಅಪೂರ್ವ ಸಾಂಗತ್ಯ ಏರ್ಪಟ್ಟಿತ್ತು." –**ವೈ.ಸಿ. ಭಾನುಮತಿ**

"ಒಡೆದು ಕಾಣುವ ಮುಖಲಕ್ಷಣ ಮಾತ್ರವಲ್ಲ, ತುಂಬ ಇಳಿಬಿದ್ದು ಸದಾ ಶ್ವೇತ ವಿಜೃಂಭಿಸುವ ಬೇರೆ ಯಾರಲ್ಲಿಯೂ ಇಲ್ಲದ ಆ ಜಾನ್ಸನ್ ಶೈಲಿಯ ತಲೆಗೂದಲು, ಎಂದೆಂದಿಗೂ ಬದಲಾವಣೆ ಇಲ್ಲದ ಖಾದಿ ಪೈಜಾಮ ಜುಬ್ಬಗಳು ಅವರ ಹೊರ ವ್ಯಕ್ತಿತ್ವಕ್ಕೆ ವೈಶಿಷ್ಟ್ಯವನ್ನು ಕೊಟ್ಟಿವೆ. ಹೀಗಾಗಿ ಫೋಟೋದಲ್ಲಿ, ಟಿ.ವಿ.ಯಲ್ಲಿ ಅಥವಾ ಸಭೆಯಲ್ಲಿ ಒಮ್ಮೆ ನೋಡಿದ್ದರೆ ಸಾಕು, ಮರೆಯಬೇಕೆಂದರೂ ಮರೆಯಲು ಕಷ್ಟವಾದ ಚಿತ್ರ ಕಣ್ಣಿನ ಒಳಪದರದಲ್ಲಿ ನಿಂತುಬಿಟ್ಟಿರುತ್ತದೆ." –**ಎಸ್.ಎಲ್. ಭೈರಪ್ಪ**

"ಹಾ ಮಾ ನಾಯಕರು ನಿಜವಾದ ಅರ್ಥದಲ್ಲಿ ನಾಯಕರು. ವ್ಯಕ್ತಿತ್ವ, ಮಾತುಕತೆ, ನಡೆವಳಿಕೆ, ಜನರ ಬಗೆಗೆ ಅವರು ತೋರುವ ಆದರ ಯಾವುದನ್ನೇ ತೆಗೆದುಕೊಳ್ಳಿ, ಕಡ್ಡಿ ಎರಡು ತುಂಡು ಮಾಡಿದ ಹಾಗೆ. ಅವರಂತೆ ನೇರ ನಿಷ್ಠುರವಾಗಿ ನಡೆದುಕೊಳ್ಳುವವರನ್ನು ನಾನು ಕಂಡಿಲ್ಲ... ಆಜಾನುಬಾಹುವಲ್ಲದಿದ್ದರೂ ಅರವಿಂದ ದಳಾಯತಕ್ಷರು ಅವರು. ಕನ್ನಡ ಕಿರಣವನ್ನು ಹೊರಸೂಸುವ ಅಕ್ಷಿಗಳು, ಮೋಡಿ ಮಾಡಿ ಮರುಳು ಮಾಡುವ ಮಾತುಗಾರಿಕೆ, ಹಿಡಿದ ಕೆಲಸವನ್ನು ಬಿಡದೆ ಸಾಧಿಸುವ ಛಲ, ಮಾನಪ್ಪನವರಲ್ಲಿ ಮೈಗೂಡಿಕೊಂಡಿರುವ ಸಹಜ ಗುಣ." –**ಎಸ್. ಮಂಗಳಾ ಸತ್ಯನ್**

"ಕನ್ನಡದ ಕಟ್ಟಾಳುಗಳಲ್ಲಿ ಡಾ. ಹಾ ಮಾ ನಾಯಕರು ಪ್ರಮುಖರು. ಅವರು ಕನ್ನಡದ ನಾಯಕರು. ಅಷ್ಟೇ ಅಲ್ಲ, ಪ್ರತಿಯೊಬ್ಬ ಕನ್ನಡಿಗನಿಗೂ 'ಅವರು ನಮ್ಮವರು' ಎಂದು ಹೇಳಿಕೊಳ್ಳುವಷ್ಟು ಆತ್ಮೀಯರು. ಕನ್ನಡಕ್ಕೆ ಒಂದಿಷ್ಟು ನೋವಾದರೂ ಅವರು ಸಹಿಸರು. ಕನ್ನಡ ಕಟ್ಟುವ ಕೆಲಸದಲ್ಲಿ ಅವರು ಸದಾ ನಿರತರು." –**ಮಂದಾಕಿನಿ ಪುರೋಹಿತ**

“ಹಾಮಾನಾ ಎಂದೂ ನನಗೆ ಕ್ಲಾಸ್ ತೆಗೆದುಕೊಳ್ಳಲಿಲ್ಲ. ಅಷ್ಟರಮಟ್ಟಿಗೆ ಅದು ನನ್ನ ದೌರ್ಭಾಗ್ಯ. ಆದರೆ ನನ್ನ ಪಾಲಿಗೆ ಅವರು ದ್ರೋಣಾಚಾರ್ಯರು. ಏಕಲವ್ಯನಾಗಿ ನಾನು ಅವರ ಗರಡಿಯಲ್ಲಿ ಸಾಕಷ್ಟು ‘ಕಲಿತಿದ್ದೇನೆ’. ನನ್ನಂಥವರು ಎಷ್ಟೋ ಜನರಿದ್ದಾರೆ ನಾಡಿನಾದ್ಯಂತ.” **–ಮಧುಗಿರಿ ಗುಂಡೂರಾವ್**

“ನಾಯಕರ ಅಂಕಣ ಬರಹಗಳಲ್ಲಿ, ವಿಮರ್ಶಾ ಲೇಖನಗಳಲ್ಲಿ, ಗ್ರಂಥಗಳಲ್ಲಿ, ಭಾಷಣಗಳಲ್ಲಿ, ಸಂಭಾಷಣೆಗಳಲ್ಲಿ ನನ್ನ ದೃಷ್ಟಿಗೆಟುಕಿದ ಅವರ ವ್ಯಕ್ತಿತ್ವದ ಒಂದೊಂದು ರೇಖೆಗಳನ್ನು ಎಳೆದು ತೆಗೆದ ಒಂದು ರೇಖಾಚಿತ್ರವಿದೆ ನನ್ನ ಬಳಿ. ಕನ್ನಡದ ಕಟ್ಟಾಳು ಸತತೋದ್ಯೋಗಿ, ಕರ್ತವ್ಯನಿಷ್ಠ, ನಿರ್ಭಿಡೆಯ ವಿಮರ್ಶಕ, ಪಂಡಿತ, ಚೊಕ್ಕ ಕೆಲಸಗಾರ, ತತ್ವಶಾಲಿ –ಹೀಗೆ ಮುಂದೆ ಸಾಗುತ್ತದೆ ಈ ಸಾಲು. ಒಂದಕ್ಕಿಂತ ಇನ್ನೊಂದು ಮೇಲುಗುಣ, ಇನ್ನೊಂದಕ್ಕಿಂತ ಮತ್ತೊಂದು ಹಿರಿಯಗುಣ. ಈ ಎಲ್ಲ ರೇಖೆಗಳನ್ನು ಕೂಡಿಸಿದರೆ ಅದೊಂದು ಕಟ್ಟು ಕತೆಯ ನಾಯಕನ ಚಿತ್ರವಾಗಬೇಕು. ಜೀವನ ಸಾಹಿತ್ಯಕ್ಕಿಂತ ಅದ್ಭುತವಾಗಿರುತ್ತದೆ. ಒಬ್ಬ ಸುಸಂಸ್ಕೃತ ಹೃದಯವಂತ ಸ್ನೇಹಿತರಾಗಿ ಡಾ. ಹಾಮಾನಾ ಇದ್ದಾರೆ. ನಮ್ಮ ಕಲ್ಪನೆಯ ನಾಯಕನ ಚಿತ್ರಕ್ಕೆ ಸೊನೇರಿ ಬಣ್ಣ ತುಂಬಿದ್ದಾರೆ.” **–ಮಾಲತಿ ಪಟ್ಟಣಶೆಟ್ಟಿ**

“ಸ್ಪಷ್ಟತೆ, ಅಸಂದಿಗ್ಧತೆ –ಈ ಗುಣಗಳನ್ನು ಬರವಣಿಗೆಯಲ್ಲಿ ಮಾತ್ರವಲ್ಲ ನಾಯಕರ ಮಾತಿನಲ್ಲಿ ಕೂಡ ಕಾಣಬಹುದು. ಅವುಗಳ ಜೊತೆಗೆ ತಮ್ಮ ಲೇಖನ ವಸ್ತುವಿನ ಮೇಲೆ ಹಿಡಿತ, ತರ್ಕಬದ್ಧವಾದ ವಾಕ್ಯಸರಣಿ –ಇವೆರಡನ್ನೂ ಸೇರಿಸಬಹುದು... ಒಂದು ದೃಷ್ಟಿಯಿಂದ ಅವರ ಶೈಲಿಯನ್ನು ‘ಅಲಂ’ಕೃತ ಶೈಲಿ ಎನ್ನಬಹುದೇನೋ. ‘ಅಲಂ’ ಎಂದರೆ ಸಾಕಾದಷ್ಟು, ಎಷ್ಟು ಬೇಕೋ ಅಷ್ಟು, ಬಂದದ್ದಾಗಿದೆ ಎಂದರ್ಥ. ನಾಯಕರು ಆ ಮಿತಿಯನ್ನು ಕಾಪಾಡಿಕೊಳ್ಳುತ್ತಾರೆ. ಅವಶ್ಯವಾಗಿ ಹೇಳಬೇಕಾದ್ದನ್ನು ಹೇಳುತ್ತಾರೆ; ಆದರೆ ಕೇವಲ ಮಾತಿನ ಮೋಡಿಗಾಗಿ ಅದನ್ನು ವಿಸ್ತರಿಸಿ ಸಾರಗುಂದಿಸುವುದಿಲ್ಲ.” **–ಎ.ಎನ್. ಮೂರ್ತಿರಾವ್**

“ಡಾ. ಹಾಮಾನಾ ಅವರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಕಾಲದಲ್ಲಿ ಮಾಡಿದ ಕೆಲಸಗಳು ಕನ್ನಡ ನಾಡಿಗೇ ತಿಳಿದಿವೆ. ಪ್ರೊ. ದೇಜಗೌ ಅವರು ಹುಟ್ಟುಹಾಕಿದ ಹಲವು ಕನ್ನಡದ ಯೋಜನೆಗಳು ಶ್ರೀಮಂತವಾಗಿ ಬೆಳೆದು ಫಲ ಕೊಡುವಂತೆ ಮಾಡಿದ ಕೀರ್ತಿ ಡಾ. ಹಾಮಾನಾ ಅವರದ್ದು. ಆ ವಿಷಯದಲ್ಲಿ ಅವರು ಮಹಾನಾಯಕರಾಗಿಯೇ ಶಿಸ್ತಿನ ಸಿಪಾಯಿ

ಎನಿಸಿದರು. ಅವರ ಆಡಳಿತದ ವೈಖರಿ ಅದು ಅವರಿಗೇ ಮೀಸಲಾದದ್ದು." – **ಡಿ.ಕೆ. ರಾಜೇಂದ್ರ**

"ಹಾ ಮಾ ನಾಯಕರ ಬಗ್ಗೆ ಅನೇಕ ರೀತಿಯ ಅಭಿಪ್ರಾಯಗಳನ್ನು, ಮಾತುಗಳನ್ನು ನಾನು ಕೇಳಿದ್ದೇನೆ. ಅವು ಮಾನವ ಸಹಜವಾದಂಥವು. ಆದರೆ ಹಾ ಮಾ ನಾಯಕರ ವ್ಯಕ್ತಿತ್ವ ಈ ಅಭಿಪ್ರಾಯಗಳನ್ನು ಮೀರಿದ್ದು, ಅನುಕರಣೀಯವಾದುದು, ಆದರ್ಶವಾದುದು, ಅಸಮಾಧಾನದ ನಡುವೆಯೂ ಪ್ರೀತಿಸುವಂಥದು." **–ಹ.ಕ. ರಾಜೇಗೌಡ**

"ತಲೆಯಿಂದ ಕತ್ತಿನವರೆಗೆ ಹರಿಯುವ ಬೆಳ್ಳಿಗೂದಲು, ತೀಕ್ಷ್ಣವಾದ ಕಣ್ಣುಗಳು ಹಾಗೂ ಮಂದಹಾಸಗಳನ್ನು ಒಟ್ಟಿಗೆ ಹೊಂದಿರುವ ಮುಖ, ಸ್ವಚ್ಛವಾದ ಜುಬ್ಬಾ ಪೈಜಾಮಾ ಇವುಗಳೆಲ್ಲ, ನೋಡಿದೊಡನೆಯೇ ಒಂದು ವಿಶಿಷ್ಟ ಅನುಭವವನ್ನು ಕೊಡುವ ನಾಯಕರ ಭೌತಿಕ ಅಂಶಗಳು. ಅವರೊಡನೆ ಮಾತನಾಡಿದಾಗ ಅವರ ಚಿಂತನಶೀಲ, ಬೌದ್ಧಿಕ ವ್ಯಕ್ತಿತ್ವವನ್ನು ನಮ್ಮ ಮುಂದೆ ಹಿಡಿದು ನಿಲ್ಲಿಸುತ್ತವೆ. ನಾಯಕರದು ಮನಸ್ಸಿನಲ್ಲಿ ನಿಲ್ಲುವ ವ್ಯಕ್ತಿತ್ವ. ಹೆಸರಿಗೆ ತಕ್ಕಂತೆ ಮುಂದಾಳಾಗಿ ನಿಲ್ಲಬಲ್ಲ ವ್ಯಕ್ತಿತ್ವ. ಯಾವುದನ್ನೂ ಲಘುವಾಗಿ ತೆಗೆದುಕೊಳ್ಳದ ಹಾಗೂ ಯಾರೂ ಲಘುವಾಗಿ ತೆಗೆದುಕೊಳ್ಳಲಾಗದ ಎತ್ತರದ ವ್ಯಕ್ತಿತ್ವ." **–ಪಿ.ಎಸ್. ರಾಮಾನುಜಂ**

"ನಾಯಕರ ಗಾಂಭೀರ್ಯ, ಪಾಂಡಿತ್ಯ, ಸೌಜನ್ಯತೆ, ಸುಸಂಸ್ಕೃತ ವಿಚಾರಧಾರೆ, ದಿಟ್ಟ ನಡೆ–ನುಡಿ, ಕನ್ನಡ ನಾಡು–ನುಡಿಯ ಬಗ್ಗೆ ಅಬ್ಬರವಿಲ್ಲದ ಅಭಿಮಾನ –ಈ ಎಲ್ಲಾ ಅನುಕರಣಾರ್ಹ ಗುಣಗಳು ಅವರನ್ನು ಅತ್ಯಂತ ಎತ್ತರದ ಸಾಲಿಗೆ ನಿಲ್ಲಿಸುತ್ತವೆ." **–ಬಿ.ಟಿ. ಲಲಿತಾನಾಯಕ್**

"ಡಾ. ಹಾ.ಮಾ. ನಾಯಕರು ಹಿರಿಯ ಸಾಹಿತಿ, ಅಂಕಣಕಾರ, ದಕ್ಷ ಆಡಳಿತಗಾರ, ಪ್ರತೀ ವಿಷಯವನ್ನು ವಿಮರ್ಶಾತ್ಮಕ ದೃಷ್ಟಿಯಲ್ಲಿ ನೋಡುತ್ತಾರೆ. ನ್ಯಾಯಾನ್ಯಾಯದ ತಕ್ಕಡಿಯಲ್ಲಿ ತೂಗಿ ನೋಡುತ್ತಾರೆ. ಸರಿ ಇಲ್ಲದ್ದನ್ನು ನೇರವಾಗಿ ಹೇಳುತ್ತಾರೆ. ಅವರ ಕೃತಿ ಶುಭ್ರ, ಮನಸ್ಸು ಶುಭ್ರ." **–ನ. ವಜ್ರಕುಮಾರ**

"ಸಹಜತೆ, ಸರಳತೆಯಿಂದ ತುಂಬಿದ ಅವರ ವ್ಯಕ್ತಿತ್ವ ಆಕರ್ಷಣೀಯ. ಅವರು ವ್ಯವಸ್ಥೆಗೊಳಿಸಿದ ಕಾರ್ಯಕ್ರಮಗಳು ಅದೆಷ್ಟು ಚೊಕ್ಕಟ. ಗಡಿಯಾರದಮುಳ್ಳಿನಂತೆ ನಿಯಮಿತವಾಗಿ ಎಲ್ಲವೂ ಸಾಗುತ್ತಿದ್ದವು. ಹಾಮಾನಾ ಅವರ ಪತ್ರವ್ಯವಹಾರವು ಉನ್ನತ ಸ್ಥಾನದಲ್ಲಿ ಇರುವವರಿಗೆಲ್ಲ ಅನುಕರಣೀಯ.

ಇಂದು ಅವರಿಗೊಂದು ಪತ್ರ ಬರೆದರೆ ೩–೪ ದಿನಗಳಲ್ಲಿಯೇ ಅವರ ಉತ್ತರ ಬರುತ್ತದೆ. ಹಾಮಾನಾ ಅವರ ಕನ್ನಡ ಅಕ್ಷರಗಳು ಮುತ್ತಿನಂಥವು. ಅವರ ದುಂಡಾದ ಅಕ್ಷರಗಳನ್ನು ನೋಡಿದಾಗ, ನನಗೆ ಎಷ್ಟೋ ಸಲ ಮತ್ಸರ ಉಂಟಾಗುತ್ತದೆ. ಬರೆಹದಲ್ಲಿ ಅವರು ಇದನ್ನು ಹೇಗೆ ಸಾಧಿಸಿರುವರೋ!" – **ವರದರಾಜ ಹುಯಿಲಗೋಳ**

**"**ಹಾಮಾನಾ ಕನ್ನಡ ಕುಲಪತಿ. ಅವರು ಕನ್ನಡದ ಈ ಕಾಲದ ಪಂಪ. ಹೌದು, ಅವರನ್ನು ನಾನು ಕಂಡಾಗಲೆಲ್ಲ, ನೆನೆಸಿಕೊಂಡಾಗಲೆಲ್ಲ, ಧ್ವನಿ ಕೇಳಿದಾಗಲೆಲ್ಲ ನನಗೆ ಕೇವಲ ಪಂಪನ ನೆನಪಾಗುತ್ತದೆ. ಪಂಪನಂತೆ ಬಗೆ ಪೊಸತು. ಅವರು ತುಂಬಿದ ಕೊಡ. ಒಳಗೆ ತುಂಬಿರುವುದೆಲ್ಲ ದೇಸಿ–ಮಾರ್ಗಗಳ ಸಮನ್ವಯತೆ. ಶೀಲ ಸೌಜನ್ಯತೆ. ಪಂಪನ ಕಾವ್ಯಗಳಲ್ಲಿಯ ಸುಗ್ಗಿಯ ಹಿಗ್ಗು ಅವರು. ಒಂದು ಮಾತಿನಲ್ಲಿ, ಕಲಬುರಗಿಯಲ್ಲಿಯ ಶೈಲಿಯಲ್ಲಿ ಹೇಳಬೇಕಾದರೆ– ಹಾಮಾನಾ ಹೂಬೇಹೂಬ ನಾಡೋಜ ಪಂಪ." **–ತವಗೆ ಭೀಮಸೇನರಾಯರು**

> **"**ಸ............ ಸಾಹಿತ್ಯದ ಮಾಲೆ
> ಅಭಿನಂದನ ಗ್ರಂಥಗಳ ದೀಪಶಾಲೆ
> ಸರಸ ಸಲ್ಲಾಪ ಇವರ ನಿತ್ಯದ ಲೀಲೆ
> ಇವರು ಆಲದ ಬೇರು
> ಕಚ್ಚಿದ ಮಣ್ಣು ಮಹಾಮೇರು
> ಎಳೆಯುವರು ಕನ್ನಡದ ತೇರು**" –ವಾಮನ ಬೇಂದ್ರೆ**

**"**ವಿಷಯ ನಿರೂಪಣೆಯಲ್ಲಿ ಸ್ಪಷ್ಟತೆ, ಸಹಜತೆ, ಸರಳತೆ ಮತ್ತು ಉತ್ತಮ ಧ್ವನಿ–ಇವು ಬಾನುಲಿ ಭಾಷಣಕಾರನಿಗೆ ಇರಬೇಕಾದ ಪ್ರಮುಖ ಲಕ್ಷಣಗಳು. ಈ ಚತುರ್ಮುಖ ಲಕ್ಷಣಗಳೂ ಹಾಮಾನಾ ಅವರಿಗೆ ಸಂಪೂರ್ಣವಾಗಿ ಸಿದ್ಧಿಸಿವೆ. ಎಂತಲೇ ಇವರು ಬಾನುಲಿ ಶ್ರೇಷ್ಠ ಭಾಷಣಕಾರರ ಅಗ್ರಪಂಕ್ತಿಯಲ್ಲಿದ್ದಾರೆ." **–ವಿಜಯ ಹರನ್**

**"**ಡಾ. ಹಾಮಾನಾ ಅವರು ಪ್ರೀತಿ, ಸ್ನೇಹ, ವಿಶ್ವಾಸದ ಬೀಜವನ್ನು ಬಿತ್ತಿ ಮನುಷ್ಯ ಸಂಬಂಧಗಳನ್ನು ಬೆಳೆಸುವ ಮನುಕುಲದ ರೂವಾರಿ. ಶಿಸ್ತು, ಸರಳತೆ, ಸೌಹಾರ್ದತೆ ಮತ್ತು ಸೌಜನ್ಯದ ಸಾಕಾರಮೂರ್ತಿ. ಅಚ್ಚುಕಟ್ಟಾಗಿ ದಕ್ಷತೆಯಿಂದ ತಮ್ಮ ಕಾರ್ಯವನ್ನು ನಿರ್ವಹಿಸುವ ಕರ್ತವ್ಯನಿಷ್ಠರು. ಲಿಂಗ–ಜಾತಿ ಭೇದವಿಲ್ಲದೆ,

ಹಿರಿಯರು ಕಿರಿಯರು ಎನ್ನದೆ ಎಲ್ಲರ ಜೊತೆಯಲ್ಲಿ ಆತ್ಮೀಯರಾಗಿದ್ದು ಕ್ಷೇಮ ಸಮಾಚಾರವನ್ನು ವಿಚಾರಿಸುವುದು ಹಾಗೂ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಿಸ್ವಾರ್ಥದಿಂದ ಪ್ರಯತ್ನಿಸುವ ಉದಾರತ್ವ ಅವರದು.

ಸರಳತೆ ಮತ್ತು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡ ಡಾ. ಹಾಮಾನಾ ಅವರ ಬದುಕು ಮತ್ತು ಬರೆಹ ವೈಶಿಷ್ಟ್ಯಪೂರ್ಣವಾದದ್ದು. ತಮ್ಮ ಬದುಕಿನ ಪ್ರತಿಯೊಂದು ನಿಮಿಷದ ಸದುಪಯೋಗವನ್ನು ಪಡೆದು ಬದುಕು–ಬರೆಹ ಸಿದ್ಧಿಯನ್ನು ಸಾಧಿಸಿದ ಸಿದ್ಧಪುರುಷರಾದ ಡಾ. ಹಾಮಾನಾ ಅವರ ಸಾಧನೆ ಕನ್ನಡ ಸಾಹಿತ್ಯಕ್ಕೆ ಮತ್ತು ಕನ್ನಡಿಗರಿಗೆ ಅಮೂಲ್ಯವಾದ ಕೊಡುಗೆ." – **ವಿಜಯಶ್ರೀ ಸಬರದ**

"ನಾವು ತುಂಬ ಗೌರವಿಸುವ, ಆತ್ಮೀಯ ಭಾವನೆಗಳನ್ನು ತುಂಬಿಕೊಂಡ ವ್ಯಕ್ತಿತ್ವವೊಂದನ್ನು ಪತ್ರದಲ್ಲಿ, ಒಂದೆರಡು ಪುಟದಲ್ಲಿ ಅಡಕಗೊಳಿಸುವುದು ಹೇಗೆ? ನಾನೇಕೆ ಕಾರ್ಟೂನಿಸ್ಟ್ ಆಗಲಿಲ್ಲ. ಗೆರೆಗಳಲ್ಲಿ ಭಾವ ತುಂಬಿ ಗೌರವಿಸುವ ಕಲೆ ನನಗೆ ಸಾಧ್ಯವಿಲ್ಲವಲ್ಲ ಅನಿಸುತ್ತದೆ." **–ವಿಜಯಾ**

"ಸಾರ್ವಜನಿಕ ಸ್ವತ್ತು, ಹಣದ ವಿಷಯದಲ್ಲಿ ಕಟ್ಟೆಚ್ಚರ, ಗುಣಗ್ರಾಹಿತ್ವ, ದಕ್ಷತೆ, ಕನ್ನಡವನ್ನು ಕಟ್ಟುವಲ್ಲಿ ಅವರು ಸತತವಾಗಿ ತೋರುವ ನಿಷ್ಠೆ, ಕಾಲಪ್ರಜ್ಞೆ, ಔಚಿತ್ಯದೃಷ್ಟಿ ಇಂಥ ಅವರ ಎಷ್ಟೋ ಗುಣಗಳು ಮತ್ತೆ ಮತ್ತೆ ನೆನಪಾಗುತ್ತಿರುತ್ತವೆ." **–ವಿಜಯಾ ದಬ್ಬೆ**

"ಅವರ ನಡೆ–ನುಡಿಗಳು, ಉಡುಗೆ–ತೊಡುಗೆಗಳು, ಸರಳ ವರ್ತನೆ, ಇವುಗಳ ಬಗ್ಗೆ ಕವಿಯೊಬ್ಬ ಹೇಳಿರುವ ಮಾತುಗಳು ಯಥಾವತ್ತಾಗಿ ಅನ್ವಯವಾಗುತ್ತವೆ:

> ಈ ಸರಳತೆಗೆ ಮಾರುಹೋಗದವರುಂಟೆ, ಹೇ, ಭಗವಂತ!
> ಹೋರಾಡುವರು ಇವರು, ಆದರೆ ಇರದು ಕತ್ತಿ ಅವರ ಕೈಯಲಿ!

ಆಚಾರ್ಯ ಸಮಂತಭದ್ರರು ಒಂದೆಡೆ ಹೀಗೆಂದಿದ್ದಾರೆ:

> 'ಆಲೋಕಾನಾಂ ಸಾಲೋಕಾನಾಂ ಯದ್ ವಿದ್ಯಾದರ್ಪಣಾಯತೆ'

ನಾಯಕರು ಇಂಥ ಸುದೂರ ದೃಷ್ಟಿಯ, ಸ್ವಚ್ಛ ನಿರ್ಮಲ ವ್ಯಕ್ತಿತ್ವದ, ಉದಾತ್ತ ಆಲೋಚನೆಗಳ ಅಸಾಧಾರಣ ವ್ಯಕ್ತಿಯಾಗಿದ್ದಾರೆ." **–ವಿದ್ಯಾಚಂದ್ರ ಕೊಠಾರಿ** (ಹಿಂದಿಯಿಂದ ಅನುವಾದ: ಪ್ರಧಾನ ಗುರುದತ್ತ)

"ಡಾ. ಹಾ ಮಾ ನಾಯಕರನ್ನು ನೋಡಿದಾಗ ನನಗೆ ಯಾವಾಗಲೂ ಒಂದು ಸಮುದ್ರವನ್ನು ನೋಡಿದ ಹಾಗೆ ಅನಿಸುತ್ತದೆ. ವಿಶಾಲವಾದ, ಆಳವಾದ, ತೋರಿಕೆಗೆ ಶಾಂತವಾದ, ಆದರೆ ಪ್ರಸಂಗ ಬಂದಾಗ ಭೋರ್ಗರೆಯುವ, ರಹಸ್ಯಮಯ, ಕೌತುಕಮಯ, Sublime ಅನ್ನಿಸುವಂತಹ ಸಮುದ್ರ... ನಾನವರ ವ್ಯಕ್ತಿತ್ವದಲ್ಲಿ ಮೆಚ್ಚಿದ್ದು ಅವರ ತೂಕದ ನಡೆನುಡಿ, ಸಮತೋಲನ ದೃಷ್ಟಿಕೋನ ಮತ್ತು ಮಾನವೀಯತೆ.... ಕಿರಿಯರನ್ನು ಪ್ರೋತ್ಸಾಹಿಸುವ ಅವರ ದೊಡ್ಡಗುಣ, ಮಹಿಳೆಯರ ಬಗ್ಗೆ ಅವರಿಗಿರುವ ಗೌರವ, ನನಗೆ ಮೆಚ್ಚಿಕೆ. ನಾನು ಗೌರವಿಸುವ ಕೆಲವೇ ವ್ಯಕ್ತಿಗಳಲ್ಲಿ ಹಾಮಾನಾ ಒಬ್ಬರು." **–ವೀಣಾ ಶಾಂತೇಶ್ವರ**

"ನನ್ನನ್ನು ಆಕರ್ಷಿಸಿದ ನಾಯಕರ ಬಹುದೊಡ್ಡ ಗುಣವೆಂದರೆ ವಿನಯವಂತಿಕೆ. ಅದನ್ನು ನಾನು ಎಂದೂ ಮರೆಯುವಂತಿಲ್ಲ. ಅಧಿಕಾರ ಬಂದಾಗ ನಮ್ಮ ಜನ ಹೇಗೆ ವರ್ತಿಸುತ್ತಾರೆಂಬುದನ್ನು ನಾನು ಬಹಳ ಚೆನ್ನಾಗಿ ಬಲ್ಲೆ. ನಾಯಕರು ಅದಕ್ಕೆ ಒಂದು ಅಪವಾದವಾಗಿದ್ದರು. ಕೆಲವರಲ್ಲಿ ವಿನಯ ಒಂದು ಕೃತಕಗುಣವಾಗಿರುತ್ತದೆ; ನಾಯಕರಲ್ಲಿ ಅದು ಬಹಳ ಸಹಜವಾದ ಗುಣವಾಗಿದೆ." **–ಕೆ. ವೆಂಕಟರಾಮಪ್ಪ**

"ಒಳ್ಳೆಯ ವಿದ್ವಾಂಸ, ಸ್ನೇಹಪರ, ಕನ್ನಡದ ಉಸಿರು, ಶಿಕ್ಷಣದ ಉನ್ನತಿಯಲ್ಲಿ ಆಸಕ್ತಿ, ಸೋದರ ಭಾಷಾ ಸಾಹಿತ್ಯಗಳ ಪರಸ್ಪರ ಆದಾನ ಪ್ರದಾನಗಳಲ್ಲಿ ಉತ್ಸಾಹವನ್ನು ಹೊಂದಿರುವ ವ್ಯಕ್ತಿ. ಭಾರತದ ಆದ್ಯಂತ ಸಾಹಿತ್ಯ ಶಿಕ್ಷಣ, ಭಾಷಾಶಾಸ್ತ್ರ, ಜಾನಪದ –ಈ ಕ್ಷೇತ್ರಗಳಲ್ಲಿ ದುಡಿಯುವ ಎಲ್ಲ ಪ್ರಸಿದ್ಧರ ಗೆಳೆಯ ಇದು ಡಾ. ನಾಯಕರನ್ನೆ ವರ್ಣಿಸುವ ಕೆಲವು ಮಾತುಗಳು." **–ಜಿ. ವೆಂಕಟಸುಬ್ಬಯ್ಯ**

"ಡಾ. ನಾಯಕರು ಕನ್ನಡ ಭಾಷೆ ಸಾಹಿತ್ಯಗಳ ಪ್ರಸಾರ ಕಾರ್ಯವನ್ನು ತಮ್ಮ ಸ್ವಂತ ಬರಹಗಳಿಂದ, ಭಾಷಣಗಳಿಂದ ಎಡೆಬಿಡದೆ ಮಾಡುತ್ತಾ ಬಂದಿದ್ದಾರೆ. ಅದು ಅವರಿಗೆ ಸಾರಸ್ವತ ತಪಶ್ಚರ್ಯೆ, ಬದುಕಿನ ಸವಾಲು. ಇದಕ್ಕಾಗಿ ಅವರದು ದಣಿವಿಲ್ಲದ ದುಡಿಮೆ, ತಣಿವಿಲ್ಲದ ಬಯಕೆ. ಬರೆಹದ ಕಾಯಕವನ್ನು ಹೀಗೆ ಆಯಾಸವಿಲ್ಲದೆ, ಬೇಸರವಿಲ್ಲದೆ ಸಾಗಿಸಿಕೊಂಡು ಬರುವುದೇ ಒಂದು ದೊಡ್ಡ ಸಾಧನೆ. ಇದು ಕೆಲವರು ಮಾಡಿರುವಂತೆ, ಮಾಡುತ್ತಿರುವಂತೆ ಜೀವನೋಪಾಯಕ್ಕೆ ಎಂದು ಕೈಗೊಂಡುದಲ್ಲ; ಧ್ಯೇಯಕ್ಕೆ ಕೈಗೊಂಡುದು. ಇದರಿಂದ ಸಾಹಿತಿಗಳಾಗಿ ಅವರಿಗೆ ಪೂಜೆ, ನೆಗಳ್ತೆ, ಲಾಭಗಳು ದೊರೆತವು, ನಿಜ. ಅವನ್ನು ಅವರು ಬೇಡ ಎನ್ನಲಿಲ್ಲ. ಆದರೆ, ಜೊತೆಗೇ, ಕನ್ನಡ ಭಾಷೆಗೆ

ಒಂದು ಒಪ್ಪವನ್ನು ತಂದುಕೊಟ್ಟರು. ಕನ್ನಡ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿದ ಮಹನೀಯರ ಪಂಕ್ತಿಗೆ ಸೇರಿದರು. ತಮ್ಮ ಬರಹಗಳ ಮೂಲಕವೇ ವ್ಯಕ್ತಿಯ ಸಂಸ್ಕೃತಿ, ಭಾಷೆಗಳ ಅನುಸಂಧಾನವನ್ನು ಅವರು ನಡೆಸಿದರು; ಆದರ್ಶಗಳನ್ನೂ ಮೌಲ್ಯಗಳನ್ನೂ ಬಿತ್ತಿ ಬೆಳೆಸಿದರು." **–ಟಿ.ವಿ. ವೆಂಕಟಾಚಲಶಾಸ್ತ್ರೀ**

"ಸಹೃದಯತೆ, ಸಜ್ಜನಿಕೆಗಳು ಬೆರೆಯುವುದು ತೀರಾ ಸಾಮಾನ್ಯ. ಆದರೆ ಇವುಗಳ ಜೊತೆಗೇ ನಿಷ್ಠುರ ಪ್ರಾಮಾಣಿಕತೆ, ಸತ್ಯಪ್ರೀತಿ, ನಿರ್ಭೀತ ಸಂಕಲ್ಪಶಕ್ತಿ – ಇವು ಬೆರೆಯುವುದು ಅಪರೂಪವಾಗಿ. ನಾನು ಹಾಮಾನಾ ಅವರಲ್ಲಿ ಮೇಲಿನ ಎಲ್ಲ ಗುಣಗಳ ಗೌರವಾರ್ಹ ವ್ಯಕ್ತಿತ್ವವನ್ನೇ ಗುರುತಿಸಿದ್ದೇನೆ... ಅವರು ನಮ್ಮ ಸಾಹಿತ್ಯಿಕ ಸಾಮಾಜಿಕ ವರ್ತುಲಗಳಲ್ಲಿ ಎತ್ತರ ಎತ್ತರಕ್ಕೆ ಏರುತ್ತಲೇ ಹೋಗಿದ್ದಾರೆ. ಅವರು ವಿಮರ್ಶಕರಾಗಿ, ಸಂಶೋಧಕರಾಗಿ, ಪ್ರತಿಭಾವಂತ ಲೇಖಕರಾಗಿ, ಅತ್ಯುತ್ತಮ ವಾಗ್ಮಿಯೆನಿಸಿ ಪ್ರಸಿದ್ಧರಾಗಿರುವಷ್ಟೇ ಅಂಕಣಕಾರರಾಗಿಯೂ ನಾಡಿನ ಮೂಲೆ ಮೂಲೆಗಳಲ್ಲಿ ಪರಿಚಿತರಾಗಿದ್ದಾರೆ. ಇದು ವಿಶೇಷವಲ್ಲ. ಇದಕ್ಕಿಂತಲೂ ಹೆಚ್ಚು ನಾನು ಅವರಲ್ಲಿ ಗುರುತಿಸುವುದು ಅವರ ವೈಚಾರಿಕ ಪ್ರಾಮಾಣಿಕತೆ." **–ವ್ಯಾಸರಾಯ ಬಲ್ಲಾಳ**

"ನಾಯಕರನ್ನು ನಾನು ವಿದ್ಯಾರ್ಥಿಯಾಗಿ, ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ, ಕುಲಪತಿಗಳಾಗಿ ಕಂಡಿದ್ದೇನೆ. ಅವರ ನಡೆನುಡಿಗಳು ಯಾವಾಗಲೂ ಬದಲಾದದ್ದನ್ನೇ ನಾನು ಕಾಣೆ. ಅದೇ ಮಂದಸ್ಮಿತ ಮುಖ. ಅದೇ ಸರಳತೆ. ಅವರು ಯಾವುದೇ ಕೆಲಸವನ್ನು ಕೈಗೊಳ್ಳಲಿ ಅದನ್ನು ಅಚ್ಚುಕಟ್ಟಾಗಿ ಮಾಡುತ್ತಾರೆ. ಅವರಲ್ಲಿರುವ ಸಮಯಪ್ರಜ್ಞೆ ಮೆಚ್ಚುವಂಥದು, ಅನುಕರಣೀಯವಾದದ್ದು."

**–ಎಚ್.ಎಂ. ಶಂಕರನಾರಾಯಣರಾವ್**

"ನಾಯಕರು ಯಾವ ಅಧಿಕಾರದೆತ್ತರಕ್ಕೇರಿದರೂ ಎಂಥ ಶ್ರೇಷ್ಠ ಪ್ರಶಸ್ತಿಗಳಿಂದ ಸನ್ಮಾನಿತರಾದರೂ ಎಂದಿನ ಪ್ರಸನ್ನ ಮುಖದ ಮೆಲುಮಾತುಗಳಿಂದಾಗಿ ತುಂಬು ವ್ಯಕ್ತಿತ್ವದ ಗಾಂಭೀರ್ಯವನ್ನುಳಿಸಿಕೊಂಡಿದ್ದಾರೆ.... ಅವರಲ್ಲಿ ನಾನು ಕಂಡುಕೊಂಡ ಇನ್ನೊಂದು ತುಂಬ ಅಪರೂಪದ ಗುಣ ಅಂದರೆ ಬರೀ ಪರಿಚಯದ ಔಪಚಾರಿಕ ಮಟ್ಟವನ್ನೂ ದಾಟಿ ಸಂತಾಪ– ಸಂಕಟಗಳಲ್ಲಿ ಅಂತಃಕರಣಪೂರ್ವಕ ಭಾಗಿಗಳಾಗುವುದು. ಹೀಗೆ ಅನೇಕ ಕಾರಣಗಳಿಂದಾಗಿ ಡಾ. ಹಾ.ಮಾ. ನಾಯಕ ಅವರು ನಮ್ಮ ನಡುವಿನ

ಒಣಸಾಹಿತಿಯಲ್ಲದ ಪರಿಪೂರ್ಣ ವ್ಯಕ್ತಿತ್ವದ ಮಾನವತಾವಾದಿಯಾಗಿದ್ದಾರೆ." – **ಶಶಿಕಲಾ ವೀರಯ್ಯಸ್ವಾಮಿ**

"ಹಾಮಾನಾ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ನಾನು ಆ ಸಮಿತಿಯ ಸದಸ್ಯಳಾಗಿದ್ದೆ. ಸಭೆಗೆ ಬರುವ ಮೊದಲು ಅಲ್ಲಿರುತ್ತಿದ್ದರು. ಎಲ್ಲ ಸದಸ್ಯರೊಂದಿಗೆ ಆತ್ಮೀಯತೆಯಿಂದ ಗೌರವದಿಂದ ನಡೆದುಕೊಳ್ಳುವ ಅವರ ನಡೆವಳಿಕೆ ಅಪೂರ್ವವಾಗಿತ್ತು. ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕನ್ನಡ ಸಾಹಿತ್ಯ ವಿವಿಧ ಮುಖವಾಗಿ ಬೆಳೆಯುವಂತೆ ಮಾಡಿದರು. ಗಡಿನಾಡ ಕನ್ನಡಿಗರ ಪ್ರಗತಿಗೂ ಸಹಕಾರವಿತ್ತರು. ಪ್ರಶಸ್ತಿಯ ಗೌರವಧನ ಹೆಚ್ಚುವಂತೆ ಮಾಡಿದರು. ನಾಯಕರೊಂದಿಗೆ ಸಮಿತಿಯಲ್ಲಿ ಕಾರ್ಯ ಮಾಡುವುದು ಸಂತಸದ ಸಂಗತಿಯಾಗಿತ್ತು." –**ಶಾಂತಾದೇವಿ ಮಾಳವಾಡ**

"ನಾಯಕ ಅತಿಯಾಸೆ ಮನುಷ್ಯನಲ್ಲ. ಅವನಿಗೂ ಆಸೆಗಳಿವೆ. ಆದರೆ ಅದನ್ನು ಧರಿಸಲು ಕುಮಾರ್ಗವನ್ನು ಹಿಡಿಯುವ ಮನುಷ್ಯನಲ್ಲ. ಈ ಕಾಲದಲ್ಲೂ ಇಂಥವರು ಸಿಗುವುದು ಅಪರೂಪ. ಅವನು ವಿದ್ಯಾರ್ಥಿಯಾಗಿದ್ದಾಗಲೂ ಅಷ್ಟೆ. ಕ್ಲಾಸಿನಲ್ಲಿ ಇದ್ದಾನೆ ಅಂತ ಗೊತ್ತಾಗುತ್ತಿರಲಿಲ್ಲ; ಯಾವತ್ತೂ ಯಾವ ಪ್ರಶ್ನೆಯನ್ನೂ ಹಾಕಿದವನಲ್ಲ. ಗಲಾಟೆ ಮಾಡಿದವನಲ್ಲ. ಸದ್ದಿಲ್ಲದೆ ಯಶಸ್ಸನ್ನು ಪಡೆದವನು. ಒಮ್ಮೆ ಯಾರೋ ನನ್ನ ಬಗ್ಗೆ ಅವನನ್ನು ಕೇಳಿದರು. ಆಗ ಅವನು ನನ್ನೆದುರೇ ಹೇಳಿದ ಮಾತಿನ್ನೂ ಜ್ಞಾಪಕದಲ್ಲಿದೆ: 'ನಮ್ಮ ಮೇಷ್ಟ್ರು ಸೂರ್ಯ ಇದ್ದ ಹಾಗೆ. ಅವರನ್ನು ಕುರಿತು ಹೇಳಲು ಏನಿದೆ?' ಇವತ್ತು ನಾನು ಅದೇ ಮಾತನ್ನು ಹೇಳಬೇಕಾಗಿದೆ: 'ನನ್ನ ಶಿಷ್ಯ ಸೂರ್ಯನಿದ್ದ ಹಾಗೆ. ಅವನ ಬಗ್ಗೆ ಹೇಳಲು ಏನುಂಟು, ಏನಿಲ್ಲ'." –**ತ.ಸು. ಶಾಮರಾಯ**

'ಡಾ. ನಾಯಕರ ಕನ್ನಡಾಭಿಮಾನವನ್ನು ಕುರಿತು ನನಗೆ ಗೌರವವಿತ್ತು. ಅವರ ನಿಷ್ಠುರ ಸತ್ಯಪ್ರಿಯತೆ ಎದ್ದುಕಾಣುವ ಹಾಗಿತ್ತು. ಗೋಕಾಕರು ದಿಲ್ಲಿಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಆಗ ಡಾ. ನಾಯಕರೂ ಆ ಅಕಾದೆಮಿಯ ಸದಸ್ಯರಾಗಿದ್ದರು. ಆ ಹತ್ತೂ ವರ್ಷ ದಿಲ್ಲಿಗೆ ಮೈಸೂರಿನಿಂದ ಹೋಗುವಾಗ ಇಲ್ಲವೇ ದಿಲ್ಲಿಯಿಂದ ಬರುವಾಗ ಬೆಂಗಳೂರಲ್ಲಿ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ವಾಡಿಕೆಯಾಗಿ ಇಬ್ಬರೂ ಕೂಡಿಯೇ ಏರ್‌ಪೋರ್ಟಿಗೆ ಹೋಗುತ್ತಿದ್ದರು. ಆಗೀಗ ಗೋಕಾಕರು ಅವರನ್ನು ಊಟಕ್ಕೆ ಕರೆಯುತ್ತಿದ್ದರು. ಹೀಗೆ ನಮ್ಮ ಮನೆಯಲ್ಲಿ ಡಾ. ನಾಯಕರಿಗೆ ಅಂತಃಕರಣದ ಸ್ವಾಗತವಿರುತ್ತಿತ್ತು." –**ಶಾರದಾ ವಿನಾಯಕ**

**"**ಕನ್ನಡ ನುಡಿ ಮತ್ತು ಸಾಹಿತ್ಯವನ್ನು ಕುರಿತು ನಾಯಕರು ತೋರಿಸುತ್ತಿದ್ದ ಉತ್ಸಾಹ ಅಪಾರವಾಗಿತ್ತು. ಬೇಸರಕ್ಕೆ ಒಂದಿಷ್ಟೂ ಎಡೆಗೊಡದೆ ಉತ್ಸಾಹಪೂರ್ಣ ಸಹಭಾಗಿತ್ವ ಅವರದ್ದು. ತಾವು ವಹಿಸಿಕೊಂಡ ಕೆಲಸ ಯಾವುದೇ ಇರಲಿ, ಅದನ್ನು ಅರೆಮನಸ್ಸಿನಿಂದ ಅವರು ಮಾಡಿದವರಲ್ಲ.**"** **–ಶಿವರಾಮ ಕಾರಂತ**

**"**ಕರ್ನಾಟಕದ ಜನಪ್ರಿಯ ಲೇಖಕ, ಅಖಿಲ ಭಾರತ ಮಟ್ಟದ ವಿದ್ವಾಂಸ, ಜಾಗತಿಕ ಸಾಹಿತ್ಯ ಲೋಕದಲ್ಲಿ ಖ್ಯಾತಿ ಮನ್ನಣೆ ಪಡೆದ ಸಹೃದಯಿ ಡಾ. ಹಾ.ಮಾ. ನಾಯಕರನ್ನು ಕುರಿತು ಬರೆಯುವುದು ನನ್ನಂಥವರಿಗೆ ತುಂಬ ಪೇಚಿನ ಕೆಲಸ.... ಹಾಮಾನಾ ಅಂಥವರು ಒಂದು ಕಾಲದಲ್ಲಿ (ಕುಲಪತಿ ಆಗಿ ಗುಲ್ಬರ್ಗದಲ್ಲಿ) ಈ ನೆಲದಲ್ಲಿ ಬಂದು ಹೊಸ ಚೈತನ್ಯ ಹೊಗರು ಮೂಡಲು ಕಾರಣರಾದರು ಎಂಬುದನ್ನು ಅದಕ್ಕೂ ಮಿಗಿಲಾಗಿ ಈ ಪ್ರದೇಶದ ಜನ ಅವರ ಆತ್ಮೀಯತೆಯ ಪ್ರಾಂಜಲ ಪ್ರೀತಿ ವಿಶ್ವಾಸಗಳ ತಂಪನ್ನು ಎಂದಿಗೂ ಮರೆಯಲಾರರು ಎಂದು ಭಾವಿಸುತ್ತೇನೆ.**"** **–ಶೈಲಜಾ ಉಡಚಣ**

**"**ಕನ್ನಡದ ನಾಯಕರು ಮುಂಬೈಗೆ ಬಂದರೆ ಕನ್ನಡಮಿತ್ರರ ಸಹರ್ಷ ಸ್ವಾಗತ ಕಾದಿರುತ್ತದೆ. ಒಂದು ನಿಮಿಷ ನೆಮ್ಮದಿಯಿಂದ ನಿಂತು ಮಾತನಾಡುವುದಕ್ಕೂ ಪುರುಷೊತ್ತಿರದ ಈ ಮುಂಬಾಪುರಿಗೆ ನಾಯಕರಂಥ ಪ್ರಸನ್ನಚಿತ್ತರು ಆಗಮಿಸಿದರೆ ಇಲ್ಲಿಯ ಕನ್ನಡ ರಸಿಕರ ಮೊಗದ ಮೇಲೆ ಮುಗುಳುನಗೆ ಅರಳುತ್ತದೆ. ನಾಯಕರೊಡನೆ ನಾಲ್ಕು ಕ್ಷಣ ಹಾಯಾಗಿರಲು ಬಿಡುವಂತೆ ಕಾಲವೂ ಕೊಂಚ ನಿಧಾನವಾಗಿ ಉರುಳುತ್ತದೆ. ಎಂಥ ಅವಸರವಿದ್ದರೂ ಅಪಸ್ವರ ತೆಗೆಯದ ನಾಯಕರ ಸ್ವಭಾವ ಮುಂಬಯಿಗರ ಸಮಯದ ಅಭಾವಕ್ಕೂ ಹೊಂದಿಕೊಂಡು ಹೋಗುವುದರಿಂದಲೇ ಅವರ ಮುಂಬೈ ಭೇಟಿಗಳಲ್ಲಿ ನಮಗೆ ದೊರೆವ ಸ್ನೇಹಾನುಭವದ ಸುಖ ಬೇರೆ ಕಡೆಗೆ ದೊರೆಯುವುದಿಲ್ಲ. ಅಂತೆಯೇ ನಾಯಕರ ಯಾವೊಂದು ಭೇಟಿಯನ್ನು ಇಲ್ಲಿಯ ಕನ್ನಡಿಗರು ಮರೆಯುವುದಿಲ್ಲ.**"** **–ಬಿ.ಎ. ಸನದಿ**

**"**ಹಾಮಾನಾ ಅವರಂಥ ದೊಡ್ಡ ಲೇಖಕರು ಇರಬಹುದು. ಆದರೆ ಅವರಷ್ಟು ನಿಗರ್ವಿಗಳು, ಸ್ನೇಹಪರರ, ಎಲ್ಲರೊಡನೆ ಬೆರೆಯುವವರು ತುಂಬಾ ವಿರಳ. ಅವರದು ಸಾಹಿತಿಯಾಗಿ ಸಾರ್ಥಕ ಬದುಕು ಮಾತ್ರವಲ್ಲ, ವ್ಯಕ್ತಿಯಾಗಿ ದೊಡ್ಡ ಆದರ್ಶವನ್ನು ನಂಬಿ ನಡೆದವರು ಬಹಳ ಜನರಿಲ್ಲ ಎಂದೇ ನನ್ನ ಭಾವನೆ. ಯಾವಾಗಲೂ ಒಳ್ಳೆಯದನ್ನು ಆಶಿಸುವ ಹಾಮಾನಾ ಅವರಂಥವರು ಲೋಕ ಜೀವನದಲ್ಲಿ ಅಪರೂಪವೆಂದೇ ಹೇಳಬೇಕು.**"** **–ಸರಸ್ವತಿ ಜಿ. ಹೆಗಡೆ**

"ಸುಸಂಸ್ಕೃತ ನಡವಳಿಕೆ, ಬುದ್ಧಿಜೀವಿ, ಮೇಧಾವಿ, ಚಿಂತನಶೀಲ ಮನಸ್ಸು, ಗಾಂಭೀರ್ಯ ಮುಖಮುದ್ರೆ, ಆಕರ್ಷಕ ಮುಖಚಹರೆ ಮುಂತಾದ ಎಲ್ಲ ವಿಶೇಷಣಗಳನ್ನು, ಗುಣಗಳನ್ನು ಭಟ್ಟಿ ಇಳಿಸಿ ಎರಕ ಹೊಯ್ದಾಗ ಹಾ.ಮಾ. ನಾಯಕರ ಸ್ಪಷ್ಟ ಚಿತ್ರ ಮೂಡಬಹುದು." **–ಸರಿತಾ ಕುಸುಮಾಕರ ದೇಸಾಯಿ**

"ನಾಯಕರ ಹಸನ್ಮುಖ, ಆತ್ಮೀಯತೆ, ಅವರ ಮಾತಿನಲ್ಲಿ ಮಾನವನಿಗೆ ನೀಡುವ ಸಂದೇಶ, ಬಹುಬೇಗ ಜನರು ಅವರತ್ತ ಆಕರ್ಷಕರಾಗಿಬಿಡುವಂತಹ ಒಂದು ಶಕ್ತಿ ಅವರಲ್ಲಿದೆ.... ಸಾಹಿತ್ಯಕ, ಸಾಂಸ್ಕೃತಿಕ, ಸಾಮಾಜಿಕ ಹೀಗೆ ಸಕಲ ಕ್ಷೇತ್ರಗಳಲ್ಲೂ ಮೊದಲಿನಿಂದಲೂ, ಅವರ ಚಟುವಟಿಕೆ, ಅವರು ನೀಡಿದ ಸೇವೆ ಚಿರಸ್ಮರಣೀಯವಾದುದು." **–ಸರೋಜರಾವ್ ಕಾಕೋಳು**

"ಡಾ. ನಾಯಕರು ಒಬ್ಬ ಆದರ್ಶ ಅಧ್ಯಾಪಕರು. ಅವರ ತರಗತಿ ಯಾವಾಗಲೂ ಅರವತ್ತು ನಿಮಿಷಗಳದ್ದಾಗಿರುತ್ತಿತ್ತು... ಅವರ ಬೋಧನೆಯ ವೈಶಿಷ್ಟ್ಯ ಕುರಿತು ಎಷ್ಟು ಬೇಕಾದರೂ ಬರೆಯಬಹುದು. ಹೇಳಬೇಕಾದುದನ್ನು ಬಿಟ್ಟು ಬೇರೆಯದನ್ನು ಒಮ್ಮೆಯೂ ಅವರು ಹೇಳಲಿಲ್ಲ. ಅವರದು ನಿರರ್ಗಳವಾದ ಬೋಧನೆ. ಅಸ್ಖಲಿತವಾಗಿ ಅವರು ಮಾತನಾಡುತ್ತಿದ್ದರು. ಅವರ ಉಪನ್ಯಾಸಗಳಲ್ಲಿ ಅನೇಕ ಭಾಷೆಗಳ, ಲೇಖಕರ, ಪುಸ್ತಕಗಳ ಪ್ರಸ್ತಾಪ ಬರುತ್ತಿತ್ತು. ಮೃದುವಾದ ಹಾಸ್ಯ ಇರುತ್ತಿತ್ತು. ವಿದ್ಯಾರ್ಥಿಗಳಲ್ಲಿ ಅವರು ಯಾವಾಗಲೂ ಪ್ರೀತ್ಯಾದರಗಳನ್ನು ತೋರುತ್ತಿದ್ದರು... ಅವರ ಪಾಠ ಕೇಳಿದ್ದು ನನ್ನ ವಿದ್ಯಾರ್ಥಿಜೀವನದ ಒಂದು ಭಾಗ್ಯವೆಂದೇ ನನ್ನ ಭಾವನೆ." **–ಡಿ.ಎಸ್. ಸಾವಿತ್ರಮ್ಮ**

" 'ಹುಟ್ಟಿದವ ಅಣ್ಣ, ಬೆಳೆದವ ತಮ್ಮ' ಎಂಬ ಗಾದೆ ನನ್ನ ಹಾಗೂ ಡಾ. ಹಾ.ಮಾ. ನಾಯಕ ಅವರ ಸಂಬಂಧವನ್ನು ಸೂಚಿಸುತ್ತದೆ. ವಯಸ್ಸಿನಿಂದ ನಾವಿಬ್ಬರೂ ಅಣ್ಣ–ತಮ್ಮರೆನಿಸಿದರೂ ತಿಳಿವಳಿಕೆ–ಪಾಂಡಿತ್ಯಗಳ ಮಾನದಿಂದ ನಾನು ಅವರಿಗೆ ತಮ್ಮನೇ ಸರಿ. ಅವರು ನನ್ನ ಅಣ್ಣನೇ ಸರಿ... ತಲೆಯಲ್ಲಿ ಕಪ್ಪುಗೂದಲು ಒಂದೂ ಉಳಿಯದೆ, ಬೆಳ್ಳ ಬೆಳ್ಳಗಾದಂತೆ, ಅವರ ವಿಚಾರಗಳು ಅದಕ್ಕಿಂತ ಶುಭ್ರವಾಗಿ ಕಾಣಿಸಿಕೊಂಡು ನನ್ನ ತಲೆಯನ್ನೂ ತಟ್ಟಿದವೆಂದು, ಅನುಮಾನವಿಲ್ಲದೆ ಇಲ್ಲಿ ಹೇಳಬಹುದಾಗಿದೆ." **–ಸಿಂಪಿ ಲಿಂಗಣ್ಣ**

" 'ಯಃ ಕ್ರಿಯಾವಾನ್ಸ ಪಂಡಿತಃ' ಎಂಬ ಉಕ್ತಿಗೆ ಹೇಳಿಮಾಡಿಸಿದ ವ್ಯಕ್ತಿ ಹಾಮಾನಾ. ಅವರ ವಿದ್ವತ್ವ ಹೆಚ್ಚೋ ಕರ್ತೃತ್ವ ಹೆಚ್ಚೋ ತಿಳಿಯದೆನಗೆ...

ವಿಷಯ ಪರಿಜ್ಞಾನ, ತಲಸ್ಪರ್ಶಿ ವಿವೇಚನೆ, ಖಚಿತ ನಿಲುವು, ಎಲ್ಲೆ ಇಲ್ಲದ ಒಲವುಗಳನ್ನು ನೋಡಿದಾಗ ಅವರ ವಿದ್ವತ್ತೇ ಹೆಚ್ಚಿನದೆಂದು ಭಾಸವಾಗುತ್ತದೆ. ನಿರ್ದೇಶಕತ್ವ, ಅಕಾಡೆಮಿಯ ಅಧ್ಯಕ್ಷತೆ, ವಿವಿಧ ಸಮಿತಿಗಳ ಸಲಹೆಗಾರಿಕೆ, ಸದಸ್ಯತ್ವ, ವಾರವಾರವೂ ಅಂಕಣ ಲೇಖನ –ಇತ್ಯಾದಿಗಳನ್ನು ಏಕಕಾಲಕ್ಕೆ ನಿರ್ವಹಿಸುತ್ತಿದ್ದುದನ್ನು ನೋಡಿದರೆ ಅವರ ಕರ್ತೃತ್ವವೇ ಹೆಚ್ಚಿನದೆಂದು ಬೋಧೆಯಾಗುತ್ತದೆ. ಈ ಎರಡೂ ಶಕ್ತಿಗಳ ಹೃದಯಂಗಮ ಸಂಗಮ ಅವರು." **–ಸಿದ್ಧಯ್ಯ ಪುರಾಣಿಕ**

"ಯಾವುದೇ ವಿಷಯವನ್ನು ನಿರ್ಭಿಡೆಯಿಂದ ಮಾತನಾಡಿದರೂ ಅವರದು ಮೃದು ವ್ಯಕ್ತಿತ್ವ ಎಂಬುದನ್ನು ಅವರ ಪರಿಚಿತರೆಲ್ಲರೂ ಒಪ್ಪಿಕೊಳ್ಳಬೇಕಾದ್ದೇ. ತತ್ವದ ವಿಷಯದಲ್ಲಿ ಅವರು ಕಠಿಣರೇ ಹೊರತು ವೈಯಕ್ತಿಕ ಸಂಬಂಧಗಳನ್ನು ಎಂದೂ ಕೆಡಿಸಿಕೊಂಡಿಲ್ಲವೆನ್ನಿಸುತ್ತದೆ. ಸದಾ ಎಲ್ಲರ ಬಗ್ಗೆ ಒಳ್ಳೇ ಮಾತುಗಳನ್ನೇ ಆಡುವ ಅವರಿಗೆ ಮತ್ಸರ ಎಂಬುದೇ ಇಲ್ಲವೆ ಎನ್ನಿಸುತ್ತದೆ." **–ಸುಕನ್ಯಾ ಮಾರುತಿ**

"ಡಾ. ಹಾ.ಮಾ. ನಾಯಕರ ಬಗ್ಗೆ ಹೇಳಬೇಕೆಂದರೆ 'ತುಂಬ ಹೇಳಬಲ್ಲೆ ಎನ್ನಿಸುತ್ತದೆ; ಮರುಕ್ಷಣವೇ ಅವರ ಬಗ್ಗೆ ನಾನೆಷ್ಟು ಬಲ್ಲೇ?' ಎನ್ನುವ ಪ್ರಶ್ನೆ ಮೂಡುತ್ತದೆ. ಇದಕ್ಕೆ ಕಾರಣ, ಅವರ ಅಪರೂಪದ ವ್ಯಕ್ತಿತ್ವ, ಮಿತಭಾಷಿ, ಹಿತವಾದ ನುಡಿ; ಪದಗಳನ್ನು ತೂಗಿ ಮಾತನಾಡುವ ಅವರ ಸ್ವಭಾವ... ಶಿಸ್ತು ಶಿಷ್ಟಾಚಾರಗಳ ಸಾಕಾರಮೂರ್ತಿ ಅವರು. ಕನ್ನಡಕ್ಕಾಗಿ, ಕನ್ನಡ ಭಾಷೆಗಾಗಿ, ಕನ್ನಡತನದ ಏಳಿಗೆ ಬೆಳವಣಿಗೆಗಾಗಿ ಕಂಕಣ ಕಟ್ಟಿರುವ ಧೀಮಂತ ನಾಯಕ ಡಾ. ಹಾಮಾನಾ. ಅವರ ಉಸಿರು ಕನ್ನಡ, ಬರೆಹ ಕನ್ನಡ, ಸೇವೆ ಕನ್ನಡ." – **ಟಿ. ಸುನಂದಮ್ಮ**

"ಮಾನಪ್ಪನಾ ಮೌನ ಗಂಭೀರ ಘನತರವು
ನಡೆಯೊಂದು ಆದರ್ಶ ನುಡಿಯಲ್ಲಿ ನವರಸವು
ಪರಿಪುಷ್ಟಿ ಸಂಸ್ಕಾರ ಬದುಕೆಲ್ಲ ನಿರ್ಮಲವು
ನಾಯಕರ ನಿಲುವೊಂದು ರಾಜಠೀವಿಗೆ ಮಿಗಿಲು" –
**ಸುಲೋಚನಾದೇವಿ ಆರಾಧ್ಯ**

"ಕನ್ನಡಕ್ಕಾಗಿ ಅತ್ಯಂತ ಆಸಕ್ತಿ ವಹಿಸಿ ಶ್ರಮಿಸುವ ಡಾ. ಹಾ ಮಾ ನಾಯಕರಿಗೆ ಕನ್ನಡದ ವಿಷಯದಲ್ಲಿ ಅಭಿಮಾನ ಇದ್ದರೂ ಅದು ದುರಭಿಮಾನ ಆಗದೇ ಇದ್ದುದು ಒಂದು ವಿಶೇಷ ಎನಿಸುತ್ತದೆ. ವಿದ್ವತ್ತಿನ ಗರ್ವವಿಲ್ಲದೆ ಈ ವ್ಯಕ್ತಿ

ಅನೇಕರಿಗೆ ಬೇಕಾದವರಾಗಿದ್ದಾರೆ. ತಮ್ಮ ಮೇಲಿನ ಟೀಕೆಗಳನ್ನೂ ಹಾಸ್ಯವಾಗಿ ಹೇಳಿ ನಕ್ಕು ನಗಿಸುವ ಸ್ವಭಾವವನ್ನು ಹೊಂದಿದ್ದಾರೆ. ನಾಯಕರು ಕನ್ನಡದ ಒಂದು ಶಕ್ತಿಯಾಗಿದ್ದಾರೆ. ಅವರ ವಿಷಯದಲ್ಲಿ ನನಗೆ ತುಂಬ ಅಭಿಮಾನ ಹಾಗೂ ಗೌರವ." **–ಸುಶೀಲಾ ಕೊಪ್ಪರ್**

"ದಿನದ ಇಪ್ಪತ್ತುನಾಲ್ಕು ಗಂಟೆಗಳಲ್ಲಿ ಅವರ ಸರಾಸರಿ ಕಾರ್ಯಕ್ರಮ ನನಗೆ ಅಷ್ಟು ಪರಿಚಯವಾಗಿಲ್ಲ; ಕುತೂಹಲವಿದ್ದೇ ಇದೆ. ಅವರು ವಿಶ್ರಾಂತಿಯನ್ನೇನಾದರೂ ಅನುಭವಿಸುತ್ತಾರೆಯೇ, ಎಷ್ಟು ನಿಮಿಷಗಳು ನಿದ್ದೆ ಮಾಡುತ್ತಾರೆ, ಎಷ್ಟು ಗಂಟೆಗಳ ಎಚ್ಚರವಾಗಿರುತ್ತಾರೆ, ಎಷ್ಟು ಹೊತ್ತು ಮನೆಯಲ್ಲಿರುತ್ತಾರೆ, ಎಷ್ಟು ದಿನ ಊರ ಹೊರಗಿರುತ್ತಾರೆ, ಯಾವಾಗ ಓದುತ್ತಾರೆ, ಯಾವಾಗ ಬರೆಯುತ್ತಾರೆ ಮೊದಲಾದ ಅನೇಕಾನೇಕ ಪ್ರಶ್ನೆಗಳಿವೆ." **–ಬಿ.ಜಿ.ಎಲ್. ಸ್ವಾಮಿ**

"ನನ್ನ ಪರಮಸ್ನೇಹಿತರಾದ ಡಾ. ಹಾ ಮಾ ನಾಯಕ ಅವರು ಖಚಿತತೆಗೆ, ಅಚ್ಚುಕಟ್ಟುತನಕ್ಕೆ ಮತ್ತೊಂದು ಹೆಸರಿದ್ದಂತೆ. ಕನ್ನಡಕ್ಕಾಗಿ ದುಡಿಯಲು, ಹೋರಾಡಲು ಸದಾ ಸಿದ್ಧರಾಗಿರುವವರು. ಬರವಣಿಗೆಯಲ್ಲಿ ಒಂದು ಹೊಸ ಹಾದಿಯನ್ನೇ ಹಿಡಿದು ಅದಕ್ಕೊಂದು ಮಾರ್ಗವನ್ನು ಕಲ್ಪಿಸಿಕೊಟ್ಟಿರುವವರು. ವ್ಯಕ್ತಿಚಿತ್ರ ನಿರೂಪಣೆಯಲ್ಲಿ ಅವರದು ಅತ್ಯಂತ ನವಿರಾದ ಶೈಲಿ. ಇಂಥ ಶೈಲಿಯ ಅನೇಕ ಕೃತಿಗಳನ್ನು ಪ್ರಕಟಿಸಿ ಆಧುನಿಕ ಕನ್ನಡ ಸಾಹಿತ್ಯದ ಕಣಜವನ್ನು ತುಂಬಿರುವರು... ಕನ್ನಡ ನಾಡು, ನುಡಿ, ಸಾಹಿತ್ಯಗಳ ಪ್ರಶ್ನೆ ಬಂದಿತೆಂದರೆ ನಾಯಕರ ವ್ಯಕ್ತಿತ್ವ ಗರಿಗೆದರಿ ಹಾರುತ್ತದೆ. ನಾಯಕ ಅವರು ಅಖಿಲ ಭಾರತೀಯ ವ್ಯಾಪ್ತಿಯನ್ನು ಪಡೆದ ಕನ್ನಡ ಸಾಹಿತಿಗಳು. ಅವರ ವ್ಯಕ್ತಿತ್ವದಲ್ಲಿ ಒಂದು ಲೋಹಚುಂಬಕ ಶಕ್ತಿ ಇದೆ. ಇಂಥವರು ನಾಡುನುಡಿಗೆ ಭೂಷಣ. ಕನ್ನಡ ತಾಯಿ ಹೆಮ್ಮೆಪಟ್ಟುಕೊಳ್ಳುವ ಪುತ್ರರತ್ನರಲ್ಲಿ ಒಬ್ಬರು." **–ಆರ್.ಸಿ. ಹಿರೇಮಠ**

"ಕನ್ನಡವಾಗಿ ಬೆಳೆದ ಮಾನಪ್ಪ ಕನ್ನಡ ನಾಡಿನಲ್ಲಿ ಮಾತ್ರವಲ್ಲ, ಭಾರತ, ಯುರೋಪು, ಉತ್ತರ ಅಮೆರಿಕೆಯನ್ನು ಸಂಚರಿಸಿ ಜಾಗತಿಕ ಮನೋಧರ್ಮವನ್ನು ಅಂತರ್ಗತವಾಗಿ ಮಾಡಿಕೊಂಡವರು. ಅವರ ಮಾತಿನಲ್ಲಿ, ಅವರ ಬರವಣಿಗೆಯಲ್ಲಿ, ಸಹೋದ್ಯೋಗಿಗಳೊಂದಿಗೆ ಆವರಿಸಿಕೊಂಡು ಬಂದ ಸಂಪರ್ಕದಲ್ಲಿ ನಾವು ಆ ವೈಶಾಲ ಮನೋಭಾವನೆಯನ್ನು ಗುರುತಿಸುತ್ತೇವೆ." **– ಹಿರೆಮಲ್ಲೂರು ಈಶ್ವರನ್**

**"**ಆಧುನಿಕ ಕನ್ನಡ ಸಾಹಿತ್ಯದ ಸಮೃದ್ಧಿಗೆ, ವೈವಿಧ್ಯಕ್ಕೆ, ಮೋಹಕ ಗದ್ಯಶೈಲಿಯ ವಿಲಾಸಕ್ಕೆ ಹಾಮಾನಾ ಸಾಹಿತ್ಯ ದೀಪಸ್ತಂಭವಾಗಿದೆ. ಹಾಮಾನಾ ಅವರದು ಬೆಳಕಿನ ಬದುಕು. ಅದರ ಪ್ರಕಾಶದಲ್ಲಿ ಕನ್ನಡದ ಸಾಂಸ್ಕೃತಿಕ ಜೀವನದ ಸಾಧನೆ ಸಿದ್ಧಿಗಳಿವೆ.**"** **–ಜಿ.ಎಂ. ಹೆಗಡೆ**

ಡಾ. ಹಾ ಮಾ ನಾಯಕರನ್ನು ಕುರಿತ ಮೇಲಿನ ಹೇಳಿಕೆಗಳೆಲ್ಲ ಡಾ. ಪದ್ಮಾಶೇಖರ್ ಹಾಗೂ ಡಾ. ಸೋಮಶೇಖರಗೌಡ ಅವರು ಸಂಪಾದಿಸಿರುವ 'ನಮ್ಮ ನಾಯಕರು' ಕೃತಿಯಿಂದ ಆಯ್ದುಕೊಂಡವು. ನಾಯಕರನ್ನು ಕುರಿತ ಇಂಥವೇ ಹೇಳಿಕೆಗಳು ಡಾ. ಸ.ಚಿ. ರಮೇಶ್ ಅವರು ಸಂಪಾದಿಸಿರುವ 'ಶಬ್ದಾಂಜಲಿ'ಯಲ್ಲೂ ಸಿಗುತ್ತವೆ. ನಾಡಿನ ಬಹುತೇಕ ಗಣ್ಯಸಾಹಿತಿಗಳು ನಾಯಕರನ್ನು ಕುರಿತು ವಸ್ತುನಿಷ್ಠವಾಗಿ ಮಾತನಾಡಿದ್ದಾರೆ. ಇವೆಲ್ಲ ಒಂದು ಬಗೆಯ ಪ್ರಶಂಸೆಯ ಮಾತುಗಳಂತೆ ಕಂಡುಬಂದರೂ ಅವುಗಳಲ್ಲಿ ನಾಯಕರ ವ್ಯಕ್ತಿತ್ವ, ವರ್ಚಸ್ಸು, ಸಾಧನೆ, ಸಿದ್ಧಿ, ಕನ್ನಡದ ಮೇಲಿನ ಅವರ ಅಸದೃಶ ಪ್ರೇಮ ಅನಾವರಣಗೊಂಡಿವೆ. ಈ ಕಾರಣಕ್ಕಾಗಿ ಕೆಲವನ್ನಿಲ್ಲಿ ದಾಖಲಿಸಬೇಕಾಯಿತು. ಒಂದೊಂದು ಹೇಳಿಕೆಯಲ್ಲಿಯೂ ನಾಯಕರ ವ್ಯಕ್ತಿತ್ವದ ಮುಖಗಳು ಅರಳುತ್ತ ಹೋಗುತ್ತವೆ. ನಾಯಕರ ಬಗೆಗೆ ಬರೆಯಲು ಇನ್ನೇನಾದರೂ ಉಳಿದಿದೆಯೇ ಎಂಬ ಸಂಶಯ ಹುಟ್ಟಿಸುತ್ತವೆ.

## ೩. ಹಾಮಾನಾ ಹುಟ್ಟು, ಹುಟ್ಟೂರು, ಪರಿಸರ

ನಾಯಕರು ಹುಟ್ಟಿದ ದಿನಾಂಕ ೧೯೩೧ರ ಸೆಪ್ಟೆಂಬರ್ ೧೨. ಆದರೆ, ಸರಕಾರಿ ದಾಖಲೆಗಳಲ್ಲಿ ಇರುವಂಥದು ೧೯೩೧ರ ಫೆಬ್ರವರಿ ೫. ಹೀಗಾಗಲು ಸ್ವತಃ ನಾಯಕರೇ ಕಾರಣ. ತಮ್ಮ ಜನ್ಮದಿನಾಂಕವನ್ನು ತಾವೇ ಹೇಳಿ ದಾಖಲೆಗೆ ಸೇರುವಂತೆ ಮಾಡಿದವರವರು. ಯಾವಾಗಲೋ ಮಾತನಾಡುವ ಸಂದರ್ಭದಲ್ಲಿ ತಂದೆಯವರು ಮನೆಯಲ್ಲಿ ಹೇಳಿದ್ದರಿಂದ ಅವರು ಹುಟ್ಟಿದ ವರ್ಷ ಖಚಿತವಾಗಿ ಗೊತ್ತಿತ್ತು. ಹುಟ್ಟಿದ ದಿನಾಂಕ ಮತ್ತು ತಿಂಗಳು ಮಾತ್ರ ತಿಳಿದಿರಲಿಲ್ಲ. ಶಾಲೆಗೆ ಸೇರಿಕೊಳ್ಳಲು ಹೋದಾಗ ಹುಡುಗನ ಬುದ್ಧಿವಂತಿಕೆಯನ್ನು ಪರೀಕ್ಷಿಸಲು ಅಲ್ಲಿನ ಮುಖ್ಯೋಪಾಧ್ಯಾಯರು 'ನೀನು ಹುಟ್ಟಿದ್ದು ಯಾವ ವರ್ಷ?' ಎಂದು ಕೇಳುತ್ತಾರೆ. ಉತ್ತರ ಗೊತ್ತಿದ್ದರಿಂದ ನಾಯಕರು ಥಟ್ಟನೆ '೧೯೩೧' ಎಂದು ಹೇಳುತ್ತಾರೆ. 'ಭೇಷ್' ಎಂದು ಪ್ರಶಂಸಿಸಿದ ಮುಖ್ಯೋಪಾಧ್ಯಾಯರು ಮುಂದುವರಿದು 'ಯಾವ ತಿಂಗಳು?' ಎಂದು ಕೇಳುತ್ತಾರೆ. ಇದನ್ನು ನಿರೀಕ್ಷಿಸಿರದಿದ್ದ ನಾಯಕರಿಗೆ ಗಾಬರಿಯಾಗುತ್ತದೆ. ಆದರೆ ಅದನ್ನು ತೋರಿಸಿಕೊಳ್ಳದೆ ಆ ಕ್ಷಣಕ್ಕೆ ಹೊಳೆದ 'ಫೆಬ್ರವರಿ' ತಿಂಗಳ ಹೆಸರನ್ನು ಹೇಳುತ್ತಾರೆ. ಅಷ್ಟಕ್ಕೇ ಬಿಡದ ಮುಖ್ಯೋಪಾಧ್ಯಾಯರು ಹುಟ್ಟಿದ 'ದಿನಾಂಕ'ವನ್ನೂ ಹೇಳುವಂತೆ ಕೇಳುತ್ತಾರೆ. ಇದೂವರೆಗೆ ಉತ್ತರ ಹೇಳಿ ಶಹಭಾಷ್‌ಗಿರಿ ಪಡೆದಿದ್ದ ನಾಯಕರಿಗೆ ಹುಟ್ಟಿದ ದಿನಾಂಕ ಗೊತ್ತಿಲ್ಲ ಎಂದು ಹೇಳಲು ಮನಸ್ಸಾಗಲಿಲ್ಲ. ಹೇಗಿದ್ದರೂ ಒಂದು ಸುಳ್ಳು ಹೇಳಿ ಆಗಿದೆ ಮತ್ತೇಕೆ ಹಿಂಜರಿಯುವುದು ಎಂದು 'ಐದು' ಎಂದು ಹೇಳಿಬಿಡುತ್ತಾರೆ. ಹೀಗಾಗಿ ಅವರೇ ಹೇಳಿಕೊಂಡಿರುವಂತೆ ಅವರು 'ದ್ವಿಜ' (ಎರಡು ಬಾರಿ ಜನಸಿದವ)ರಾಗಿದ್ದಾರೆ. ಈ ತಪ್ಪನ್ನು ಸರಿಪಡಿಸಿಕೊಳ್ಳುವ ಅವಕಾಶ ಮುಂದೆ ಇದ್ದರೂ ನಾಯಕರು ಮಾತ್ರ ಅದಕ್ಕೆ ಮುಂದಾಗಲಿಲ್ಲ. ಹೀಗಾಗಿ ಅವರು ಹುಟ್ಟುವುದಕ್ಕೆ ಎಂಟು ತಿಂಗಳು ಮೊದಲೇ ಶಾಲಾ ದಾಖಲಾತಿಯಲ್ಲಿ ಸೇರಿಹೋದವರಿವರು.

ನಾಯಕರು ಹುಟ್ಟಿದ್ದು ತನ್ನ ತಾಯಿಯ ತವರೂರು ನಾಲೂರಿನಲ್ಲಿ. ಅವರ ತಂದೆಯ ಊರು ಹಾರೋಗದ್ದೆ. ಆಮೇಲೆ ಅವರ ತಂದೆಯೇ ಕಟ್ಟಿದ ಊರು ಹೊಸಮನೆ. ಇದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿಗೆ ಸೇರಿದ್ದು. ತೀರ್ಥಹಳ್ಳಿಗೆ ಹತ್ತು ಕಿಲೋಮೀಟರ್ ದೂರದಲ್ಲಿದೆ. ಇದು ಒಂದೇ ಮನೆಯ ಹಳ್ಳಿ. ಮಲೆನಾಡಿಗೆ ಸೇರಿದ ಒಂದು ಕುಗ್ರಾಮ. ದಕ್ಷಿಣ ಕನ್ನಡದಿಂದ ಕೆಲಸಕ್ಕಾಗಿ ಬರುತ್ತಿದ್ದವರ ಒಂದೆರಡು ಬಿಡಾರಗಳನ್ನು ಬಿಟ್ಟರೆ ಬೇರಾವ ಮನೆಯೂ ಆ

ಊರಲ್ಲಿರಲಿಲ್ಲ. ಸದಾ ಮಳೆಗಾಲ. ವರ್ಷದಲ್ಲಿ ಆರು ತಿಂಗಳು ಮಳೆಗಾಲವೇ. ಮಳೆಗಾಲದಲ್ಲಿ ಊರು ದ್ವೀಪವಾಗಿಬಿಡುತ್ತಿತ್ತು. ಆ ಊರಿಗೆ ಕಾಲುದಾರಿಗಳನ್ನು ಬಿಟ್ಟರೆ ಅನ್ಯಮಾರ್ಗವಿರಲಿಲ್ಲ. ಬಸ್ಸು, ಕಾರು ಇತ್ಯಾದಿಗಳು ಆ ಊರಿಗೆ ಬರುತ್ತಿರಲಿಲ್ಲ. ನಾಯಕರ ತಾಯಿಯ ತಂದೆ ಫೋರ್ಡ್ ಕಾರಿನಲ್ಲಿ ತೊಟ್ಟಿಲ ಮಗುವಾದ ನಾಯಕರನ್ನು ಅವರ ತಂದೆ ಕಟ್ಟಿಸಿದ್ದ ಹೊಸಮನೆಗೆ ಕರೆದುಕೊಂಡು ಬಂದರಂತೆ. ಪ್ರಾಯಶಃ ಅದೇ ಆ ಊರಿಗೆ ಬಂದ ಮೊದಲ ಮೋಟಾರು ವಾಹನ. ಅಲ್ಲಿನ ಜನ ದಿನಕ್ಕೆ ಇಪ್ಪತ್ತರಿಂದ ಇಪ್ಪತ್ತೈದು ಮೈಲಿ ಕಾಲಲ್ಲಿ ನಡೆಯುವುದನ್ನು ಅಭ್ಯಾಸ ಮಾಡಿಕೊಂಡವರು.

ನಾಯಕರು ಮಲೆನಾಡ ಪರಿಸರದವರು. ಅವರ ಮನೆ ಇದ್ದದ್ದು ದಟ್ಟವಾದ ಕಾಡಿನ ನಡುವೆ. ಅಲ್ಲಿ ಜನರು ಕಾಣಸಿಗುವುದೇ ವಿರಳ. ಬದಲಾಗಿ ಹುಲಿ, ಚಿರತೆ, ಕೋಣ, ಕಾಡೆಮ್ಮೆಗಳು ಕಾಣಸಿಗುತ್ತಿದ್ದವು. ಜನರ ಬದುಕಿಗೆ ಅವುಗಳಿಂದ ಯಾವ ಅಪಾಯವೂ ಇರಲಿಲ್ಲ. ಆ ನಿಸರ್ಗ, ಅದರ ಸೌಂದರ್ಯ, ರುದ್ರಮನೋಹರತೆ ಈಗ ಕಾಣಸಿಗುವುದು ದುರ್ಲಭ. ಕನಿಷ್ಠ ಸೌಲಭ್ಯಗಳಾದ ಅಂಗಡಿಮುಂಗಟ್ಟು, ಆಸ್ಪತ್ರೆ, ಸ್ಕೂಲು ಇವಾವೂ ಆ ಕಾಲಕ್ಕೆ ಅಲ್ಲಿನ ಜನರಿಗೆ ಸುಲಭವಾಗಿ ದೊರಕುತ್ತಿರಲಿಲ್ಲ. ಸದಾ ಸುರಿವ ಮಳೆಯ ಜೊತೆಯಲ್ಲಿ ಹೆಣೆದುಕೊಂಡ ಬದುಕು. ಮೈಕೊರೆವ ಚಳಿ. ಕಂಬಳಿ ಹೊದ್ದು ಮಲಗುವುದಾದರೆ ಅದೇ ಸ್ವರ್ಗ. ಜೊತೆಗೆ ಮಳೆಗಾಲದ ಮೀನುಗಳ ಭಕ್ಷ್ಯ ಜೊತೆಗಿದ್ದರೆ ಆ ಸುಖಕ್ಕೆ ಎಣೆಯಿಲ್ಲ. ಹಬ್ಬ–ಹರಿದಿನಗಳು ಬಂದರಂತೂ ಅದರ ಸೊಗಸೇ ಬೇರೆ. ವಿಶೇಷವಾಗಿ ಗೌರಿಹಬ್ಬ, ನವರಾತ್ರಿ, ಭೂಮಿಹುಣ್ಣಿಮೆ, ದೀಪಾವಳಿ –ಈ ಹಬ್ಬಗಳನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. "ದೀಪಾವಳಿಯ ಸಂಭ್ರಮವಂತೂ ಹೇಳತೀರದು. ಆಗ ನಡೆಯುತ್ತಿದ್ದ ಗೋಪೂಜೆ, ಕೃಷಿಯ ಸಲಕರಣೆಗಳನ್ನೆಲ್ಲ ಜೋಡಿಸಿ ನೆರವೇರಿಸುತ್ತಿದ್ದ ಬಲೀಂದ್ರನ ಪೂಜೆ, ರಾತ್ರಿ ಹೊತ್ತಿನಲ್ಲಿ ಮನೆಯಿಂದ ಮನೆಗೆ ಹಾಡಿಕೊಂಡು ಬರುತ್ತಿದ್ದ 'ಅಂಟಿಗೆ ಪಂಟಿಗೆ' ತಂಡಗಳು –ಅವೆಲ್ಲಾ ಎಂಥ ಮೋಜಿನ ಸಂಗತಿಗಳು. ಹಬ್ಬಗಳ ಆಸುಪಾಸಿನಲ್ಲಿ ನಡೆಯುತ್ತಿದ್ದ ಶಿಕಾರಿ, ಕೋಳಿ ಅಂಕ, ಹುಲಿವೇಷ ಕುಣಿತ, ಕೋಲಾಟಗಳು ಕೊಡುತ್ತಿದ್ದ ಮುದ ಅದನ್ನು ಅನುಭವಿಸಿದವರಿಗೆ ಮಾತ್ರವೇ ಗೊತ್ತು. ನಂತರದ ಚಳಿಗಾಲ, ಆ ಕಾಲಕ್ಕೆ ನಡೆಯುತ್ತಿದ್ದ ಅಡಕೆ ಕೊಯ್ಲು. ಅಡಕೆ ಸುಲಿಯುವವರಿಗಾಗಿ ಹಾಕುತ್ತಿದ್ದ ಅಗ್ಗಿಷ್ಟಿಕೆ. ಅದರ ಕಾವಿನಲ್ಲಿ ಬೆಚ್ಚಗೆ ಕುಳಿತು ಅಡಕೆ ಸುಲಿಯುವವರು ಹೇಳುತ್ತಿದ್ದ

ರಾಕ್ಷಸರ ಕಥೆಗಳು, ಜನಪದ ಲಾವಣಿಗಳು, ಒಗಟುಗಳನ್ನು ಕೇಳುವುದು ಇತ್ಯಾದಿ. ಬೇಸಿಗೆ ಕಾಲದ್ದು ಇನ್ನೊಂದು ಬಗೆ. ನಿಸರ್ಗವೇ ಯಥೇಚ್ಛವಾಗಿ ಒದಗಿಸಿಕೊಡುತ್ತಿದ್ದ ಬಗೆಬಗೆಯ ಹಣ್ಣುಗಳು, ಬಿಳಿಮಾರಲು ಹಣ್ಣು, ಗೇರುಹಣ್ಣು, ಪೇರಲ ಹಣ್ಣು, ಮಾವಿನಹಣ್ಣು, ಹಲಸಿನಹಣ್ಣು ಇತ್ಯಾದಿ. ಹಣ್ಣುಗಳ ಹುಡುಕಾಟದಲ್ಲಿ ಕಾಡುಮೇಡುಗಳಲ್ಲಿ ಅಲೆದಾಟ. ಅನಾಯಾಸವಾಗಿ ಸಿಗುತ್ತಿದ್ದ ಜೇನು. ವರ್ಷಕ್ಕೊಮ್ಮೆ ನಡೆಯುತ್ತಿದ್ದ ದೇವರ ಹರಕೆ, ಎರಡು ವರ್ಷಕ್ಕೊಮ್ಮೆ ನಡೆಯುತ್ತಿದ್ದ ಕವಲೇದುರ್ಗದ ಮಾರಿಜಾತ್ರೆ, ದೂರದ ತೀರ್ಥಹಳ್ಳಿಯ ಎಳ್ಳಮವಾಸ್ಯೆ ಜಾತ್ರೆ ಇವೆಲ್ಲ ಸಡಗರದ ಸಾಮೂಹಿಕ ಸನ್ನಿವೇಶಗಳು."(ಎಚ್.ಎಸ್. ಈಶ್ವರ, **'ಹಾಮಾನಾ ನನ್ನ ದೊಡ್ಡಣ್ಣ'**, ೨೦೧೫, ಪು. ೨)

# ೪. ಹಾಮಾನಾ ಕುಟುಂಬ ಪರಿವಾರ

ಹಾಮಾನಾ ಕುಟುಂಬದ ಪೂರ್ವಿಕರು ಕೆಳದಿ ಮತ್ತು ಕವಲೇದುರ್ಗ ಸಂಸ್ಥಾನಗಳ ಆಡಳಿತ ಇಲ್ಲವೇ ಸೇವೆಯಲ್ಲಿ ಕಾರ್ಯನಿರ್ವಹಿಸಿ 'ನಾಯಕ' ಎಂಬ ಅಧಿಕಾರಸೂಚಕ ಬಿರುದನ್ನು ಪಡೆದುಕೊಂಡಿರಬಹುದೆಂಬ ಪ್ರತೀತಿ ಜನರ ಬಾಯಲ್ಲಿದೆ. ಹಾರೋಗದ್ದೆ ನಾಯಕರ ಊರೂ ಹೌದು; ಅವರ ಮನೆತನದ ಹೆಸರೂ ಹೌದು. 'ಹಾರೋಗದ್ದೆ' ಮನೆತನದವರಿಗೆ ಸುತ್ತಮುತ್ತಿನ ಊರುಗಳಲ್ಲಿ ಸಾಕಷ್ಟು ಗೌರವ ಹಾಗೂ ಪ್ರಭಾವವಿದೆ. ಊರಿನ ಆಗುಹೋಗುಗಳಲ್ಲಿ ಅವರ ಮಾರ್ಗದರ್ಶನ, ನಿರ್ದೇಶನ ಇರುತ್ತಿತ್ತು. ಇವರ ಮಾತಿಗೆ, ಕೊಡುವ ತೀರ್ಮಾನಕ್ಕೆ ಇತರರು ಮನ್ನಣೆ ಕೊಡುತ್ತಿದ್ದರು.

ನಾಯಕರ ತಂದೆ ಹಾರೋಗದ್ದೆ ಶ್ರೀನಿವಾಸ ನಾಯಕರು. ಅವರು ಹುಟ್ಟಿದ್ದು ೧೯೦೦ರಲ್ಲಿ. ಅವರ ತಂದೆ ಸಿದ್ದಪ್ಪ ನಾಯಕರು. ಆ ಕಾಲಕ್ಕೆ ಅವರು ಸರ್ಕಾರಿ ಸೇವೆಯಲ್ಲಿದ್ದವರು. ಶ್ರೀನಿವಾಸನಾಯಕರಿಗೆ ಓದಲು ಸಾಧ್ಯವಾದದ್ದು ಅಂದಿನ ಲೋಯರ್ ಸೆಕೆಂಡರಿವರೆಗೆ ಮಾತ್ರ. ಆ ಕಾಲಕ್ಕೆ ಅದೇನೂ ಕಡಿಮೆ ವಿದ್ಯಾರ್ಹತೆಯಾಗಿರಲಿಲ್ಲ. ನಾಯಕರು ಹುಟ್ಟುವುದಕ್ಕೆ ಮುನ್ನ ಅವರ ತಂದೆ ತೀರ್ಥಹಳ್ಳಿಯಲ್ಲಿದ್ದರು. ಇದ್ದುದರಲ್ಲಿ ಅನುಕೂಲಸ್ಥರಾಗಿದ್ದರು. ನಗರಸಭೆಯ ಉಪಾಧ್ಯಕ್ಷರಾಗಿದ್ದರು. ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಅವರೊಬ್ಬ ಅಡಕೆ ವ್ಯಾಪಾರಿಯಾಗಿದ್ದರು. ವ್ಯಾಪಾರದಲ್ಲಿ ಅವರಿಗೆ ತುಂಬ ನಷ್ಟವಾಯಿತು. ಆ ಬೇಸರದಲ್ಲಿ ತೀರ್ಥಹಳ್ಳಿಯನ್ನೇ ತೊರೆದರು. ಇದ್ದ ಮನೆಯನ್ನು ಮಾರಿದರು. ಆಮೇಲೆ ಅವರು ಕಟ್ಟಿದ್ದೇ 'ಹೊಸಮನೆ'. ಊರಿಗೆ ಅದೇ ಹೆಸರು.

ನಾಯಕರು ಪ್ರೀತಿಯಿಂದ ತಮ್ಮ ತಂದೆಯನ್ನು 'ಅಪ್ಪಯ್ಯ' ಎಂದು ಕರೆಯುತ್ತಿದ್ದರು. ಅವರ ತಂದೆ ತೀರಿಕೊಂಡಾಗ 'ಅಪ್ಪಯ್ಯ' ಎಂಬ ಅತ್ಯಂತ ಆಪ್ತವಾದ ಒಂದು ಪುಟ್ಟ ಪುಸ್ತಕವನ್ನು ಪ್ರಕಟಿಸಿ ಅವರ ನೆನಪನ್ನು ಹಸುರಾಗಿಸಿದ್ದಾರೆ. ನಾಯಕರ 'ಅಪ್ಪಯ್ಯ' ಅವರ ಮನೆತನಕ್ಕೆ ಕೀರ್ತಿ ತಂದ ಹಿರಿಯರಾಗಿದ್ದರು. ಎಂಭತ್ತೈದು ವರ್ಷಗಳ ಸುದೀರ್ಘ ಬದುಕು ಅವರದು. ಶ್ರೀಸಾಮಾನ್ಯನಂತೆ ಬದುಕಿದರು. ಅಸಾಮಾನ್ಯ ಬದುಕು ಅವರದಾಗಿರಲಿಲ್ಲ. ಅದಕ್ಕಾಗಿ ಅವರು ಹಂಬಲಿಸಿದವರೂ ಅಲ್ಲ. ಶ್ರೀಮಂತಿಕೆ ಇದ್ದಾಗಲೂ ಬೀಗಿದವರಲ್ಲ. ಬಡತನದ ಬೇಗೆಯನ್ನನುಭವಿಸಿದರೂ ನಲುಗಿದವರಲ್ಲ. ಕೆಲವೊಮ್ಮೆ ಬಸ್‌ಚಾರ್ಜಿಗೂ ಹಣವಿಲ್ಲದೆ ಪಾಡುಪಟ್ಟವರು. ಅವರು ಮಾಡಿಕೊಂಡಿದ್ದ ಸಾಲ ತೀರಿಸಲಾಗದೆ ಹೋದಾಗ ಅವರ ಮನೆ ಜಪ್ತಿಗೆ

ಬಂತು. ಮನೆಗೆ ಬೀಗ ಹಾಕಿ ಹೆಂಡತಿ ಮಕ್ಕಳೊಡನೆ ಹೊರಹೋಗಬೇಕಾದ ಪ್ರಸಂಗ ಕೂಡ ಅವರಿಗೆ ಎದುರಾಗಿತ್ತು. ಆದರೂ ಅವರು ತಮ್ಮ ಸಹನೆ ಕಳೆದುಕೊಂಡವರಲ್ಲ. ಎಂಥ ಸಂದರ್ಭವನ್ನೂ ಎದುರಿಸುವ ಮನಃಸ್ಥಿತಿ ಅವರಲ್ಲಿತ್ತು. ಅವರೊಬ್ಬ ಕರುಣಾಮಯಿ, ತಾಯಿಹೃದಯದವರು. ಔದಾರ್ಯದ ತವರು. ಕಷ್ಟದಲ್ಲಿದ್ದವರ ಬೆನ್ನು ಕಾಯುತ್ತಿದ್ದರು. ತಮಗೆ ನಷ್ಟವಾಗುತ್ತದೆಂದು ಗೊತ್ತಿದ್ದರೂ ಇತರರಿಗೆ ನೆರವಾಗಲು ಹಿಂದುಮುಂದು ನೋಡುತ್ತಿರಲಿಲ್ಲ. ಬರಗಾಲದಲ್ಲಿ ತಮಗಾಗಿ ಸಂಗ್ರಹಿಸಿಟ್ಟುಕೊಂಡಿದ್ದ ಊಟಬತ್ತವನ್ನು, ಬೀಜದ ಬತ್ತವನ್ನು, ಹೂಟಿಯ ಎತ್ತುಗಳನ್ನು ರೈತರಿಗೆ ಕೊಟ್ಟು ಉಪಕರಿಸಿದವರು.

ಶ್ರೀನಿವಾಸನಾಯಕರಿಗೆ ಓದಿನ ಒಲವು. ಚಿಕ್ಕವರಿದ್ದಾಗಲೇ ನಾಯಕರಿಗೆ ಕುವೆಂಪು, ಕಾರಂತ, ಅನಕೃ, ಗೊರೂರು ಮುಂತಾದ ಲೇಖಕರ ಪರಿಚಯವಾಗಲು ಕಾರಣ ಅವರ ತಂದೆ. ರಾತ್ರಿ ಮಕ್ಕಳನ್ನು ಜೊತೆಯಲ್ಲಿ ಕೂರಿಸಿಕೊಂಡು ಓದಿ ಹೇಳುವ ಅಭ್ಯಾಸ ಶ್ರೀನಿವಾಸನಾಯಕರದು. ತೀರ್ಥಹಳ್ಳಿಗೆ ಹೋದಾಗ ಹೊಸ ಪುಸ್ತಕಗಳನ್ನು ಕೊಂಡುತರದೆ ಬರುತ್ತಿರಲಿಲ್ಲ. ಅವರ ನಿರಂತರ ಓದಿನಿಂದಾಗಿ ಅವರ ಲೋಕಜ್ಞಾನ ತಿಳಿವಳಿಕೆ ಇಮ್ಮಡಿಸಿತ್ತು. ದಿನವೂ ಅವರು ಭಗವದ್ಗೀತೆಯ ಪಾರಾಯಣ ಮಾಡುತ್ತಿದ್ದರು. ಹೀಗಾಗಿ, ಸಹಜವಾಗಿಯೇ ಇವರಿಂದ ಹಾಮಾನಾ ಅವರಲ್ಲಿ ಓದಿನ ಆಸಕ್ತಿ ಕುಡಿಯೊಡೆಯಿತು.

ನಾಯಕರ ತಂದೆಗೆ ಎಲ್ಲದರಲ್ಲೂ ಆಸಕ್ತಿ. ಎಲ್ಲವನ್ನೂ ತಿಳಿದುಕೊಳ್ಳುವ ಕಾತರ. ಅವರು ಸುತ್ತಮುತ್ತಲ ದೈನಂದಿನ ಆಗುಹೋಗುಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದರು. ಪುಸ್ತಕಗಳ ಜೊತೆಗೆ ಪತ್ರಿಕೆಗಳನ್ನೂ ಓದುವ ಹವ್ಯಾಸವನ್ನು ಮಗನಲ್ಲಿ ಬಿತ್ತಿ ಬೆಳೆಸಿದರು. ಎರಡನೇ ಮಹಾಯುದ್ಧದ ಸಂಗತಿಗಳನ್ನು ಅಪ್ಪಯ್ಯನಿಂದ ಕೇಳಿ ಕೇಳಿ ವಿಚಿತ್ರ ಕುತೂಹಲ ತಳೆದು ನಾಯಕರು ಪತ್ರಿಕೆ ಓದುವುದನ್ನು ಚಟವಾಗಿಸಿಕೊಂಡರು. ದಿನಾ ಪತ್ರಿಕೆ ಓದದಿರುವುದು ಅವರಿಂದ ಸಹ್ಯವಾಗುತ್ತಿರಲಿಲ್ಲ. ಪತ್ರಿಕೆಗಳನ್ನು ಓದುವುದಕ್ಕಾಗಿಯೇ ತೀರ್ಥಹಳ್ಳಿಗೆ ನಡೆದುಕೊಂಡು ಹೋಗಿ ನಡೆದೇ ವಾಪಸ್ಸಾಗುತ್ತಿದ್ದರು. ಹೀಗೆ "ಓದು ನನ್ನ ಜೀವನಕ್ಕೆ ಅಂಟುವಂತೆ ಮಾಡಿದ್ದೇ ಅಪ್ಪಯ್ಯ" ಎನ್ನುತ್ತಾರೆ ನಾಯಕರು.

ಹಿರಿಯ ಮಗನೇ ಆದರೂ ನಾಯಕರು ಮತ್ತು ಅವರ ತಂದೆಯ ನಡುವೆ ಮುವ್ವತ್ತೈದು ವರ್ಷಗಳ ವಯಸ್ಸಿನ ಅಂತರ. ಹೀಗಾಗಿ ಇವರ ನಡುವೆ ತಂದೆ–ಮಕ್ಕಳ ನಡುವಣ ಬಿಗುವು, ಔಪಚಾರಿಕತೆಗಳಿರಲಿಲ್ಲ. ಇವರಿಬ್ಬರ ಸಂಬಂಧ

ಸ್ನೇಹಮಯವಾಗಿತ್ತು. ಆಗಾಗ ಇಬ್ಬರ ನಡುವೆ ತಮಾಷೆ, ವ್ಯಂಗ್ಯ ವಿನೋದಗಳು ಜರುಗುತ್ತಿದ್ದವು. ಇವರ ಅನ್ಯೋನ್ಯತೆ, ಪ್ರೀತಿ ಆಶ್ಚರ್ಯಪಡುವಷ್ಟರ ಮಟ್ಟಿಗೆ ಅನುಕರಣೀಯವಾಗಿದ್ದವು.

ರಜೆಯ ದಿನಗಳಲ್ಲಿ, ಹಬ್ಬಹರಿದಿನಗಳಲ್ಲಿ ಓದಿನ ಕಾರಣಕ್ಕಾಗಿ ಮನೆಯಿಂದ ಹೊರಗಿರುತ್ತಿದ್ದ ನಾಯಕರನ್ನು ಅವರ ತಂದೆ ಊರಿಗೆ ಕರೆದುಕೊಂಡು ಬರುತ್ತಿದ್ದರು. ಆಗೆಲ್ಲ ನಾಯಕರಿಗೆ ತಂದೆಯ ಜೊತೆಯಲ್ಲಿ ನಡಿಗೆಯ ಪೈಪೋಟಿ. ತಂದೆಯ ಕೈಹಿಡಿದು ನಡೆಯುವುದೊಂದು ಸಡಗರ. ತಂದೆಯ ಭುಜದ ಮೇಲೆ ಕೂತು ಸವಾರಿ ಮಾಡುವುದೊಂದು ಪುಳಕ. ಇಲ್ಲವೇ ಎತ್ತಿನಗಾಡಿಯಲ್ಲಿ ಹುಲ್ಲಿನ ಹಾಸುಗೆಯ ಮೇಲೆ ಮಲಗಿ ಪಯಣಿಸುವ ಸಂಭ್ರಮ. ಆಗೆಲ್ಲ ನಾಯಕರು ತನ್ನ ತಂದೆಯ ಅಕ್ಕರೆಯ ಆಧಿಕ್ಯವನ್ನು ಅತ್ಯಂತ ಆಪ್ತವಾಗಿ ಅನುಭವಿಸುತ್ತಿದ್ದರು.

ಕಣ್ಣು ಕಳೆದುಕೊಂಡು ಅನಾರೋಗ್ಯದಿಂದ ಬಳಲುತ್ತಿದ್ದ ತನ್ನ ತಂದೆಯನ್ನು ನೋಡಿ ಬರಲು ನಾಯಕರು ಒಮ್ಮೆ ಊರಿಗೆ ಹೋಗುತ್ತಾರೆ. ಅದರಿಂದ ಅವರ ತಂದೆಗೆ ಖುಷಿಯಾಗುತ್ತದೆ. ಅದನ್ನು ಮುಖದ ಮೇಲೆ ಪ್ರಕಟಿಸುತ್ತಾರೆ; ಕಣ್ಣಾರೆ ಕಾಣದಿದ್ದರೂ, ಕಿವಿಯಾರ ಕೇಳಿ. ಒಂದೆರಡು ದಿವಸಗಳು ಮಾತ್ರ ನಾಯಕರಿಗೆ ಊರಿನಲ್ಲಿರುವುದು ಸಾಧ್ಯವಾಗುತ್ತದೆ. ಪ್ರಯಾಣಕ್ಕೆ ಸಿದ್ಧರಾಗಿ ತಂದೆಗೆ ಹೋಗಿಬರುವುದಾಗಿ ತಿಳಿಸಲು ಮುಂದಾಗುತ್ತಾರೆ. ಆಗ ಅವರ ತಾಯಿ "ಹೇಳಬೇಡ, ನೀನು ಹೊರಟಿರುವುದು ಅವರಿಗೆ ನೋವು ತರುತ್ತದೆ" ಎನ್ನುತ್ತಾರೆ. ಕಡೆಗೂ ತಂದೆಗೆ ಹೇಳದೆ ಅವರ ಪಾದಸ್ಪರ್ಶ ಮಾಡಿ ಹೊರಟುಬಿಡುತ್ತಾರೆ. ದೆಹಲಿಗೆ ಹೋಗಿದ್ದ ನಾಯಕರು ಅಲ್ಲಿಂದ ವಾಪಸ್ಸು ಬರುವುದರೊಳಗೆ ಅವರ ತಂದೆ ತೀರಿಕೊಂಡಿರುತ್ತಾರೆ. ಇದರಿಂದ ಬಹಳವಾಗಿ ನೊಂದುಕೊಂಡ ನಾಯಕರು ಹೀಗೆ ಮರುಗುತ್ತಾರೆ: "ನಾನು ಅಂದು ಕೊನೆಯ ಸಲ ಅಪ್ಪಯ್ಯನಿಗೆ ಹೇಳಿ ಹೋಗಲಿಲ್ಲ. ಈಗ ಅವರೂ ನನಗೆ ಹೇಳದೇ ಹೋದರು." ನಾಯಕರಿಗೆ ತನ್ನ ತಂದೆ ಕಣ್ಣುಕಾಣದೆ ಕೊನೆಯ ದಿನಗಳಲ್ಲಿ ಪಟ್ಟಪಾಡು ನೆನೆದು ಸಂಕಟವಾಗುತ್ತದೆ. ಏಕೆಂದರೆ, ಸದಾ ಚಟುವಟಿಕೆಯಿಂದ ಪುಟಿಯುತ್ತಿದ್ದ ಅವರ ತಂದೆ ಕೊನೆಗೆ ಪರಾವಲಂಭಿಯಾದುದು ಅವರಿಗೆ ಸಹ್ಯವಾಗಲಿಲ್ಲ. ಅವರು ಚಿಂತೆಯಿಂದ ಬಸವಳಿದು ಸಣ್ಣಗಾದದ್ದು, ನವೆದುಹೋದದ್ದು, ಕೊನೆಕೊನೆಗೆ ಮಾತಾಡುವ ಶಕ್ತಿಯನ್ನೂ ಕಳೆದುಕೊಂಡದ್ದು ನಾಯಕರಿಗೆ ಅರಗಿಸಿಕೊಳ್ಳಲಾಗದ ವಿಷಯವಾಗಿತ್ತು. ಏಕೆಂದರೆ, ಅವರ ತಂದೆಗೆ

ಯಾವುದೇ ದೈಹಿಕ ಕಾಯಿಲೆಗಳಿರಲಿಲ್ಲ. ಅವರ ಸಾವು ಘಟಿಸಿದ್ದು "ಕರ್ಪೂರ ಉರಿದುಹೋದಂತೆ ಅಲ್ಲ; ಗಾಳಿಗೆ ತೆರೆದಿಟ್ಟ ಕರ್ಪೂರ ಕರಗಿಹೋದಂತೆ."

ಅಪ್ಪಯ್ಯನನ್ನು ಸ್ಮರಿಸುತ್ತಾ ನಾಯಕರು ಆಡುವ ಈ ಮಾತುಗಳು ಉಲ್ಲೇಖನೀಯ: "ಅಪ್ಪಯ್ಯನನ್ನು ನೆನಪಿಸಿಕೊಳ್ಳುತ್ತಾ ಅವರು ನನಗೆ ಏನು ಕೊಟ್ಟರು ಎಂದು ಯೋಚಿಸುತ್ತೇನೆ; ಅವರಿಂದ ನಾನು ಏನು ಕಲಿತೆ ಎಂದು ಕೇಳಿಕೊಳ್ಳುತ್ತೇನೆ. ನನ್ನ ಜೀವನದಲ್ಲಿ ಅಲ್ಪಸ್ವಲ್ಪವಾದರೂ ಅನುಷ್ಠಾನಗೊಳಿಸಲು ನಾನು ಯತ್ನಿಸುವ ಕೆಲವು ಗುಣಗಳು–ದುಡಿಮೆ, ಪ್ರಾಮಾಣಿಕತೆ, ಸಹನೆ, ನಿರ್ಮಾತ್ಸರ್ಯ, ಅನುಕಂಪೆ ಮೊದಲಾದವನ್ನೆಲ್ಲ ನಾನು ನನ್ನ ಅಪ್ಪಯ್ಯನಿಂದಲೇ ಕಲಿತೆ. ಒಬ್ಬ ತಂದೆ ತನ್ನ ಮಕ್ಕಳಿಗೆ ಇಷ್ಟೆಲ್ಲವನ್ನೂ ಕೊಟ್ಟ ಮೇಲೆ ಅವನ ಬದುಕು ಸಾರ್ಥಕವಲ್ಲದೆ ಮತ್ತೇನು?"

ಎನ್.ಡಿ. ರುಕ್ಮಿಣಿಯಮ್ಮ ಹಾಮಾನಾ ಅವರ ತಾಯಿ. ಬಾಲ್ಯದಲ್ಲಿ ನಾಯಕರು ಅಮ್ಮನ ಹೆಸರನ್ನು 'ನಿಕ್ಕಮ್ಮ' ಎಂದು ಕರೆಯುತ್ತಿದ್ದರು. ಆಮೇಲೆ ಜೀವನದುದ್ದಕ್ಕೂ ತನ್ನ ತಾಯಿಯನ್ನು ಕರೆಯುತ್ತಿದ್ದುದು 'ನಿಕ್ಕಮ್ಮ' ಎಂದೇ. ರುಕ್ಮಿಣಿಯಮ್ಮ ಅವರು ಕೊಳಿಗೆ ಮನೆತನಕ್ಕೆ ಸೇರಿದವರು. ನಾಲೂರಿನಲ್ಲಿ ಅವರು ಹುಟ್ಟಿದ್ದು ೧೯೧೪ರ ಆಗಸ್ಟ್ ೨೫ರಂದು. ಅವರ ತಂದೆ ಜಮೀನುದಾರ ನಾಲೂರು ದೇವಪ್ಪಗೌಡರು. ಜವಳಿ ವ್ಯಾಪಾರಿ ಆದ ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಆಗಿದ್ದರು. ರುಕ್ಮಿಣಿಯಮ್ಮ ಚಿಕ್ಕವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡು ತಂದೆಯ ಆರೈಕೆಯಲ್ಲಿ ಬೆಳೆದು ದೊಡ್ಡವರಾದವರು. ಅವರ ತಾಯಿಯ ತಂದೆ ಮಳವಾಡಿ ಗಿರಿಯಪ್ಪಗೌಡರು ಸಮಾಜಸೇವಕರಾಗಿದ್ದರು. ಒಕ್ಕಲಿಗ ಜನಾಂಗದ ಮುಖಂಡರಾಗಿದ್ದರು. ಅವರ ಇಬ್ಬರು ಗಂಡುಮಕ್ಕಳು ನಾಲೂರು ಶಂಕರಪ್ಪಗೌಡರು ಮತ್ತು ಚಿನ್ನಪ್ಪಗೌಡರು ಪ್ರಗತಿಪರ ದೃಷ್ಟಿಕೋನ ಹೊಂದಿದವರಾಗಿದ್ದು, ಸಾಹಿತ್ಯ ಸಂಸ್ಕೃತಿಯ ಪೋಷಕರಾಗಿದ್ದರು.

ನಾಯಕರ ತಂದೆಯಂತೆ ತಾಯಿಯೂ ಸಾಹಿತ್ಯಾಸಕ್ತರು. ನಾಯಕರಿಗೆ ಅಕ್ಷರ ಕಲಿಸಿದ ಮೊದಲ ಗುರುವೇ ಅವರ ತಾಯಿ. 'ಬಾಲಬೋಧೆ' ಓದುವಷ್ಟರಮಟ್ಟಿಗೆ ಮಗನಿಗೆ ಶಿಕ್ಷಣ ನೀಡಿದವರವರು. ಪರೋಪಕಾರಿ ಪಾಪಣ್ಣನಾಗಿದ್ದ ಗಂಡನ ಧಾರಾಳತನದಿಂದಾಗಿ ರುಕ್ಮಿಣಿಯಮ್ಮ ಅನೇಕ ಕೌಟುಂಬಿಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆಗೆಲ್ಲ ಬೇಸರಪಟ್ಟುಕೊಳ್ಳದೆ ಸಂಸಾರದ ನೊಗಕ್ಕೆ ಗಂಡನ ಜೊತೆಯಲ್ಲಿ ಹೆಗಲುಕೊಟ್ಟವರು. ತುಂಬು ಕುಟುಂಬವನ್ನು ಸಂಬಾಳಿಸಿದವರು. ನಾಯಕರು ನೋಡುವುದಕ್ಕೆ ತಂದೆಯನ್ನು

ಹೋಲುವುದಷ್ಟೇ ಅಲ್ಲ, ಅವರ ಎಲ್ಲ ಒಳ್ಳೆಯ ಗುಣಗಳನ್ನು ಮೈಗೂಡಿಸಿಕೊಂಡಿದ್ದರು. ಆದರೂ ಅವರ ಮೇಲೆ ತಾಯಿಯ ಪ್ರಭಾವ ಕೂಡ ಕಡಿಮೆಯದೇನಾಗಿರಲಿಲ್ಲ.

ನಾಯಕರ ಒಡಹುಟ್ಟಿದವರು ಒಂಭತ್ತು ಜನ. ಅವರಲ್ಲಿ ಒಂದು ಮಗು ಹುಟ್ಟಿದ ತರುಣದಲ್ಲಿಯೇ ತೀರಿಹೋದದ್ದರಿಂದ ಉಳಿದ ಮಕ್ಕಳು ನಾಯಕರೂ ಸೇರಿ ಎಂಟು ಮಂದಿ. ಅದರಲ್ಲಿ ನಾಲ್ಕು ಗಂಡುಮಕ್ಕಳು, ನಾಲ್ಕು ಹೆಣ್ಣುಮಕ್ಕಳು. ನಾಯಕರೇ ಹಿರಿಯ ಮಗ. ರಾಮದಾಸ ನಾಯಕರು ಎರಡನೆಯ ಮಗ. ಮೂರನೆಯವರು ಹೆಸರಾಂತ ಮನೋವಿಜ್ಞಾನಿ ಡಾ. ಎಚ್.ಎಸ್. ಈಶ್ವರ ಅವರು. ಆಮೇಲೆ ಹುಟ್ಟಿದವರು ಮೂವರೂ ಹೆಣ್ಣುಮಕ್ಕಳು. ಅವರೇ ಇಂದ್ರಮ್ಮ, ಜಯಮ್ಮ ಮತ್ತು ಶ್ರೀದೇವಿ. ಇವರನ್ನು ಅನುಸರಿಸಿ ಕೊನೆಯಲ್ಲಿ ಹುಟ್ಟಿದವರೇ ಗೋಪಾಲ ನಾಯಕರು ಮತ್ತು ಸರೋಜ. ಜಿ.ಟಿ. ನಾರಾಯಣ ಅವರು ಇಂದ್ರಮ್ಮನವರ ಪತಿ. ಜಯಮ್ಮ ಅವರು ಮದುವೆಯಾದದ್ದು ಕೆ.ವಿ. ನರಸಿಂಹ ಅವರನ್ನು. ಹೆಸರಾಂತ ಛಾಯಾಚಿತ್ರಗ್ರಾಹಕ, ರೈತ ಚಳುವಳಿಯ ಮುಂದಾಳು ಕಡಿದಾಳ್ ಶಾಮಣ್ಣ ಅವರ ಪತ್ನಿ ಶ್ರೀದೇವಿ. ಸರೋಜ ಅವರ ಪತಿ ಜಯಚಂದ್ರ ಒಬ್ಬ ಇಂಜಿನಿಯರ್.

ರಾಮದಾಸನಾಯಕರು ನಾಯಕರ ಮೊದಲನೇ ತಮ್ಮ. ಹೈಸ್ಕೂಲ್‌ವರೆಗೆ ಮಾತ್ರ ಇವರ ವಿದ್ಯಾಭ್ಯಾಸ. ಊರಿನ ಮನೆ, ಜಮೀನು ನೋಡಿಕೊಳ್ಳುವುದರಲ್ಲಿಯೇ ಆಸಕ್ತಿ ತಳೆದವರು. ತಂದೆಯಂತೆ ಹಳ್ಳಿಯಲ್ಲಿದ್ದರೂ ಇವರು ಕ್ರಿಯಾಶೀಲ ಚಟುವಟಿಕೆಯವರು. ಪರೋಪಕಾರ ಬುದ್ಧಿಯವರು. ಊರಿನ ಜನರಿಗೆ ಒದಗಿಬರುವ 'ಆಪದ್ಬಂಧು'.

ಡಾ. ಎಚ್.ಎಸ್. ಈಶ್ವರ ಅವರು ನಾಯಕರ ಎರಡನೆಯ ತಮ್ಮ. ನಾಯಕರೊಡನಿದ್ದು ಒಡನಾಡಿದವರು. ಅವರ ಎತ್ತರ ಬಿತ್ತರದ ಆಂತರ್ಯವನ್ನು ಅರಿತವರು. ಅವರ ಅಣ್ಣನನ್ನು ಕುರಿತು ಇತ್ತೀಚೆಗೆ 'ಹಾಮಾನಾ ನನ್ನ ದೊಡ್ಡಣ್ಣ' ಎಂಬ ಕೃತಿಯನ್ನು ಹೊರತಂದಿದ್ದಾರೆ. ಈಶ್ವರ ಅವರದು ಮನೋವಿಜ್ಞಾನ ಮತ್ತು ಸಮೂಹ ಮಾಧ್ಯಮದಲ್ಲಿ ದೊಡ್ಡ ಹೆಸರು. ಅಮೇರಿಕಾದಲ್ಲಿ ಸಂಶೋಧನೆ ನಡೆಸಿ ಪಿಎಚ್.ಡಿ. ಪಡೆದವರಿವರು. ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರಾಗಿ, ವಿಭಾಗ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತಿಜೀವನ ನಡೆಸುತ್ತಿದ್ದಾರೆ. ರಾಷ್ಟ್ರೀಯ ಅಂತಾರಾಷ್ಟ್ರೀಯ ಖ್ಯಾತಿಯ ಮನ್ನಣೆ ಪಡೆದಿದ್ದರೂ ನಿಗರ್ವಿಯಾಗಿ ಸಜ್ಜನಿಕೆಯ ವ್ಯಕ್ತಿ ಎನಿಸಿಕೊಂಡಿದ್ದಾರೆ.

ನಾಯಕರ ಕೊನೆಯ ತಮ್ಮ ಗೋಪಾಲನಾಯಕರು. ಪದವೀಧರರಾಗಿಯೂ ಇವರು ಗ್ರಾಮಜೀವನವನ್ನು, ಕೃಷಿಕ ವೃತ್ತಿಯನ್ನು ಅಪ್ಪಿಕೊಂಡವರು. ಸಾಹಿತ್ಯಾಸಕ್ತರು, ನಾಟಕಾಭಿರುಚಿಯುಳ್ಳವರು. ಜನರ ಕಷ್ಟಸುಖಗಳಲ್ಲಿ ಪಾಲ್ಗೊಳ್ಳುವಂಥವರು. ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿ ಒಳ್ಳೆಯ ಕೆಲಸ ಮಾಡಿ ಹೆಸರು ಗಳಿಸಿದವರು. ಒಟ್ಟಾರೆ ಬದುಕಿನಲ್ಲಿ ಸಫಲರಾಗಿರುವಂಥವರು.

ನಾಯಕರ ಎಲ್ಲ ಸಹೋದರಿಯರು ಉತ್ತಮ ಗೃಹಿಣಿಯರಾಗಿ ಒಪ್ಪ ಓರಣದಿಂದ ಸಂಸಾರ ಸಾಗಿಸುತ್ತ ನೆಮ್ಮದಿಯ ಬದುಕನ್ನು ಕಂಡಿದ್ದಾರೆ. ಇವರೆಲ್ಲರಿಗೂ 'ದೊಡ್ಡಣ್ಣ' (ಹಾಮಾನಾ) ಎಂದರೆ ತುಂಬ ಅಚ್ಚುಮೆಚ್ಚು. ನಾಯಕರ ಜನಪ್ರೀತಿಯನ್ನು ಕಂಡು ಇವರಿಗೆಲ್ಲ ಹೆಮ್ಮೆ ಹಾಗೂ ಕೃತಾರ್ಥ ಭಾವನೆ.

ಬಿ.ಎಸ್. ಯಶೋಧರಮ್ಮ ಹಾಮಾನಾ ಅವರ ಬಾಳಸಂಗಾತಿ. ಮಡದಿಯನ್ನು ಪ್ರೀತಿಯಿಂದ 'ಯಶಾ' ಎಂದು ಕರೆಯುತ್ತಿದ್ದರು. ಯಶೋಧರಮ್ಮ ಅವರು ಕಾಫಿ ಎಸ್ಟೇಟಿನ ಮಾಲೀಕರಾದ ಸುಬ್ಬೇಗೌಡರ ಮಗಳು. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ 'ಸಂಪಿಗೆಖಾನ್' ಎಸ್ಟೇಟ್ ಅವರದು. ಯಶೋಧರಮ್ಮನವರ ವಿದ್ಯಾಭ್ಯಾಸ ಶಾಲಾಮಟ್ಟದ್ದಷ್ಟೆ. ಆದರೆ ಅವರು ಚಿಕ್ಕವಯಸ್ಸಿನಿಂದಲೇ ಸಂಗೀತ, ಕಸೂತಿ ಮುಂತಾದವುಗಳಲ್ಲಿ ಆಸಕ್ತಿ ತಳೆದವರಾಗಿದ್ದರು. ಹಾಮಾನಾ ದಂಪತಿಗಳದು ಸುಮಾರು ೪೫ ವರ್ಷಗಳ ಸುದೀರ್ಘ ಸಹಬಾಳ್ವೆ. "ಯಶೋಧರಮ್ಮ ತಮ್ಮ ಪತಿಯನ್ನು ಒಂದು ಬಗೆಯ ಆರಾಧನಾ ಭಾವದಿಂದಲೇ ನಡೆಸಿಕೊಳ್ಳುತ್ತಿದ್ದರು. ಗಂಡನ ಅಪೇಕ್ಷೆ ಮತ್ತು ಅನಪೇಕ್ಷಿತ ವಿಚಾರಗಳನ್ನು ಅರಿತುಕೊಳ್ಳುವ ಸೂಕ್ಷ್ಮಪ್ರಜ್ಞೆಯನ್ನು ಅವರು ಬೆಳೆಸಿಕೊಂಡಿದ್ದರು. ಅತಿಥಿಸತ್ಕಾರ, ಪುಸ್ತಕಗಳ ಜೋಪಾನ, ಪ್ರಯಾಣ ಸಿದ್ಧತೆ – ಹೀಗೆ ಅದು ಯಾವುದೇ ವಿಚಾರವಿರಲಿ, ಹಾಮಾನಾ ಇಷ್ಟಗಳಿಗೆ ಸ್ವಲ್ಪವೂ ಚ್ಯುತಿ ಬಾರದ ಹಾಗೆ ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಹೋಗುವ ಕಲೆ ಅವರಿಗೆ ಸಿದ್ಧಿಸಿತ್ತು. ಮನೆಯ ಬೇಕುಬೇಡಗಳಿಗೆ ಹಾಮಾನಾ ಯಾವತ್ತೂ ತಲೆಕೆಡಿಸಿಕೊಳ್ಳುವ ಗೋಜಿಗೆ ಅವಕಾಶವೇ ಇರಲಿಲ್ಲ. ಯಶೋಧರಮ್ಮನ ಈ ಬಗೆಯ ಗೃಹಾಡಳಿತ ಹಾಮಾನಾ ವೃತ್ತಿಜೀವನದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅನುವು ಮಾಡಿಕೊಟ್ಟಿತು ಎಂದರೆ ಗಂಡನ ಸಾಧನೆಯಲ್ಲಿ ಹೆಂಡತಿಯ ಪಾತ್ರದ ಮಹತ್ವ ಅರಿವಾಗುತ್ತದೆ. ಪ್ರತಿಯಾಗಿ ಹಾಮಾನಾ ಕೂಡ ಪತ್ನಿಯ ಬಗ್ಗೆ ವಿಶೇಷವಾದ ಆದರ ಗೌರವಗಳನ್ನು ಹೊಂದಿದ್ದು, ಅವರ ಬೇಕು ಬೇಡಗಳಿಗೆ ಸಕಾರಾತ್ಮಕವಾಗಿಯೇ ನಡೆದುಕೊಳ್ಳುತ್ತಿದ್ದ. ಗೃಹಕೃತ್ಯಕ್ಕೆ

ಸಂಬಂಧಿಸಿದ ವಿಚಾರಗಳಲ್ಲಿ ಸದಾ "ಏನ್ರೀ, ಯಶೋಧರಮ್ಮ" ಎಂದು ಅವರ ಸಲಹೆಯನ್ನು ಸ್ವೀಕರಿಸಿ, ಅವರ ಅಭಿಪ್ರಾಯಗಳಿಗೆ ಮನ್ನಣೆ ಕೊಡುತ್ತಿದ್ದ. ಈ ದಂಪತಿಗಳ ನಡುವಣ ಹೊಂದಾಣಿಕೆಯಲ್ಲಿ ಒಂದು ರಹಸ್ಯ ಇದ್ದಿರಬಹುದೆಂದು ನನ್ನ ಊಹೆ. ತಮ್ಮ ಪತಿಯ ಅಂತರಂಗವನ್ನು ಚನ್ನಾಗಿ ಅರಿತಿದ್ದ ಯಶೋಧರಮ್ಮ ಅವರು ಸಮ್ಮತಿಸಬಹುದಾದ ಸಲಹೆಗಳನ್ನೇ ನೀಡುತ್ತಿದ್ದರು. ಹಾಗಾಗಿ ಇಬ್ಬರ ನಡುವೆ ಸಂಘರ್ಷಗಳಿಗೆ ಎಡೆಯೇ ಇರಲಿಲ್ಲ."(ಎಚ್.ಎಸ್. ಈಶ್ವರ, 'ಹಾಮಾನಾ ನನ್ನ ದೊಡ್ಡಣ್ಣ', ಪು. ೩೫)

ನಾಯಕರಿಗೆ ಇಬ್ಬರು ಮಕ್ಕಳು. ಮಗಳು ಕವಿತಾ. ಮಗ ರವೀಂದ್ರ ನಾಯಕ. ಕವಿತಾ ಹುಟ್ಟಿದ್ದು ೧೯೫೬ರಲ್ಲಿ. ಮೂರು ವರ್ಷಗಳ ತರುವಾಯ ಅಂದರೆ ೧೯೫೯ರಲ್ಲಿ ಹುಟ್ಟಿದವನು ರವೀಂದ್ರ. ಇಬ್ಬರೂ ತಾಯಿಯನ್ನು 'ಮಾಮಿ' ಎಂತಲೂ, ತಂದೆಯನ್ನು 'ದೊಡ್ಡಣ್ಣ' ಎಂತಲೂ ಕರೆಯುತ್ತಿದ್ದರು. ನಾಯಕರು ತಮ್ಮ ಇಬ್ಬರು ಮಕ್ಕಳನ್ನೂ ಕನ್ನಡ ಮಾಧ್ಯಮದಲ್ಲಿಯೇ ಓದಿಸಿದರು. ಕವಿತಾ ಓದಿ ಡಾಕ್ಟರಾದರು. ರವೀಂದ್ರ ಪದವೀಧರನಾದ. ಇಬ್ಬರು ಮಕ್ಕಳಿಗೂ ಅವರವರ ಬದುಕಿಗೆ ಸಂಬಂಧಪಟ್ಟಂತೆ ತೀರ್ಮಾನ ತೆಗೆದುಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವನ್ನು ನಾಯಕ ದಂಪತಿಗಳು ಕೊಟ್ಟಿದ್ದರು. ಹೀಗಾಗಿ ಡಾ. ಕವಿತಾ ಹೆಸರಾಂತ ಚರ್ಮರೋಗ ತಜ್ಞ ಡಾ. ಹನುಮಂತಪ್ಪ ಅವರನ್ನು ಪ್ರೀತಿಸಿ ಅಂತರ್ಜಾತೀಯ ವಿವಾಹಕ್ಕೆ ಮಣೆ ಹಾಕಿದರು. ಮಗ ರವೀಂದ್ರ ಕೂಡ ತಾನು ಇಷ್ಟಪಟ್ಟ ಹುಡುಗಿಯನ್ನೇ ಮದುವೆಯಾದ. ಇವರಿಬ್ಬರ ಮದುವೆಗಳನ್ನೂ ನಾಯಕರು ತುಂಬ ಸರಳವಾಗಿ ದೇವಸ್ಥಾನದಲ್ಲಿ ಕಡಿಮೆ ಸಂಖ್ಯೆಯ ಆಪ್ತರ ಹಾಜರಿಯಲ್ಲಿ ನೆರವೇರಿಸಿದರು. ನಾಯಕರ ಸರಳತೆಗೆ ಯಾವ ಸಂದರ್ಭವೂ ಅಡ್ಡಿ ಬರಲಿಲ್ಲ ಎಂಬುದಕ್ಕೆ ಮಕ್ಕಳ ವಿವಾಹಗಳೇ ಸಾಕ್ಷಿ.

ನಾಯಕರ ಮೊಮ್ಮಕ್ಕಳು ಶಿಶಿರ ಮತ್ತು ಅಚಿಂತ್ಯ. ಶಿಶಿರ ಮಗಳ ಮಗಳು. ಅಚಿಂತ್ಯ ಮಗನ ಮಗ. ಇಬ್ಬರಿಗೂ ಔಚಿತ್ಯಪೂರ್ಣ, ಅರ್ಥವಂತಿಕೆಯ ಹೆಸರುಗಳನ್ನಿಟ್ಟವರು ಹಾಮಾನಾ. ಮೊಮ್ಮಗಳು ಚಂದ್ರನಂತೆ ಸದಾ ಬದುಕಲ್ಲಿ ತಂಪಾಗಿರಲಿ, ಮೊಮ್ಮಗನನ್ನು ಯಾವ ಚಿಂತೆಯೂ ಕಾಡದಿರಲಿ ಎಂಬುದು ಅವರ ಆಶಯವಾಗಿದ್ದಿರಬೇಕು. ಮೊಮ್ಮಕ್ಕಳನ್ನು ಹಾಮಾನಾ ದಂಪತಿಗಳು ಬಹಳವಾಗಿ ಹಚ್ಚಿಕೊಂಡಿದ್ದರು.

## ೫. ಹಾಮಾನಾ ಬಾಲ್ಯ ಮತ್ತು ವಿದ್ಯಾಭ್ಯಾಸ

ಕುಟುಂಬದ ಮೊದಲ ಮಗುವಾದ್ದರಿಂದ ಬಾಲ್ಯದಿಂದಲೂ ತಾಯಿಯ ಮನೆ, ತಂದೆಯ ಮನೆಯಲ್ಲಿ ಪ್ರೀತಿಯ ಆಧಿಕ್ಯವನ್ನು ಸವಿದವರು ಹಾಮಾನಾ. ಚಿಕ್ಕವಯಸ್ಸಿನಿಂದಲೂ ತುಂಬ ಪ್ರತಿಭಾವಂತರಾಗಿದ್ದವರು ಹಾಮಾನಾ. ಅದಕ್ಕೆ ಕಾರಣ ಅವರ ತಂದೆ–ತಾಯಿ. ತಂದೆಯ ಔದಾರ್ಯ, ಉದಾರತೆ, ಪರೋಪಕಾರಿ ಗುಣ, ಓದಿನ ಹುಚ್ಚು ಇವುಗಳನ್ನು ಎಳವೆಯಲ್ಲಿಯೇ ಎರವಲು ಪಡೆದ ನಾಯಕರು ತಾಯಿಯಿಂದ ಶಿಸ್ತು, ಸಂಯಮ, ನಡೆನುಡಿಗಳನ್ನು ಕಲಿತರು. ತುಂಟುತನದ ಲವಲೇಶವೂ ಇರದ ನಾಯಕರು ಬಾಲ್ಯದಿಂದಲೂ ಸೌಮ್ಯಸ್ವಭಾವದವರು.

ಹಾಮಾನಾ ಅವರ ಊರಿನಲ್ಲಿ ಅವರು ವಿದ್ಯಾಭ್ಯಾಸ ಆರಂಭಿಸುವ ಕಾಲಕ್ಕೆ ಪ್ರಾಥಮಿಕ ಶಾಲೆಯೂ ಇರಲಿಲ್ಲ. ಮೊದಲೇ ಓದಿನ ಚಟ ಅಂಟಿಸಿಕೊಂಡಿದ್ದ ಅವರು ವಿದ್ಯಾಭ್ಯಾಸ ಆರಂಭಿಸಲು ಪರದಾಡಬೇಕಾಯಿತು. ವಿಧಿಯಿಲ್ಲದೆ ಊರು ಬಿಡಬೇಕಾಯಿತು. ಮನೆಯಲ್ಲಿ, ತಾಯಿಯ ತವರು ನಾಲೂರಿಗೆ ಕಳುಹಿಸಲು ಮುಂದಾದರು. ನಾಯಕರಿಗೆ ಅಲ್ಲಿಗೆ ಹೋಗಲು ಇಷ್ಟವಿರಲಿಲ್ಲ. ಆದರೆ ಹೋಗದೆ ಬೇರೆ ದಾರಿ ಇರಲಿಲ್ಲ. ನಾಲೂರಿನಲ್ಲಿ ತಾಯಿಯ ಸೋದರಮಾವಂದಿರ ಮನೆಗಳಿದ್ದವು. ಪ್ರಾಥಮಿಕ ಶಾಲೆ, ಅಂಚೆ ಕಚೇರಿ, ಅಂಗಡಿ, ಹೋಟೆಲ್‌ಗಳಿದ್ದ ರಸ್ತೆ ಪಕ್ಕದ ಊರು ಅದು. ಊರಿನ ಪಕ್ಕದ ರಸ್ತೆಯಲ್ಲಿ ದಿನವೂ ತೀರ್ಥಹಳ್ಳಿ–ಆಗುಂಬೆ ನಡುವೆ ಹಲವಾರು ಬಸ್ಸುಗಳು ಓಡಾಡುತ್ತಿದ್ದವು. ತಾಯಿಯೊಡನೆ ವರ್ಷದಲ್ಲಿ ಯಾವಾಗಲಾದರೊಮ್ಮೆ ಅಲ್ಲಿಗೆ ಹೋದಾಗ ಒಂಟಿಮನೆಯ ತಮ್ಮ ಊರಿಗೆ ಹೋಲಿಸಿದರೆ ನಾಲೂರು ನಾಯಕರಿಗೆ ಬಹಳ ಆಕರ್ಷಕವಾಗಿ ಕಂಡುಬರುತ್ತಿತ್ತು.

ನಾಲೂರಿನಲ್ಲಿ ಮಾವನ ಮನೆಯ ಎದುರಿಗೇ ಪ್ರಾಥಮಿಕ ಶಾಲೆ ಇತ್ತು. ನಾಯಕರು ಅಲ್ಲಿಗೆ ಸೇರಿಕೊಂಡರು. ವಾಸ್ತವವಾಗಿ ತನ್ನ ತಾಯಿಯಿಂದ ಒಂದನೆಯ ತರಗತಿಯ ಪಾಠವನ್ನೆಲ್ಲ ಕಲಿತಿದ್ದ ನಾಯಕರು ಸುಲಭವಾಗಿ ಎರಡನೆಯ ತರಗತಿಗೆ ದಾಖಲಾಗಬಹುದಿತ್ತು. ಆ ಬಗೆಗೆ ಯಾರೂ ಗಮನಹರಿಸಲಿಲ್ಲವಾಗಿ ಒಂದನೇ ತರಗತಿಯಿಂದಲೇ ವಿದ್ಯಾಭ್ಯಾಸ ಆರಂಭಿಸಿದರು. ಮೊದಲಿನಿಂದಲೇ ತರಗತಿಯಲ್ಲಿ ಬುದ್ಧಿವಂತನೆನಿಸಿಕೊಳ್ಳಲು ಇದೂ ಕಾರಣವಾಯಿತು. ಆ ಶಾಲೆಯಲ್ಲಿದ್ದವರು ಇಬ್ಬರು ಶಿಕ್ಷಕರು. ಅವರಲ್ಲಿ ಜಿ. ಜಾರ್ಜ್ ಎನ್ನುವವರು ಮುಖ್ಯೋಪಾಧ್ಯಾಯರು. ಶಾಲೆಯ ಪಕ್ಕದಲ್ಲಿಯೇ

ಅವರ ಮನೆಯಿತ್ತು. ಅವರು ಅವಿವಾಹಿತರಾಗಿದ್ದರು. 'ಪದಬಂಧ' ಬಿಡಿಸುವುದು, ಅರ್ಥಕೋಶಗಳನ್ನು ಅಧ್ಯಯನ ಮಾಡುವುದು ಅವರ ಅಭ್ಯಾಸ. ನಾಯಕರು ಇವರಿಂದ ಬಹಳವಾಗಿ ಉಪಕೃತರಾದರು. ಡಿಕ್ಷನರಿ ನೋಡುವುದನ್ನು ನಾಯಕರಿಗೆ ಕಲಿಸಿದವರಿವರು. ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಹುರಿದುಂಬಿಸಿದವರು. ಒಟ್ಟಿನಲ್ಲಿ ಆಟಪಾಠಗಳ ಜೊತೆಗೆ ಜೀವನದ ಪಾಠವನ್ನೂ ನಾಯಕರಿಗೆ ಕಲಿಸಿದ ಅಚ್ಚುಮೆಚ್ಚಿನ ಗುರು ಇವರು.

ನಾಯಕರು ಮಾಧ್ಯಮಿಕ ಶಾಲೆಗೆ ಸೇರಿದ್ದು ಮೇಗರವಳ್ಳಿಯಲ್ಲಿ. ನಾಲೂರಿಗೆ ಅದು ಎರಡು ಮೈಲಿ ದೂರ. ದಿನವೂ ಎರಡು ಮೈಲಿ ನಡೆಯುವುದನ್ನು ತಪ್ಪಿಸಿಕೊಳ್ಳಲು ಶಾಲೆಗೆ ಅರ್ಧಮೈಲಿ ದೂರದಲ್ಲಿದ್ದ ಬಂಧುಗಳೊಬ್ಬರ ಮನೆಯಲ್ಲಿ ಕೆಲವು ತಿಂಗಳು ಉಳಿದುಕೊಂಡರು. ಆಮೇಲೆ ಸ್ವಲ್ಪಕಾಲ ಕೆಲವು ಹುಡುಗರೊಡನೆ ಸೇರಿಕೊಂಡು ಮೇಗರವಳ್ಳಿಯಲ್ಲಿಯೇ ಮನೆ ಮಾಡಿದರು. ಇದಾವುದೂ ಸರಿಹೋಗದೆ ಮತ್ತೆ ನಾಲೂರಿಗೇ ವಾಪಸ್ಸಾದರು. ಅಂತೂ ದಿನವೂ ಎರಡು ಮೈಲಿ ನಡೆಯುವುದರಿಂದ ತಪ್ಪಿಸಿಕೊಳ್ಳುವುದು ಆಗಲಿಲ್ಲ. ಜೊತೆಗೆ ನಡೆಯಲು ಸಹಪಾಠಿಗಳು ಇರುತ್ತಿದ್ದುದರಿಂದ ನಡೆಯುವುದು ಕಷ್ಟ ಎನಿಸುತ್ತಿರಲಿಲ್ಲ.

ಅನೇಕ ಜನ ಅಧ್ಯಾಪಕರು ಮಾಧ್ಯಮಿಕ ಶಾಲೆಯಲ್ಲಿ ನಾಯಕರ ಮೇಲೆ ಪ್ರಭಾವ ಬೀರಿದ್ದಾರೆ. ಅವರಲ್ಲಿ ಮಂಜು ಭಟ್ಟರು ಮುಖ್ಯರಾದವರು. ಅವರು 'ಲೈಬ್ರರಿ ಟೀಚರ್' ಆಗಿದ್ದರು. ನಾಯಕರ ಓದಿನ ಗೀಳನ್ನು ತೃಪ್ತಿಪಡಿಸಿದವರಿವರು. ಒಮ್ಮೆಗೇ ನಾಲ್ಕಾರು ಪುಸ್ತಕಗಳನ್ನು ಓದಲು ಕೊಟ್ಟು ಪ್ರೋತ್ಸಾಹಿಸುತ್ತಿದ್ದರು. ಆಗೆಲ್ಲ ವಿದ್ಯಾರ್ಥಿಗಳಿಗೆ ಗ್ರಂಥಾಲಯದಿಂದ ಓದಲು ಕೊಡುತ್ತಿದ್ದುದು ವಾರಕ್ಕೆ ಒಂದು ಪುಸ್ತಕ ಮಾತ್ರ. ನಾಯಕರು ಬರೀ ಓದುವುದಷ್ಟೇ ಅಲ್ಲ, ಆ ವೇಳೆಗೆ ಪದ್ಯ ಬರೆಯುವುದನ್ನೂ ರೂಢಿಸಿಕೊಂಡಿದ್ದುದರಿಂದ ಮಂಜು ಭಟ್ಟರಿಗೆ ನಾಯಕರೆಂದರೆ ಅದೇನೋ ಪ್ರೀತಿ, ವಾತ್ಸಲ್ಯ.

ನಾಯಕರು ಮಾಧ್ಯಮಿಕ ಶಾಲೆಯಲ್ಲಿದ್ದ ಕಾಲಕ್ಕೆ 'ಮಕ್ಕಳ ಪುಸ್ತಕ' ತುಂಬ ಹೆಸರುವಾಸಿಯಾಗಿತ್ತು. ಇದರಲ್ಲಿ ನಾಯಕರ ಕಾಗದಗಳೂ, ಕವಿತೆಗಳೂ ಪ್ರಕಟವಾಗುತ್ತಿದ್ದವು. ನಾಯಕರ ಮುದ್ದಾದ ಅಕ್ಷರಗಳಿಗೆ, ಬರವಣಿಗೆಯ ಶೈಲಿಗೆ ಮಾರುಹೋದ ಪತ್ರಿಕೆಯ ಸಂಪಾದಕರು, ಆ ಮಾಸಪತ್ರಿಕೆಯನ್ನು ಒಂದು ವರ್ಷ ಉಚಿತವಾಗಿ ಕಳುಹಿಸಿದ್ದಿದೆ. ನಾಯಕರು 'ಪ್ರಜಾಮತ' ಪತ್ರಿಕೆಯ

'ಬಾಲವನ' ವಿಭಾಗಕ್ಕೆ ಸದಸ್ಯರಾಗಿದ್ದರು. 'ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ' ವಿಭಾಗಕ್ಕೆ ಪ್ರಶ್ನೆಗಳನ್ನು ಕಳುಹಿಸುತ್ತಿದ್ದರು. ಹೀಗಾಗಿ ಅವರ ಹೆಸರು ಪ್ರಜಾಮತ ಪತ್ರಿಕೆಯಲ್ಲಿ ಆಗಾಗ ಕಾಣಸಿಗುತ್ತಿತ್ತು. ನಾಯಕರ ಊರಿನ ಸುತ್ತಮುತ್ತ ಜನಪ್ರಿಯವಾಗಿದ್ದ ಪತ್ರಿಕೆ ಎಂದರೆ 'ತಾಯಿನಾಡು'. ಅದರ 'ಪತ್ರವ್ಯವಹಾರ' ವಿಭಾಗದಲ್ಲಿ ನಾಯಕರು ಆಗಾಗ ಗ್ರಾಮಗಳ ವಿವಿಧ ಕುಂದು–ಕೊರತೆಗಳ ಬಗ್ಗೆ ಬರೆದು ಸುದ್ದಿ ಮಾಡುತ್ತಿದ್ದರು. ರಸ್ತೆ ರಿಪೇರಿ, ಕೆರೆ ದುರಸ್ತಿ ಮುಂತಾಗಿ ಊರಿನವರ ಭಾವನೆಗಳನ್ನು ತಮ್ಮ ಪತ್ರಗಳ ಮುಖೇನ ಹೊರಹಾಕುತ್ತಿದ್ದರು. ನಾಯಕರ ತಾಯಿಯ ಸೋದರಮಾವ ನಾಯಕರಿಗೆ ಬರೆಯಲು ಇಂಥ ಸಾಮಗ್ರಿಗಳನ್ನು ಆಗಾಗ ಒದಗಿಸಿಕೊಡುತ್ತಿದ್ದರು. ಹೀಗೆ ಪತ್ರಿಕೆಗಳಲ್ಲಿ ಬರೆಯುವವರ ಬಗೆಗೆ ಅಲ್ಲಿನ ಜನರಿಗೆ ಅಭಿಮಾನ. ಅಂಥವರನ್ನು ಕವಿಗಳೆಂದು ಕರೆದು ಗೌರವಿಸುತ್ತಿದ್ದರು. ಹೀಗಾಗಿ, ನಾಯಕರು ಮಾಧ್ಯಮಿಕ ಶಾಲೆ ಓದುವ ಕಾಲಕ್ಕೇ 'ಕವಿ' ಎನಿಸಿಕೊಂಡುಬಿಟ್ಟಿದ್ದರು. ಅಷ್ಟೇ ಅಲ್ಲ, ನಾಯಕರು ತೀರ್ಥಹಳ್ಳಿಯಲ್ಲಿದ್ದಾಗ ಬರೆದ ಒಂದು ಪದ್ಯ ಅಂದಿನ ಹೆಸರಾಂತ ವಾರಪತ್ರಿಕೆ 'ಕರ್ಮವೀರ'ದಲ್ಲಿ ಪ್ರಕಟವಾಯಿತು. ಅವರ ಹಳ್ಳಿಯ ಹತ್ತಿರವಿದ್ದ, ಎಲ್ಲರಿಗೂ ಪರಿಚಿತವಾದ 'ಕೌಲೇದುರ್ಗದ ಕೋಟೆ'ಯ ವರ್ಣನೆ ಆ ಕವನದಲ್ಲಿತ್ತು. ಈ ಕವನ ನಾಯಕರಿಗೆ ಸುಲಭವಾಗಿ ಪ್ರಚಾರ ತಂದುಕೊಟ್ಟಿತು. ರಸ್ತೆಯಲ್ಲಿ ತಿರುಗಾಡುವಾಗಲೆಲ್ಲ ಜನ ಇವರ ಕಡೆಗೆ ಕೈತೋರಿಸಿ ಇವರೇ ಆ ಕವನ ಬರೆದವರೆಂದು ಹೇಳುತ್ತಿದ್ದರು. ಇದರಿಂದ ನಾಯಕರ ಪ್ರತಿಷ್ಠೆ ಹೆಚ್ಚಾಯಿತು.

ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾದ ನಾಯಕರು ತೀರ್ಥಹಳ್ಳಿಯ ಪ್ರೌಢಶಾಲೆಗೆ ಸೇರುತ್ತಾರೆ. ಈ ಸಂದರ್ಭದಲ್ಲಿ ಜವಾಬ್ದಾರಿ ಸರಕಾರದ ಚಳವಳಿಯಲ್ಲಿ ಭಾಗಿಯಾಗಿ ಸತ್ಯಾಗ್ರಹ ನಡೆಸುತ್ತಾರೆ. ಗಂಧದಮರ ಕಡಿಯುವ, ಬಗನಿ ಮರಗಳ ಮಡಕೆ ಒಡೆಯುವ ಕೆಲಸ ಮಾಡಿ ಪೊಲೀಸರ ಕಣ್ಣಿಗೆ ಬೀಳುತ್ತಾರೆ. ಅದೇ ವೇಳೆಗೆ ಆರೋಗ್ಯ ಹದಗೆಡುತ್ತದೆ. ಇದನ್ನೇ ನೆಪವಾಗಿಟ್ಟುಕೊಂಡ ಅವರ ತಂದೆ ಉಡುಪಿಗೆ ಕರೆದುಕೊಂಡು ಹೋಗಿ, ಅಲ್ಲಿ ಒಂದು ಮನೆ ಮಾಡಿ ಕೇಳುನಂಬಿಯಾರ್ ಎಂಬ ಪ್ರಸಿದ್ಧ ಆಯುರ್ವೇದ ಪಂಡಿತರಿಂದ ಔಷಧಿ ಕೊಡಿಸುವ ವ್ಯವಸ್ಥೆ ಮಾಡುತ್ತಾರೆ. ಮೂರು ತಿಂಗಳು ಅಲ್ಲಿದ್ದು ಕಾಯಿಲೆ ವಾಸಿ ಮಾಡಿಕೊಳ್ಳುತ್ತಾರೆ.

ಮುಂದೆ ಮೂರು ವರ್ಷಗಳ ಕಾಲ ತೀರ್ಥಹಳ್ಳಿಯ ಪ್ರೌಢಶಾಲೆಯಲ್ಲಿ ಓದಿ ಎಸ್.ಎಸ್.ಎಲ್.ಸಿ. ಮುಗಿಸುತ್ತಾರೆ. ಅಲ್ಲಿ ನಾಯಕರಿಗೆ ಕನ್ನಡ

ಅಧ್ಯಾಪಕರಾಗಿದ್ದವರು ಪಂಡಿತ ನರಸಿಂಹಶಾಸ್ತ್ರಿಗಳು. ಅವರು ಮಾಧ್ಯಮಿಕ ಶಾಲೆಯಲ್ಲೂ ಕೆಲಕಾಲ ನಾಯಕರಿಗೆ ಪಾಠ ಹೇಳಿದ್ದವರು. ಜೊತೆಗೆ ಇವರ ತಂದೆಯ ಸಹಪಾಠಿಯಾಗಿದ್ದವರು. ಆದರ್ಶ ಅಧ್ಯಾಪಕರೆಂದು ಹೆಸರು ಮಾಡಿದವರು. ನಾಯಕರಂಥ ಎಷ್ಟೋ ಎಳೆಯ ಹೃದಯಗಳಲ್ಲಿ ಹೊಂಬೆಳಕು ಮೂಡಿಸಿದವರು. 'ಪ್ರಭಾತಭಾರತ' ಎಂಬ ಕೈಬರಹದ ಪತ್ರಿಕೆಯನ್ನು ಸ್ಥಾಪಿಸಿ ತಮ್ಮ ಮಾರ್ಗದರ್ಶನದಲ್ಲಿ ನಾಯಕರನ್ನೂ ಒಳಗೊಂಡಂತೆ ಅದೆಷ್ಟೋ ವಿದ್ಯಾರ್ಥಿಗಳನ್ನು ತಿದ್ದಿ ಬೆಳೆಸಿದವರು.

ತಮ್ಮ ಹದಿಹರೆಯದ ವಯಸ್ಸಿನಲ್ಲಿಯೇ 'ಬಾಳ್ನೋಟಗಳು' ಎಂಬ ಕಥೆಗಳ ಸಂಕಲನ ಒಂದನ್ನು ನಾಯಕರು ಸಿದ್ಧಪಡಿಸಿದರು. ಅದಕ್ಕೆ ಮುನ್ನುಡಿ ಬರೆದು ಬೆನ್ನುತಟ್ಟಿದವರು ಈ ನರಸಿಂಹಶಾಸ್ತ್ರಿಗಳು. ಈ ಸಂಕಲನವನ್ನು ಧಾರವಾಡದ ಪ್ರತಿಭಾ ಗ್ರಂಥಮಾಲೆಯ ಬಾಲಚಂದ್ರ ಘಾಣೇಕರರು ಪ್ರಕಟಿಸಿದರು. ವಾಸ್ತವವಾಗಿ ಈ ಗ್ರಂಥವನ್ನು ಪ್ರಕಟಿಸಲು ಪ್ರೇರಣೆ ನೀಡಿದವರು ಅ.ನ. ಕೃಷ್ಣರಾಯರು. ಅವರು ಒಮ್ಮೆ ನಾಯಕರ ಊರಿಗೆ ಬಂದಿದ್ದಾಗ "ನನಗೆ ಬರೆಯಬೇಕೆಂಬ ಆಸೆಯಿದೆ. ಏನು ಬರೆಯಲಿ?" ಎಂದು ನಾಯಕರು ಕೇಳುತ್ತಾರೆ. ಅದಕ್ಕೆ ಅವರು "ಸುತ್ತಲಿನ ಬದುಕನ್ನು ಕಣ್ಣುತೆರೆದು ನೋಡು, ಕಂಡದ್ದನ್ನು ಬರಿ" ಎಂದು ಸಲಹೆ ನೀಡುತ್ತಾರೆ. ಅದರಂತೆ ನಾಯಕರು ತಾವು ಕಂಡ ಸತ್ಯಸಂಗತಿಗಳನ್ನು ಬರೆಯುತ್ತಾರೆ. ಪುಸ್ತಕ ಪ್ರಕಟವಾಗಿ ಅದಕ್ಕೆ ಅದ್ಭುತ ಪ್ರಚಾರ ಸಿಗುತ್ತದೆ. ಏಕೆಂದರೆ, ಪುಸ್ತಕದಲ್ಲಿದ್ದ ಕಿರುಗತೆಗಳ ಪಾತ್ರಗಳೆಲ್ಲ ಜೀವಂತವಾಗಿದ್ದವು. ಹೀಗಾಗಿ ಆ ಊರಿನ ಮಠದ ಸ್ವಾಮಿ ಕೆಂಡಕಾರುತ್ತಾರೆ; ನಾಯಕರ ಸಮೀಪ ಬಂಧುವೊಬ್ಬರು ಲಾಯರ್ ನೋಟೀಸ್ ಕೊಡಿಸುತ್ತಾರೆ; ಹೋಟೆಲ್ ನಡೆಸುತ್ತಿದ್ದ ಹುಡುಗಿಯೊಬ್ಬಳು ನಾಯಕರ ಕಾಲು ಮುರಿಸಲು ನೋಡುತ್ತಾಳೆ. ಹೀಗೆ ನಾನಾ ಬಗೆಯ ಪ್ರತಿಕ್ರಿಯೆಗಳು ಉಂಟಾಗುತ್ತವೆ. ಜೊತೆಗೆ ಅನೇಕ ಹಿರಿಯ ಸಾಹಿತಿಗಳು ಪುಸ್ತಕ ಮೆಚ್ಚಿ ಪತ್ರ ಬರೆಯುತ್ತಾರೆ. ಕೆಲವು ಪತ್ರಿಕೆಗಳಲ್ಲಿ ಕೃತಿಯ ಬಗೆಗೆ ಪ್ರೋತ್ಸಾಹಕರ ವಿಮರ್ಶೆಗಳು ಕೂಡ ಪ್ರಕಟವಾಗುತ್ತವೆ. ಇದರಿಂದ ಊರಿನಲ್ಲಿ, ಸುತ್ತಮುತ್ತ ನಾಲ್ಕಾರು ಹಳ್ಳಿಗಳಲ್ಲಿ ನಾಯಕರ ಹೆಸರು ಮನೆಮಾತಾಗುತ್ತದೆ.

ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ನಾಯಕರು ತಮ್ಮ ಹಿಂದೀ ಅಧ್ಯಾಪಕರಾಗಿದ್ದ ಜಗನ್ನಾಥರಾವ್ ಎನ್ನುವವರೊಡನೆ ಸೇರಿ 'ಮಿತ್ರರ ಬಳಗ' ಎಂಬ ಒಂದು ಸಾಂಸ್ಕೃತಿಕ ಸಂಘವೊಂದನ್ನು ಕಟ್ಟಿ ಅನೇಕ ಕಾರ್ಯಕ್ರಮಗಳನ್ನು

ನಡೆಸುತ್ತಾರೆ. ಮಾಸ್ತಿ, ಕಾರಂತ, ಬೇಂದ್ರೆ, ವಿ.ಸೀ., ಅನಕೃ, ಎಂ.ಆರ್. ಶ್ರೀನಿವಾಸಮೂರ್ತಿ, ಭಾರತ ಬಿಂದೂರಾವ್ –ಇಂಥ ಗಣ್ಯ ಮಹನೀಯರೆಲ್ಲ ನಾಯಕರ ಬಳಗದ ಆಹ್ವಾನದ ಮೇರೆಗೆ ತೀರ್ಥಹಳ್ಳಿಗೆ ಬಂದುಹೋಗುತ್ತಾರೆ. ಹೀಗೆ ಒಂದು ಸಾಹಿತ್ಯದ ವಾತಾವರಣವನ್ನೇ ನಾಯಕರು ನಿರ್ಮಾಣ ಮಾಡುತ್ತಾರೆ. ಇದರಿಂದ ನಾಯಕರು ಅನೇಕ ಸಾಹಿತಿಗಳಿಗೆ ಪರಿಚಿತರಾಗಿ ಅವರ ವಿಶ್ವಾಸ, ಪ್ರೀತಿಗೆ ಭಾಜನರಾಗುತ್ತಾರೆ.

ಶಿವಮೊಗ್ಗೆಯಲ್ಲಿ ಎರಡು ವರ್ಷ ಇದ್ದು ಇಂಟರ್‌ಮೀಡಿಯಟ್ ಮುಗಿಸುತ್ತಾರೆ. ನಾಯಕರ ಶ್ರಮದ ಓದಿಗೆ ಇಂಟರ್‌ಮೀಡಿಯಟ್ ಪಾಸು ಮಾಡುವುದೇನೂ ಅಷ್ಟು ಕಷ್ಟವಾಗಲಿಲ್ಲ. ಆದರೆ ಆ ವೇಳೆಗೆ ನಾಯಕರ ತಂದೆ ಆರ್ಥಿಕ ಸಂಕಷ್ಟದಲ್ಲಿ ಸಿಲುಕಿಕೊಂಡದ್ದರಿಂದ ಶಿವಮೊಗ್ಗೆಯಲ್ಲಿದ್ದುಕೊಂಡು ಓದು ಮುಂದುವರಿಸುವುದು ನಾಯಕರಿಗೆ ಕಷ್ಟವಾಯಿತು. ಆಗ ಅವರ ತಾಯಿಯ ಸೋದರಮಾವನವರೊಬ್ಬರು ಆ ಎರಡು ವರ್ಷ ನಾಯಕರಿಗೆ ಪ್ರತೀ ತಿಂಗಳು ಐವತ್ತು ರೂಪಾಯಿ ನೆರವು ನೀಡುತ್ತಾರೆ. ಒಂದು ಅಡಕೆ ಮಂಡಿಗೆ ಅವರು ಹೇಳಿದ್ದುದರಿಂದ, ಪ್ರತೀ ತಿಂಗಳು ಅಲ್ಲಿ ಹೋಗಿ ನಾಯಕರು ಆ ಹಣ ಪಡೆದುಕೊಳ್ಳುತ್ತಿದ್ದರು. ಹೀಗಾಗಿ, ಯಾವ ತೊಂದರೆಯೂ ಇಲ್ಲದೆ ಆ ಎರಡು ವರ್ಷಗಳು ಕಳೆದುಹೋದವು. ಮುಂದೇನು? ಎಂಬ ಪ್ರಶ್ನೆ ಎದುರಾಯಿತು. ಎರಡು ವರ್ಷ ಸಹಾಯ ಮಾಡಿದ್ದ ಬಂಧುಗಳು ಕೈಚೆಲ್ಲಿದರು. ನಾಯಕರ ತಂದೆಯಂತೂ ಮೈಸೂರಿನಲ್ಲಿ ಬಿಟ್ಟು ಮಗನನ್ನು ಓದಿಸುವ ಸ್ಥಿತಿಯಲ್ಲಿ ಇರಲೇ ಇಲ್ಲ. ನಾಯಕರಿಗೆ ದಿಕ್ಕೇ ತೋಚದಾಯಿತು.

## ೬. ಹಾಮಾನಾ ಮುಂದುವರಿದ ಶಿಕ್ಷಣ

ಓದು ಮುಂದುವರಿಸುವ ತಹತಹಿಕೆ. ಕಾಣದಾದ ಉಪಾಯ. ಹೊಳೆಯದ ದಾರಿ. ಕತ್ತಲಲ್ಲಿ ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತಾಯಿತು ನಾಯಕರ ಪರಿಸ್ಥಿತಿ. ಆಗ ಅವರ ನೆರವಿಗೆ ಬಂದವರು ಕಟಪಾಡಿ ಗೋಪಾಲಕೃಷ್ಣ ಕಾಮತ್. ಅವರು ನಾಯಕರ ಕುಟುಂಬದ ಹಿತೈಷಿಯಾಗಿದ್ದರು. ಆಗ ಅವರು ನೆರವಿಗೆ ಬರದಿದ್ದರೆ 'ನಾಯಕರತ್ನ' ಕನ್ನಡಕ್ಕೆ ದಕ್ಕುತ್ತಿರಲಿಲ್ಲ. ಪ್ರತೀ ತಿಂಗಳು ಒಂದುನೂರು ರೂಪಾಯಿ ಕಳುಹಿಸುವುದಾಗಿ ನಾಯಕರಿಗೆ ಅವರು ಭರವಸೆ ಕೊಡುತ್ತಾರೆ. ಮೂರು ವರ್ಷಗಳ ಕಾಲ, ಒಂದು ತಿಂಗಳೂ ತಪ್ಪಿಸದೆ ಹಣ ಕೊಟ್ಟು ತಮ್ಮ ಭರವಸೆಯನ್ನು ಸಾರ್ಥಕಗೊಳಿಸುತ್ತಾರೆ. "ಇದು ನನ್ನ ಬದುಕಿನ ಭಾಗ್ಯವೇ ಸರಿ" ಎನ್ನುವ ನಾಯಕರ ಮಾತಿನಲ್ಲಿ ಕೃತಜ್ಞತೆ ಹೆಪ್ಪುಗಟ್ಟಿದೆ.

ಕಾಮತರ ಕೃಪೆಯಿಂದ ಮೈಸೂರಿಗೆ ಬಂದ ನಾಯಕರು ಮಹಾರಾಜಾ ಕಾಲೇಜು ಸೇರಿ ಅದರ ಹಾಸ್ಟೆಲಿನಲ್ಲಿ ವಾಸ್ತವ್ಯ ಹೂಡುತ್ತಾರೆ. ನಾಯಕರ ಆಪ್ತಮಿತ್ರ ತ.ರಾ.ಸು. ಅವರಿಗೆ ನಾಯಕರು ತತ್ತ್ವಶಾಸ್ತ್ರದ ಆನರ್ಸ್‌ಗೆ ಸೇರಬೇಕೆಂಬ ಇರಾದೆ. ಆದರೆ ಮುಂದಿನ ಜೀವನ ನಿರ್ವಹಣೆಯ ದೃಷ್ಟಿಯಿಂದ ಕನ್ನಡ ಆನರ್ಸ್‌ಗೆ ಸೇರುವುದು ಮೇಲು ಎಂಬುದು ನಾಯಕರ ಇನ್ನೊಬ್ಬ ಮಿತ್ರರ ಅಹವಾಲು. ಏಕೆಂದರೆ ಇಂಟರ್‌ಮೀಡಿಯಟ್ ವಿದ್ಯಾರ್ಥಿಯಾಗಿದ್ದಾಗ ಐಚ್ಛಿಕ ಕನ್ನಡದಲ್ಲಿ ನಾಯಕರಿಗೆ ಒಳ್ಳೆಯ ಅಂಕಗಳು ಲಭಿಸಿದ್ದವು. ಸಹಜವಾಗಿ ವಿದ್ಯಾರ್ಥಿವೇತನ ಸಿಗುತ್ತಿತ್ತು. ಇದು ನಾಯಕರು ಕನ್ನಡ ಆನರ್ಸ್ ಕಡೆಗೆ ವಾಲಲು ಕಾರಣವಾಯಿತು.

ಮಹಾರಾಜಾ ಕಾಲೇಜು ಆ ದಿನಗಳಲ್ಲಿ ನಾನಾ ಚಟುವಟಿಕೆಗಳ ಕೇಂದ್ರವಾಗಿತ್ತು. ಆ ಎಲ್ಲ ಚಟುವಟಿಕೆಗಳಲ್ಲಿ, ಮುಖ್ಯವಾಗಿ ಸಾಹಿತ್ಯಕ ಚಟುವಟಿಕೆಗಳಲ್ಲಿ ನಾಯಕರು ಭಾಗವಹಿಸಲು ಪ್ರಾರಂಭಿಸಿದರು. ಅದರಲ್ಲೂ ಚರ್ಚಾಕೂಟಗಳಲ್ಲಿ ತಪ್ಪದೇ ಪಾಲ್ಗೊಳ್ಳುತ್ತಿದ್ದರು. ಕಾಲೇಜನ್ನೂ, ಕಾಲೇಜು ಹಾಸ್ಟೆಲನ್ನೂ ಪ್ರತಿನಿಧಿಸಿ ಮೊದಲನೆಯ ಅಥವಾ ಎರಡನೆಯ ಬಹುಮಾನವನ್ನು ತಪ್ಪದೇ ಪಡೆಯುತ್ತಿದ್ದರು.

ಕೆ.ವಿ. ಸುಬ್ಬಣ್ಣ ಹಾಸ್ಟೆಲಿನಲ್ಲಿ ನಾಯಕರ ಎದುರು ಕೊಠಡಿಯಲ್ಲಿದ್ದರು. ದಿನದ ಬಹಳ ಹೊತ್ತು ಇಬ್ಬರೂ ಕೂಡಿಯೇ ಇರುತ್ತಿದ್ದರು. ಊಟ–ತಿಂಡಿ ಜೊತೆಯಾಗಿ ಮಾಡುತ್ತಿದ್ದರು. ಏನೇನೋ ಯೋಜನೆಗಳನ್ನು ರೂಪಿಸುತ್ತಿದ್ದರು.

ಇಬ್ಬರೂ ಸೇರಿ ಪ್ರೊಫೆಸರ್ ಎಸ್.ವಿ. ರಂಗಣ್ಣನವರಿಗೆ, ಸಂಪಾದಕರಾಗಿ 'ಬಾಗಿನ' ಎಂಬ ಒಂದು ಅಭಿನಂದನ ಗ್ರಂಥವನ್ನು ಸಿದ್ಧಪಡಿಸಿ ಅರ್ಪಿಸಿದ್ದು ಆ ಕಾಲದ ಅಪೂರ್ವ ಸಂಗತಿ. ಅಭಿನಂದನ ಸಮಾರಂಭಕ್ಕೆ ಮಾಸ್ತಿ ಅವರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಅದು ಔಚಿತ್ಯಪೂರ್ಣವೂ ಆಗಿತ್ತು. ಏಕೆಂದರೆ, ಅಭಿನಂದನ ಗ್ರಂಥಗಳ ಪರಂಪರೆಯನ್ನು ಕನ್ನಡದಲ್ಲಿ ಹುಟ್ಟುಹಾಕಿದವರೇ ಮಾಸ್ತಿ ಅವರು. 'ಶ್ರೀ' ಅವರಿಗೆ ಮಾಸ್ತಿ ಅವರು ಒಪ್ಪಿಸಿದ 'ಸಂಭಾವನೆ'ಯೇ ಆ ಬಗೆಯ ಮೊದಲ ಗ್ರಂಥ. 'ಬಾಗಿನ' ಎರಡನೆಯದು. ಸ್ವತಃ ಕುವೆಂಪು, ವಿ.ಎಲ್. ಡಿಸೋಜಾ ಮುಕ್ತಕಂಠದಿಂದ ಸುಬ್ಬಣ್ಣ ಹಾಗೂ ಹಾಮಾನಾ ಅವರನ್ನು ಹೊಗಳಿದರು.

ಮಹಾರಾಜಾ ಕಾಲೇಜಿನಲ್ಲಿ ಒಂದು ಅಭಿನಂದನಾ ಸಮಾರಂಭ. ಸಂದರ್ಭ ಕುವೆಂಪು ಅವರಿಗೆ ಮೊದಲನೆಯ ಸಾಹಿತ್ಯ ಅಕಾಡೆಮಿ ಬಹುಮಾನ ಬಂದ ಸಂಭ್ರಮ. ವಿದ್ಯಾರ್ಥಿಗಳ ಪರವಾಗಿ ಕುವೆಂಪು ಅವರನ್ನು ಕುರಿತು ಅಭಿನಂದನ ಭಾಷಣ ಮಾಡಲಿದ್ದವರು ಹಾಮಾನಾ. ಹಾಮಾನಾ ಮಾತಿನ ಮೋಡಿಗೆ ಎಲ್ಲರೂ ಬೆರಗಾದರು. ಸ್ವತಃ ಕುವೆಂಪು ಅವರಿಗೇ ಆ ಭಾಷಣ ಮೆಚ್ಚುಗೆಯಾಗಿತ್ತು. ಆ ಸಮಾರಂಭದ ಅಧ್ಯಕ್ಷತೆಯನ್ನು ಕೆ. ಹನುಮಂತಯ್ಯನವರು ವಹಿಸಿದ್ದರು. ಆ ಭಾಷಣ ನಾಯಕರ ಬದುಕಿನ ದಾರಿಯನ್ನೇ ಬದಲಾಯಿಸಿತು.

ಮೈಸೂರಿನಲ್ಲಿ ಎಂ.ಎ. ಅಧ್ಯಯನಕ್ಕಿಲ್ಲದ ವಿಷಯಗಳಲ್ಲಿ, ಬೇರೆ ವಿಶ್ವವಿದ್ಯಾನಿಲಯಗಳಿಗೆ ಹೋಗಿ ಎಂ.ಎ. ಓದಲು ಕೆಲವು ವಿದ್ಯಾರ್ಥಿವೇತನಗಳನ್ನು ವಿಶ್ವವಿದ್ಯಾನಿಲಯ ನೀಡುತ್ತಿತ್ತು. ಈ ನಿಟ್ಟಿನಲ್ಲಿ ಭಾಷಾವಿಜ್ಞಾನದ ವಿಷಯಕ್ಕೆ ವಿದ್ಯಾರ್ಥಿವೇತನ ಇರಲಿಲ್ಲ. ಆದರೂ ನಾಯಕರು ಅರ್ಜಿ ಸಲ್ಲಿಸುತ್ತಾರೆ. ಆಗ ಭಾಷಾವಿಜ್ಞಾನದ ಬೋಧನೆ ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಇತ್ತು. ಡಾ. ಸುನೀತಕುಮಾರ ಚಟರ್ಜಿ ಅಲ್ಲಿ ಪ್ರಾಧ್ಯಾಪಕರಾಗಿದ್ದರು. ನಾಯಕರಿಗೆ ಭಾಷಾವಿಜ್ಞಾನದ ಬಗೆಗೆ ಕುತೂಹಲವಿತ್ತು. ಅವರಿಗೆ ವಿದ್ಯಾರ್ಥಿವೇತನ ದೊರೆಯುವುದು ಸಾಧ್ಯವೇ ಇರಲಿಲ್ಲ. ಏಕೆಂದರೆ ವಿಶ್ವವಿದ್ಯಾನಿಲಯ ಭಾಷಾವಿಜ್ಞಾನವನ್ನು ಪರಿಗಣಿಸಿಯೇ ಇರಲಿಲ್ಲ. ಆದರೂ ವಿಚಿತ್ರ ಘಟಿಸಿ ನಾಯಕರಿಗೆ ವಿದ್ಯಾರ್ಥಿವೇತನ ದೊರಕಿತು.

ನಾಯಕರು ಕಲ್ಕತ್ತಕ್ಕೆ ಹೋಗುವ ವೇಳೆಗೆ ಡಾ. ಸುನೀತಕುಮಾರ್ ಚಟರ್ಜಿಯವರು ವಿಧಾನಪರಿಷತ್ತಿನ ಅಧ್ಯಕ್ಷರಾಗಿದ್ದರು. ಅವರ ಜಾಗದಲ್ಲಿ ಡಾ.

ಸುಕುಮಾರ ಸೇನ್ ಪ್ರಾಧ್ಯಾಪಕರಾಗಿದ್ದರು. ಚಟರ್ಜಿ ಅವರು ಆಗಾಗ ಬಂದು ಕೆಲವು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರಷ್ಟೆ. ಚಟರ್ಜಿ ಅವರು ಕೊಡುತ್ತಿದ್ದ ವಿಶೇಷ ಉಪನ್ಯಾಸಗಳು ನಾಯಕರಿಗೆ ಇಷ್ಟವಾಗುತ್ತಿದ್ದವು. ನಾಯಕರು ಅವರಿಗೆ ನಿಕಟವಾದರು. ಅವರ ಮನೆಯಲ್ಲೇ ಭೇಟಿಯಾಗುವ, ಅವರೊಡನೆ ಕುಳಿತು ಚರ್ಚಿಸುವ ಅವಕಾಶಗಳು ಆಗಾಗ ನಾಯಕರಿಗೆ ಸಿಗುತ್ತಿದ್ದವು.

ಎರಡು ವರ್ಷಗಳಿಗೂ ಹೆಚ್ಚು ಕಾಲ ನಾಯಕರು ಕಲ್ಕತ್ತದಲ್ಲಿದ್ದರು. ಎಂ.ಎ. ಭಾಷಾವಿಜ್ಞಾನ ತರಗತಿಗಳಲ್ಲಿದ್ದುದು ಆರೇಳು ಜನ ವಿದ್ಯಾರ್ಥಿಗಳು ಮಾತ್ರ. ಅವರಲ್ಲಿ ಹಾಮಾನಾ ಒಬ್ಬರೇ ಬಂಗಾಳೇತರ ವಿದ್ಯಾರ್ಥಿ. ಈ ಸಮಯವನ್ನು ನಾಯಕರು ತುಂಬ ಕಷ್ಟಪಟ್ಟು ವ್ಯಾಸಂಗ ಮಾಡಲು ಸದುಪಯೋಗ ಪಡಿಸಿಕೊಳ್ಳುತ್ತಾರೆ. ಅದಕ್ಕೆ ಪ್ರತಿಫಲವಾಗಿ ಪ್ರಪ್ರಥಮ ಸ್ಥಾನ ಪಡೆದು ವಿಶ್ವವಿದ್ಯಾನಿಲಯದ ಚಿನ್ನದ ಪದಕ ಹಾಗೂ ನಗದು ಬಹುಮಾನಕ್ಕೆ ಅರ್ಹರಾಗುತ್ತಾರೆ.

ಭಾಷಾವಿಜ್ಞಾನ ವಿಷಯದಲ್ಲಿ ಉನ್ನತ ಅಧ್ಯಯನಕ್ಕೆಂದು ಅಮೆರಿಕೆಯ ಗೃಹ ಇಲಾಖೆಯ ವಿದ್ಯಾರ್ಥಿವೇತನವೂ, ಫುಲ್‌ಬ್ರೈಟ್ ಪ್ರಯಾಣವೇತನವೂ ನಾಯಕರಿಗೆ ದೊರೆಯುತ್ತವೆ. ಇಂಡಿಯಾನಾ ವಿಶ್ವವಿದ್ಯಾನಿಲಯದಲ್ಲಿ ಎರಡು ವರ್ಷ ಸಂಶೋಧನೆಯಲ್ಲಿ ತೊಡಗುತ್ತಾರೆ. ಒಂದು ವರ್ಷ ಒಂಭತ್ತು ತಿಂಗಳಿಗೆಲ್ಲ ಡಾ. ಫ್ರೆಡ್‌ಹೌಸ್ ಹೋಲ್ಡರ್ ಅವರ ಮಾರ್ಗದರ್ಶನದಲ್ಲಿ ಡಾಕ್ಟರೇಟ್ ಪಡೆಯುತ್ತಾರೆ. ಅವರ ಸಂಶೋಧನೆಯ ವಿಷಯ ವರ್ಣನಾತ್ಮಕ ಭಾಷಾವಿಜ್ಞಾನ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರಗಳಿಗೆ ಸಂಬಂಧಿಸಿದ್ದು. ನಿಬಂಧದ ಶೀರ್ಷಿಕೆ "Kannada literary and Colloquial - A Study of two styles". ಭಾಷಾವಿಜ್ಞಾನದ ಘಟಾನುಘಟಿಗಳಾದ ಡಾ. ವಿ.ಐ. ಸುಬ್ರಮೋಣಿಯಂ, ಡಾ. ಎ.ಕೆ. ರಾಮಾನುಜನ್ ಮತ್ತು ಡಾ. ಎಸ್. ಅಗಸ್ತ್ಯಲಿಂಗಂ ಅವರು ಹೌಸ್‌ಹೋಲ್ಡರ್ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪಡೆದ ಭಾರತೀಯರು. ಡಾ. ಹೌಸ್‌ಹೋಲ್ಡರ್ ತುಂಬ ಅನುಕಂಪೆಯುಳ್ಳ ಗೌರವಾನ್ವಿತ ವ್ಯಕ್ತಿ. ನಾಯಕರ ಒಂದು ವರ್ಷದ ವಿದ್ಯಾರ್ಥಿವೇತನವನ್ನು ಎರಡನೆಯ ವರ್ಷಕ್ಕೂ ಮುಂದುವರಿಸಿದ ಮಹನೀಯ. ನಾಯಕರಿಗೆ ಡಾಕ್ಟರೇಟ್ ಪದವಿ ಬಂದ ಮೇಲೆ ಅಲ್ಲೇ ಕೆಲಸ ಕೊಡಿಸಲು ಹೌಸ್‌ಹೋಲ್ಡರ್ ಉತ್ಸುಕರಾಗಿದ್ದರು. ಆದರೆ ನಾಯಕರು ಅದನ್ನು ಇಷ್ಟಪಡದೆ ಭಾರತಕ್ಕೆ ಮರಳಿ ಬಂದರು. ಕನ್ನಡದ ಕಣ್ಮಣಿಯಾದರು.

## ೭. ಹಾಮಾನಾ ವಿವಿಧ ಹುದ್ದೆ, ಅಧಿಕಾರಗಳಲ್ಲಿ

ಕಲ್ಕತ್ತದಲ್ಲಿ ಭಾಷಾವಿಜ್ಞಾನ ಎಂ.ಎ. ಓದಲು ವಿದ್ಯಾರ್ಥಿವೇತನ ಪಡೆದುಕೊಳ್ಳುವ ಮೊದಲು ನಾಯಕರು ತಮ್ಮ ಕನ್ನಡ ಆನರ್ಸ್ ಪದವಿ ಮುಗಿದ ಮೇಲೆ ಕೆಲಕಾಲ ಅಧ್ಯಾಪಕರಾಗಿದ್ದರು. ಆ ಅಧ್ಯಾಪಕ ಹುದ್ದೆ ದೊರೆತದ್ದೆ ಒಂದು ಸ್ವಾರಸ್ಯಕರ ವಿಷಯ.

ಆನರ್ಸ್ ವಿದ್ಯಾರ್ಥಿಯಾಗಿದ್ದಾಗ ಕುವೆಂಪು ಅವರನ್ನು ಕುರಿತು ಅಭಿನಂದನ ಭಾಷಣ ಮಾಡಿದಾಗ ನಾಯಕರು ಕುಲಪತಿ ವಿ.ಎಲ್. ಡಿಸೋಜಾ ಅವರ ಮನಸ್ಸನ್ನು ಗೆದ್ದಿದ್ದರು. ಅದು ಅವರಿಗೆ ತುಮಕೂರಿನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ಹುದ್ದೆಯನ್ನು ದೊರಕಿಸಿಕೊಟ್ಟಿತು. ಅದು ನಡೆದದ್ದು ಹೀಗೆ: "ನಾಯಕರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕ ಹುದ್ದೆಯೊಂದಕ್ಕೆ ಅರ್ಜಿ ಸಲ್ಲಿಸುತ್ತಾರೆ. ಅವರ ಅಧ್ಯಾಪಕರೊಬ್ಬರು ಕುಲಪತಿಗಳನ್ನು ಮುಖತಃ ಭೇಟಿಯಾಗಲು ಹೇಳುತ್ತಾರೆ. ವಿ.ಎಲ್. ಡಿಸೋಜಾ ಅವರು ಆಗ ಕುಲಪತಿಗಳು. ಆಗ ಕುಲಪತಿಗಳನ್ನು ಕಾಣುವುದು ಈಗಿನಷ್ಟು ಸುಲಭವಾಗಿರಲಿಲ್ಲ. ಆದರೂ ಅವಕಾಶ ಕೋರಿ ಭೇಟಿಯಾಗುತ್ತಾರೆ. ಕುಲಪತಿಗಳು ನಗುತ್ತಲೇ ನಾಯಕರನ್ನು ಸ್ವಾಗತಿಸಿ ಸೌಜನ್ಯದಿಂದ ನಡೆಸಿಕೊಳ್ಳುತ್ತಾರೆ. ಇದು ನಾಯಕರಿಗೆ ಅಚ್ಚರಿಯನ್ನುಂಟುಮಾಡುತ್ತದೆ. ನಾಯಕರು ಕೆಲಸದ ವಿಚಾರವನ್ನು ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ. 'ಯಾಕೆ ಎಂ.ಎ. ಮಾಡುವುದಿಲ್ಲವೇ?' ಎಂಬ ಕುಲಪತಿಗಳ ಪ್ರಶ್ನೆಗೆ ತಮ್ಮ ಆರ್ಥಿಕ ತೊಂದರೆಯನ್ನು ಹೇಳಿಕೊಳ್ಳುತ್ತಾರೆ. 'ಯಾವ ಕ್ಲಾಸಿನಲ್ಲಿ ಪಾಸು ಮಾಡಿದ್ದೀರಿ?' ಎಂದು ಮತ್ತೆ ಕೇಳುತ್ತಾರೆ. ಅದಕ್ಕೆ ನಾಯಕರು 'ಎರಡನೆಯ ದರ್ಜೆಯಲ್ಲಿ. ಈ ಸಲ ಯಾರೂ ಮೊದಲ ದರ್ಜೆ ಪಡೆದಿಲ್ಲ' ಎಂದು ಉತ್ತರಿಸುತ್ತಾರೆ. ಅದಕ್ಕೆ ಅವರು 'ಯಾಕ್ರೀ? ಭಾಷಣ ಎಷ್ಟು ಚೆನ್ನಾಗಿ ಮಾಡುತ್ತೀರಿ, ಪರೀಕ್ಷೆಯಲ್ಲಿ ಬರೆಯುವುದಕ್ಕೇನು? ಆ ದಿನ ಪುಟ್ಟಪ್ಪನವರನ್ನು ಕುರಿತು ಬಹಳ ಚೆನ್ನಾಗಿ ಮಾತನಾಡಿದಿರಿ. ಮುಖ್ಯಮಂತ್ರಿಗಳೂ ಮೆಚ್ಚಿಕೊಂಡರು' ಎಂದು ಹೇಳಿದಾಗ ನಾಯಕರು ಸಂಕೋಚದ ಮುದ್ದೆಯಾಗುತ್ತಾರೆ. ಅವರನ್ನು ನೋಡುತ್ತ 'ಆಗ್ಲಿ, ಹೋಗಿ ಬನ್ನಿ' ಎನ್ನುತ್ತಾರೆ ಡಿಸೋಜಾ. ನಾಯಕರಿಗೆ ಕೆಲಸ ಸಿಗುವ ಯಾವ ನಂಬಿಕೆಯೂ ಇದರಿಂದ ಉಂಟಾಗಿರಲಿಲ್ಲ. ಆದರೆ ಮೂರೇ ದಿನಗಳಲ್ಲಿ ಅವರಿಗೆ ತುಮಕೂರಿನ ಪ್ರಥಮ ದರ್ಜೆ ಕಾಲೇಜಿಗೆ ನೇಮಕ ಮಾಡಿದ ಆಜ್ಞೆ

ಕೈಸೇರುತ್ತದೆ."(ಡಾ. ಪದ್ಮಾಶೇಖರ್ – ಡಾ. ಸೋಮಶೇಖರಗೌಡ, 'ಕನ್ನಡದ ಕಾರಣಿಕ ಹಾಮಾನಾ', ೨೦೧೨, ಪು. ೧೮)

ನಾಯಕರು ತುಮಕೂರಿನಲ್ಲಿ ಅಧ್ಯಾಪಕರಾಗಿದ್ದದ್ದು ಕೇವಲ ಒಂದು ವರ್ಷ ಅಷ್ಟೆ. ಒಂದು ವರ್ಷದ ಅವಧಿಯಲ್ಲಿಯೇ ಅವರು ವಿದ್ಯಾರ್ಥಿಪ್ರಿಯ ಅಧ್ಯಾಪಕರಾಗಿ, ಜನಪ್ರಿಯ ಭಾಷಣಕಾರರಾಗಿ ಕೀರ್ತಿಶಾಲಿಗಳಾದರು. ಇದನ್ನು ಸಹಿಸದ ಇಲಾಖೆಯ ಮುಖ್ಯರಿಂದ ಸಣ್ಣಪುಟ್ಟ ಕಿರುಕುಳಗಳನ್ನು ಎದುರಿಸಬೇಕಾಯಿತು. ಆದರೆ ವಿದ್ಯಾರ್ಥಿಗಳ ವಿಶ್ವಾಸ, ಸಹ ಅಧ್ಯಾಪಕರ ಬೆಂಬಲದಿಂದ ಇದ್ದುದರಲ್ಲಿ ನೆಮ್ಮದಿ ಪಡೆದರು. ಆ ದಿನಗಳನ್ನು ತಮ್ಮ ಬದುಕಿನ ಅತ್ಯಂತ ಸಂತೋಷದ ದಿನಗಳು ಎಂದು ನಾಯಕರು ಭಾವಿಸುತ್ತಾರೆ. ಅವರಿಗೆ ಆಗ ಬರುತ್ತಿದ್ದದ್ದು ತಿಂಗಳಿಗೆ ನೂರ ಇಪ್ಪತ್ತು ರೂಪಾಯಿ ಸಂಬಳ. ಅದರಿಂದ ಪಟ್ಟ ಸುಖವನ್ನು ಮುಂದೆ ಹಲವು ಸಾವಿರ ರೂಪಾಯಿ ಸಂಬಳ ಪಡೆದಾಗಲೂ ಅನುಭವಿಸಲಿಲ್ಲ ಎನ್ನುತ್ತಾರೆ.

ಕಲ್ಕತ್ತದಿಂದ ಹಿಂದಿರುಗಿ ಬಂದ ಮೇಲೆ ನಾಯಕರು ವಿಶ್ವವಿದ್ಯಾನಿಲಯದ ಆದೇಶದ ಮೇರೆಗೆ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿಗೆ ತೆರಳುತ್ತಾರೆ. ಅಲ್ಲಿ ಕೂಡ ಅವರ ಸೇವೆ ಸಂದದ್ದು ಬರೀ ಒಂದೂವರೆ ವರ್ಷ. ನಾಯಕರು ತಮ್ಮ ಇಂಟರ್‌ಮೀಡಿಯಟ್ ತರಗತಿಗಳನ್ನು ಅಭ್ಯಾಸ ಮಾಡಿದ್ದು ಈ ಕಾಲೇಜಿನಲ್ಲಿಯೇ. ಆಗ ಅದು ಪ್ರಥಮ ದರ್ಜೆ ಕಾಲೇಜಾಗಿತ್ತು.

ಶಿವಮೊಗ್ಗದಿಂದ ನಾಯಕರು ಮೈಸೂರಿನ ಮಹಾರಾಜಾ ಕಾಲೇಜಿಗೆ ಬಂದರು. ತಾವು ಆನರ್ಸ್ ಪದವಿ ಪಡೆದ ಅದೇ ಹೆಸರಾಂತ ಕಾಲೇಜಿಗೆ ಅಧ್ಯಾಪಕರಾಗಿ ಬಂದದ್ದು ಅವರಿಗೆ ಹೆಮ್ಮೆಯ ವಿಷಯವಾಗಿತ್ತು. ಡಿಎಲ್‌ಎನ್, ದೇಜಗೌ, ಪರಮೇಶ್ವರ ಭಟ್ಟ ಮುಂತಾದವರು ನಾಯಕರಿಗೆ ಗುರುಗಳಾಗಿದ್ದವರು. ಈಗ ಅವರ ಸಹೋದ್ಯೋಗಿಯಾಗಿ ಕೆಲಸ ಮಾಡುವ ಅವಕಾಶ ದೊರೆತದ್ದು ನಾಯಕರಿಗೆ ಬಹಳ ಸಂತೋಷವನ್ನುಂಟುಮಾಡಿತ್ತು. ಮೈಸೂರಿನ ಸಾಹಿತ್ಯ, ಸಂಸ್ಕೃತಿಯ ಅವಿಭಾಜ್ಯ ಅಂಗವಾದರು ಅಲ್ಲಿಂದ ಮುಂದೆ ನಾಯಕರು. ಅಮೆರಿಕೆಯ ಉದ್ಯೋಗವನ್ನೂ ಬೇಡವೆಂದು ಮೈಸೂರನ್ನು ಅಪ್ಪಿಕೊಂಡ ನಾಯಕರು ಮುಂದೆ ತಮ್ಮ ಇಡೀ ಜೀವನವನ್ನು ಇಲ್ಲಿಯೇ ಬದುಕಿದರು.

೧೯೬೦ರ ವೇಳೆಗೆ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇಲಾಖೆಗಳು ಕುವೆಂಪು ಪ್ರಣೀತ ಮಾನಸಗಂಗೋತ್ರಿ ಕೇಂದ್ರದಲ್ಲಿ ಸ್ಥಾಪಿತವಾದವು. ಆಗ ಕನ್ನಡ ಸ್ನಾತಕೋತ್ತರ ವಿಭಾಗಕ್ಕೆ ಆಚಾರ್ಯ ತೀ.ನಂ.ಶ್ರೀ. ಅವರು ಮುಖ್ಯಸ್ಥರಾಗಿದ್ದರು. ಅಲ್ಲಿಗೆ ನಾಯಕರು ಮಹಾರಾಜಾ ಕಾಲೇಜಿನಿಂದ ವರ್ಗವಾಗಿ ಬಂದರು. ಸ್ವಲ್ಪ ದಿವಸಗಳು ಗಂಗೋತ್ರಿಯಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ ನಾಯಕರು ವಿಶೇಷ ಸಂಶೋಧನೆಗೆಂದು ಅಮೆರಿಕಾಕ್ಕೆ ತೆರಳುತ್ತಾರೆ.

೧೯೬೪ರಲ್ಲಿ ಅಮೆರಿಕಾದಿಂದ ಡಾಕ್ಟರೇಟ್ ಪಡೆದು ವಾಪಸ್ಸಾದ ನಾಯಕರು ತಮ್ಮ ವೃತ್ತಿಜೀವನದಲ್ಲಿ ಉನ್ನತಿಯನ್ನು ಸಾಧಿಸುತ್ತಾ ಸಾಗಿದರು. ೧೯೬೫ರಲ್ಲಿ ಭಾಷಾವಿಜ್ಞಾನದ ರೀಡರ್ ಆಗಿ ಪದೋನ್ನತಿ ಪಡೆದರು. ೧೯೬೮ರಲ್ಲಿ ಕನ್ನಡ ಪ್ರಾಧ್ಯಾಪಕರಾದರು. ಜೊತೆಗೆ ಭಾಷಾವಿಜ್ಞಾನದ ಪ್ರಾಧ್ಯಾಪಕರೆಂದೂ ವಿಶ್ವವಿದ್ಯಾನಿಲಯ ಅವರಿಗೆ ಆದೇಶವಿತ್ತಿತು. ನಾಯಕರ ಹೆಸರು ವಿದ್ವತ್ ಪ್ರಪಂಚದಲ್ಲಿ ಆ ವೇಳೆಗೆ ಜನಜನಿತವಾಯಿತು. ೧೯೭೯ರಲ್ಲಿ ನಾಯಕರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡರು.

ಹದಿನೈದು ವರ್ಷಗಳ ಸುದೀರ್ಘ ಕಾಲ ನಿರ್ದೇಶಕರಾಗಿದ್ದ ನಾಯಕರು ತ್ರಿವಿಕ್ರಮನಂತೆ ಬೆಳೆದರು. ಅಧ್ಯಯನ ಸಂಸ್ಥೆಯನ್ನು ಒಂದು ಮಿನಿ ವಿಶ್ವವಿದ್ಯಾನಿಲಯ ಎನ್ನುವಷ್ಟರಮಟ್ಟಿಗೆ ಬೆಳೆಸಿದರು. ಆ ಸಮಯದಲ್ಲಿ ಅವರಿಗೆ ಬೆನ್ನೆಲುಬಾಗಿದ್ದ ದೇಜಗೌ ಅವರು ಕುಲಪತಿಯಾಗಿದ್ದದ್ದು ನಾಯಕರ ಯೋಜನೆಗಳೆಲ್ಲ ಕಾರ್ಯರೂಪಕ್ಕಿಳಿಯಲು ಸಾಧ್ಯವಾಯಿತು. ದೇಜಗೌ ಅನಂತರ ಬಂದ ಕುಲಪತಿಗಳ ಜತೆಗೂ ನಾಯಕರು ಉತ್ತಮ ಸಂಬಂಧವಿರಿಸಿಕೊಂಡರು. ಇದರಿಂದ ಸಂಸ್ಥೆ ಉತ್ತರೋತ್ತರವಾಗಿ ಬೆಳೆಯಿತು. ನಾಡಿನಾದ್ಯಂತ ನಾಯಕರ ವರ್ಚಸ್ಸು ವೃದ್ಧಿಸಿತು.

ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಾಯಕರು ನಿರ್ದೇಶಕರಾಗಿದ್ದ ಕಾಲ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದು. ಅವರ ಆಡಳಿತವೈಖರಿಗೆ ಅವರೇ ಸಾಕ್ಷಿ. ಅವರ ಶಿಸ್ತು, ದುಡಿಮೆ, ಸಮಯಪ್ರಜ್ಞೆ ಇತರರಿಗೆ ಮಾದರಿಯಾಗಿದ್ದವು. ಅವರು ಯಾವ ಕೆಲಸವನ್ನೂ ಬರೀ ಬಾಯಲ್ಲಿ ಹೇಳಿ ಸುಮ್ಮನಾಗುತ್ತಿರಲಿಲ್ಲ. ಸ್ವತಃ ಮಾಡಿ ತೋರಿಸುತ್ತಿದ್ದರು. ಅವರ ಜೊತೆಯಲ್ಲಿ ದುಡಿಯುವುದೇ ಸಹೋದ್ಯೋಗಿಗಳಿಗೆ ಸಂಭ್ರಮವಾಗಿತ್ತು. ನಾಯಕರು ಸಹೋದ್ಯೋಗಿಗಳನ್ನು, ಕಚೇರಿ ಸಿಬ್ಬಂದಿಯನ್ನು, ವಿದ್ಯಾರ್ಥಿಗಳನ್ನು, ಸಂಶೋಧಕರನ್ನು ಅತ್ಯಂತ

ಪ್ರೀತಿಯಿಂದ ನಡೆಸಿಕೊಳ್ಳುತ್ತಿದ್ದರು. ಎಲ್ಲರನ್ನೂ ಒಟ್ಟೊಟ್ಟಿಗೆ ಬೆಳೆಸುತ್ತಿದ್ದರು. ಕಷ್ಟಪಟ್ಟು ಕೆಲಸ ಮಾಡುವ ಯಾರನ್ನೂ ಅವರು ಗೌರವಿಸುತ್ತಿದ್ದರು. ಎಲ್ಲರಿಗೂ ಅವಕಾಶ ಕಲ್ಪಿಸುತ್ತಿದ್ದರು. ಒಟ್ಟಿನಲ್ಲಿ ಅವರಿದ್ದ ಕಾಲದ ಅಧ್ಯಯನ ಸಂಸ್ಥೆ ಕನ್ನಡ ಕಾಯಕದ ದೀಕ್ಷೆ ಪಡೆದಿತ್ತು.

ಅಧ್ಯಯನ ಸಂಸ್ಥೆಯ ನೌಕರರ್ಯಾರೂ ನಾಯಕರನ್ನು 'ಬಾಸ್' ಎಂದುಕೊಂಡಿರಲಿಲ್ಲ. ತಮ್ಮ ತಮ್ಮ ಕುಟುಂಬದ ಯಜಮಾನನಂತೆ ಗೌರವಿಸುತ್ತಿದ್ದರು. ಮರ್ಯಾದೆಯಿಂದ ನಡೆದುಕೊಳ್ಳುತ್ತಿದ್ದರು. ಯಾರೂ ನಾಯಕರ ಮುಂದೆ ಜೋರಾಗಿ ಮಾತಾಡುತ್ತಿರಲಿಲ್ಲ. ಅವರೊಡನೆ ಮಾತಾಡುವ ಅವಕಾಶ ಸಿಗುವುದೇ ಧನ್ಯತೆ ಎನಿಸುತ್ತಿತ್ತು. ಅವರೊಡನೆ ಮಾತಾಡಿದ ಮೇಳೆ ಇಡೀ ದಿವಸ ಮನಸ್ಸು ಪ್ರಫುಲ್ಲವಾಗಿರುತ್ತಿತ್ತು. ಇದು ಒಬ್ಬಿಬ್ಬರದಲ್ಲ, ಸಂಸ್ಥೆಯ ಎಲ್ಲ ನೌಕರರ ಅನುಭವ. ಒಟ್ಟಿನಲ್ಲಿ ನಾಯಕರು ಎಲ್ಲರಿಗೂ ಬೇಕಾದವರಾಗಿದ್ದರು. ಎಲ್ಲರ ಕಷ್ಟಸುಖಗಳನ್ನು ಸಹನೆಯಿಂದ ಕೇಳಿ ಪರಿಹಾರ ಸೂಚಿಸಿ, ಸಾಧ್ಯವಾದಷ್ಟು ಸಹಾಯ ಮಾಡಿ ಅನುಕೂಲ ಕಲ್ಪಿಸುತ್ತಿದ್ದರು.

ಅಧ್ಯಯನ ಸಂಸ್ಥೆ ನಾಯಕರಿಗೆ ಬರೀ ಕೆಲಸ ಮಾಡುವ ಕಚೇರಿಯಾಗಿರಲಿಲ್ಲ. ಸ್ವಂತ ಮನೆಗಿಂತ ಹೆಚ್ಚಾಗಿ ಅದನ್ನು ಜತನಗೊಳಿಸುತ್ತಿದ್ದರು. ಕಿಟಕಿ, ಬಾಗಿಲು, ಫ್ಯಾನು, ದೀಪ, ನಲ್ಲಿ –ಹೀಗೆ ಎಲ್ಲದರ ಬಗೆಗೂ ಗಮನಹರಿಸುತ್ತಿದ್ದರು. ಅರೆಕೊರೆಗಳನ್ನು ಆ ಕ್ಷಣದಲ್ಲಿ ಜವಾನರಿಗೆ ಹೇಳಿ ಸರಿಪಡಿಸುತ್ತಿದ್ದರು. ವಿದ್ಯಾರ್ಥಿಗಳು ಗೋಡೆಗಳಿಗೆ ಕಾಲುಗಳನ್ನು ಆನಿಸಿ ನಿಲ್ಲದಂತೆ ಸೂಚಿಸುತ್ತಿದ್ದರು. ಗುಲಾಬಿ ತೋಟ ಬೆಳೆಸಿ 'ಇಲ್ಲಿನ ಗುಲಾಬಿ ನೋಡಿ ಸವಿಯುವುದಕ್ಕಷ್ಟೆ' ಎಂದು ಎಚ್ಚರಿಕೆಯ ಫಲಕ ಹಾಕಿಸಿದ್ದರು.

ಸಮಯ ಪರಿಪಾಲನೆಯಲ್ಲಿ ನಾಯಕರಿಗೆ ಸಾಟಿಯಾದ ಆಡಳಿತಗಾರರಿಲ್ಲ. ಬೆಳಿಗ್ಗೆ ಎಂಟೂವರೆಗೆಲ್ಲ ಕಚೇರಿಗೆ ಬರುತ್ತಿದ್ದರು. ಒಂದೂವರೆಗೆ ಸರಿಯಾಗಿ ಊಟಕ್ಕೆ ಹೊರಡುತ್ತಿದ್ದರು. ಗಡಿಯಾರ ನೋಡದೆಯೂ ಸಮಯ ಸೂಚಿಸಬಹುದಾದಷ್ಟು ಖಚಿತವಾದ, ಕರಾರುವಾಕ್ಕಾದ ಚಲನೆ ಅವರದು. ಸಂಸ್ಥೆಗೆ ಬರುತ್ತಿದ್ದವರಲ್ಲಿ ನಾಯಕರೇ ಮೊದಲು; ವಾಪಸ್ಸು ಹೋಗುತ್ತಿದ್ದವರಲ್ಲಿ ಅವರೇ ಕಡೆಯವರು. ನಾಯಕರು ನಡೆಸುವ ಕಾರ್ಯಕ್ರಮಗಳು ಸಕಾಲಕ್ಕೆ ತಪ್ಪದೇ ಪ್ರಾರಂಭವಾಗುತ್ತಿದ್ದವು. ಯಾವ ಅತಿಥಿಯೂ ನಿಗದಿತ ವೇಳೆಗೆ ಬರಲೇಬೇಕು. ಬರದಿದ್ದರೆ ಅವರಿಗಾಗಿ ಕಾಯುವ ಪ್ರಮೇಯವೇ ಇರಲಿಲ್ಲ.

ನಾಯಕರ ವ್ಯಕ್ತಿತ್ವಕ್ಕೊಂದು ಪ್ರಭಾವಳಿ ಇತ್ತು. ನಾಯಕರ ಕಾರಣಕ್ಕಾಗಿಯೇ ಸಂಸ್ಥೆಗೆ ಬಂದ ಉದ್ಯೋಗಿಗಳಿದ್ದಾರೆ. ನಾಯಕರ ಪಾಠ ಕೇಳಲೆಂದೇ ಕನ್ನಡಕ್ಕೆ, ಭಾಷಾವಿಜ್ಞಾನಕ್ಕೆ ಬಂದ ಎಂ.ಎ. ವಿದ್ಯಾರ್ಥಿಗಳಿದ್ದಾರೆ. ಇಷ್ಟೆಲ್ಲಾ ಇದ್ದೂ ನಾಯಕರು ನಿರ್ಲಿಪ್ತರಾಗಿದ್ದು ಅಚ್ಚರಿ ಹುಟ್ಟಿಸುತ್ತಿದ್ದರು.

ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ, ಭಾಷಾವಿಜ್ಞಾನ, ಜಾನಪದ, ದಕ್ಷಿಣ ಭಾರತೀಯ ಅಧ್ಯಯನ ಮುಂತಾದ ಎಂ.ಎ. ಸ್ನಾತಕೋತ್ತರ ಪದವಿ ತರಗತಿಗಳು ನಡೆಯುತ್ತಿದ್ದವು. ಅನೇಕ ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳು ಬೆಳಗಿನ ವೇಳೆ ನಡೆಯುತ್ತಿದ್ದವು. ಒಂದು ತರಗತಿಯೂ ತಪ್ಪದ ಹಾಗೆ, ತಪ್ಪಿಸದ ಹಾಗೆ ಅಧ್ಯಾಪಕರಿಗೆ ತಾಕೀತು ಮಾಡಿದ್ದರು. ಹಾಗೆಯೇ ಸಂಸ್ಥೆಯ ಇತರ ಉದ್ಯೋಗಿಗಳೂ ಕೆಲಸದ ವೇಳೆಯಲ್ಲಿ ತಪ್ಪದೇ ಹಾಜರಿರಬೇಕಿತ್ತು. ಗ್ರಂಥಸಂಪಾದನ ವಿಭಾಗ, ಹರಿದಾಸ ಸಾಹಿತ್ಯ ವಿಭಾಗ, ಸಾಹಿತ್ಯ ಚರಿತ್ರೆ ಯೋಜನೆ, ಎಪಿಗ್ರಾಫಿಯಾ ಕರ್ನಾಟಕ, ವಿಶ್ವಕೋಶ ವಿಭಾಗ, ಭಾಷಾಂತರ ವಿಭಾಗ –ಹೀಗೆ ಎಲ್ಲ ವಿಭಾಗಗಳ, ಯೋಜನೆಗಳ ನೌಕರರು ಜೇನುಹುಳುಗಳಂತೆ ನಾಯಕರ ಆಡಳಿತದ ಅವಧಿಯಲ್ಲಿ ಕಾರ್ಯೋನ್ಮುಖರಾಗಿರುತ್ತಿದ್ದರು.

೧೯೭೪ರಲ್ಲಿ ಹಿರಿಯ ಪ್ರಾಧ್ಯಾಪಕರಾಗಿ ವಿಶ್ವವಿದ್ಯಾನಿಲಯದಿಂದ ಆದೇಶಿತರಾದ ನಾಯಕರು, ತಮ್ಮ ಪಾಠಪ್ರವಚನಗಳ ಜೊತೆಗೆ, ಬರವಣಿಗೆಯ ಜೊತೆಗೆ, ಆಡಳಿತ ನಿರ್ವಹಣೆಯ ಜೊತೆಗೆ ವಿಶ್ವವಿದ್ಯಾನಿಲಯದ ಅನೇಕ ಗುರುತರ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಕಲಾಮಂಡಳಿಯ ಡೀನ್ ಆಗಿದ್ದರು, ಅಕಾಡೆಮಿಕ್ ಕೌನ್ಸಿಲ್, ಸೆನೆಟ್, ಸಿಂಡಿಕೇಟ್ ಸಮಿತಿಗಳ ಸದಸ್ಯರಾಗಿದ್ದರು. ಅಲ್ಲೆಲ್ಲ ನಾಯಕರ ನಿರ್ದಾಕ್ಷಿಣ್ಯ ಮಾತುಗಳಿಗೆ ತುಂಬ ಗೌರವ ಇರುತ್ತಿತ್ತು.

ಆಗ ಕರ್ನಾಟಕದ ರಾಜ್ಯಪಾಲರು, ಅಶೋಕನಾಥ ಬ್ಯಾನರ್ಜಿ. ಅವರ ಕಾರ್ಯದರ್ಶಿ ಕೋಟಿಲಿಂಗನಗೌಡ. ಅವರು ೧೯೮೪ರ ಅಕ್ಟೋಬರ್ ತಿಂಗಳ ಮೊದಲ ವಾರದಲ್ಲಿ ಒಂದು ದಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕಾರ್ಯನಿರತರಾಗಿದ್ದ ನಾಯಕರಿಗೆ ದೂರವಾಣಿಯ ಮೂಲಕ ಕರೆ ಮಾಡುತ್ತಾರೆ: 'ಒಡನೆಯೇ ಬಂದು ರಾಜ್ಯಪಾಲರನ್ನು ನೀವು ನೋಡಬೇಕು' ಎಂಬುದು ಅವರ ಕರೆಯ ವಿಷಯ. 'ಎರಡು ದಿವಸ ಸಾಧ್ಯವಾಗುವುದಿಲ್ಲ. ಪೂರ್ವನಿಯೋಜಿತ ಕಾರ್ಯಕ್ರಮಗಳಿವೆ. ಒಡನೆಯೇ ಬರುವುದು

ಕಷ್ಟವಾಗುತ್ತದೆ' ಎಂದು ನಾಯಕರು ತಿಳಿಸುತ್ತಾರೆ. ರಾಜ್ಯಪಾಲರ ಕರೆಗೆ ಹೀಗೆ ಹೇಳುವ ಅಧಿಕಾರಿಗಳು ಸಿಗಲು ಸಾಧ್ಯವೇ? ನಾಯಕರ ಮಾತಿಗೆ ಗೌಡರು ಬೇಸರ ವ್ಯಕ್ತಪಡಿಸುವುದಿಲ್ಲ. ಬದಲಾಗಿ ಮೂರು ದಿವಸಗಳ ನಂತರ ಬಂದು ಕಾಣುವಂತೆ ಅವರೇ ಸಮಯವನ್ನು ನಿಗದಿಪಡಿಸುತ್ತಾರೆ.

ಮೂರು ದಿವಸ ಕಳೆದು ರಾಜಭವನಕ್ಕೆ ಹೋದಾಗ ಗೌಡರು ಅವರನ್ನು ಸ್ವಾಗತಿಸಿ ಗುಲಬರ್ಗ ವಿಶ್ವವಿದ್ಯಾನಿಲಯಕ್ಕೆ ನಾಯಕರನ್ನು ಕುಲಪತಿಯನ್ನಾಗಿ ಮಾಡಲು ರಾಜ್ಯಪಾಲರು ಆಸಕ್ತರಾಗಿರುವ ವಿಷಯವನ್ನು ತಿಳಿಸುತ್ತಾರೆ. ನಾಯಕರಿಗೆ ಆಶ್ಚರ್ಯವಾಗುತ್ತದೆ. ನಾಯಕರಿಗೆ ಮೈಸೂರನ್ನು ಬಿಡುವುದು, ಅಧ್ಯಯನ ಸಂಸ್ಥೆಯ ಯೋಜನೆಗಳನ್ನು ಅರ್ಧದಲ್ಲಿ ಕೈಬಿಡುವುದು, ಗುಲ್ಬರ್ಗದಂಥ ವಿಶ್ವವಿದ್ಯಾನಿಲಯಕ್ಕೆ ಹೋಗುವುದು ಇಷ್ಟವಾಗುವುದಿಲ್ಲ. ಒಬ್ಬ ಪ್ರಾಧ್ಯಾಪಕನಾದವನಿಗೆ ಸಲ್ಲಬಹುದಾದ ಅತ್ಯುನ್ನತ ಗೌರವ ಒಂದು ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆ. ಅದು ನಾಯಕರಿಗೆ ತಿಳಿಯದ ವಿಷಯವೇನೂ ಆಗಿರಲಿಲ್ಲ.

ರಾಜ್ಯಪಾಲರು ಸುಮಾರು ಐವತ್ತು ನಿಮಿಷ ಈ ವಿಷಯವಾಗಿ ನಾಯಕರೊಡನೆ ಮಾತುಕತೆ ಆಡುತ್ತಾರೆ. ನಾಯಕರಿಗೆ ಕುಲಪತಿ ಹುದ್ದೆ ಇಷ್ಟವಿಲ್ಲ ಎಂಬುದನ್ನು ತಿಳಿದು ಅವರಿಗೆ ಅತ್ಯಾಶ್ಚರ್ಯವಾಗುತ್ತದೆ. "ಇದೇನು ಹೀಗೆ ಹೇಳುತ್ತೀರಿ? ಕುಲಪತಿಗಳಾಗಲು ಸಾಲುಗಟ್ಟಿ ನಿಂತಿದ್ದಾರೆ" ಎನ್ನುತ್ತಾರೆ. ಅದಕ್ಕೆ ನಾಯಕರು "ಇರಬಹುದು. ನನ್ನ ಅದೃಷ್ಟದಲ್ಲಿ ನಾನು ಕುಲಪತಿ ಆಗಬೇಕೆಂದಿದ್ದರೆ ಆಗುತ್ತೇನೆ, ಆಗಲಿಲ್ಲ, ಇಲ್ಲ. ನನಗೆ ಅದರಿಂದ ವ್ಯಥೆಯಿಲ್ಲ. ಅವಕಾಶ ದೊರೆತರೆ ನಾನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕುಲಪತಿಯಾಗಬಹುದು. ನನಗಿಂತ ಹತ್ತುಪಾಲು ಹೆಚ್ಚು ಅರ್ಹತೆ ಹೊಂದಿದವರೇ ಕುಲಪತಿಗಳಾಗಲಿಲ್ಲ. ಅದರಿಂದ ಅವರಿಗೇನಾಯಿತು" ಎಂದು ಸಮಜಾಯಿಷಿ ನೀಡುತ್ತಾರೆ. ಆಗ ಮತ್ತೆ ಬ್ಯಾನರ್ಜಿ ಹೇಳುತ್ತಾರೆ: "ಈ ಮೊದಲು ಎರಡು ವಿಶ್ವವಿದ್ಯಾನಿಲಯಗಳ ಪ್ಯಾನಲ್‌ನಲ್ಲಿಯೂ ನಿಮ್ಮ ಹೆಸರಿತ್ತು. ಈಗ ಮೂರನೆಯ ಬಾರಿಗೆ ಬಂದಿದೆ. ನಿಮ್ಮನ್ನು ಆಯ್ಕೆ ಮಾಡಬೇಕೆಂದು ಒಂದು ಸಲವೂ ಯಾರೂ ನನಗೆ ಹೇಳಲಿಲ್ಲ. ಮಿಕ್ಕವರ ಬಗೆಗೆ ಬೇಕಾದಷ್ಟು ಒತ್ತಡ ಬರುತ್ತಿತ್ತು. ಆದ್ದರಿಂದ ನಾನೇ ನಿಮ್ಮ ವಿಷಯದಲ್ಲಿ ಕುತೂಹಲಗೊಂಡು ನಿಮ್ಮನ್ನು ಆಯ್ಕೆ ಮಾಡಿದ್ದೇನೆ. ನೀವು ನನ್ನ ಮಗನಂತೆ, ಚಿಕ್ಕವರು. ನನ್ನ ಮಾತು ಕೇಳಿ, ನಾಳೆ ನೀವು ಮೈಸೂರು ವಿಶ್ವವಿದ್ಯಾನಿಲಯಕ್ಕೆ

ಕುಲಪತಿಗಳಾಗುತ್ತೀರೋ ಇಲ್ಲವೋ, ಈಗಂತೂ ಆ ಪ್ರಶ್ನೆ ಇಲ್ಲ. ಮುಂದೊಂದು ದಿನ ನೀವು ಅಲ್ಲಿ ಆದರೆ, ಆರಂಭದಿಂದಲೇ ನಿಮ್ಮ ಪರವಾದ ಹಾಗೂ ವಿರುದ್ಧವಾದ ಎರಡು ಗುಂಪುಗಳಾಗುತ್ತವೆ. ಅವು ನಿಮ್ಮನ್ನು ಕೆಲಸ ಮಾಡಲು ಬಿಡುವುದಿಲ್ಲ. ಗುಲಬರ್ಗಾದಲ್ಲಾದರೆ ಹಾಗಲ್ಲ. ಹೊಸ ಖಾಲಿ ಹಲಗೆಯ ಮೇಲೆ ನೀವು ನಿಮ್ಮ ಕೆಲಸವನ್ನು ಆರಂಭಿಸಬಹುದು" ಎಂಬುದು ಬ್ಯಾನರ್ಜಿ ಅವರ ಹಿತೋಪದೇಶವಾಗಿತ್ತು. ಇಷ್ಟೆಲ್ಲ ಕೇಳಿದ ಮೇಲೂ ನಾಯಕರು ಯಾವುದೇ ಒಪ್ಪಿಗೆ ಕೊಡದೆ ಒಂದೆರಡು ದಿವಸಗಳಲ್ಲಿ ಅಭಿಪ್ರಾಯ ತಿಳಿಸುವುದಾಗಿ ಹೇಳಿ ಮೈಸೂರಿಗೆ ವಾಪಸ್ಸಾಗುತ್ತಾರೆ. ಆತ್ಮೀಯರೊಡನೆ ಮೈಸೂರಿನಲ್ಲಿ ಈ ವಿಷಯ ಪ್ರಸ್ತಾಪಿಸಿ ಸಲಹೆ ಕೇಳುತ್ತಾರೆ. ಅವರೆಲ್ಲ ಏಕಾಭಿಪ್ರಾಯದಿಂದ ಬ್ಯಾನರ್ಜಿ ಅವರ ಮಾತುಗಳನ್ನೇ ಎತ್ತಿಹಿಡಿಯುತ್ತಾರೆ. ಆಗ ನಾಯಕರು ಅನಿವಾರ್ಯವಾಗಿ ಎಲ್ಲರ ಒತ್ತಾಸೆಯಂತೆ ಗುಲಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಯನ್ನು ಸ್ವೀಕರಿಸುತ್ತಾರೆ.

ಬ್ಯಾನರ್ಜಿ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾ ನಾಯಕರು ಹೇಳುವ ಮಾತುಗಳಿವು: "ನನ್ನಂಥ ಸಂಕೋಚ ಪ್ರವೃತ್ತಿಯ ಹಳ್ಳಿಹುಡುಗನೊಬ್ಬ ಯಾರ ಶಿಫಾರಸ್ಸು, ಪ್ರಭಾವ ಇಲ್ಲದೆ ಒಂದು ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಯನ್ನು ಪಡೆದದ್ದು ಪವಾಡವೇ ಸರಿ. ಬಹುಶಃ ಅಶೋಕನಾಥ ಬ್ಯಾನರ್ಜಿ ಅವರಂಥ ಕುಲಾಧಿಪತಿಗಳು ಇಲ್ಲದಿದ್ದರೆ ಈ ಪವಾಡ ಸಾಧ್ಯವಾಗುತ್ತಿರಲಿಲ್ಲ."

ನಾಯಕರನ್ನು ಅಭಿನಂದಿಸಲು ಮಿತ್ರರೆಲ್ಲ ಸೇರಿ ಮಹಾರಾಜಾ ಕಾಲೇಜು ಶತಮಾನೋತ್ಸವ ಸಭಾಂಗಣದಲ್ಲಿ ಒಂದು ಸಮಾರಂಭ ಏರ್ಪಡಿಸುತ್ತಾರೆ. ಅದರ ಅಧ್ಯಕ್ಷತೆಯನ್ನು ವಹಿಸಿದವರು ನ್ಯಾಯಮೂರ್ತಿ ರಾಮಾ ಜೋಯಿಸ್ ಅವರು. ಅಭಿನಂದನೆಗೆ ಉತ್ತರ ನೀಡುತ್ತಾ ನಾಯಕರು ಆಡಿದ ಮಾತುಗಳಿವು: "ನನ್ನ ಮನಸ್ಸಿಗೆ ಸಮಾಧಾನವಾಗುವ ಹಾಗೆ ಕೆಲಸ ಮಾಡಲು ಸಾಧ್ಯವಾಗುವವರೆಗೆ ನಾನು ಅಲ್ಲಿರುತ್ತೇನೆ. ಸಾಧ್ಯವಾಗದಿದ್ದಾಗ ಬಿಟ್ಟು ಬರುತ್ತೇನೆ. ನನ್ನ ಅಧಿಕಾರವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆ."

ಕುಲಪತಿಯಾಗಿ ಎರಡು ವರ್ಷಗಳಲ್ಲಿ ಗುಲಬರ್ಗಾ ವಿಶ್ವವಿದ್ಯಾನಿಲಯಕ್ಕೆ ಒಂದು ಹೊಸ ಆಯಾಮವನ್ನೇ ಕಲ್ಪಿಸುತ್ತಾರೆ. ಹೊಸ ಹೊಸ ಕಟ್ಟಡಗಳು ತಲೆ ಎತ್ತುತ್ತವೆ. ಶಿಕ್ಷಣದಲ್ಲಿ ನವಶಖೆ ಪ್ರಾರಂಭವಾಗುತ್ತದೆ. ಹೊಸಬೆಳಕು ಮೂಡುತ್ತದೆ. ಸಹೋದ್ಯೋಗಿಗಳು, ಅಧ್ಯಾಪಕರು, ವಿದ್ಯಾರ್ಥಿಗಳು ನಾಯಕರಂಥವರನ್ನು ಕುಲಪತಿಯಾಗಿ ಪಡೆದದ್ದಕ್ಕೆ ಸಂತೋಷಪಡುತ್ತಾರೆ.

ವಿಶ್ವವಿದ್ಯಾಲಯದಲ್ಲಷ್ಟೇ ಅಲ್ಲ, ಆ ಪ್ರಾಂತದಲ್ಲಿಯೇ ನಾಯಕರು, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ವಾತಾವರಣವನ್ನು ಸೃಷ್ಟಿ ಮಾಡುತ್ತಾರೆ.

ದುರ್ದೈವವಶಾತ್ ಒಂದು ಇಂಜಿನಿಯರಿಂಗ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಬಹಿರಂಗಗೊಂಡು, ಮರುಪರೀಕ್ಷೆ ನಡೆಸಬೇಕಾಗಿ ಬಂತು. ತಮ್ಮ ಆಡಳಿತದ ಅವಧಿಯಲ್ಲಿ ಹೀಗಾದದ್ದಕ್ಕೆ ನಾಯಕರು ಘಾಸಿಗೊಳ್ಳುತ್ತಾರೆ. ಅದನ್ನು ಮರೆತು ಸುಮ್ಮನಿರದೆ, ಅದರ ಜವಾಬ್ದಾರಿಯ ನೈತಿಕ ಹೊಣೆಹೊತ್ತು ಕುಲಪತಿಯ ಸ್ಥಾನಕ್ಕೇ ರಾಜೀನಾಮೆ ಕೊಟ್ಟು, ನೈತಿಕತೆಯ ಹೊಸ ಇತಿಹಾಸಕ್ಕೆ ಮುನ್ನುಡಿ ಬರೆಯುತ್ತಾರೆ. ಅನೇಕ ತಿಂಗಳುಗಳವರೆಗೆ ರಾಜ್ಯಪಾಲರು ನಾಯಕರ ರಾಜೀನಾಮೆಯನ್ನು ಅಂಗೀಕರಿಸದೆ, ವಾಪಸ್ಸು ಪಡೆಯುವಂತೆ ಕೇಳಿಕೊಳ್ಳುತ್ತಾರೆ. ನಾಯಕರು ತಮ್ಮ ಪಟ್ಟು ಸಡಿಲಿಸುವುದಿಲ್ಲ. ರಜಾ ಹಾಕಿ ಕೂರುತ್ತಾರೆ. ಕೊನೆಗೆ ವಿಧಿಯಿಲ್ಲದೆ ರಾಜೀನಾಮೆ ಅಂಗೀಕೃತವಾಗುತ್ತದೆ.

ಆನಂತರವೂ ಒಂದೆರಡು ವಿಶ್ವವಿದ್ಯಾನಿಲಯಗಳಿಗೆ ಕುಲಪತಿ ಆಯ್ಕೆ ಸಂದರ್ಭದಲ್ಲಿ ನಾಯಕರ ಮೇಲೆ ಅವರಿಗೆ ಪರಮಾಪ್ತರಾಗಿದ್ದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಒತ್ತಡ ಹಾಕುತ್ತಾರೆ. ಅದಾವುದಕ್ಕೂ ನಾಯಕರು ಮಣಿಯುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ತಮ್ಮ ಪ್ರಾಧ್ಯಾಪಕ ಹುದ್ದೆಗೆ ವಾಪಸ್ಸಾಗುತ್ತಾರೆ. ನಿರ್ದೇಶಕರಾಗಿರಿ ಎಂಬ ಮೈಸೂರು ವಿ.ವಿ. ಕುಲಪತಿ ವೈ.ಪಿ. ರುದ್ರಪ್ಪನವರ ಮನವಿಗೂ ನಾಯಕರು ಒಪ್ಪುವುದಿಲ್ಲ.

ವೃತ್ತಿಜೀವನದ ಕೊನೆಯ ಮೂರು ವರ್ಷ ನಾಯಕರು ಪಾಠ ಹೇಳುವುದರಲ್ಲಿ ತೃಪ್ತಿಪಟ್ಟುಕೊಳ್ಳುತ್ತಾರೆ. ನಿವೃತ್ತಿಯ ದಿನವೂ ಅವರ ತರಗತಿಯನ್ನು ತಪ್ಪಿಸಲಿಲ್ಲ. ವಾಸ್ತವವಾಗಿ ಶೈಕ್ಷಣಿಕ ವರ್ಷದ ಕೊನೆಯವರೆಗೆ ನಾಯಕರು ಮುಂದುವರಿಯಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ತಮ್ಮ ಹುಟ್ಟು ದಾಖಲಾತಿಯ ಪ್ರಕಾರ ಅರವತ್ತು ತುಂಬಿದ ದಿನವೇ ಅಂದರೆ ೧೯೯೧ರ ಫೆಬ್ರವರಿ ಐದರಂದು ನಿವೃತ್ತರಾಗುತ್ತಾರೆ. ಅಲ್ಲಿಗೆ ಮಾದರಿ ವೃತ್ತಿಜೀವನದ ಒಂದು ಯುಗ ಅಂತ್ಯವಾಯಿತು.

## ೮. ಹಾಮಾನಾ ತಜ್ಞತೆಯ ಕ್ಷೇತ್ರಗಳು

ಮೂಲತಃ ಹಾಮಾನಾ ಅವರು ಹೆಸರಾಂತ ಭಾಷಾವಿಜ್ಞಾನಿ. ಭಾಷಾವಿಜ್ಞಾನ ಅವರ ಆದ್ಯತೆಯ ತಜ್ಞ ವಿಷಯಗಳಲ್ಲೊಂದು. ಕನ್ನಡ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಅನೇಕ ಜನ ಪ್ರತಿಭಾವಂತರು, ಪ್ರಾಧ್ಯಾಪಕರು, ಸಂಶೋಧಕರು, ಬೇರೆ ಬೇರೆ ವಿಷಯತಜ್ಞರು ಕೆಲಸ ಮಾಡಿದ್ದಾರೆ. ಎಚ್.ಎಸ್. ಬಿಳಿಗಿರಿ, ಎ.ಕೆ. ರಾಮಾನುಜನ್, ಡಿ.ಎನ್. ಶಂಕರಭಟ್, ಯು.ಪಿ. ಉಪಾಧ್ಯಾಯ, ಆರ್.ಸಿ. ಹಿರೇಮಠ್, ಕೆ. ಮರಿಯಪ್ಪ ಭಟ್, ರಾ.ಯ. ಧಾರವಾಡಕರ್, ಕೆ. ಕುಶಾಲಪ್ಪಗೌಡ, ಜೆ.ಎಸ್. ಕುಳ್ಳಿ, ವಿಲಿಯಂ ಮಾಡ್ತ, ಬಿ.ಬಿ. ರಾಜಪುರೋಹಿತ್, ಎಸ್.ಎನ್. ಶ್ರೀಧರ್, ಚಿದಾನಂದಮೂರ್ತಿ, ಹಂಪನಾ, ಸಂಗಮೇಶ ಸವದತ್ತಿಮಠ, ಕೆ. ಕೆಂಪೇಗೌಡ –ಹೀಗೆ ಪಟ್ಟಿ ಬೆಳೆಸಬಹುದು. ಇವರ ಸಾಲಿನಲ್ಲಿ ತಮ್ಮ ವರ್ಚಸ್ಸು, ಪ್ರಭಾವ, ವ್ಯಕ್ತಿತ್ವದಿಂದ ಢಾಳಾಗಿ ಕಾಣಿಸಿಕೊಳ್ಳುವವರು ಡಾ. ಹಾ.ಮಾ. ನಾಯಕರು.

ಭಾಷಾವಿಜ್ಞಾನಕ್ಕೆ ನಾಯಕರ ಕೊಡುಗೆ ಗಹನವಾದುದು ಮತ್ತು ಗಣನೀಯವಾದುದು. ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಭಾಷಾವಿಜ್ಞಾನಕ್ಕೆ ಸಂಬಂಧಿಸಿದಂತೆ ಮರೆಯದೆ ಹೆಸರಿಸಲೇ ಬೇಕಾದವರು ಹಾ ಮಾ ನಾಯಕರು. ಭಾಷಾವಿಜ್ಞಾನದಲ್ಲಿ ಕೃಷಿ ಮಾಡಿದ, ಮಾಡುತ್ತಿರುವ ಯಾರೂ ನಾಯಕರ ಈ ಕ್ಷೇತ್ರದ ಸಾಧನೆಯನ್ನು ಕಡೆಗಣಿಸುವಂತಿಲ್ಲ.

ಮೊದಲನೆಯದಾಗಿ, ನಾಯಕರು ಬಹುವಿಷಯ ತಜ್ಞರಷ್ಟೇ ಅಲ್ಲ; ಬಹುಭಾಷಾ ಕೋವಿದರೂ ಹೌದು. ಅವರಿಗೆ ಪ್ರಮುಖ ದ್ರಾವಿಡ ಭಾಷೆಗಳೆಲ್ಲ ಗೊತ್ತಿದ್ದವು. ತಮಿಳು, ತೆಲುಗು, ಮಲೆಯಾಳಂ ಭಾಷೆಗಳಲ್ಲಿ ವ್ಯವಹರಿಸಬಲ್ಲವರಾಗಿದ್ದರು. ಹಿಂದಿ, ಮರಾಠಿ, ಬೆಂಗಾಲಿ ಭಾಷೆಗಳು ಅವರಿಗೆ ಪರಿಚಿತವಿದ್ದವು. ಇನ್ನು ಇಂಗ್ಲಿಷ್ ಹಾಗೂ ಸಂಸ್ಕೃತ ಭಾಷೆಗಳ ಅವರ ಜ್ಞಾನ ಯಾರಿಗೂ ಎರಡನೆಯದಾಗಿರಲಿಲ್ಲ. ಪ್ರಪಂಚದ ಬಹುತೇಕ ರಾಷ್ಟ್ರಗಳನ್ನು ನಾಯಕರು ಸಂದರ್ಶಿಸಿದ್ದರು. ಅಂದರೆ ವಿಶ್ವದ ಎಲ್ಲ ಪ್ರಧಾನ ಭಾಷೆಗಳ, ಸಮಾಜದ, ಸಂಸ್ಕೃತಿಯ ಅರಿವು ಅವರಿಗಿತ್ತು. ಇದು ಅವರ ಬರವಣಿಗೆಗೆ ಹೆಚ್ಚು ಇಂಬು ಕೊಡುತ್ತಿತ್ತು.

ಮುಖ್ಯವಾಗಿ ಮೂರು ನೆಲೆಗಳಲ್ಲಿ ಡಾ. ಹಾಮಾನಾ ಅವರ ಭಾಷಾವಿಜ್ಞಾನ ಕೊಡುಗೆಯನ್ನು ಪರಿಭಾವಿಸಬಹುದು:

೧. ಆಡಳಿತಗಾರರಾಗಿ ನಾಯಕರು ಭಾಷಾವಿಜ್ಞಾನಕ್ಕೆ ಬುನಾದಿ ಹಾಕಿದ್ದು.

೨. ಅಧ್ಯಾಪಕರಾಗಿ, ಸಂಶೋಧಕರಾಗಿ ಭಾಷಾವಿಜ್ಞಾನ ಬೆಳೆಸಿದ್ದು.

೩. ಲೇಖಕರಾಗಿ ಭಾಷಾವಿಜ್ಞಾನ ವಿಷಯದ ಹರಹನ್ನು ಹೆಚ್ಚಿಸಿದ್ದು.

ಹಾಮಾನಾ ಅವರು ಮನಸ್ಸು ಮಾಡಿರದಿದ್ದರೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭಾಷಾವಿಜ್ಞಾನದ ಹೆಸರೇ ಕೇಳಿಬರುತ್ತಿರಲಿಲ್ಲವೇನೋ. ಪ್ರೊ. ದೇಜಗೌ ಅವರ ಒತ್ತಾಸೆ ಪಡೆದು ಅರವತ್ತರ ದಶಕದಲ್ಲಿಯೇ ಮಹಾರಾಜಾ ಕಾಲೇಜಿನಲ್ಲಿ ಭಾಷಾವಿಜ್ಞಾನ ಬೋಧನೆಗೆ ನಾಂದಿ ಹಾಡಿದರು. ತಮ್ಮ ಪಾಠ ಪ್ರವಚನದಿಂದ ವಿದ್ಯಾರ್ಥಿಗಳನ್ನು ಸೆಳೆದರು. ಭಾಷಾವಿಜ್ಞಾನದಂಥ ವಿಷಯ ಪದವಿ ಮಟ್ಟದಲ್ಲಿ ಅಧ್ಯಯನಕ್ಕೆ ಸಿಗಲು ಕಾರಣರಾದರು. ಮುಂದೆ ಅವರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಮೇಲೆ ೧೯೭೧ರಲ್ಲಿ ಭಾಷಾವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಅವಕಾಶ ಕಲ್ಪಿಸಿದರು. ಅಲ್ಲಿಯವರೆಗೆ ಭಾಷಾವಿಜ್ಞಾನದಲ್ಲಿ ಎಂ.ಎ. ಪದವಿ ಪಡೆಯುವುದು ಸುಲಭಸಾಧ್ಯವಾಗಿರಲಿಲ್ಲ. ಅದನ್ನು ದಕ್ಕಿಸಿಕೊಳ್ಳಲು ದೂರದ ಪುಣೆಯ ಡೆಕ್ಕನ್ ಕಾಲೇಜಿಗೋ, ಮದರಾಸಿನ ಅಣ್ಣಾಮಲೈ ವಿಶ್ವವಿದ್ಯಾನಿಲಯಕ್ಕೋ ಅಥವಾ ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೋ ಹೋಗಬೇಕಿತ್ತು.

ವಿಭಾಗವನ್ನು ತೆರೆದದ್ದು ಮಾತ್ರವಲ್ಲ, ಅದು ಸ್ವಯಂಪೂರ್ಣವಾಗಿ ಕಾರ್ಯನಿರ್ವಹಿಸಲು ಬೇಕಾದ ಎಲ್ಲ ಸಾಧನ–ಸವಲತ್ತುಗಳನ್ನೂ ಒದಗಿಸಿಕೊಟ್ಟದ್ದು ನಾಯಕರ ಕಾರ್ಯದಕ್ಷತೆಗೆ ನೇರ ಸಾಕ್ಷಿ. ಈ ಹೊಸ ವಿಷಯಕ್ಕೆ ಬೇಕಾದ ಪಠ್ಯಕ್ರಮ, ಪರೀಕ್ಷಾ ಮಂಡಳಿ, ಅಧ್ಯಯನ ಮಂಡಳಿ, ಸಮರ್ಥ ಅಧ್ಯಾಪಕರ ನೇಮಕಾತಿ ಇತ್ಯಾದಿ ಎಲ್ಲ ಶೈಕ್ಷಣಿಕ ಜವಾಬ್ದಾರಿಗಳನ್ನೂ ನಾಯಕರು ನಿರ್ವಹಿಸಿದರು. ಭಾಷಾವಿಜ್ಞಾನಕ್ಕೆ ನೇರವಾಗಿ ಸಂಬಂಧಿಸಿದಂತೆ ಸಂಶೋಧನಾ ಯೋಜನೆಗಳನ್ನು, ಫೆಲೋಶಿಪ್‌ಗಳನ್ನು ಕಲ್ಪಿಸಿದರು. ನಾಯಕರ ಕಾರಣದಿಂದಾಗಿ ಹೀಗೆ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭಾಷಾವಿಜ್ಞಾನ ಬೇರೂರಿತು. ಇಂದು ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಇಲ್ಲಿ ಕಾರ್ಯನಿರತರಾಗಿದ್ದಾರೆ.

ಅಧ್ಯಾಪಕ ವೃತ್ತಿಯಲ್ಲಿ ನಾಯಕರು ಹೆಚ್ಚಾಗಿ ಬೋಧಿಸಿದ್ದು ಭಾಷಾವಿಜ್ಞಾನವನ್ನೇ. ಅವರ ಕಾರಣಕ್ಕಾಗಿಯೇ ವಿದ್ಯಾರ್ಥಿಗಳು ಭಾಷಾವಿಜ್ಞಾನವನ್ನು ಕನ್ನಡ ಎಂ.ಎ.ಯಲ್ಲೂ ಐಚ್ಛಿಕವಾಗಿ ಆಯ್ಕೆ

ಮಾಡಿಕೊಳ್ಳುತ್ತಿದ್ದರು. ಭಾಷಾವಿಜ್ಞಾನ ವಿಷಯ ಬೋಧನೆಯಲ್ಲಿ ಅವರು ಸಿದ್ಧಹಸ್ತರಾಗಿದ್ದರು. ತರಗತಿಯಲ್ಲಿ ಎಂದೂ ವಾಗಾಡಂಬರಕ್ಕೆ ಅವರು ಎಡೆಕೊಡುತ್ತಿರಲಿಲ್ಲ. ತುಂಬ ಸರಳ ಹಿತಮಿತ ವಿವರಣೆ ಅವರ ವಿಷಯಮಂಡನೆಯಲ್ಲಿ ಇರುತ್ತಿತ್ತು. ಅವರ ರೂಪ, ವೇಷಭೂಷಣ, ಮೋಹಕ ಅಭಿವ್ಯಕ್ತಿ ಶೈಲಿ ವಿದ್ಯಾರ್ಥಿಗಳನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿತ್ತು. ಉಪನ್ಯಾಸಗಳಲ್ಲಿ ಅವರ ಪಾಂಡಿತ್ಯದ ಆಳ, ಪರಾಮರ್ಶನ ವ್ಯಾಪ್ತಿ ಗೋಚರವಾಗುತ್ತಿತ್ತು. ಒಟ್ಟಿನಲ್ಲಿ ನಾಯಕರ ಬೋಧನೆ ಯಾವಾಗಲೂ ಆಕರ್ಷಕವೂ, ಉಪಯುಕ್ತವೂ ಆಗಿರುತ್ತಿತ್ತು. ನಾಯಕರ ನೆನಪಿನ ಶಕ್ತಿ ಅಗಾಧವಾದುದು. ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಹೆಸರು ಹೇಳಿ ಗುರುತಿಸುವಂಥ ಸ್ಮರಣೆ ಅವರಿಗಿತ್ತು. ಇದರಿಂದ ವಿದ್ಯಾರ್ಥಿಗಳು ಪುಳಕಿತರಾಗುತ್ತಿದ್ದರು. ಯಾವ ವಿದ್ಯಾರ್ಥಿಗೂ ನಾಯಕರು ಹಗುರವಾಗಿ ವರ್ತಿಸಲು ಅವಕಾಶ ಕೊಡುತ್ತಿರಲಿಲ್ಲ. ಎಷ್ಟೇ ಆತ್ಮೀಯತೆ ತೋರಿಸಿದರೂ ಒಂದು ಅಂತರವನ್ನು ಕಾಯ್ದುಕೊಳ್ಳುತ್ತಿದ್ದರು. ಹುಸಿ ಜನಪ್ರಿಯತೆಯ ಯಾವ ಗಿಮಿಕ್‌ಗಳನ್ನು ನಾಯಕರು ತರಗತಿಯಲ್ಲಿ ಬಳಸುತ್ತಿರಲಿಲ್ಲ. ಅವರ ವೃತ್ತಿನಿಷ್ಠೆ, ತರಗತಿಯ ಸಿದ್ಧತೆ, ಪಾಠ ಮಾಡುವ ರೀತಿ, ವೈಚಾರಿಕ ನಿಲುವು, ನೇರ ಮಾತುಗಾರಿಕೆ, ಸರಳ ನಿರಾಡಂಬರ ನಡವಳಿಕೆ, ಆತ್ಮೀಯತೆಗಳು ಅವರ ವಿದ್ಯಾರ್ಥಿಗಳಿಗೆ ಮೋಹಕ ಗುಣಗಳಾಗಿದ್ದವು. ಅವರೊಬ್ಬ ಆದರ್ಶ ಪ್ರಾಚಾರ್ಯ ಎಂಬುದು ಎಲ್ಲರ ಒಕ್ಕೊರಲಿನ ಅಭಿಪ್ರಾಯ.

ನಾಯಕರ ಸಂಶೋಧನೆ ಕನ್ನಡ ಭಾಷಾವಿಜ್ಞಾನ ಇತಿಹಾಸದ ಮೈಲಿಗಲ್ಲು. ವಿವರಣಾತ್ಮಕ ಭಾಷಾವಿಜ್ಞಾನ ಸಂಶೋಧನೆಯಲ್ಲಿ ಮಾದರಿ ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. 'Kannada Literary and Colloquial - A Study of two styles' (ಗ್ರಂಥಸ್ಥ ಮತ್ತು ಗ್ರಾಮ್ಯ ಕನ್ನಡ– ಶೈಲಿಗಳ ಅಧ್ಯಯನ, ೧೯೬೭) ಅವರ ಅಪೂರ್ವ ಸಂಶೋಧನಾ ಕೃತಿ. ಇದಕ್ಕಿಂತ ಒಂದೈದು ವರ್ಷ ಮೊದಲಿಗೆ ಬಂದದ್ದು ಹಿರೇಮಠರ 'The structure of Kannada' (ಕನ್ನಡದ ರಚನೆ–೧೯೬೧). ಇವೆರಡೂ ಆ ಕಾಲಕ್ಕೆ ವರ್ಣನಾತ್ಮಕ ಭಾಷಾವಿಜ್ಞಾನದ ಎರಡು ವಿಶ್ಲೇಷಣಾ ಸಾಧ್ಯತೆಯ ಮಾದರಿಗಳು. ಮುಂದಿನ ಪೀಳಿಗೆಗೆ ಒದಗಿಸಿಕೊಟ್ಟ ಆಕರ ಕೃತಿಗಳು.

ಹಾಮಾನಾ ಅವರ ಅಂತರ್‌ಶಿಸ್ತೀಯ ತಜ್ಞತೆಗೆ ಅವರು ನೀಡಿದ ಸಂಶೋಧನಾ ಮಾರ್ಗದರ್ಶನವೇ ನಿದರ್ಶನ. ಭಾಷಾವಿಜ್ಞಾನ, ಕನ್ನಡ,

ಜಾನಪದ, ಮಾನವಶಾಸ್ತ್ರ, ತತ್ವಶಾಸ್ತ್ರ, ಮನೋವಿಜ್ಞಾನ, ಇತಿಹಾಸ, ವಿಮರ್ಶೆ, ಮೀಮಾಂಸೆ –ಮುಂತಾದ ಅನೇಕ ವಿಷಯಗಳನ್ನು ಕುರಿತ ಸಂಶೋಧನೆಗಳಿಗೆ ನಾಯಕರು ಪಿಎಚ್.ಡಿ.ಗಾಗಿ ಮಾರ್ಗದರ್ಶನ ಮಾಡಿದ್ದಾರೆ. ಈ ಎಲ್ಲ ವಿಷಯಗಳ ಮೇಲೆ ಅವರಿಗಿದ್ದ ಪರಿಣತಿ ಪ್ರಶ್ನಾತೀತವಾದುದಾಗಿತ್ತು. ಇಂಥ ವೈವಿಧ್ಯ ವಿಷಯಗಳನ್ನಾಧರಿಸಿ ಕನ್ನಡ ಸಾಹಿತ್ಯದ ಹೆಸರಾಂತ ಲೇಖಕರು ನಾಯಕರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿಗೆ ಭಾಜನರಾಗಿದ್ದಾರೆ.

ಭಾಷಾವಿಜ್ಞಾನಕ್ಕೆ ನೇರವಾಗಿ ಸಂಬಂಧಿಸಿದಂತೆ ನಾಯಕರು ಮಾರ್ಗದರ್ಶನ ನೀಡಿರುವ ಸಂಶೋಧನಾ ವಿಷಯಗಳೆಂದರೆ: 'A descriptive analysis of the Irula dialect (Dr. K. Kempegowda, 1974), 'A Descriptive analysis of Havyaka dialect (Dr. Chandrashekhara Bhat, 1979), 'Experimental investigation of the organisation of linguistic performance with Special reference to Tamil' (Dr. V. Balasubramanian, 1980), 'Kannada in Mysore City - A Survey' (Dr. Somashekara Gowda, 1987)' ಮತ್ತು ಕನ್ನಡದಲ್ಲಿ ಅಭಿವ್ಯಕ್ತಿ–ಒಂದು ಶೈಲಿ ವೈಜ್ಞಾನಿಕ ಅಧ್ಯಯನ' (ಡಾ. ಪಂಡಿತಾರಾಧ್ಯ).

ನಾಯಕರು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದ ರೀತಿ ತುಂಬ ವಿಶಿಷ್ಟವಾದುದು. ಸಂಶೋಧಕರಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಮುಕ್ತ ಅವಕಾಶ ಕೊಡುತ್ತಿದ್ದರು. ತಮ್ಮ ಅಭಿಪ್ರಾಯ ಅಥವಾ ಸೂಚನೆಗಳನ್ನು ತಿಳಿಸುತ್ತಿದ್ದರೇ ವಿನಃ ಒತ್ತಾಯಪೂರ್ವಕವಾಗಿ ಹೇರುತ್ತಿರಲಿಲ್ಲ. ನಾಯಕರ ಬಳಿಗೆ ಚರ್ಚಿಸಲು ಹೋಗುವ ಮುನ್ನ ಸಂಶೋಧಕನಾದವನು ಸಕಲ ಸಿದ್ಧತೆ ಮಾಡಿಕೊಂಡು ಪರಾಮರ್ಶನ ಪರಿಕರಗಳನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕಿತ್ತು. ನಾಯಕರು ಸಂಶೋಧಕರು ಗಮನಿಸದಿದ್ದ ಆಕರಗಳನ್ನು ತಿಳಿಸುತ್ತಿದ್ದರು. ತಮ್ಮ ಕೈಕೆಳಗೆ ಕೆಲಸ ಮಾಡುವ ಸಂಶೋಧಕ ವಿಷಯಗಳ ಸಂಪೂರ್ಣ ಮಾಹಿತಿ ಅವರಲ್ಲಿರುತ್ತಿತ್ತು. ಆ ವಿಷಯಗಳ ಬಗೆಗೆ ಏನೇ ಮಾಹಿತಿ ಅವರಿಗೆ ದೊರೆತರೂ ಅದನ್ನು ಗುರುತು ಹಾಕಿಕೊಂಡು ಬಂದು ಆಯಾ ಸಂಶೋಧಕರಿಗೆ ಕೊಡುತ್ತಿದ್ದರು. ಯಾವುದೇ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸುವುದು, ಸಂಬಂಧಿಸಿದ ಎಲ್ಲ ಮಾಹಿತಿಯನ್ನು ಹೆಕ್ಕಿ ತೆಗೆಯುವುದು ನಾಯಕರ ಜಾಯಮಾನ. ಅವರು ಬರೆಯುವ ಒಂದು

ಲೇಖನವಿರಬಹುದು ಅಥವಾ ಮಾಡುವ ಒಂದು ಭಾಷಣವಿರಬಹುದು ಎಲ್ಲವೂ ಈ ಬಗೆಯ ಸಮಗ್ರತೆಯ ಶಿಸ್ತಿಗೆ ಬದ್ಧವಾಗಿರುತ್ತಿದ್ದವು. ಎಲ್ಲ ಸಂಶೋಧಕರಿಂದಲೂ ನಾಯಕರು ಇದನ್ನು ನಿರೀಕ್ಷಿಸುತ್ತಿದ್ದರು.

ಭಾಷಾವಿಜ್ಞಾನಕ್ಕೆ ಸಂಬಂಧಿಸಿದಂತೆ ನಾಯಕರ ಬರವಣಿಗೆ ಬೆರಳೆಣಿಕೆಗೆ ಸಿಗುವಂಥದು. ಅವರ ಪ್ರಕಟಿತ ಏಕೈಕ ಭಾಷಾವಿಜ್ಞಾನ ಕೃತಿ ಅವರ ಸಂಶೋಧನಾ ನಿಬಂಧ: 'Kannada literary and Colloquial - A Study of two styles' ಇಂಗ್ಲಿಷ್‌ನಲ್ಲಿದೆ. ಕನ್ನಡದ ಗ್ರಂಥಸ್ಥ ಹಾಗೂ ಗ್ರಾಮ್ಯ ಭಾಷಾ ಶೈಲಿಗಳ ತುಲನಾತ್ಮಕ ಹಾಗೂ ವಿವರಣಾತ್ಮಕ ಅಧ್ಯಯನ ಇದರಲ್ಲಿದೆ. ಕನ್ನಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ಪ್ರಾರಂಭದಲ್ಲಿ ಸಂದ ಮಹತ್ಕೊಡುಗೆ ಇದು. ಕನ್ನಡದ ಎರಡು ಶೈಲಿಗಳನ್ನು ಹೋಲಿಸಿ ವಿಶ್ಲೇಷಿಸುವಂಥ ಮೊದಲ ಪ್ರಯತ್ನ ಇಲ್ಲಿ ನಾಯಕರದು. ಭಾಷಾವೈಜ್ಞಾನಿಕ ನಿಲುವುಗಳು, ನಿರ್ಣಯಗಳು, ಅವಕ್ಕೆ ಪೂರಕವಾಗಿ ಒದಗಿಸಿರುವ ಪುರಾವೆಗಳು, ಗೊಂದಲರಹಿತ ವಿಷಯ ಮಂಡನೆ, ನಿರೂಪಣೆ, ಭಾಷಾವಿಜ್ಞಾನ ಬೆಳವಣಿಗೆಯ ಕೆಲವು ಪ್ರಮುಖ ಘಟ್ಟಗಳ ಪ್ರಸ್ತಾವ ಇವೆಲ್ಲ ಈ ಕೃತಿಯ ವೈಶಿಷ್ಟ್ಯಗಳು.

ಸಾಮಾನ್ಯವಾಗಿ ಭಾಷಾವಿಜ್ಞಾನದ ಕೃತಿಗಳನ್ನು ಸುಲಭವಾಗಿ ಜೀರ್ಣಿಸಿಕೊಳ್ಳುವುದು ಕಷ್ಟ. ಆದರೆ ನಾಯಕರ ಈ ಸಂಶೋಧನ ಕೃತಿ ಬಹಳ ಸುಲಭಗ್ರಾಹ್ಯ ಇಂಗ್ಲಿಷ್‌ನಲ್ಲಿ ನಿರೂಪಿತವಾಗಿದೆ. ಈ ಕೃತಿಗೆ ಮುನ್ನುಡಿ ಬರೆಯುತ್ತ ಪ್ರೊ. ಟಿ. ಬರೊ ಅವರು 'Nayak's contribution is a pioneer work in the field of Kannada' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹಾಗೆಯೇ ವಿಲಿಯಂ ಬ್ರೈಟ್ ಅವರು ತಮ್ಮ ಒಂದು ಲೇಖನದಲ್ಲಿ 'Nayak's book not only has greater sociolinguistic sophistication... but even (in one brief section) promises to follow technique of transformational gererative grammar' ಎಂದು ಬರೆದಿದ್ದಾರೆ.

ಈ ಗ್ರಂಥದಲ್ಲಿ ಏಳು ಅಧ್ಯಾಯಗಳಿವೆ. ಧ್ವನಿಮಾದಿಂದ ಪದದವರೆಗಿನ ಭಾಷೆಯ ಎಲ್ಲ ರಚನಾತ್ಮಕ ಸ್ತರಗಳ ಅಧ್ಯಯನ ಇಲ್ಲಿದೆ. ಮೊದಲನೆಯ ಅಧ್ಯಾಯ ಪೀಠಿಕಾ ಭಾಗವಾದರೂ ಅದರಲ್ಲಿ ಭಾಷಾವಿಜ್ಞಾನ ಮತ್ತು ಕನ್ನಡ ಇವುಗಳಿಗೆ ಸಂಬಂಧಿಸಿದ ಗಮನಾರ್ಹ ಮಾಹಿತಿ ಇದೆ. ಕೃತಿಯ

ಪ್ರವೇಶಿಕೆಯಾಗಿರುವ ಈ ಭಾಗ ಭಾಷಾವಿಜ್ಞಾನವನ್ನು ಅರ್ಥೈಸಿಕೊಳ್ಳಲು ಒದಗಿಸಿಕೊಟ್ಟ ಕೀಲಿಕೈನಂತಿದೆ. ನಾಯಕರ ಭಾಷಾವಿಜ್ಞಾನದ ತಿಳಿವಳಿಕೆ, ಜ್ಞಾನ, ತಜ್ಞತೆ ಯಾವ ಮಟ್ಟದ್ದು, ಎಷ್ಟು ಆಳವಾದದ್ದು ಮತ್ತು ಎಷ್ಟು ಆಧುನಿಕವಾದದ್ದು ಎಂಬುದಕ್ಕೆ ಈ ಭಾಗದಲ್ಲಿ ಪ್ರಸ್ತಾಪಿತವಾಗಿರುವ ವಿಷಯವೇ ಸಾಕ್ಷಿ. ಆಧುನಿಕ ಭಾಷಾವಿಜ್ಞಾನದ ಒಂದು ಸ್ಥೂಲ ಅವಲೋಕನವೇ ಇಲ್ಲಿದೆ. ಅದರಲ್ಲೂ ಉಪಭಾಷಾವಿಜ್ಞಾನ ಮತ್ತು ಸಾಮಾಜಿಕ ಭಾಷಾವಿಜ್ಞಾನಗಳ ಕೈಪಿಡಿಯಂತಿದೆ.

ಧ್ವನಿಮಾತ್ಮಕ ತೋಲನ (phonological comparison) ಎರಡನೆಯ ಅಧ್ಯಾಯ. ಕನ್ನಡದ ಗರಿಷ್ಠ ಧ್ವನಿಮಾಗಳ ವಿವೇಚನೆ ಇಲ್ಲಿದೆ. ಕನ್ನಡದ ಎರಡೂ ಶೈಲಿಗಳಲ್ಲಿರುವ ಒಟ್ಟು ೩೫ ವ್ಯಂಜನ ಧ್ವನಿಮಾಗಳು ಹಾಗೂ ೯ ಸ್ವರ ಧ್ವನಿಮಾಗಳು, ಅವುಗಳ ವಿತರಣೆ, ವಿವರಣೆ, ದೀರ್ಘತೆ, ಅನುನಾಸಿಕತೆ ಮುಂತಾದ ಸ್ವರಗಳ ರಾಗಾತ್ಮಕ ಲಕ್ಷಣಗಳು ವಿವರಣಾತ್ಮಕ ಹಾಗೂ ತೌಲನಿಕ ಭಾಷಾವಿಜ್ಞಾನ ತತ್ವ ಸಿದ್ಧಾಂತಗಳ ನೆಲೆಯಲ್ಲಿ ವಿಶ್ಲೇಷಿಸಲ್ಪಟ್ಟಿವೆ. ಈ ಭಾಗದಲ್ಲಿ ಬರುವ ಕೋಷ್ಟಕಗಳು, ನಕ್ಷೆಗಳು, frequency tableಗಳು ವೈಜ್ಞಾನಿಕ ನಿಖರತೆಗೆ ಪುಷ್ಟಿ ನೀಡುತ್ತವೆ.

ಮೂರನೆಯ ಅಧ್ಯಾಯ ಆಕೃತಿಮಾತ್ಮಕ ತೋಲನ (Morphological Comparison)ವನ್ನು ಒಳಗೊಂಡಿದೆ. ಆಕೃತಿ ಧ್ವನಿಮಾತ್ಮಕ ನಿಯಮಗಳನ್ನು (Morphophonemic rules) ಎರಡೂ ಶೈಲಿಗಳಿಗೆ ಅನ್ವಯಿಸಿ ರಚಿಸಲಾಗಿದೆ. ಸಂಧಿ ಕ್ರಿಯೆಯಲ್ಲಿ ಜರುಗುವ ಲೋಪ–ಆಗಮ–ಆದೇಶಗಳನ್ನು ರೂಪಾಂತರ ವ್ಯುತ್ಪತ್ತಿ ವ್ಯಾಕರಣ (Transformational generative rules) ನಿಯಮಗಳ ಮುಖಾಂತರ ವಿವರಿಸಲಾಗಿದೆ. ನಾಮಪದ ಮತ್ತು ಅದರ ಲಿಂಗ, ವಚನ, ವಿಭಕ್ತಿ ಪ್ರತ್ಯಯಗಳನ್ನು ಹಾಗೂ ಕ್ರಿಯಾಪದ ಮತ್ತು ಅದರ ಕಾಲಸೂಚಕ ಪ್ರತ್ಯಯಗಳನ್ನು ಈ ಭಾಗದಲ್ಲಿ ವ್ಯಾಪಕ ಚರ್ಚೆ ಹಾಗೂ ವಿಶ್ಲೇಷಣೆಗೆ ಒಳಗುಮಾಡಲಾಗಿದೆ.

ಪದಾತ್ಮಕ ತೋಲನ (Lexical Comparison) ನಾಲ್ಕನೇ ಅಧ್ಯಾಯ. ಗ್ರಂಥಸ್ಥ ಭಾಷೆಯ ಪದಗಳಿಗಿಂತ ಗ್ರಾಮ್ಯ ಭಾಷೆಯ ಪದಗಳು ಎಷ್ಟು ಭಿನ್ನ ಹಾಗೂ ವೈಶಿಷ್ಟ್ಯಪೂರ್ಣ ಎಂಬುದನ್ನಿಲ್ಲಿ ತೌಲನಿಕವಾಗಿ ನೋಡಿ ತಿಳಿಯಬಹುದು. ಇದಕ್ಕಾಗಿ ೫೨೦ ಕನ್ನಡ ಪದಗಳ ಒಂದು ಸಂಚಿತ

ಪಟ್ಟಿಯನ್ನು Morrish Swadesh ಮತ್ತು Fairbank ಅವರ ಇಂಗ್ಲಿಷ್ ಪಟ್ಟಿಯನ್ನಾಧರಿಸಿ ಸಿದ್ಧಪಡಿಸಿಕೊಂಡು ಹೋಲಿಸಿ ತೋರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಇಡೀ ಸಂಶೋಧನೆಯ ಫಲಶ್ರುತಿಯನ್ನು ಸಂಕ್ಷೇಪಿಸಿ ಹೇಳಲಾಗಿದೆ. ಆರು ಮತ್ತು ಏಳನೆಯ ಅಧ್ಯಾಯಗಳು ಕ್ರಮವಾಗಿ ಸಂಶೋಧನೆಯ ವಿಶ್ಲೇಷಣೆಗಾಗಿ ಬಳಸಲಾದ ಒಟ್ಟು ಪದಗಳ ಅನುಕ್ರಮಣಿಕೆ ಮತ್ತು ಮಾಡಿದ ಪರಾಮರ್ಶನ ಗ್ರಂಥಗಳ ವಿಸ್ತೃತ ಪಟ್ಟಿಯನ್ನು ಒಳಗೊಂಡಿವೆ.

ನಾಯಕರ ಈ ಸಂಶೋಧನ ಗ್ರಂಥ ಪ್ರಕಟವಾಗಿ ನಾಲ್ಕು ದಶಕಗಳೇ ಕಳೆದಿವೆ. ಕನ್ನಡದಲ್ಲಾಗಲೀ, ಭಾಷಾವಿಜ್ಞಾನ ಕ್ಷೇತ್ರದಲ್ಲಾಗಲೀ ಅಂದಿಗೂ ಇಂದಿಗೂ ಬಹಳಷ್ಟು ಬದಲಾವಣೆಗಳಾಗಿವೆ. ಆದರೂ ಈ ಗ್ರಂಥದಲ್ಲಿ ಪ್ರತಿಪಾದಿತವಾಗಿರುವ ವಸ್ತು. ವಿಷಯ ಸತ್ವ ಕಳೆದುಕೊಂಡಿಲ್ಲ. ಬಹುಕಾಲಿಕ ಧಾರಣಶಕ್ತಿ, ಸಾರ್ವತ್ರಿಕತೆ ಈ ಕೃತಿಯ ಮೌಲಿಕ ಶಕ್ತಿಗಳಾಗಿವೆ.

ಕನ್ನಡ ಅಧ್ಯಯನ ಸಂಸ್ಥೆಯ ವತಿಯಿಂದ, ಮೈಸೂರು ವಿಶ್ವವಿದ್ಯಾನಿಲಯದ ನೆರವನ್ನು ಪಡೆದು ಡಾ. ದೇಜಗೌ ಹಾಗೂ ಡಾ. ನಾಯಕರ ಸಂಪಾದಕತ್ವದಲ್ಲಿ 'Kannada Studies' ಎಂಬ ಅರೆವಾರ್ಷಿಕ ನಿಯತಕಾಲಿಕವೊಂದು ೧೯೬೫ರ ಜನವರಿ ತಿಂಗಳಲ್ಲಿ ಹೊರಬರುತ್ತದೆ. ಈ ಸಂಚಿಕೆ ತೀರ ಅಲ್ಪಾಯುವಾದುದಾಗಿತ್ತು. ಕೇವಲ ಮೂರು ಸಂಚಿಕೆಗಳಷ್ಟೇ ಪ್ರಕಟಗೊಂಡವು. ಆ ಮೂರೂ ಸಂಚಿಕೆಗಳಲ್ಲಿ ನಾಯಕರ ಮೂರು ಉತ್ತಮ ಲೇಖನಗಳು ಬೆಳಕು ಕಂಡವು. ಇಂಗ್ಲಿಷ್ ಭಾಷೆಯಲ್ಲಿ ಬರೆಯುವವರ ಕೊರತೆಯಿಂದ ಪ್ರಾಯಶಃ ಆ ನಿಯತಕಾಲಿಕ ನಿಂತುಹೋಯಿತೇನೋ.

ಮೊದಲ ಸಂಚಿಕೆಯಲ್ಲಿ ಪ್ರಕಟವಾದ ನಾಯಕರ ಲೇಖನ 'Co-existent phonemic systems and an old Kannada grammar' ಅಂದರೆ, 'ಧ್ವನಿಮಾ ವ್ಯವಸ್ಥೆಗಳ ಸಹ ಅಸ್ತಿತ್ವ ಮತ್ತು ಹಳಗನ್ನಡ ವ್ಯಾಕರಣ' ಎಂಬುದು. ಇದರಲ್ಲಿ ನಾಯಕರು ಭಾಷಾಸಂಪರ್ಕಗಳ ಕಾರಣದಿಂದ ಉಂಟಾಗುವ ಭಾಷಾ ಸ್ವೀಕರಣದಂಥ ಆಧುನಿಕ ಪ್ರಕ್ರಿಯೆಯನ್ನು ಹಳಗನ್ನಡ ವ್ಯಾಕರಣಕಾರರು ಇದೇ ನಿಟ್ಟಿನಲ್ಲಿ ಪರಿಭಾವಿಸಿ ತಿಳಿಸಿರುವ ದೇಶ್ಯ–ಅನ್ಯದೇಶ್ಯ ಪದಗಳ ವಿವೇಚನೆ ಮಾಡಿದ್ದಾರೆ. ಸಂಸ್ಕೃತದ ಪ್ರಭಾವದಿಂದ ಉಂಟಾದ ತತ್ಸಮ–ತದ್ಭವ ರೂಪಗಳ ಚರ್ಚೆಯನ್ನು ಅನೇಕ ಉದಾಹರಣೆಗಳ ಮೂಲಕ ಸಾದೃಶಪಡಿಸಿದ್ದಾರೆ. ಕೇಶಿರಾಜನ 'ಶಬ್ದಮಣಿದರ್ಪಣ'ದ ಅನೇಕ ಸೂತ್ರಗಳ ತಾಜಾ ವಿಮರ್ಶೆಯೂ

ಇಲ್ಲಿ ನಡೆದಿದೆ. ಏಳುನೂರು ವರ್ಷಗಳ ಹಿಂದಿನ ಈ ವ್ಯಾಕರಣಕಾರ ಇಪ್ಪತ್ತೊಂದನೆಯ ಶತಮಾನಕ್ಕೂ ಎಷ್ಟು ಪ್ರಸ್ತುತನಾಗಿದ್ದಾನೆ. ಆಧುನಿಕ ಧ್ವನಿಮಾ ವಿಜ್ಞಾನಕ್ಕೆ ಎಷ್ಟು ಹತ್ತಿರವಾಗಿದ್ದಾನೆ ಎಂಬುದನ್ನು ಖಚಿತಪಡಿಸುವುದು ನಾಯಕರ ಈ ಲೇಖನದ ಉದ್ದೇಶ.

ಎರಡನೆಯ ಸಂಚಿಕೆಯಲ್ಲಿ 'A brief survey of recent grammatical literature in Kananda' ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ಇದು ಕನ್ನಡದ ಆಧುನಿಕ ವ್ಯಾಕರಣಗಳ ಒಂದು ಸಮೀಕ್ಷೆಯಾಗಿದೆ. ಡಿ.ಎನ್. ಮುಳಬಾಗಲ್ ಅವರ 'ನುಡಿಗಟ್ಟು', ಪಿ. ಮಂಗೇಶರಾವ್ ಅವರ 'ಕನ್ನಡ ಮೂಲ ವ್ಯಾಕರಣ', ತೀ.ನಂ. ಶ್ರೀಕಂಠಯ್ಯನವರ 'ಕನ್ನಡ ಮಾಧ್ಯಮ ವ್ಯಾಕರಣ', ಸ್ಪೆನ್ಸರ್ ಅವರ 'A canarese grammar', ಕಿಟ್ಟೆಲ್ ಅವರ 'Kannada English dictionary', ಬಿ.ಎಂ. ಶ್ರೀಕಂಠಯ್ಯನವರ 'ಕನ್ನಡ ಕೈಪಿಡಿ', ಆರ್. ರಘುನಾಥರಾಯರ 'ಕರ್ಣಾಟಕ ಭಾಷಾ ವ್ಯಾಕರಣೋಪನ್ಯಾಸ ಮಂಜರಿ', ಪ್ರೊ. ಡಿ.ಕೆ. ಭೀಮಸೇನರಾಯರ 'ಶಬ್ದಮಣಿದರ್ಪಣದ ಪಾಠಾಂತರಗಳು', ಮಹದೇವ ಪ್ರಭಾಕರ ಪೂಜಾರ ಅವರ 'ಕೆಲವು ಕನ್ನಡ ವ್ಯಾಖರಣ ವಿಚಾರಗಳು', ಪ್ರೊ. ಸಿ.ಆರ್. ಶಂಕರನ್ ಅವರ 'Some problems in Kannada linguistics', ಸೇಡಿಯಾಪು ಕೃಷ್ಣಭಟ್ಟರ 'ಕನ್ನಡ ವರ್ಣಗಳು', ಡಾ. ಎ.ಎನ್. ನರಸಿಂಹಯ್ಯ ಮತ್ತು ಜಿ.ಎಸ್. ಗಾಯಿ ಅವರ 'ಶಾಸನಾಧಾರಿತ ಸಂಶೋಧನಾ ನಿಬಂಧಗಳು', ಮಾನ್ವಿ ನರಸಿಂಗರಾಯರ 'ನಡುಗನ್ನಡ', ಆರ್.ವಿ. ಜಹಗೀರ್‌ದಾರರ 'ಶಾರದೆಯ ಸಂಸಾರ', ರಾ.ಯ. ಧಾರವಾಡಕರ ಅವರ 'ಕನ್ನಡ ಭಾಷಾಶಾಸ್ತ್ರ', ಮಾಸ್ತಿ ಅವರ 'ನಮ್ಮ ನುಡಿ', ಚಿದಾನಂದಮೂರ್ತಿ ಅವರ 'ಭಾಷಾವಿಜ್ಞಾನದ ಮೂಲತತ್ವಗಳು' –ಈ ಮುಂತಾದ ಪ್ರಮುಖ ಭಾಷಾ ಸಂಬಂಧಿ, ವ್ಯಾಕರಣ, ಭಾಷಾವಿಜ್ಞಾನ ವಿಶ್ಲೇಷಣ ಮಾದರಿ ಕೃತಿಗಳನ್ನು, ಅವುಗಳ ನೆಲೆಬೆಲೆಗಳನ್ನು ನಾಯಕರು ಈ ಲೇಖನದಲ್ಲಿ ಪರಿಚಯಿಸಿದ್ದಾರೆ. ಈ ಲೇಖನ ಅವರ ಅಧ್ಯಯನದ ಪ್ರಸ್ತುತತೆಗೆ ನಿದರ್ಶನವಾಗಿದೆ.

'Some early evidences of diglossia in Kannada' ಎಂಬುದು ಮೂರನೆಯ ಸಂಚಿಕೆಗಾಗಿ ಡಾ. ನಾಯಕರು ಬರೆದ ಲೇಖನ.

‘ಭಾಷಾದ್ವಿರೂಪತೆ’ ಇತ್ತೀಚೆಗೆ ಸಾಮಾಜಿಕ ಭಾಷಾ ವಿಜ್ಞಾನಿಗಳ ಕುತೂಹಲಕ್ಕೆ ಪಕ್ಕಾಗಿರುವ ಒಂದು ವಿಷಯ. ಇಂಥ ಗಹನ ವಿಚಾರವನ್ನು ಆಯ್ದುಕೊಂಡು ನಾಯಕರು ಈ ಲೇಖನದಲ್ಲಿ ಪರಿಚಯಿಸಿದ್ದಾರೆ. ‘ಡೈಗ್ಲೊಸಿಯಾ’, ದ್ವಿರೂಪಕತೆ ಅಥವಾ ದ್ವಿಸ್ತರತೆ ಬಗೆಗೆ C.A. Ferguson ಅವರ ವ್ಯಾಖ್ಯೆ, ವಿವರಣೆಯನ್ನು ತಿಳಿಸಿ, ಈ ಭಾಷೆ ಯಾವ ಯಾವ ಇತರ ಭಾಷೆಗಳಲ್ಲಿ ಕಂಡುಬರುತ್ತದೆ (ಉದಾ: ತಮಿಳು, ರೊಮಾನ್ಸ್ ಭಾಷೆಗಳು, ಚೈನೀಸ್ ಭಾಷೆ, ಅರಾಬಿಕ್, ಮಾಡರ್ನ್ ಗ್ರೀಕ್, ಸ್ವಿಸ್, ಜರ್ಮನ್, ಹೈಯಾಟಯನ್ ಕ್ರಿಯೋಲ್) ಎಂಬುದನ್ನು ಹೆಸರಿಸಿ, ಕನ್ನಡದಲ್ಲಿ ಇಂಥ ಸಂದರ್ಭವನ್ನು ಹೇಗೆ ವಿವರಿಸಬಹುದು ಎಂಬುದನ್ನು ಕೂಲಂಕಷವಾಗಿ ವಿವೇಚಿಸಿದ್ದಾರೆ. ಕೇಶೀರಾಜನ ಕಾಲಕ್ಕೇ ಕನ್ನಡದಲ್ಲಿ ಈ ಬಗೆಯ ‘domain based usage of Kannada’ ಪ್ರಚಲಿತವಿತ್ತು ಎಂಬುದನ್ನು ಶಬ್ದಮಣಿದರ್ಪಣದಿಂದಾಯ್ದು ನಿದರ್ಶನಗಳ ಮೂಲಕವೇ ಈ ಲೇಖನದಲ್ಲಿ ಖಚಿತಪಡಿಸಿದ್ದಾರೆ.

ಈ ಮೂರೂ ಲೇಖನಗಳು ಕನ್ನಡ ಭಾಷಾವಿಜ್ಞಾನಕ್ಕೆ ನಾಯಕರಿಂದ ಸಂದ ಮೌಲಿಕ ಕೊಡುಗೆಗಳಾಗಿವೆ. ಇವಲ್ಲದೆ, ಭಾಷಾವರ್ಗೀಕರಣ, ಕೃತಕ ಭಾಷೆಗಳು, ಫ್ರೆಸ್ ಹೌಸ್ ಹೋಲ್ಡರ್, ಬರ್ರೊ, ತಾಯ್ನುಡಿಯಲ್ಲಿ ಶಿಕ್ಷಣ, ಏಕಲಿಪಿ, ಕನ್ನಡ ಮತ್ತು ಇತರ ಭಾಷೆಗಳ ಸಂಬಂಧ ಮುಂತಾದ ಅನೇಕ ಬಿಡಿ ಲೇಖನಗಳನ್ನು ಸಾಂದರ್ಭಿಕವಾಗಿ ಬರೆದು, ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ ನಾಯಕರು ಪ್ರಕಟಿಸಿದ್ದಾರೆ. ಇವೆಲ್ಲ ಅವರ ‘ಅಂಕಣಬರಹ’ ಸಂಪುಟಗಳಲ್ಲಿ ಸೇರ್ಪಡೆಯಾಗಿವೆ. ಇವೆಲ್ಲ ಅವರಿಂದ ಭಾಷಾ ವಿಜ್ಞಾನಕ್ಕೆ ಸಂದ ಕಾಣಿಕೆಗಳೇ ಆಗಿವೆ.

ಹಾಮಾನಾ ಅವರ ‘ಬೆಳ್ಳಿ ಕರ್ನಾಟಕ’, ‘ಕನ್ನಡ ಮನಸ್ಸು’ ಮತ್ತು ‘ಕನ್ನಡ ಕಟ್ಟುವ ಕೆಲಸ’ ಮುಂತಾದ ಕೃತಿಗಳಂತೂ ಒಬ್ಬ ನಿಜವಾದ ಭಾಷಾ ಯೋಜಕನ (Langauge Planner) ಮುನ್ನೋಟಗಳಂತೆಯೇ ಭಾಸವಾಗುತ್ತವೆ. ‘ಗೋಕಾಕ್ ಸಮಿತಿ’ ವರದಿಯನ್ನು ನಾಯಕರಷ್ಟು ವೈಜ್ಞಾನಿಕವಾಗಿ ವಿಶ್ಲೇಷಿಸಿದವರು ಮತ್ತೊಬ್ಬರಿಲ್ಲ.

ನಾಯಕರ ಭಾಷಾವಿಜ್ಞಾನ ಪ್ರೀತಿ ಕೇವಲ ಎಂ.ಎ., ಪಿಎಚ್.ಡಿ. ಪದವಿಗಳಿಂದ ತೃಪ್ತವಾಗಲಿಲ್ಲ. ನಿರಂತರ ಓದು, ಪುಸ್ತಕಗಳ ಸಂಗ್ರಹ ಅವರ ಅಭ್ಯಾಸವಾಗಿತ್ತು. ಆ ಕಾಲಕ್ಕೆ ಪ್ರಕಟಗೊಂಡ ದೇಶೀಯ, ವಿದೇಶೀಯ ಎಲ್ಲ

ಪರಾಮರ್ಶನ ಗ್ರಂಥಗಳನ್ನು ಅವರು ಗಮನಿಸುತ್ತಿದ್ದರು. ಸ್ವಂತಕ್ಕಾಗಿ ಖರೀದಿಸುತ್ತಿದ್ದರು. ಇಲ್ಲವೇ ಗ್ರಂಥ ಭಂಡಾರಕ್ಕೆ ತರಿಸುತ್ತಿದ್ದರು. ಅಷ್ಟೇ ಅಲ್ಲ, ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದ ವಿಚಾರಸಂಕಿರಣ, ಸಮ್ಮೇಳನ, ಕಾರ್ಯಾಗಾರಗಳಲ್ಲಿ ಅವರು ಭಾಗಿಯಾಗುತ್ತಿದ್ದರು. ಡೆಹರಾಡೂನ್ (೧೯೫೭), ಕೊಯಮತ್ತೂರ್ (೧೯೫೯), ಬ್ಲೂಮಿಂಗ್‌ಟನ್ (೧೯೬೪) ವಿಶ್ವವಿದ್ಯಾನಿಲಯಗಳು ನಡೆಸಿದ ಭಾಷಾವಿಜ್ಞಾನ ಬೇಸಿಗೆ ಶಾಲೆಗಳಲ್ಲಿ ನಾಯಕರು ಪಾಲ್ಗೊಂಡಿದ್ದಾರೆ. ರುಮೇನಿಯಾದ ಬುಖಾರೆಸ್ಟಿನಲ್ಲಿ ೧೯೬೭ರಲ್ಲಿ ನಡೆದ ಹತ್ತನೆಯ ಭಾಷಾವಿಜ್ಞಾನಿಗಳ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಡಾ. ನಾಯಕರು ಭಾಗವಹಿಸಿದ್ದಾರೆ. ಇನ್ನು ಭಾರತದಲ್ಲಿ ಅವರು ಭಾಷಾವಿಜ್ಞಾನದ ಒಲವಿನ ಕಾರಣಕ್ಕಾಗಿ ವಹಿಸಿದ ಜವಾಬ್ದಾರಿ, ನಿರ್ವಹಿಸಿದ ಕಾರ್ಯಭಾರಗಳು ಎಣಿಕೆಗೆ ಸಿಗುವಂಥವಲ್ಲ.

ಇದನ್ನೆಲ್ಲ ಗಮನಿಸಿದಾಗ ಡಾ. ಹಾ.ಮಾ. ನಾಯಕರು ನಿರಂತರವಾಗಿ ತಮ್ಮನ್ನು ಭಾಷಾವಿಜ್ಞಾನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು; ಅಧ್ಯಯನ, ಅಧ್ಯಾಪನ, ಆಡಳಿತ, ಸಂಶೋಧನೆ, ಸಂಘಟನೆ ಮತ್ತು ಬರವಣಿಗೆಯ ಮೂಲಕ ಕ್ರಿಯಾಶೀಲರಾಗಿದ್ದರು, ಆ ಮೂಲಕ ತಮ್ಮ ತಜ್ಞತೆಯ ಪ್ರಯೋಜನವನ್ನು ಕನ್ನಡ ಭಾಷಾವಿಜ್ಞಾನಕ್ಕೆ ದೊರಕಿಸಿಕೊಟ್ಟರು ಎನ್ನುವುದರಲ್ಲಿ ಎರಡನೆಯ ಮಾತಿಲ್ಲ.

ಭಾಷಾವಿಜ್ಞಾನದಂತೆ ಜಾನಪದದಲ್ಲೂ ನಾಯಕರಿಗೆ ವಿಶೇಷವಾದ ಆಸಕ್ತಿ, ಒಲವು ಇತ್ತು. ಅದರ ಫಲವಾಗಿಯೇ ಜಾನಪದ ಅಧ್ಯಯನ ಒಂದು ಶಿಸ್ತಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬೇರೂರಿತು. ಅನಂತರ ಕರ್ನಾಟಕದ ಇತರ ಕಡೆಗಳಿಗೆ ಹಬ್ಬಿತು. ಭಾರತದಾದ್ಯಂತ ವ್ಯಾಪಿಸಿತು. ಕಡೆಗೆ ವಿದೇಶೀಯರನ್ನೂ ಆಕರ್ಷಿಸಿತು. ಜಾಗತಿಕ ಮಟ್ಟದಲ್ಲಿ ಜಾನಪದ ಇಂದು ಗರಿಗೆದರಿದೆ. ಅದನ್ನು ವೈಜ್ಞಾನಿಕ ನೆಲೆಯಲ್ಲಿ ಸಂಸ್ಥಾಪಿಸಲು ಜಗತ್ತಿನಾದ್ಯಂತ ವಿದ್ವಾಂಸರು ಉತ್ಸಾಹಿಗಳಾಗಿದ್ದಾರೆ. ಇಂದು Folklore, Folkloristic ಆಗಿ ಮಾರ್ಪಟ್ಟಿದೆ. ಯಾವುದೇ ಅಧ್ಯಯನಕ್ಕೆ ಜನಪದ ತಾಯಿಬೇರು. ಅದರಲ್ಲಿ ವಿಪುಲ ನೈಜ ಸಾಮಗ್ರಿ ಇದೆ. ಈ ಸಾಮಗ್ರಿ ಭಾಷೆ, ಸಂಸ್ಕೃತಿ, ನೆಲ, ಜಲ, ಜೀವಜಂತುಗಳೆಲ್ಲರ ಆಕರವಾಗಿದೆ. ಇದು ಗೊತ್ತಿದ್ದೇ ದೇಜಗೌ, ಹಾಮಾನಾ, ಜೀಶಂಪ, ಎಚ್‌ಎಲ್‌ಎನ್ ಅಂಥವರು ಪಟ್ಟುಹಿಡಿದು ಈ ಕ್ಷೇತ್ರದಲ್ಲಿ ಕೃಷಿ ಮಾಡಿದರು.

ನಾಯಕರು ಮಲೆನಾಡ ಸೀಮೆಯಿಂದ ಬಂದವರು. ಪ್ರಕೃತಿಯ ಮಡಿಲಲ್ಲಿ ಬೆಳೆದವರು. ಸಹಜ ಕುತೂಹಲಿಗಳಾದ ನಾಯಕರಿಗೆ ಅವರ ಸುತ್ತಮುತ್ತಣ ಸಮಾಜ, ಅದರ ಆಗುಹೋಗುಗಳು, ಜನರ ಆಚಾರ ವಿಚಾರಗಳು, ನಡವಳಿಕೆ, ರೀತಿ ರಿವಾಜುಗಳು ಮನವರಿಕೆಯಾಗಿದ್ದವು. ಕೃಷಿಕ ಕುಟುಂಬದಿಂದ ಬಂದ ಅವರಿಗೆ ಜನಪದದ ಬಗೆಗೆ ಪ್ರಾರಂಭದಿಂದಲೇ ಒಂದು ಬಗೆಯ ಆಸಕ್ತಿ ಇತ್ತು. ಅವರು ಜಾನಪದ ಕ್ಷೇತ್ರಕ್ಕೆ ಕಾಲಿಟ್ಟದ್ದು ಅಂಟಿಗೆ ಪಂಟಿಗೆ ಗೀತ ಸಂಪ್ರದಾಯದ ಬಗೆಗೆ ಬರೆಯುವುದರ ಮೂಲಕ. ಒಳಗೇ ಹುದುಗಿದ್ದ ಅವರ ಜನಪದ ಸಂಸ್ಕೃತಿಯ ಅರಿವು ಇಂಬು ಪಡೆದದ್ದು ಮೊದಲು ಪಶ್ಚಿಮ ಬಂಗಾಳದಲ್ಲಿ, ಆಮೇಲೆ ಇಂಡಿಯಾನಾ ವಿಶ್ವವಿದ್ಯಾನಿಲಯದಲ್ಲಿ. ಈ ಎರಡೂ ಸಂದರ್ಭಗಳಲ್ಲೂ ಅವರು ಭಾಷಾವಿಜ್ಞಾನ ಕಾರಣಕ್ಕೆ ಅಲ್ಲಿಗೆ ತೆರಳಿದ್ದು ಕಾಕತಾಳೀಯ. ಪಶ್ಚಿಮ ಬಂಗಾಳದಲ್ಲಿ ಜನಪದರ ಬಗೆಗೆ ನಾಯಕರು ಅಲ್ಲಿದ್ದ ಕಾಲಕ್ಕೆ ರಚನಾತ್ಮಕ ಚಟುವಟಿಕೆಗಳು ಪ್ರಾರಂಭಗೊಂಡಿದ್ದವು. ಅಲ್ಲಿನ ಭಾಷಾವಿಜ್ಞಾನ ಪ್ರಾಧ್ಯಾಪಕರುಗಳಾದ ಸುನೀತಕುಮಾರ್ ಚಟರ್ಜಿ, ಸುಕುಮಾರ್ ಸೆನ್ ಮುಂತಾದವರಿಗೆ ಜನಪದ ಅಧ್ಯಯನದ ಅನಿವಾರ್ಯತೆ ತಿಳಿದಿತ್ತು. ಅವರ ಒಡನಾಟದಿಂದ ಸಹಜವಾಗಿ ಜಾನಪದದ ಬಗೆಗಿನ ನಾಯಕರ ಅರಿವು ವಿಸ್ತೃತಗೊಂಡಿತು. ಆದರೆ ನಿಜವಾಗಿ ಜಾನಪದದ ನೆಲೆಬೆಲೆಗಳು ಅವರಿಗೆ ಖಚಿತಗೊಂಡದ್ದು ಇಂಡಿಯಾನಾ ವಿಶ್ವವಿದ್ಯಾನಿಲಯದಲ್ಲಿ.

ನಾಯಕರ ಸಂಶೋಧನ ಮಾರ್ಗದರ್ಶಕರಾಗಿದ್ದ ಫ್ರೆಸ್‌ಹೌಸ್ ಹೋಲ್ಡರ್ ಒಬ್ಬ ಬಹುಶ್ರುತ ವಿದ್ವಾಂಸ. ಭಾಷಾವಿಜ್ಞಾನ, ಮಾನವಶಾಸ್ತ್ರ, ಸಮಾಜಶಾಸ್ತ್ರ, ಮನಃಶಾಸ್ತ್ರ, ಜಾನಪದ ಮುಂತಾದ ವಿಷಯಗಳಲ್ಲಿ ಪರಿಣತ. ಅವರ ಬಳಿಗೆ ಚರ್ಚೆ ಮಾಡಲು ಜ್ಞಾನ ಕುತೂಹಲಿಗಳಾದ ಅನೇಕ ವಿಭಾಗಗಳ ವಿದ್ವಾಂಸರು ಬರುತ್ತಿದ್ದರು. ನಾಯಕರಿಗೆ ಅವರೆಲ್ಲರ ಪರಿಚಯ ಆಗುತ್ತಿತ್ತು. ಹೀಗೆ ಪರಿಚಯವಾದವರು ಜಾನಪದ ಕ್ಷೇತ್ರದ ಆಚಾರ್ಯಪುರುಷ ಸ್ಟಿತ್ ಥಾಂಸನ್. ನಾಯಕರು ಇವರಿಂದ ಬಹಳವಾಗಿ ಪ್ರಭಾವಿತರಾದರು. ಇವರಿಂದಲೇ ನಾಯಕರಿಗೆ ಜಾನಪದ ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕಾದ, ಮಾಡಬಹುದಾದ ವಿಷಯ ಎಂಬ ತಿಳಿವಳಿಕೆ ಬಂದದ್ದು. ಅನಂತರ ನಿರಂತರವಾಗಿ ಅವರು ಅಲ್ಲಿನ ಜನಪದ ವಿಭಾಗದ ಸಂಪರ್ಕ ಇಟ್ಟುಕೊಂಡರು. ಬೇರೆ ಬೇರೆ ದೇಶಗಳಿಂದ ಅಲ್ಲಿಗೆ ಬರುತ್ತಿದ್ದ ವಿದ್ವಾಂಸರೊಡನೆ ಕಲೆತು ಅವರ ದೇಶದಲ್ಲಿ ನಡೆಯುತ್ತಿದ್ದ ಜಾನಪದ ಚಟುವಟಿಕೆಗಳ ಬಗೆಗೆ ತಿಳಿದುಕೊಂಡರು.

ಮೊದಲೇ ಪುಸ್ತಕಪ್ರಿಯರಾದ ಅವರು ಜಾನಪದ ಅಧ್ಯಯನಕ್ಕೆ ಸಂಬಂಧಪಟ್ಟ ಆಕರ ಗ್ರಂಥಗಳನ್ನು ಸಂಗ್ರಹಿಸಿದರು. ಅವುಗಳನ್ನೆಲ್ಲ ಓದುವುದರ ಮೂಲಕ ಅವರಿಗೆ ಜಾನಪದದ ಬಗೆಗೆ ಒಂದು ಮುನ್ನರಿವು ಪ್ರಾಪ್ತವಾಯಿತು. ಭಾರತಕ್ಕೆ ಬಂದಮೇಲೆ ಅದು ನಾಯಕರ ಪ್ರಯೋಜನಕ್ಕೆ ಬಂತು. ಹೀಗೆ ನಾಯಕರು ತಮ್ಮ ಅಧ್ಯಯನ, ಅನುಭವ, ಸ್ವತಂತ್ರಾಲೋಚನೆಗಳಿಂದ ಕನ್ನಡ ಜಾನಪದಕ್ಕೆ ಹೊಸ ದಿಕ್ಕುದಿಶೆ ತೋರಿಸುವುದು ಸಾಧ್ಯವಾಯಿತು.

ಕನ್ನಡ ಜಾನಪದಕ್ಕೆ ವೈಜ್ಞಾನಿಕ ಸ್ಪರ್ಶ ನೀಡಿದವರು ನಾಯಕರೇ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ೧೯೬೬ರಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಒಂದು ಜಾನಪದ ವಿಚಾರಗೋಷ್ಠಿಯನ್ನು ಏರ್ಪಡಿಸಿತ್ತು. ಅದರಲ್ಲಿ ನಾಯಕರು 'ಜನಪದ ಸಾಹಿತ್ಯ: ಅದರ ಸ್ವರೂಪ' ಎಂಬ ಪ್ರಬಂಧವನ್ನು ಮಂಡಿಸಿದರು. ಇದು ಬರೀ ಪ್ರಬಂಧವಾಗಿರಲಿಲ್ಲ. ಜಾನಪದ ಅಧ್ಯಯನಕ್ಕೆ ಬರೆದ ಭಾಷ್ಯವಾಗಿತ್ತು. ನಾಯಕರು ಮಂಡಿಸಿದ ವಿಚಾರ ಅದೂವರೆಗೆ ಜಾನಪದದಲ್ಲಿ ಕೆಲಸ ಮಾಡಿದವರಿಗೆ ತೀರ ಹೊಸದಾಗಿತ್ತು. ನಾಯಕರು ಅವರೆಲ್ಲರ ಅಭಿಮಾನಕ್ಕೆ ಪಾತ್ರರಾದರು. ಎಲ್ಲರೂ ಅವರನ್ನು ಜಾನಪದ ಪ್ರವರ್ತಕ ಎಂದೇ ಗುರುತಿಸಲಾರಂಭಿಸಿದರು.

ನಾಯಕರು ಆ ಪ್ರಬಂಧದಲ್ಲಿ ಪ್ರಸ್ತಾಪಿಸಿದ ಪ್ರಮುಖ ಅಂಶಗಳನ್ನು ಡಾ. ಜೀಶಂಪ ಹೀಗೆ ಪಟ್ಟಿ ಮಾಡಿದ್ದಾರೆ:

೧. ಮಾನವನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾನಪದ ಅತ್ಯಂತ ಮಹತ್ತರ ವಿಷಯ.

೨. ಈ ಐತಿಹಾಸಿಕ ವಿಜ್ಞಾನವು ಬರಿಯ ಊಹೆಯನ್ನು ಅವಲಂಬಿಸಿರುವ ಶಾಸ್ತ್ರವಾಗಿರದೆ, ವಾಸ್ತವಿಕ ಆಧಾರದ ಮೇಲೆ ಬೆಳೆಯುತ್ತಿರುವ ಅಧ್ಯಯನದ ವಿಷಯವಾಗಿದೆ.

೩. Folk ಮತ್ತು Folkloreಗೆ ಸಂವಾದಿಯಾಗಿ ಕ್ರಮವಾಗಿ 'ಜನಪದ' ಮತ್ತು 'ಜಾನಪದ' ಎಂದು ಬಳಸಬಹುದಾದ ಸಾಧ್ಯತೆ.

೪. ಜಾನಪದ ಗ್ರಂಥಸ್ಥವಲ್ಲದ ಸಂಪ್ರದಾಯದ ಮೊತ್ತ.

೫. ಜನಪದವನ್ನು ಕುರಿತದ್ದು ಜಾನಪದ (ಅಂಬಳಿಕೆ ಹಿರಿಯಣ್ಣ: ೨೦೦೩).

ನಾಯಕರು ಪ್ರಸ್ತಾಪಿಸಿರುವ ಇಂಗ್ಲಿಷಿನ Folk ಮತ್ತು Folklore ವಿವರಣೆ ಗಮನಾರ್ಹವಾದವು. Folk ಎಂದರೆ ಅವರ ಪ್ರಕಾರ, ಜನ, ಮಂದಿ, ಜನಾಂಗ, ಕುಲ, ಒಂದು ವರ್ಗದ ಜನಸಾಮಾನ್ಯರು, ಹಳೆಯ ಗುಂಪು, ಮೂಲ ಸಂಸ್ಕೃತಿಯ ಪಳೆಯುಳಿಕೆಗಳನ್ನು ಹೊಂದಿರುವಂಥದು. ಅಂದರೆ, ಸಮಾಜದ ಅಶಿಕ್ಷಿತವರ್ಗದ, ಕೆಳಸ್ತರದ ಜನರನ್ನು ಅರ್ಥೈಸುವುದು Folk. ಇದಕ್ಕೆ ಹೋಲಿಸಿದರೆ Folklore ಪದಕ್ಕೆ ವ್ಯಾಪಕವಾದ ಅರ್ಥವಿದೆ. ಅದರಲ್ಲಿ ಜನಪದ ಸಾಹಿತ್ಯ, ಜನಪದ ಕಲೆ, ಜನಪದ ಸಂಗೀತ, ಕ್ರೀಡೆ, ವೈದ್ಯ, ವಾಸ್ತುಶಿಲ್ಪ ಮೊದಲಾದ ವಿಷಯಗಳು ಸೇರುತ್ತವೆ. ಜಾನಪದ ಎಂಬುದು ಅವರ ದೃಷ್ಟಿಯಲ್ಲಿ ಅಧ್ಯಯನದ ಸಾಮಗ್ರಿ ಮತ್ತು ವಿಷಯ ಎರಡನ್ನೂ ಒಳಗೊಂಡಿರುವಂಥದು. "ಜನಪದ ಸಂಸ್ಕೃತಿಯ ಅಧ್ಯಯನವೇ ಜಾನಪದ. ಜನಪದಕ್ಕೆ ಸಂಬಂಧಿಸಿದ ಜ್ಞಾನವೇ ಜಾನಪದ" ಎನ್ನುತ್ತಾರೆ ನಾಯಕರು. ಹೀಗೆ Folk ಮತ್ತು Folkloreಗಳ ಸಂಬಂಧವನ್ನು, ಜನಪದ, ಜಾನಪದ ಶಬ್ದಗಳ ಅರ್ಥವ್ಯಾಪ್ತಿಯನ್ನು, ಜಾನಪದ ಒಳಗೊಳ್ಳುವ ವಿಷಯಗಳೂ ಮತ್ತು ಅವುಗಳ ವಿಸ್ತಾರವನ್ನೂ ವಿವರವಾಗಿ ಚರ್ಚಿಸಿ, ಜಾನಪದ ಸಂಬಂಧಿ ಅಧ್ಯಯನಗಳು ಗೊಂದಲವಿಲ್ಲದೆ ಆಧುನಿಕವಾಗಿ ವಿಶ್ಲೇಷಣೆಗೆ ಸುಲಭವಾಗಿ ಒಳಗೊಳ್ಳುವ ಮಾದರಿಯನ್ನು ತೋರಿಸಿಕೊಟ್ಟವರು ನಾಯಕರು.

ನಾಯಕರು ಈ ಜಾನಪದ ಪರಿಕಲ್ಪನೆಯನ್ನು ಪ್ರಚುರಪಡಿಸಿದಾಗ ಕನ್ನಡದಲ್ಲಿ ಜಾನಪದದ ಬಗೆಗೆ ಒಂದು ಸಮಗ್ರ ದೃಷ್ಟಿಕೋನ ಇರಲಿಲ್ಲ. ಜಾನಪದವನ್ನು ಒಂದು ಶಿಸ್ತಾಗಿ ಕೂಡ (discipline) ಯಾರೂ ಪರಿಗಣಿಸಿರಲಿಲ್ಲ. ಜನಪದ ಸಂಗ್ರಹಗಳು, ವಿವರಗಳು ಸಾಂಪ್ರದಾಯಿಕ ಧೋರಣೆಯ ವೈಯಕ್ತಿಕ ನೆಲೆಯವಾಗಿದ್ದವು. ಅಂತಹ ಅಧ್ಯಯನಗಳ ಪರಿಪಾಠವನ್ನು ತಪ್ಪಿಸಿದವರು ನಾಯಕರು. ಆಮೇಲೆ ಜಾನಪದ ಅಧ್ಯಯನದ ಮಾದರಿ, ಚೌಕಟ್ಟುಗಳು ಬದಲಾದವು.

ಹಿಂದೆಯೂ ಜನಪದ ಸಂಗ್ರಹಕಾರ್ಯ, ಸಂಪಾದನ ಕಾರ್ಯಗಳು ನಡೆಯುತ್ತಿದ್ದವು. ಆದರೆ ಅವುಗಳ ಅಧ್ಯಯನ, ವಿಶ್ಲೇಷಣೆ ಕೂಡ ಮುಖ್ಯ ಎಂಬುದಿರಲಿಲ್ಲ. ಅದನ್ನು ತೋರಿಸಿದವರು ಹಾಮಾನಾ. ಅವರ 'ಜಾನಪದ ಸ್ವರೂಪ' (೧೯೭೧) ಕನ್ನಡ ಜಾನಪದ ಅಧ್ಯಯನಕ್ಕೆ ಒಂದು ಬಗೆಯ ತಾತ್ವಿಕ ನೆಲೆಗಟ್ಟನ್ನು ಒದಗಿಸಿದ ಮಹತ್ಕೃತಿ. ಐದಾರು ಮರುಮುದ್ರಣಗಳನ್ನು

ಕಂಡಿರುವುದು ಇದರ ಜನಪ್ರಿಯತೆಗೆ ಸಾಕ್ಷಿ. ಡಾ. ಆರ್ವೀಯಸ್ ಸುಂದರಂ ಇದನ್ನು ತೆಲುಗಿಗೂ ಅನುವಾದಿಸಿದ್ದಾರೆ. 'ಜಾನಪದ ಸ್ವರೂಪ'ದಲ್ಲಿ ವೈಜ್ಞಾನಿಕ ದೃಷ್ಟಿ, ವರ್ಗೀಕರಣದ ಪ್ರಸ್ತಾವ, ಆಶಯ ಮತ್ತು ವರ್ಗಗಳ ಪರಿಕಲ್ಪನೆ, ಜನಪದ ಕಲೆಗಳನ್ನು ಅರ್ಥೈಸಿಕೊಳ್ಳಲು ಕೊಟ್ಟಿರುವ ಹೊಸ ನೋಟ ಇವೆಲ್ಲ ಜಾನಪದ ಅಧ್ಯಯನದ ಕೀಲಿಕೈಗಳಾಗಿವೆ.

ಜಾನಪದ ಚಟುವಟಿಕೆಗಳನ್ನೂ ನಾಯಕರು ಉದ್ದಕ್ಕೂ ಗಮನಿಸುತ್ತಲೇ ಬಂದವರು. ಆಗಾಗ ಲೇಖನಗಳನ್ನು ಬರೆದು ಪ್ರತಿಕ್ರಿಯಿಸುತ್ತಿದ್ದವರು. 'ಜಾನಪದ ಮುನ್ನಡೆ', 'ಕರ್ನಾಟಕ ಜಾನಪದ ಚಟುವಟಿಕೆಗಳು: ಒಂದು ಸ್ಥೂಲ ಸಮೀಕ್ಷೆ', 'ಅಂಟಿಗೆ ಪಂಟಿಗೆ ಗೀತ ಸಂಪ್ರದಾಯ', ಜನಪದ ಕಥೆ, ಒಗಟು, ಗಾದೆ, ನಾಟಕ ಇತ್ಯಾದಿ ಪ್ರಕಾರಗಳನ್ನು ಕುರಿತ ಅವರ ಲೇಖನಗಳು ಅವರ ಅಂಕಣ ಬರಹ ಸಂಗ್ರಹಗಳಾದ 'ಸಿವುಡು', 'ಸಂಗ್ರಹ', 'ಸಂವಾದ' ಮುಂತಾದ ಕೃತಿಗಳಲ್ಲಿ ಲಭ್ಯವಿವೆ.

ಜಾನಪದ ಕ್ಷೇತ್ರಕ್ಕೆ ಬಹುಕಾಲದ ನಿರೀಕ್ಷೆಯೊಂದನ್ನು 'ಕನ್ನಡ ಜಾನಪದ ಗ್ರಂಥಸೂಚಿ' (೧೯೭೪)ಯ ಮೂಲಕ ತುಂಬಿಕೊಟ್ಟವರು ನಾಯಕರು. ೧೯೭೩ವರೆಗೆ ಪ್ರಕಟವಾದ ಎಲ್ಲ ಜಾನಪದ ಗ್ರಂಥಗಳ ವಿವರದ ಪಟ್ಟಿಯನ್ನು ಈ ಸೂಚಿಯಲ್ಲಿ ಕೊಡಲಾಗಿದೆ. ಕಾವ್ಯ, ಕಥೆ, ಲಾವಣಿ, ಐತಿಹ್ಯ, ಗಾದೆ, ಒಗಟು, ನಾಟಕ, ರೂಪಾಂತರ, ಭಾಷಾಂತರ ಮತ್ತು ಸಂಕೀರ್ಣ ಎಂಬ ವೈಜ್ಞಾನಿಕ ವಿಂಗಡಣೆ ಈ ಸೂಚಿಯಲ್ಲಿದೆ. ೫೩೨ ಕೃತಿಗಳ ಬಗೆಗೆ ಈ ಸೂಚಿಯಲ್ಲಿ ಮಾಹಿತಿ ಸಿಗುತ್ತದೆ. ದಾಖಲಿತ ಕೃತಿಗಳ ಲೇಖಕರ ಮತ್ತು ಪ್ರಕಾಶಕರ ಯಾದಿಯನ್ನೂ ಗ್ರಂಥದಲ್ಲಿ ಸೇರಿಸಲಾಗಿದೆ. ಇದು ಕೂಡ ನಾಯಕರ ಮಾದರಿ ಕೆಲಸಕ್ಕೆ ನಿದರ್ಶನ.

ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಜಾನಪದ ವಿಭಾಗವನ್ನು ಕಟ್ಟಿ, ಬೆಳೆಸಿ, ಪೋಷಿಸಿದವರು ಹಾಮಾನಾ. ಇವರ ನೇತೃತ್ವದಲ್ಲಿ ಜಾನಪದದಲ್ಲಿ ಕೆಲಸ ಮಾಡುವ ವಿದ್ವಾಂಸರ ದಂಡೇ ನಿರ್ಮಾಣವಾಯಿತು. ಜೀಶಂಪ, ಸಿಪಿಕೆ, ಹಕರಾ, ರಾಗೌ, ರಾಜೇಂದ್ರ, ಪಿ.ಕೆ. ರಾಜಶೇಖರ, ಕ್ಯಾತನಹಳ್ಳಿ ರಾಮಣ್ಣ, ಯು.ಎಸ್. ರಾಮಣ್ಣ, ಪಿ.ಆರ್. ತಿಪ್ಪೇಸ್ವಾಮಿ, ಟಿ.ಎಸ್. ರಾಜಪ್ಪ, ಹಿ.ಶಿ. ರಾಮಚಂದ್ರೇಗೌಡ, ಅಂಬಳಿಕೆ ಹಿರಿಯಣ್ಣ ಈ ಒಬ್ಬೊಬ್ಬ ಪ್ರತಿಭಾವಂತ ಜಾನಪದ ವಿದ್ವಾಂಸರೂ ನಾಯಕರಿಂದ ನೇರವಾಗಿ ಪ್ರಭಾವಿತರಾದವರು. ಇವರಲ್ಲಿ ಜೀಶಂಪ ಮೊದಲ ಜಾನಪದ

ಪ್ರಾಧ್ಯಾಪಕರೆನಿಸಿದರು. ಅಂಬಳಿಕೆ ಹಿರಿಯಣ್ಣ ಜಾನಪದ ವಿಶ್ವವಿದ್ಯಾನಿಲಯಕ್ಕೆ ಮೊದಲ ಕುಲಪತಿಯಾದರು. ನಾಯಕರು ಇವರಿಗೆಲ್ಲ ಕೊಡುತ್ತಿದ್ದ ಪ್ರೋತ್ಸಾಹ, ಕೆಲಸ ಮಾಡಿದಾಗ ನೀಡುತ್ತಿದ್ದ ಉತ್ತೇಜನ, ಪ್ರಶಂಸೆ, ಒದಗಿಸುತ್ತಿದ್ದ ಸವಲತ್ತುಗಳು, ದೊರಕಿಸಿಕೊಡುತ್ತಿದ್ದ ಅವಕಾಶಗಳು, ತೋರಿಸುತ್ತಿದ್ದ ಪ್ರೀತಿ ಇವೆಲ್ಲ ಯಾರೂ ಮರೆಯಲಾಗದಂಥವು.

ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದಲ್ಲಿ ಎಂ.ಎ., ಎಂ.ಫಿಲ್. ಪಿಎಚ್.ಡಿ. ಪದವಿಗಳಿಗೆ ಅಗತ್ಯವಾದ ನೆರವನ್ನಿತ್ತವರು ಹಾಮಾನಾ. ಇದರಿಂದ ಏಕಕಾಲಕ್ಕೆ ಜಾನಪದದ ಅಧ್ಯಯನಾಂಗ, ಸಂಶೋಧನಾಂಗಗಳು ಬೆಳೆದವು. ಸಂಶೋಧನ ಕಾರ್ಯಗಳು ಜರುಗಿದವು. ಕ್ಷೇತ್ರಕಾರ್ಯಗಳು ನಡೆದವು. ಧಾರವಾಡ, ಮಂಗಳೂರು, ಬೆಂಗಳೂರು, ಗುಲಬರ್ಗಾ ಇಲ್ಲೆಲ್ಲ ಜಾನಪದ ವಿದ್ವಾಂಸರು ಬೆಳಕಿಗೆ ಬಂದರು. ನಾಯಕರನ್ನು ಇವರೆಲ್ಲ ಬಳಸಿಕೊಂಡರು. ಜಾನಪದದಲ್ಲಿ ಹೆಚ್ಚು ಸಂಗ್ರಹಕಾರ್ಯಗಳು, ಪ್ರಕಟಣ ಕಾರ್ಯಗಳು ನಡೆದದ್ದು ಹಾಮಾನಾ ಅವರ ಆಡಳಿತಾವಧಿಯಲ್ಲಿಯೇ. 'ಕರ್ನಾಟಕ ಜಾನಪದ ಸರ್ವೇಕ್ಷಣೆ' ಎಂಬ ಬೃಹತ್ ಯೋಜನೆಯನ್ನು ಪ್ರಾರಂಭಿಸಿ ಯಶಸ್ವಿಯಾಗಿ ಕಾರ್ಯಗತಗೊಳಿಸಿದ್ದು ನಾಯಕರ ಹಿರಿಮೆಯೇ ಸರಿ.

ಮೈಸೂರು ವಿಶ್ವವಿದ್ಯಾನಿಲಯದ 'ಜಾನಪದ ವಸ್ತು ಸಂಗ್ರಹಾಲಯ' ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ. ಸ್ವದೇಶೀ ಹಾಗೂ ವಿದೇಶೀ ಪ್ರವಾಸಿಗರು ತಪ್ಪದೇ ಗಂಗೋತ್ರಿಗೆ ಇದನ್ನು ನೋಡಲು ಬರುತ್ತಾರೆ. ಇದನ್ನು ಪ್ರಾರಂಭಿಸಿದವರು ದೇಜಗೌ, ಬೆಳೆಸಿದವರು ಹಾಮಾನಾ. ಇವರ ಜೊತೆಗೆ ಜೀಶಂಪ, ತಿಪ್ಪೇಸ್ವಾಮಿ, ರಾಮಣ್ಣ ಇವರೆಲ್ಲ ಕೊಟ್ಟ ಕೊಡುಗೆ ಅಪಾರ.

ನಾಯಕರ ಕಾಲದಲ್ಲಿ ಕ್ಷೇತ್ರಕಾರ್ಯ ಮಾಡಲು ಹೋಗುವವರಿಗೆ ಅಗತ್ಯವಾದ ವಾಹನ ಸೌಲಭ್ಯ, ವಸತಿ ವ್ಯವಸ್ಥೆ ಕಲ್ಪಿಸಿಕೊಡಲಾಗುತ್ತಿತ್ತು. ಇದರಿಂದ ವಸ್ತುಸಂಗ್ರಹಾಲಯದ ಸಂಪತ್ತು ವೃದ್ಧಿಸಿತು. ಸಂಗ್ರಹಿಸಿ ತಂದ ವಸ್ತುಗಳನ್ನು ಸಂಗ್ರಹಾಲಯದಲ್ಲಿ ಜತನಪಡಿಸಲು, ಪ್ರದರ್ಶಿಸಲು ಕೂಡ ನೆರವಾಗುತ್ತಿದ್ದರು. ಒಟ್ಟಿನಲ್ಲಿ ನಾಯಕರ ಮುಂದಾಲೋಚನೆ ಹಾಗೂ ಕರ್ತೃತ್ವಶಕ್ತಿಯಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ವಿಭಾಗ ತಳ ಊರಿತು; ಪ್ರವರ್ಧಮಾನಕ್ಕೆ ಬಂತು. ಈ ವಿಭಾಗಕ್ಕೆ ಬಂದ ವಿದೇಶೀ ವಿದ್ವಾಂಸರಾದ ಅಲನ್ ಡಂಡೆಸ್, ಲೆವಿಸ್ಟ್ರಾಸ್ ಅಂಥವರೂ ಮೆಚ್ಚುಗೆ ವ್ಯಕ್ತಪಡಿಸಿದರು. ಹೀಗೆ

ಬರೀ ಜಾನಪದ ತಜ್ಞರಾಗಿ ಅಷ್ಟೇ ಅಲ್ಲ, ಅದಕ್ಕೊಂದು ಶಿಸ್ತು, ತಾತ್ವಿಕತೆ, ನೆಲೆಬೆಲೆ ದೊರಕಲು ಕಾರಣಕರ್ತರಾಗಿ ಕೂಡ ಹಾಮಾನಾ ಸ್ಮರಣಾರ್ಹರು.

ಭಾಷಾವಿಜ್ಞಾನ, ಜಾನಪದಗಳಲ್ಲಿ ಮಾತ್ರವಲ್ಲ 'ಭಾಷಾಂತರ' ಕ್ಷೇತ್ರದಲ್ಲೂ ನಾಯಕರು ತಜ್ಞರಾಗಿದ್ದರು. ಅವರು ಐದು ಅನುವಾದ ಕೃತಿಗಳ ಕರ್ತೃ. ಅದರಲ್ಲಿ ಒಂದು ಪ್ರಕಟವಾಗಿಲ್ಲ. 'ಶಾಂತಿ ಸ್ವರೂಪ ಭಟ್ನಾಗರ್' (೧೯೫೪), 'ಹಾವು ಮತ್ತು ಹೆಣ್ಣು' (೧೯೬೬), 'ಪ್ರಣಯ ಪದಾವಳಿ' (೧೯೮೪), 'ಸುನೇರಿ' (೧೯೮೬) ಮತ್ತು 'ಲಲ್ಲಸೂಕ್ತಿಗಳು' (ಅಪ್ರಕಟಿತ) ಅವರು ಅನುವಾದಿಸಿ ಹೊರತಂದ ಗ್ರಂಥಗಳು.

ಅನುವಾದ ಅಥವಾ ತರ್ಜುಮೆ ಅಥವಾ ಭಾಷಾಂತರ ಯಾವುದೇ ಭಾಷೆಯ ಸಾಹಿತ್ಯಕ ಅನಿವಾರ್ಯ ಎಂಬುದು ನಾಯಕರ ನಿಲುವಾಗಿತ್ತು. ಏಕೆಂದರೆ ಇತರ ಭಾಷೆಯ ಸಾಹಿತ್ಯಕ್ಕೆ ಹೋಲಿಸಿ ನೋಡಿದಾಗಲೇ ನಮ್ಮ ಸಾಹಿತ್ಯದ ನಿಜವಾದ ಬೆಲೆ ಗೊತ್ತಾಗುವುದು ಎಂಬುದು ನಾಯಕರ ತಿಳಿವಳಿಕೆಯಾಗಿತ್ತು. ಹೀಗಾಗಿ ಅಧ್ಯಯನ ಸಂಸ್ಥೆಯಲ್ಲಿ ಭಾಷಾಂತರ ವಿಭಾಗ ಬರಲು ಕಾರಣರಾದರು. 'ಭಾರತೀಯ ಸಾಹಿತ್ಯ' ಕುರಿತ ಸ್ನಾತಕೋತ್ತರ ಡಿಪ್ಲೊಮಾ ತರಗತಿಗಳು ಪ್ರಾರಂಭಿಸಿದರು. 'ತೌಲನಿಕ ಸಾಹಿತ್ಯ'ವನ್ನು ಕನ್ನಡ ಎಂ.ಎ. ಪಠ್ಯಕ್ರಮದಲ್ಲಿ ಸೇರಿಸಿದರು. 'ಕನ್ನಡ ರೈಟರ್ಸ್ ಅಂಡ್ ದೇರ್ ವರ್ಕ್ಸ್' ಪುಸ್ತಕಮಾಲೆಯಲ್ಲಿ ಕನ್ನಡದ ಗಣ್ಯ ಲೇಖಕರನ್ನು ಇಂಗ್ಲಿಷ್‌ನಲ್ಲಿ ಪ್ರಚುರಪಡಿಸಿದರು. ಇವೆಲ್ಲ ಹಾಮಾನಾ ಅವರ ದೂರದೃಷ್ಟಿ ಹಾಗೂ ಅನುವಾದ ಕಲೆಯ ಪ್ರಾಮುಖ್ಯತೆಯನ್ನು ಎತ್ತಿಹಿಡಿಯುವಂಥವು.

ನಾಯಕರ ಅನುವಾದಗಳ ವ್ಯಾಪ್ತಿ ಮತ್ತು ವೈವಿಧ್ಯಗಳು ಬೆರಗುಗೊಳಿಸುವಂಥವು. 'ಶಾಂತಿಸ್ವರೂಪ ಭಟ್ನಾಗರ್' ಜೀವನಚರಿತ್ರೆಯಾದರೆ, 'ಹಾವು ಮತ್ತು ಹೆಣ್ಣು' ಕಥಾಸಂಕಲನ. 'ಪ್ರಣಯ ಪದಾವಳಿ'ಯನ್ನು ಮೈಥಿಲಿಯಿಂದಲೂ, 'ಸುನೇರಿ'ಯನ್ನು ಪಂಜಾಬಿನಿಂದಲೂ, 'ಲಲ್ಲಸೂಕ್ತಿಗಳು' ಕಾಶ್ಮೀರಿಯಿಂದಲೂ ನಾಯಕರಿಂದ ಕನ್ನಡಕ್ಕೆ ಬಂದಿವೆ.

ನಾಡಿನ ಹೆಸರಾಂತ ವಿಜ್ಞಾನಿಯೊಬ್ಬರ ಜೀವನ ಸಾಧನೆಗಳನ್ನು ತಿಳಿಸುವ ಪುಟ್ಟ ಕೃತಿ 'ಶಾಂತಿಸ್ವರೂಪ ಭಟ್ನಾಗರ್'. ಮೂಲ ಅಚ್ಚಾಗದೆ ಬೆರಳಚ್ಚು ಕೃತಿಯನ್ನೇ ಆಧಾರವಾಗಿಟ್ಟುಕೊಂಡು ನಾಯಕರು ತರ್ಜುಮೆ ಮಾಡಿದ್ದಾರೆ. ವಿಜ್ಞಾನಿಯೊಬ್ಬರ ವಿಷಯವಾದ್ದರಿಂದ ಇಲ್ಲಿ ಸಾಹಿತ್ಯಕ ಅಂಶಗಳೂ ಇರುತ್ತವೆ,

ತಾಂತ್ರಿಕ ಅಂಶಗಳೂ ಇರುತ್ತವೆ. ಇವೆರಡನ್ನೂ ನಾಯಕರು ಅನುವಾದದಲ್ಲಿ ಚನ್ನಾಗಿಯೇ ನಿಭಾಯಿಸಿ ತಾವೊಬ್ಬ ಸಮರ್ಥ ಭಾಷಾಂತರಕಾರಿ ಎಂಬುದನ್ನು ಕೃತಪಡಿಸಿದ್ದಾರೆ.

'ಹಾವು ಮತ್ತು ಹೆಣ್ಣು' ನಾಯಕರು ಓದಿ ಇಷ್ಟಪಟ್ಟ ಐದು ಕಥೆಗಳ ಅನುವಾದ. 'ಹಾವು ಮತ್ತು ಹೆಣ್ಣು', 'ಕಲೆಯ ಬೆಲೆ', 'ಉಭಯಸಂಕಟ', 'ಯಾರೋ ಅಂದರು', 'ಜಾಣ ಹೆಂಡತಿ' ಮತ್ತು 'ಅಫೀಮಿನ ಆರಂಭ' ಇವೇ ಆ ಐದು ಕಥೆಗಳು. 'ನಾರೀ ಓ ನಾಗಿನೀ' ಎಂಬ ಕಥೆ ಬಂಗಾಳಿ ಲೇಖಕರಾದ ತಾರಾಶಂಕರ ಬ್ಯಾನರ್ಜಿ ಅವರದು. ಈ ಕಥೆಯ ಅನುವಾದದ ಹೆಸರನ್ನೇ ನಾಯಕರು ಸಂಕಲನಕ್ಕೆ ಇಟ್ಟಿದ್ದಾರೆ. ನಾಯಕರು ಈ ಕಥೆಗಳಲ್ಲಿನ ವರ್ಣನೆಯನ್ನು, ಆಕರ್ಷಕ ನಿರೂಪಣೆಯನ್ನು ಸ್ವಾರಸ್ಯಕರವಾಗಿ ಸೆರೆಹಿಡಿದಿದ್ದಾರೆ.

ಮೈಥಿಲಿ ಭಾಷೆಯ ಕೋಗಿಲೆ ಎಂದೇ ಹೆಸರಾದ ವಿದ್ಯಾಪತಿಯ ಪದಾವಳಿಗಳಿಂದ ಆಯ್ದುಕೊಳ್ಳಲಾಗಿರುವ ಅರವತ್ತೊಂದು ಕವಿತೆಗಳ ಕನ್ನಡ ಅನುವಾದವೇ 'ಪ್ರಣಯ ಪದಾವಳಿ'. ನಾಯಕರ ಈ ಅನುವಾದ ಪುಸ್ತಕ ರೇಖಾಚಿತ್ರಗಳಿಂದ ವಿನ್ಯಾಸಗೊಂಡು ಅತ್ಯಂತ ಸೊಗಸಾಗಿ ಮುದ್ರಣಗೊಂಡಿದೆ. ರಾಷ್ಟ್ರದ ಪ್ರಾಚೀನ ಮಹಾಕವಿಯೊಬ್ಬನನ್ನು ಕನ್ನಡಿಗರಿಗೆ ಪರಿಚಯಿಸುವ ಸಾಹಸ ಮಾಡಿದ್ದೇನೆ ಎಂದು ನಾಯಕರೇ ಹೇಳಿಕೊಂಡಿದ್ದಾರೆ. ಇದರ ಅನುವಾದವನ್ನು ಕುರಿತ ನಾಯಕರ ಮಾತುಗಳು ಇಲ್ಲಿ ಗಮನಾರ್ಹ: "ನಾನು ಈ ಹಾಡುಗಳನ್ನು ಪದಶಃ ಭಾಷಾಂತರಿಸಿಲ್ಲ. ಕೆಲವು ಸಲ ಸೃಷ್ಟ್ಯಂತರವನ್ನೂ ಮಾಡಿದ್ದೇನೆ. ಆದರೆ, ಆ ನೆವದಲ್ಲಿ ಮೂಲ ಲೇಖಕನಿಂದ ಸಿಡಿದುಹೋಗುವ ಸ್ವಾತಂತ್ರ್ಯ ವಹಿಸಿಲ್ಲ. ವಿದ್ಯಾಪತಿಯ ಹಾಡುಗಳನ್ನು ಪುನರಾವರ್ತನೆಯ ಭಾರದಿಂದ ತಪ್ಪಿಸಲು ಪ್ರಯತ್ನಿಸಿದ್ದೇನೆ. ಹಾಡಿನ ಮುಖ್ಯ ಮೂಲಭಾವ ಕಳೆದುಹೋಗದಂತೆ ನೋಡಿಕೊಂಡಿದ್ದೇನೆ."

ಅಮೃತಾ ಪ್ರೀತಮ್ ಆಧುನಿಕ ಭಾರತೀಯ ಸಾಹಿತ್ಯದ ಬಹುದೊಡ್ಡ ಹೆಸರು. ಅವರ ಆಯ್ದ ಕವಿತೆಗಳ ಅನುವಾದವೇ 'ಸುನೇರಿ'. ಅಮೃತಾ ಪ್ರೀತಮ್ ಜ್ಞಾನಪೀಠ ಪ್ರಶಸ್ತಿ ಪಡೆದ ಎರಡನೆಯ ಮಹಿಳೆ. 'ಸುನೇರಿ' ಅನುವಾದದ ಮೂಲಕ ನಾಯಕರು ನಮ್ಮ ರಾಷ್ಟ್ರದ ಪ್ರಖ್ಯಾತ ಕವಯಿತ್ರಿಯೊಬ್ಬರನ್ನು ಕನ್ನಡಿಗರಿಗೆ ಪರಿಚಯಿಸಿದ್ದಾರೆ. 'ಸುನೇರಿ'ಯ ಮುನ್ನುಡಿಯಲ್ಲಿ ನಾಯಕರು ಹೀಗೆ ಅಭಿಪ್ರಾಯಿಸಿದ್ದಾರೆ: "ಅನುವಾದದಲ್ಲಿ

ಅತ್ಯಂತ ಕ್ಲಿಷ್ಟಕರವಾದದ್ದೆಂದರೆ ಕಾವ್ಯದ ಅನುವಾದ. ಅದು ಮಿಂಚನ್ನು ಹಿಡಿದು ನಿಲ್ಲಿಸುವ ಸಾಹಸ, ಅಸಾಧ್ಯವಾದದ್ದು." ವಾಸ್ತವವಾಗಿ ನಾಯಕರಿಗೆ ಮೂಲ ಪಂಜಾಬಿಯ ಪರಿಚಯ ಇರಲಿಲ್ಲ. ಹೀಗಾಗಿ ಅನುವಾದಕ್ಕೆ ಅವರು ಇಂಗ್ಲಿಷ್ ಆವೃತ್ತಿಯನ್ನು ಪರಿಗಣಿಸಬೇಕಾಯ್ತು. ಹೀಗಾಗಿ ಅನೇಕ ಸಮಸ್ಯೆಗಳನ್ನು ಅವರು ಎದುರಿಸಬೇಕಾಯ್ತು. ಇಂಗ್ಲಿಷ್‌ನ ಅನುವಾದಕರಾದ ಖುಷ್‌ವಂತ್ ಸಿಂಗ್ ಅವರೇ ತಮ್ಮ ಅನುವಾದದಲ್ಲಿ ಮೂಲದ ಸಕ್ಕರೆ ಕಳೆದುಹೋಗಿ ಸ್ಯಾಕ್ರಿನ್ ಸವಿಯಷ್ಟೇ ಇದೆ ಎಂದಿದ್ದಾರೆ. ಅದನ್ನು ಆಶ್ರಯಿಸಿ ಕನ್ನಡಕ್ಕೆ ತಂದ ನಾಯಕರು, ನನ್ನ ಅನುವಾದದಲ್ಲಿ ಆ ಸ್ಯಾಕ್ರಿನ್ ಸವಿಯೂ ಇರಲಾರದು ಎನ್ನುತ್ತಾರೆ. ಆದರೂ "ನಾಯಕರ ಪ್ರಾಮಾಣಿಕ ಆಸ್ಥೆ ಮತ್ತು ಎಚ್ಚರಿಕೆಗಳಿಂದಾಗಿಯೇ 'ಸುನೇರಿ'ಯ ಕವನಗಳು ನಮಗೆ ತುಂಬ ಸಹಜವೂ ಅಕೃತಕವೂ ಆಗಿ ತೋರುತ್ತವೆ."

ಕನ್ನಡ ಸಾಹಿತ್ಯದ ತೇಜಸ್ಸನ್ನು ಹೆಚ್ಚಿಸಲು ತುಂಬ ಉತ್ಕೃಷ್ಟವಾದುದನ್ನೇ ಹೊರಗಡೆಯಿಂದ ತಂದು ಸೇರಿಸುವ ಪ್ರಯತ್ನ ಹಾಮಾನಾ ಅವರದು. ಅದು ಕಾಶ್ಮೀರಿ ಭಾಷೆಯ ಶ್ರೇಷ್ಠ ಕವಯಿತ್ರಿ. ಲಲ್ಲೇಶ್ವರಿಯ ಸೂಕ್ತಿಗಳನ್ನು ಕನ್ನಡಕ್ಕೆ ತರುವ ಮೂಲಕ ಸಾಬೀತಾಗಿದೆ 'ಲಲ್ಲ ಸೂಕ್ತಿಗಳು' ಸಂಕಲನ ಈ ನಿಟ್ಟಿನದು. ನಾಯಕರು ಲಲ್ಲೇಶ್ವರಿಯ ಕೃತಿಗಳಲ್ಲಿ ಆಸಕ್ತಿ ತಳೆಯಲು ಕಾರಣ ಆಕೆ ಸ್ವಲ್ಪಮಟ್ಟಿಗೆ ಕನ್ನಡದ ವಚನಕಾರ್ತಿ ಅಕ್ಕಮಹಾದೇವಿಯನ್ನು ಹೋಲುವುದು.

"'ಪ್ರಣಯ ಪದಾವಳಿ'ಯ ಮೂಲಕ ಶೃಂಗಾರಮುಖಿಯಾದ ಸರಸಸಾಹಿತ್ಯವನ್ನೂ, 'ಸುನೇರಿ'ಯ ಮೂಲಕ ಆಧುನಿಕ ಮಹಿಳೆಯ ಮನೋಭಾವದ ಹಲವು ಆಯಾಮಗಳನ್ನೂ ಪರಿಚಯಿಸಿಕೊಟ್ಟ ಹಾಮಾನಾ ಅವರು 'ಲಲ್ಲ ಸೂಕ್ತಿಗಳು' ಸಂಕಲನದ ಮೂಲಕ ಇನ್ನೊಂದು ಭಾಷೆಯಲ್ಲಿನ ಅನುಭಾವ ಸಾಹಿತ್ಯದ ಕೆಲವು ಮುಖಗಳನ್ನು ತೋರಿಸಿಕೊಡುವ ಪ್ರಯತ್ನ ಮಾಡಿದ್ದಾರೆ"(ಪ್ರಧಾನ್ ಗುರುದತ್ತ).

## ೯. ಹಾಮಾನಾ ಸಾಹಿತ್ಯ ಕೃಷಿ

ಡಾ. ಎಚ್.ಎಸ್. ಸುಜಾತಾ ಅವರು 'ಹಾಮಾನಾ ಹೊತ್ತಗೆಗಳು' ಎಂಬ ಗ್ರಂಥಸೂಚಿಯೊಂದನ್ನು ಹೊರತಂದಿದ್ದಾರೆ. ಅದರಲ್ಲಿ ಅವರು ನಾಯಕರ ನೂರಹದಿನೈದು ಕೃತಿಗಳ ವಿವರ ನೀಡಿದ್ದಾರೆ. ಅವುಗಳಲ್ಲಿ ಕಥೆ, ಪ್ರಬಂಧಗಳು, ಜೀವನಚರಿತ್ರೆ, ಮಕ್ಕಳ ಸಾಹಿತ್ಯ, ವಿಚಾರ-ವಿಮರ್ಶೆ, ಅಂಕಣ ಬರೆಹ, ಆಕಾಶವಾಣಿ ಚಿಂತನ, ಅನುವಾದ, ಸಂಪಾದಿತ ಕೃತಿಗಳು, ಪಠ್ಯಪುಸ್ತಕಗಳು, ಸೂಚಿ, ಕೋಶ, ಪರಾಮರ್ಶನ ಗ್ರಂಥಗಳು ಸೇರಿವೆ. ಇವೆಲ್ಲ ನಾಯಕರ ವಿಸ್ತೃತ ಸಾಹಿತ್ಯಕೃಷಿಯನ್ನು ಮನದಟ್ಟು ಮಾಡಿಕೊಡುತ್ತವೆ.

ನಾಯಕರು 'ಸ'ಕಾರ ಪ್ರಿಯರು ಎಂಬುದು ಪ್ರತೀತಿ. ಅವರ ಕೃತಿಗಳಿಗೆ 'ಸ'ಕಾರದಿಂದ ಆರಂಭವಾಗುವ ಹೆಸರುಗಳನ್ನಿಡುವಲ್ಲಿ ಅವರು ನಿಷ್ಣಾತರು. ಅವರ ಅಂಕಣಬರಹ ಸಂಕಲನಗಳಲ್ಲಿ ಬಹುಪಾಲು ಇಂಥವು. 'ಸಂಭ್ರಮ', 'ಸಿಂಚನ', 'ಸೊಡರು', 'ಸ್ವಂತ', 'ಸೃಜನ', 'ಸಿವುಡು', 'ಸೂಲಂಗಿ' –ಹೀಗೆ ಈ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು. ಒಟ್ಟಿನಲ್ಲಿ ನಾಯಕರ ಸಾಹಿತ್ಯ ಸೃಷ್ಟಿ 'ಸ'ಕಾರಾತ್ಮಕವಾದುದು ಎನ್ನುವುದರಲ್ಲಿ ಅನುಮಾನವಿಲ್ಲ.

ನಾಯಕರನ್ನು ಮನೆಮಾತಾಗಿಸಿ ಜನಪ್ರಿಯತೆಯ ಉತ್ತುಂಗಕ್ಕೇರಿಸಿದವು ಅವರ ಅಂಕಣ ಬರೆಹಗಳೆ. ಅಂಕಣ ಬರೆಹವನ್ನು ಕನ್ನಡದ ಒಂದು ವಿಶಿಷ್ಟ ಪ್ರಕಾರವಾಗಿಸಿದವರು ಹಾಮಾನಾ. ಬಹಳಷ್ಟು ಜನ ಹೆಸರಾಂತ ಅಂಕಣಕಾರರು ಕನ್ನಡದಲ್ಲಿದ್ದಾರೆ. ಆದರೆ ನಾಯಕರ ಎತ್ತರಕ್ಕೆ ಏರಿದವರು ವಿರಳ. ಇದೂ ಒಂದು ಸಾಹಿತ್ಯ ಪ್ರಕಾರವೆಂದು ಗುರುತಿಸಿ ಕೇಂದ್ರ ಸಾಹಿತ್ಯ ಅಕಾಡೆಮಿ ನಾಯಕರಿಗೆ ಪ್ರಶಸ್ತಿ ಕೊಟ್ಟಿದ್ದು ನಾಯಕರ ಬರವಣಿಗೆಗೆ ಆ ಮೂಲಕ ಕನ್ನಡ ಸಾಹಿತ್ಯಕ್ಕೆ ಸಂದ ಗೌರವ.

ನಾಯಕರಂಥ ಶಿಸ್ತಿನ ವ್ಯಕ್ತಿಗೆ ಮಾತ್ರ ಅಂಕಣ ಸಾಹಿತ್ಯ ನಿರ್ಮಾಣ ಸಾಧ್ಯ. ಏಕೆಂದರೆ ಅಂಕಣ ಬರೆದು ನಿಭಾಯಿಸುವುದು ಸುಲಭಸಾಧ್ಯವಾದ ಕೆಲಸವಲ್ಲ. ಅಂಕಣಕಾರನಿಗೆ ಸಂವೇದಿಸುವ ಮನಸ್ಸು, ಜೀವನಗ್ರಹಿಕೆ, ನಿರಂತರ ಶ್ರಮ, ಪ್ರಪಂಚದ ಆಗುಹೋಗುಗಳ ಬಗೆಗೆ ಮಾಹಿತಿ ಇರಬೇಕಾಗುತ್ತದೆ. ಅದೂ ಅಲ್ಲದೆ ಒಂದು ನಿರ್ದಿಷ್ಟ ಕಾಲಮಿತಿಯೊಳಗೆ ಅಂಕಣ ಬರೆಹಗಳು ಸಿದ್ಧಗೊಳ್ಳಬೇಕು. ಚಿಕ್ಕದಾಗಿ ಚೊಕ್ಕವಾಗಿರಬೇಕು. ಓದುಗರನ್ನು ಸೆರೆಹಿಡಿಯುವ ಮೋಹಕ ಶೈಲಿ ಇರಬೇಕು. ಭಾಷೆಯ ಮೇಲೆ ಪ್ರಭುತ್ವವಿರಬೇಕು. ಸಂವಹನ

ಚಾತುರ್ಯವಿರಬೇಕು. ಜೊತೆಗೆ ವಿಷಯ ನಿರೂಪಣೆಯಲ್ಲಿ ಸರಸತೆ ಇರಬೇಕು. ಹೀಗಿದ್ದೂ ವಸ್ತುವಿನ ಘನತೆಗೆ ಘಾಸಿಯಾಗದಂತಿರಬೇಕು. ಶೀರ್ಷಿಕೆ ಆಕರ್ಷಕವಾಗಿರಬೇಕು. ಹೀಗಾಗಿ ಅಂಕಣ ಬರಹಗಾರರು ವರ್ತಮಾನದ ಜೊತೆ ನಿರಂತರವಾಗಿ ಅನುಸಂಧಾನದಲ್ಲಿ ತೊಡಗಬೇಕು. ಈ ಎಲ್ಲ ಕಾರಣಗಳಿಂದ ಬಹಳ ದೂರದವರೆಗೆ ಅಂಕಣದ ಜವಾಬ್ದಾರಿ ನಿರ್ವಹಿಸುವುದು ಕಷ್ಟದ ವಿಚಾರ. ಇದು ಸಾಧಿತವಾದುದು ನಾಯಕರಿಗೆ ಮಾತ್ರ. ತಮಗಿದ್ದ ಸೃಜನಶೀಲ ಶಕ್ತಿಯನ್ನೂ ನಾಯಕರು ಅಂಕಣ ಬರೆಹಗಳಿಗೇ ವಿನಿಯೋಗಿಸಿದ್ದು ಅವರೊಬ್ಬ ಉತ್ತಮ ಸಾಹಿತಿಯಾಗಿದ್ದು ಅಂಕಣಕಾರ ಎಂದು ಗುರುತಿಸುವಂತಾಯ್ತು. ಅದಕ್ಕೆ ಅವರಿಗೆ ಅಭಿಮಾನವೂ ಇತ್ತು.

ಅಂಕಣ ಬರಹಗಳು ಆ ಕ್ಷಣದ ಅಭಿವ್ಯಕ್ತಿಗಳು ಎಂದು ಕಡೆಗಣಿಸುವುದು ಸಾಧ್ಯವಿಲ್ಲ. ಏಕೆಂದರೆ, ಇತಿಹಾಸದ ದಾಖಲೆಗಳಾಗಿ ಅವುಗಳಿಗೆ ಬೆಲೆ ಇದ್ದೇ ಇರುತ್ತದೆ. "ಯಾವುದೋ ಒಂದು ಘಟನೆ, ಸನ್ನಿವೇಶ, ಸಂದರ್ಭ, ನೆನಪು, ಮರೆಯದವರು, ಮರೆತುಹೋದವರು, ಸಮಕಾಲೀನ ಸಮಸ್ಯೆ –ಹೀಗೆ ಅನೇಕ ಸಂಗತಿಗಳು ಅಂಕಣಕ್ಕೆ ವಸ್ತುಗಳಾಗುವುದರಿಂದ ಇಂಥದೇ ಆಕರ, ಆಕೃತಿ ಎಂಬುದು ಇರುವುದಿಲ್ಲ. ಆದರೆ ಕಾಲನ ಜರಡಿಯನ್ನವು ಸೋಸುವುದಂತೂ ನಿಜ. ಸಣ್ಣಪುಟ್ಟ ಸಂಗತಿಗಳೂ ವಸ್ತುವಾಗಿಬಿಡುವುದರಿಂದ, ಅವಕ್ಕೆ ಹಿನ್ನೋಟ ಮುನ್ನೋಟವನ್ನು ಕಲ್ಪಿಸುವ, ಹೊಸ ಆಯಾಮವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ಯಶಸ್ವೀ ಅಂಕಣಕಾರ ಹೊರಬೇಕಾಗುತ್ತದೆ. ಅವನಿಗೆ ತನ್ನ ಕರ್ತೃತ್ವಶಕ್ತಿ ಮತ್ತದರ ಪರಿಣಾಮದ ಬಗ್ಗೆ ಒಂದು ನಿಲುವು ಇದ್ದೇ ಇರಬೇಕು. ಆಗಮಾತ್ರ ಲೋಕಶಿಕ್ಷಣದ ಉಪಕರಣಗಳನ್ನೇ ಬಳಸುತ್ತಾ ಸಮಾಜಮುಖಿಯಾಗಿ ಚಿಂತಿಸಲು ಸಾಧ್ಯ. ಏಕೆಂದರೆ ಅವನು ಸಂಸ್ಕೃತಿ ಸಾಹಿತ್ಯವನ್ನು ಸಂರಕ್ಷಿಸುವ ಕೆಲಸವನ್ನು ನಿರ್ವಹಿಸುವವನು." ಅಂಕಣಕಾರನಿಗೆ ಇರಬೇಕಾದ ಗುಣಲಕ್ಷಣಗಳೇನು ಎಂಬುದರ ಬಗ್ಗೆ ಒಂದು ಕಡೆ ಕು.ಶಿ. ಹರಿದಾಸ ಭಟ್ಟರು ಹೀಗೆ ಹೇಳುತ್ತಾರೆ: "ಅಂಕಣಕಾರ ಹಂಗಿಲ್ಲದೆ ಬರೆಯಬೇಕು, ನಿರ್ಭೀತನಾಗಿರಬೇಕು, ಸ್ಪಷ್ಟವಾದಿಯಾಗಿರಬೇಕು. ಅದೂ ಸರಿ ಇದೂ ಸರಿ ಎಂದರಾಗದು. ತೀರ ಮಿದುವಾಗಿರಕೂಡದು. ಕ್ರೂರವಾಗಿರಲೂ ಕೂಡದು. ಅವನ ಮಾತಿನಲ್ಲಿ ಮಲ್ಲಿನಾಥತನ ಇರಲೇಬೇಕು. ಸುದ್ದಿ ವಿಷಯಗಳನ್ನು ಎಲ್ಲರೂ ಸಂಗ್ರಹಿಸಬಹುದು. ಆದರೆ ಅಂಕಣಕಾರನ ದೃಷ್ಟಿಕೋನವನ್ನು ಒಲವಿನಿಂದ ಅಂಗೀಕರಿಸುವ ಸಾಮಾನ್ಯ ವಾಚಕನೇ ಒಂದು ಅಂಕಣದ

ಜನಪ್ರಿಯತೆಗೆ ಕಾರಣನಾಗುತ್ತಾನೆ. ಜನಪ್ರಿಯತೆಗಾಗಿ ತನ್ನ ಧೋರಣೆಯನ್ನು ಬದಲಾಯಿಸಿಕೊಳ್ಳದ ಗಟ್ಟಿತನವೇ ಒಬ್ಬ ಅಂಕಣಕಾರನ ವ್ಯಕ್ತಿತ್ವದ ತಿರುಳು." ಈ ಮಾತುಗಳು ನಿಜವಾದ ಅಂಕಣಕಾರನ ಅರ್ಹತೆ ತಿಳಿಸುವಂಥವೇ ಆಗಿವೆ. ಈ ಹಿನ್ನೆಲೆಯಲ್ಲಿ ಹಾಮಾನಾ ಅವರ ಅಂಕಣ ಬರಹಗಳನ್ನು ತೂಗಿ ನೋಡಿದಾಗ ಅವರ ಶ್ರೇಷ್ಠತೆಯ ಅರಿವಾಗುತ್ತದೆ. ಸತ್ಯತ್ವ, ಸ್ಫುಟತ್ವ, ರಾಜಿಯಾಗದ ಮನೋಭಾವ, ಸರ್ಕಾರವನ್ನೇ ಟೀಕಿಸುವ, ಎಂಥವರನ್ನೂ ಮುಲಾಜಿಲ್ಲದೆ ಎದುರುಹಾಕಿಕೊಳ್ಳುವ, ತಪ್ಪನ್ನು ಪ್ರತಿಪಾದಿಸುವ ನಿಷ್ಠುರತೆ –ಇವೆಲ್ಲಾ ಹಾಮಾನಾ ಅವರ ವ್ಯಕ್ತಿತ್ವದ ಗುರುತುಗಳು ಮಾತ್ರವಲ್ಲ, ಅವರ ಅಂಕಣ ಬರಹಗಳ ಸತ್ವವೂ ಹೌದು. ಆ ಕಾರಣದಿಂದಲೇ ಜನ ಹಾಮಾನಾ ಅವರ ಅಂಕಣ ಬರಹಗಳಿಗಾಗಿ ವಾರದಿಂದ ವಾರಕ್ಕೆ ಕಾದು ಕುಳಿತಿರುತ್ತಿದ್ದರು. ಎಣೆಯಿಲ್ಲದ ಜನಪ್ರಿಯತೆ ನಾಯಕರಿಗೆ ಇದರಿಂದ ಸಂದಾಯವಾಯಿತು. ಇದು ನಾಯಕರ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿತು. ದಿನದಿಂದ ದಿನಕ್ಕೆ ನಾಯಕರು ಬೆಳೆಯುತ್ತ ಹೋದರು. ಅವರ ಅಂಕಣಗಳ ಕಾರಣಕ್ಕಾಗಿಯೇ ಆಯಾ ಪತ್ರಿಕೆಗಳು, ನಿಯತಕಾಲಿಕಗಳು ಹೆಚ್ಚು ವಿತರಣೆಗೊಂಡದ್ದು ಸುಳ್ಳಲ್ಲ.

'ಅಂಕಣದ ಅಪರಂಜಿ' ಎಂದು ಸುವಿಖ್ಯಾತರಾದ ನಾಯಕರು ಅಕ್ಷರಸ್ಥರಾದರೆ ಸಾಲದು, ನಿಜವಾದ ಮನುಷ್ಯರಾಗಬೇಕು ಎಂದು ಜನಸಮುದಾಯವನ್ನು ಪರಿವರ್ತಿಸಲು ಪ್ರಯತ್ನಿಸಿದವರು. ಅಹಂಕಾರವನ್ನು ಬಿಡಲು ದಾರಿ ತೋರಿದವರು. ಕನ್ನಡ ಕಟ್ಟಬೇಕೆಂದು ಕರೆಕೊಟ್ಟವರು. ಕಟ್ಟುವ ಬಗೆಯನ್ನು ತೆರೆದಿಟ್ಟವರು. ಮನುಷ್ಯರ ಒಳಗನ್ನು ಶೋಧಿಸುತ್ತಲೇ ಅವರ ಧೋರಣೆ ಮತ್ತು ಸಾಧನೆಗಳನ್ನು ಗ್ರಹಿಸಿದವರು. ಸಾಂದರ್ಭಿಕ ಸತ್ಯಕ್ಕೆ ಸಾಕ್ಷಿಯಾದವರು. ವಸ್ತು ಯಾವುದೇ ಇರಲಿ ಅದರಲ್ಲಿ ತಮ್ಮ ಬದುಕಿನ ಶಿಸ್ತನ್ನು ಎರಕಹುಯ್ದವರು. ಸತ್ಯ ಅವರ ಅಂಕಣದಲ್ಲಿ ಒಳಸೂತ್ರವಾಗಿ, ಕ್ರಿಯಾಶೀಲವಾಗಿ ಕೆಲಸ ಮಾಡಿದೆ. ಬಹುಮುಖ ಚಲನೆಯಿಂದ ತೆರೆದುಕೊಳ್ಳುವ ಅವರ ಅಂಕಣಗಳು ಪುಟ ಮಿತಿಯಲ್ಲೇ ಅಗಾಧತೆಯನ್ನು ತುಂಬಿಕೊಡುತ್ತವೆ. ಹೀಗಾಗಿ ಅವರ ಅಂಕಣ ಬರಹಗಳ ಮೌಲ್ಯ ಸಾರ್ವತ್ರಿಕವಾದುಷ್ಟೇ ಅಲ್ಲ ಸಾರ್ವಕಾಲಿಕವಾದುದೂ ಹೌದು.

'ಸಾಹಿತ್ಯ ಸಲ್ಲಾಪ'ದ ಮೂಲಕ ಅಂಕಣ ಬರೆಹ ಆರಂಭಿಸಿದ ನಾಯಕರು, ಹದಿನೇಳಕ್ಕೂ ಹೆಚ್ಚು ಸಂಕಲನಗಳನ್ನು ಪ್ರಕಟಿಸಿದ್ದಾರೆ. ಸುಮಾರು ೧೧೨೦ ಅಂಕಣಗಳನ್ನು ಬರೆದಿದ್ದಾರೆ. 'ಸಾಹಿತ್ಯ ಸಲ್ಲಾಪ'ಕ್ಕೂ ಮೊದಲು 'ನಂದಿನಿ'

ಎಂಬ ಮಾಸಪತ್ರಿಕೆಯಲ್ಲಿ 'ಪೂರ್ಣಿಮೆಗೆ ಪತ್ರಗಳು' ಎಂಬ ಅಂಕಣವನ್ನು ಬರೆಯುತ್ತಿದ್ದರು. ಪತ್ರರೂಪದ ತಂತ್ರವನ್ನು ಅಲ್ಲಿ ಅನುಸರಿಸಿದ್ದರು. ಕಥನ ಮಾದರಿಯಲ್ಲಿ ಆ ಪತ್ರಗಳು ರೂಪಗೊಳ್ಳುತ್ತಿದ್ದವು. ಈ ತಂತ್ರವನ್ನು ನಾಯಕರು ಮುಂದೆ ತಮ್ಮ ಅಂಕಣಗಳಿಗೆ ಬಳಸಿದಂತೆ ಕಾಣುವುದಿಲ್ಲ. ಜೊತೆಗೆ ಕೆಲವು ಸಂಚಿಕೆಗಳ ನಂತರ ಆ ಮಾಸಿಕವೂ ನಿಂತುಹೋಯಿತು.

ಕನ್ನಡಪ್ರಭ, ತರಂಗ, ಪ್ರಜಾಮತ, ಕರ್ಮವೀರ, ಪ್ರಜಾವಣಿ, ಇಂಚರ, ಗ್ರಂಥಲೋಕ, ಸುಧಾ –ಹೀಗೆ ವಿವಿಧ ದೈನಿಕ ಹಾಗೂ ನಿಯತಕಾಲಿಕಗಳಲ್ಲಿ ನಾಯಕರು ಅಂಕಣ ಬರೆದರು. ಪತ್ರಿಕೆಯವರಾಗಲಿ, ಓದುಗರಾಗಲಿ, ಬರೆಯುವುದನ್ನು ನಿಲ್ಲಿಸಿ ಎನ್ನಲಿಲ್ಲ. ಏಕತಾನತೆಯಿಂದ ತಪ್ಪಿಸಿಕೊಳ್ಳಲು ತಾವೇ ಒಂದು ಕ್ಲುಪ್ತ ಅವಧಿಯ ನಂತರ ನಿಲ್ಲಿಸಿಬಿಡುತ್ತಿದ್ದರು. ಬರೆಯುವಂತೆ ಓದುಗರ ಒತ್ತಾಯ ಇದ್ದೇ ಇರುತ್ತಿತ್ತು.

ಬೇರಾರಿಗೂ ಇರದ ಸೌಲಭ್ಯವೊಂದು ಬಾಲ್ಯದಿಂದಲೇ ಅವರಲ್ಲಿ ಒಡನಾಡಿಯಾಗಿತ್ತು. ಅದು ನಾಯಕತ್ವದ ಗುಣ (Leadership Quality). ಅದು ಅವರಿಗೆ ಕನ್ನಡ ಸಾರಸ್ವತ ಲೋಕದ ಒಡನಾಟವನ್ನು ತಂದುಕೊಟ್ಟಿತ್ತು. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ದೊರಕಿದ್ದ ಬಹುದೀರ್ಘಕಾಲದ ನಿರ್ದೇಶಕ ಸ್ಥಾನ ಅವರಿಗೆ ಭಾರತದಾದ್ಯಂತ ಪರಿಚಯ ವಲಯವನ್ನು ಸೃಷ್ಟಿಸಿಕೊಟ್ಟಿತ್ತು. ಗಂಭೀರವಾದ ನಡೆನುಡಿ, ಹಿತಮಿತವಾದ ಮಾತು, ಮಾತಿನಲ್ಲಿ ಖಚಿತತೆ, ಹದಗಾರಿಕೆ, ಅಸ್ಖಲಿತತೆ, ತಪ್ಪಿನೊಡನೆ ರಾಜಿಯಾಗದ ಗುಣ ನಿಷ್ಠುರ ಮೌಲ್ಯ ಪ್ರತಿಪಾದಕ ಗುಣ ಅವರಿಗೆ ವಿಶೇಷವಾದ ವರ್ಚಸ್ಸನ್ನು ತಂದುಕೊಟ್ಟಿದ್ದವು. ಮಾಧ್ಯಮದವರು ಅವರ ಬರೆಹಕ್ಕೆ ಮುಗಿಬೀಳುತ್ತಿದ್ದರು. ಅಂಥ ಎಲ್ಲ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡ ನಾಯಕರು ಸದ್ದಿಲ್ಲದೆ ಬೆಳೆಯುತ್ತಾ ಹೋದರು. ಅದರೊಂದಿಗೆ ಅಂಕಣ ಬರಹಗಳ ಸಂಖ್ಯೆಯೂ ಬೆಳೆಯುತ್ತಾ ಹೋಯಿತು.

ಹಾಮಾನಾ ಅವರ ಅಂಕಣ ಬರಹದಲ್ಲಿ ಅವರದೇ ಆದ ಒಂದು ಸ್ವಯಂಪೂರ್ಣ ಶಿಲ್ಪವಿದೆ. ತಮ್ಮ ಅಂಕಣಗಳ ವಿಷಯಕ್ಕನುಗುಣವಾಗಿ ಅವರ ಅಭಿವ್ಯಕ್ತಿ ಇರುತ್ತದೆ. ಸಾಮಾಜಿಕ ಸಂಗತಿ, ವ್ಯಕ್ತಿಗತ ವಿಷಯ, ವ್ಯಕ್ತಿಚಿತ್ರ –ಹೀಗೆ ಒಂದೊಂದರ ನಡುವೆಯೂ ಭಿನ್ನತೆ ಇರುತ್ತದೆ. ಭಾಷಾತಜ್ಞರಾದ ಇವರಿಗೆ ಯಾವ ವಿಷಯಕ್ಕೆ ಯಾವ ಶೈಲಿ ಅನುಸರಿಸಬೇಕೆಂದು ಗೊತ್ತಿತ್ತು. ಯಾವ ವಿಷಯವನ್ನು ಯಾರಿಗೆ ಮತ್ತು ಹೇಗೆ ತಲುಪಿಸಬೇಕು ಎನ್ನುವ ತಿಳಿವಳಿಕೆ

ಅವರಿಗಿತ್ತು. ಅವರು ಬರೆದದ್ದಕ್ಕೆಲ್ಲ ಓದುಗ ಅಭಿಮಾನಿಗಳು ಸೃಷ್ಟಿಗೊಂಡರು. ಅವರ ಬರವಣಿಗೆಗಳಲ್ಲಿ ವಾಸ್ತವಿಕತೆಯ ಹಾಸು ಇರುತ್ತಿತ್ತು. ಜೊತೆಗೆ ಭವಿಷ್ಯದಲ್ಲಾಗುವ ಪರಿಣಾಮದ ನಿರ್ದೇಶನವಿರುತ್ತಿತ್ತು. ಕೆಲವೊಮ್ಮೆ ಎಚ್ಚರಿಕೆಯ ಗಂಟೆಯಾಗಿ ಕೆಲಸ ಮಾಡುವುದರೊಂದಿಗೆ ಭಾವನಾತ್ಮಕತೆಯನ್ನು ಬಿಟ್ಟುಕೊಡದೆ ಆಲೋಚನೆಗೂ ಹಚ್ಚುತ್ತಿದ್ದವು.

ತಮ್ಮ ಅಂಕಣ ಬರಹಗಳನ್ನು ನಾಯಕರೇ ಹೀಗೆ ಹೇಳಿಕೊಂಡಿದ್ದಾರೆ: "ಅಂಕಣ ಬರೆಹ ಎಷ್ಟರಮಟ್ಟಿಗೆ ಸಾಹಿತ್ಯವಾಗಬಹುದು, ಸೃಜನಶೀಲವಾಗಿರಬಹುದು ಎಂಬುದನ್ನು ಅನೇಕ ಲೇಖಕರು ತೋರಿಸಿಕೊಟ್ಟಿದ್ದಾರೆ. ಅದನ್ನು ಕನ್ನಡದಲ್ಲಿ ಮಾಡಿ ತೋರಿಸಲು ನಾನು ಪ್ರಯತ್ನಪಟ್ಟಿದ್ದೇನೆ. ಸಮಕಾಲೀನ ಜೀವನದ ಯಾವ ಮುಖವಾದರೂ ಅಂಕಣದ ವಸ್ತುವಾಗಬಹುದು. ನಮ್ಮ ದೇಶದ ವಿವಿಧ ಭಾಷೆಗಳಲ್ಲಿ ಅಂಕಣದ ವಸ್ತು ಸಾಮಾನ್ಯವಾಗಿ ರಾಜಕೀಯವಾಗಿದೆ. ನಾನು ಮಾತ್ರ ಅದನ್ನೇ ಗಂಭೀರವಾಗಿ ನನ್ನ ಬರವಣಿಗೆಗೆ ತೆಗೆದುಕೊಂಡಿಲ್ಲ. ಸಾಹಿತ್ಯ ಸಂಸ್ಕೃತಿಗಳೇ ನನ್ನ ಅಂಕಣದ ಪ್ರಧಾನ ವಸ್ತು. ಈ ಬರೆಹದಲ್ಲಿ ನಾನು ಯಾವತ್ತೂ ಒಂದು ಸ್ವಂತ ದೃಷ್ಟಿಕೋನವನ್ನು ಬಿಂಬಿಸಲು ಯತ್ನಿಸಿದ್ದೇನೆ. ಬರೆಹಗಳು ವಿಪುಲ ಮಾಹಿತಿಗಳನ್ನು ಒಳಗೊಂಡಿರುತ್ತವೆ. ಅಂಕಣಕಾರನ ಅಭಿಪ್ರಾಯಗಳನ್ನು ಒಳಗೊಂಡಿರುತ್ತವೆ. ಇದನ್ನು ಎಷ್ಟರಮಟ್ಟಿಗೆ ಸುಂದರವಾಗಿ, ಕಲಾತ್ಮಕವಾಗಿ, ಪರಿಣಾಮಕಾರಿಯಾಗಿ ಹೇಳಬಹುದೆಂಬುದನ್ನು ತೋರಿಸಲು ನಾನು ಪ್ರಯತ್ನಿಸಿದ್ದೇನೆ."(ಸಿಂಚನ, ಪು. ೧೫) ಈ ಮಾತುಗಳಲ್ಲಿ ವ್ಯಷ್ಟಿಚಿಂತನೆಗಿಂತ ಸಮಷ್ಟಿಚಿಂತನೆ ಮುಖ್ಯವಾದುದು ಎಂಬ ತಾತ್ತ್ವಿಕತೆ ಎದ್ದುಕಾಣುತ್ತದೆ. ಒಂದು ತಾತ್ವಿಕತೆಗೆ ಬದ್ಧವಾಗಿದ್ದಲ್ಲಿ ಜೀವನವನ್ನು ಸುಂದರವಾಗಿಸುವ ತುಡಿತ ಹಾಗೂ ನೆಮ್ಮದಿಯ ನೆಲೆಯನ್ನು ನಿರ್ಮಿಸಲು ಸಾಧ್ಯ. ಅಂಥ ನಿಲುವನ್ನು ಹಾಮಾನಾ ತಮ್ಮ ಅಂಕಣದಲ್ಲೂ ಕಾಣಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

ಮೂಲತಃ ನಾಯಕರದು ಶೋಧಕ ಗುಣ, ಸಂವೇದನಾಶೀಲ ಗುಣ. ತೂಕತಪ್ಪದ, ಸಮಚಿತ್ತದ ಮನಃಸ್ಥಿತಿ. ಆದ್ದರಿಂದಲೇ ಇವರ ಕಣ್ಣು ದಾಟಿ ಯಾವ ವಿಷಯವೂ ಜಾರಿ ಹೋಗುತ್ತಿರಲಿಲ್ಲ. ಸಹಜವಾಗಿಯೇ ಇವರ ಅಂಕಣದ ಬೀಸು ದೊಡ್ಡದು ಹಾಗೂ ವೈವಿಧ್ಯಮಯವಾದುದು. ಇಲ್ಲಿ ವ್ಯಕ್ತಿಚಿತ್ರಗಳಿವೆ; ಸರಕಾರದ ಬಗ್ಗೆ ಟೀಕೆ ಟಿಪ್ಪಣಿಗಳಿವೆ; ಕನ್ನಡದ ಬಗೆಗಿನ ಕಾಳಜಿ ಇದೆ, ದಿನನಿತ್ಯದ ಸಮಸ್ಯೆಗಳಿವೆ; ಸಾಹಿತ್ಯದ ವಿವಿಧ ಪ್ರಕಾರಗಳ ವಿಶ್ಲೇಷಣೆ ಇದೆ;

ಗಡಿಭಾಷಾ ಸಮಸ್ಯೆಯಿದೆ; ಪುಸ್ತಕ ವಿಮರ್ಶೆಯಿದೆ, ಸಮೀಕ್ಷೆ ಇದೆ; ಶ್ರದ್ಧಾಂಜಲಿ ಅಶ್ರುತರ್ಪಣವಿದೆ; ಪ್ರಶಸ್ತಿ ಪುರಸ್ಕಾರಗಳ ನೆಲೆಬೆಲೆ ಇದೆ; ಅವುಗಳ ನಿಷ್ಕರ್ಷೆಯಿದೆ; ಜೀವನದ ಸಂಕತನಗಳಿವೆ; ಒಟ್ಟಿನಲ್ಲಿ ಓದುಗನ ಪ್ರಜ್ಞಾ ವಿಸ್ತರಣೆಗೆ ಬೇಕಾದ ಎಲ್ಲಾ ಅಂಶಗಳನ್ನು ಇವರ ಅಂಕಣಗಳು ಹೊಂದಿವೆ. ಆ ಮೂಲಕ ಸಾಹಿತ್ಯ–ಸಂಸ್ಕೃತಿಯ ಸಂಗತಿಗಳೊಡನೆ ಓದುಗ ಅನುಸಂಧಾನಿಸಲು ಸಾಧ್ಯ ಎನ್ನುವಷ್ಟು ಅರಿವಿನ ಒರತೆಯನ್ನು ಉಕ್ಕಿಸುತ್ತವೆ; ಹೆಚ್ಚಿಸುತ್ತವೆ.

ನಾಯಕರ ಅಂಕಣ ಬರೆಹಗಳಲ್ಲಿ ಪ್ರಧಾನವಾಗಿ ಇಂದಿಗೂ ಪ್ರಸ್ತುತವಾದುದು, ಅವರ ಕನ್ನಡದ ಕಾಳಜಿ, ಕನ್ನಡದ ಹಿತರಕ್ಷಣೆಯನ್ನು ಯಾವ್ಯಾವ ನೆಲೆಯಿಂದ ಮಾಡಬಹುದು, ರಕ್ಷಿಸಬಹುದು ಎಂಬುದನ್ನು ತೋರಿಸುತ್ತಿದ್ದರು. ಕನ್ನಡಕ್ಕೇ ಅವರ ಪ್ರಥಮ, ದ್ವಿತೀಯ ಹಾಗೂ ಅಂತಿಮ ಆದ್ಯತೆ. ಬಾಲ್ಯದಿಂದಲೂ ಜಾಗೃತಗೊಂಡಿದ್ದ ಅವರ ಕನ್ನಡ ಪ್ರೀತಿ ಎಂದಿಗೂ ಮಸಳಿಸಲಿಲ್ಲ. ಬೀದಿಗಿಳಿದು ಹೋರಾಟ ಮಾಡುವ ಪರಿಯವಲ್ಲ ಇವರ ಕನ್ನಡ ಅಭಿಮಾನ. ಬರವಣಿಗೆ ಅವರ ಅಸ್ತ್ರವಾಗಿತ್ತು, ಚಾಟಿಯಾಗಿತ್ತು. ಕನ್ನಡದ ಇಚ್ಛಾಶಕ್ತಿ ಇರದ ರಾಜಕೀಯ ನೇತಾರರನ್ನು, ಸರ್ಕಾರವನ್ನು ತಮ್ಮ ಕಟುಟೀಕೆಗಳಿಂದಲೇ ಎಚ್ಚರಿಸುತ್ತಿದ್ದರು. ಕನ್ನಡಿಗರ ಒಳ್ಳೆಯತನ ದೌರ್ಬಲ್ಯ, ಅಸಹಾಯಕತೆಯಾಗದಂತೆ ಸದಾ ಜಾಗ್ರತೆಯಿಂದಿರಬೇಕು ಎನ್ನುತ್ತಿದ್ದರು. "ನಾವು ಕನ್ನಡಿಗರು. ನಮ್ಮ ದೌರ್ಬಲ್ಯಗಳನ್ನು ಸದ್ಗುಣಗಳೆಂದು ವರ್ಣಿಸುವುದರಲ್ಲಿ ಗಟ್ಟಿಗರು. ಏನಾದರೂ ಆಗಲಿ, ಸದ್ಯ ಬದುಕಿದ್ದರೆ ಸಾಕು ಎಂದು ಜಾರಿಕೊಳ್ಳುವ ಪ್ರವೃತ್ತಿಯವರು. ಉಸಿರಾಗಿರುವ ಕನ್ನಡವನ್ನೇ ಸ್ವಾರ್ಥಕ್ಕಾಗಿ ಬಳಸಿಕೊಳ್ಳಬಲ್ಲ ಜಾಣರು. ಅಪಾಯ ಸಾಹಸಗಳಿಗೆ ದೂರಾಗಿರುವ ಅಲ್ಪತೃಪ್ತರು. ಒಬ್ಬರ ಕಾಲನ್ನು ಇನ್ನೊಬ್ಬರು ಹಿಡಿದೆಳೆಯುವ ವೃತ್ತಿಯಲ್ಲಿ ನಿಸ್ಸೀಮರು. ಹೇಳುವುದೊಂದು, ಮಾಡುವುದೊಂದು ಎನ್ನುವುದಕ್ಕೆ ಅತ್ಯುತ್ತಮ ಉದಾಹರಣೆ ಒದಗಿಸಬಲ್ಲವರು." ಕನ್ನಡಿಗರ ಜಾಯಮಾನ, ಮನಃಸ್ಥಿತಿಗಳನ್ನು ಹೀಗೆ ಅನಾವರಣ ಮಾಡುವ ನಾಯಕರು, ಹೀಗಿದ್ದರೆ ಮುಂದೆ ಕನ್ನಡದ ಗತಿಯೇನು? ಎಂದು ಹಲಬುತ್ತಾರೆ. ಭಾಷೆಯ ಬಾಹ್ಯ ಹಾಗೂ ಆಂತರಿಕ ಬದಲಾವಣೆಗೆ ಸಂಬಂಧಿಸಿದ ಖಚಿತ ಮಾಹಿತಿ ಅರಿತ ನಾಯಕರು ಪರಭಾಷೆಗಳ ಪ್ರಭಾವ ಕನ್ನಡವನ್ನು ಎಷ್ಟು ಅಧೀರಗೊಳಿಸಿದೆ ಎಂಬುದನ್ನೂ ಪ್ರಸ್ತಾಪಿಸಿದ್ದಾರೆ. ಹಿಂದಿ, ಇಂಗ್ಲಿಷ್, ಸಂಸ್ಕೃತ ಹಾಗೂ ಸೋದರ ಭಾಷೆಗಳಾದ ತಮಿಳು, ತೆಲುಗು ಮೊದಲಾದ ಭಾಷೆಗಳ ಕನ್ನಡದ ಮೇಲೆ ಮಾಡುತ್ತಿರುವ

ದುರಾಕ್ರಮಣವನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. ಈ ನಿಟ್ಟಿನ ಅವರ ಅಂಕಣಗಳು, ಅವುಗಳಲ್ಲಿ ಮಂಡಿತವಾಗಿರುವ ಅಂಶಗಳು ಇಂದಿಗೂ ಪ್ರಸ್ತುತವಾಗಿವೆ.

ನಾಯಕರ ಪ್ರಕಾರ ಭಾಷೆ ಏಕತೆಯ ಸಂಕೇತ. ಒಂದು ಜನರ ಮನೋಭಾವ. ಅವ್ಯಕ್ತ ಮನಸ್ಸಿನ ವ್ಯಕ್ತರೂಪ, ಸಂಸ್ಕೃತಿಯ ಪ್ರತಿರೂಪ. ಯಾವ ಭಾಷೆಯೂ ಪ್ರಪಂಚದಲ್ಲಿ ಪರಿಪೂರ್ಣ ಎನಿಸಿಕೊಂಡಿಲ್ಲ. ಆದರೆ ಎಲ್ಲ ಭಾಷೆಗಳಿಗೂ ತನ್ನತನ ಎಂಬುದಿರುತ್ತದೆ. ಇದನ್ನು ಅರ್ಥ ಮಾಡಿಕೊಂಡರೆ ಭಾಷಾ ಸಮಸ್ಯೆ ಒಂದು ಸಮಸ್ಯೆಯೇ ಅಲ್ಲ ಎನ್ನುವ ನಾಯಕರು ಭಾಷೆಯ ಬಗೆಗೆ ಪೂರ್ವಗ್ರಹ ಇರದವರು. ಭಾಷೆ ಉದ್ಯೋಗವಲ್ಲ, ನಮ್ಮ ಜೀವನವಿಧಾನ ಎಂಬ ಅರಿವಿಲ್ಲದ ಕನ್ನಡಿಗರು, ಇಂಗ್ಲಿಷ್‌ಗೆ ಮುಗಿಬೀಳುವ ಬಗೆಗೆ ಅವರಿಗೆ ನಿರಾಶೆ, ವಿಷಾಧವಿದೆ. ಕನ್ನಡಿಗರು ಇಂಗ್ಲಿಷ್ ಎಂಬ ಬಂಗಾರದ ಜಿಂಕೆಯ ಹಿಂದೆ ಬಿದ್ದಿದ್ದಾರೆ. ಸರಕಾರವೂ ಇದಕ್ಕೆ ಪೂರಕವಾಗಿರುವುದನ್ನು ಟೀಕಿಸುತ್ತಾರೆ. "ಇಂಗ್ಲಿಷ್ ಒಂದು ಪೊಳ್ಳು ಪ್ರತಿಷ್ಠೆಯ ಸಂಕೇತವಾಗಿ ಜನಸಾಮಾನ್ಯರಿಂದ ಬೇರೆಯಾದ ಒಂದು ವರ್ಗವನ್ನು ಸೃಷ್ಟಿಸುತ್ತದೆ. ಖೋಟಾ ಬುದ್ಧಿವಂತರನ್ನು ನಿರ್ಮಿಸಿ ರಾಷ್ಟ್ರ ಜೀವನವನ್ನು ವಂಚಿಸುತ್ತಿದೆ... ಕನ್ನಡದ ಮೂಲಕ ಶಿಕ್ಷಣ ಕೊಡುವುದು ಕರ್ನಾಟಕ ಸರ್ಕಾರದ ಧೋರಣೆ. ಅದರಿಂದ ಅದು ಜಾರುವುದು ಹೇಗೆ ಸಾಧ್ಯ. ಅಧಿಕಾರಕ್ಕೆ ಬರುವಾಗ ಒಂದು ಧೋರಣೆ, ಬಂದ ಮೇಲೆ ಇನ್ನೊಂದು ಧೋರಣೆ ಎಂಬುದು ಪ್ರಜಾಪ್ರಭುತ್ವದ ಲಕ್ಷಣವಲ್ಲ. ನಮ್ಮಲ್ಲಿ ಈಗ ಮಂತ್ರಿಗಳ ಸಂಖ್ಯೆ, ಹೆಂಡದಂಗಡಿಗಳ ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಗಳು ಒಂದೇ ಸಮನೆ ಹೆಚ್ಚುತ್ತಿವೆ. ಇದನ್ನೇ ಪ್ರಗತಿ ಎಂದು ಭ್ರಮಿಸಬಾರದು. ಇಂಗ್ಲಿಷ್ ಮಾಧ್ಯಮ ಬಂಗಾರದ ಜಿಂಕೆ. ಈಗ ಇಡೀ ದೇಶ ಅದರ ಹಿಂದೆ ಓಡುತ್ತಿದೆ. ಕೊನೆಗೆ ಸಿಕ್ಕುವುದು ರಾಕ್ಷಸನ ಹೆಣ ಎಂಬುದು ನಮಗೆ ಬೇಗ ಅರ್ಥವಾಗಬೇಕು." ಈ ಕಾಠಿಣ್ಯದ ಮಾತುಗಳಲ್ಲಿ ನಗ್ನಸತ್ಯದ ಅನಾವರಣವಿದೆ. ಇಂಥ ಮಾತುಗಳೇ ನಾಯಕರ ಅಂಕಣ ಬರಹದ ಮಹತ್ವಕ್ಕೆ ಕಾರಣವಾದವು.

ಕನ್ನಡಿಗರು 'ಕನ್ನಡ ವ್ರತ'ವನ್ನು ಸ್ವೀಕರಿಸಬೇಕು. ಆ ವ್ರತ ಕೇವಲ ಸಹಾನುಭೂತಿಯ ಸಂಗತಿಯಲ್ಲ; ಯಾಂತ್ರಿಕವಾದುದಲ್ಲ; ಆಚರಣೆಯಲ್ಲ; ಮಾನಸಿಕವಾದ ಪ್ರತಿಜ್ಞೆ; ಪಣ. ಶಿಕ್ಷಣ, ಕೋರ್ಟು, ಕಛೇರಿ, ಸಾರ್ವಜನಿಕ ಜೀವನ, ದಿನಬಳಕೆಯಲ್ಲಿ ಕನ್ನಡ ಮನಸ್ಸು ಕ್ರಿಯಾಶೀಲವಾಗುವುದು. ಕುವೆಂಪು ಎಲ್ಲೆಲ್ಲೂ ಕನ್ನಡವನ್ನು ಕಾಣುತ್ತಾರೆ, ಉಸಿರಾಡುತ್ತಾರೆ. ಅದೇ ಅವರಿಗೆ ತ್ರಾಣ,

ಪ್ರಾಣ. ಎಲ್ಲ ಕನ್ನಡಿಗರಲ್ಲೂ ಅಂಥ ಮನಸ್ಸು ಉಂಟಾಗಬೇಕು ಎಂಬುದು ನಾಯಕರ ಹಂಬಲ. ಇದಕ್ಕೆ ಅಡ್ಡಗೋಡೆಯಾಗಿರುವುದು ಇಂಗ್ಲಿಷ್ ಶಿಕ್ಷಣ. ಅದರ ಪರಿಣಾಮದ ಬಗೆಗೆ ಪೋಷಕರು ಚಿಂತಿಸುತ್ತಿಲ್ಲ ಎಂಬ ಆತಂಕ. ಏಕೆಂದರೆ ಇಂಗ್ಲಿಷಿನ ಮೋಹ ಮಕ್ಕಳಲ್ಲಿರುವ ಬೆಳೆಯುವ ಮನಸ್ಸನ್ನೇ ಕೊಯ್ಯುತ್ತಿದೆ. ನಾಯಿಕೊಡೆಗಳಂತೆ ಹುಟ್ಟುತ್ತಿರುವ ಕಾನ್ವೆಂಟ್‌ಗಳು ಹಾಮಾನಾ ಅವರ ಪ್ರಕಾರ "ಗಿಣಿಪಾಠದ ಕೇಂದ್ರಗಳು". ಮಕ್ಕಳು ಶಾಲೆಗೆ ಹೋಗಿ ಜ್ಞಾನಿಗಳಾಗುವ ಬದಲು ಇಂಗ್ಲಿಷ್‌ನ ಗಿಳಿಪಾಠ ಒಪ್ಪಿಸುತ್ತಾರೆ. ಪೋಷಕರೇ ವಿದ್ಯಾರ್ಥಿಗಳಾಗುತ್ತಿರುವ ದುರಂತ ನಮ್ಮೆದುರು ನಿಂತಿದೆ. ಭಾಷಾ ಹೇರಿಕೆಯಿಂದಾಗಿ ಮಗುವಿನ ಸೃಜನಶೀಲಗುಣ ಮುಕ್ಕಾಗುತ್ತದೆ; ಸ್ವತಂತ್ರವಾಗಿ ಆಲೋಚಿಸುವ ಶಕ್ತಿಯನ್ನೇ ಕಳೆದುಕೊಳ್ಳುತ್ತದೆ. ಶಿಕ್ಷಣವೂ ಅರ್ಥ ಕಳೆದುಕೊಳ್ಳುತ್ತದೆ. ಇದು ಕೇವಲ ಶಿಕ್ಷಣ ಮಾಧ್ಯಮದ ಪ್ರಶ್ನೆಯಲ್ಲ, ಕನ್ನಡದ ಪ್ರಶ್ನೆ. ಅದರ ಉಳಿವಿನ ಪ್ರಶ್ನೆ. ಅಗತ್ಯ ಸಂದರ್ಭ ಬಿಟ್ಟಂತೆ ಕನ್ನಡವನ್ನೇ ಬಳಸಬೇಕು. ಕನ್ನಡ ಭಾಷಾ ಬಳಕೆ ಪ್ರತಿಷ್ಠೆಯಾಗಿ ಮಾರ್ಪಡಬೇಕು ಎಂದು ಬಯಸುವ ಹಾಮಾನಾ ಅವರಿಗೆ ಕನ್ನಡದ ಬಗ್ಗೆ ಖಚಿತ ನಿಲುವಿತ್ತು; ನೋವಿತ್ತು, ಆಕ್ರೋಶವಿತ್ತು. ಅದನ್ನು 'ಕನ್ನಡ ಮನಸ್ಸು' ಎಂಬ ಅಂಕಣದಲ್ಲಿ ಹೀಗೆ ಸ್ಪಷ್ಟೀಕರಿಸಿದ್ದಾರೆ: "ಒಂದು ರೀತಿಯಲ್ಲಿ ಕನ್ನಡದ ಪ್ರಶ್ನೆ ವಿಷವರ್ತುಲದಲ್ಲಿ ತೊಳಲುತ್ತಿದೆ. ಆಡಳಿತದಲ್ಲಿ ಕನ್ನಡ ಕಡ್ಡಾಯವಾಗದೆ ಶಿಕ್ಷಣದಲ್ಲಿ ಕನ್ನಡ ಬರುವುದಿಲ್ಲ. ಶಿಕ್ಷಣದಲ್ಲಿ ಕನ್ನಡ ನೆಲೆಯಾಗದೆ ಜನಜೀವನದಲ್ಲಿ ಉಳಿಯುವುದಿಲ್ಲ. ಜನಜೀವನದಲ್ಲಿ ಕನ್ನಡ ತುಂಬದೆ ಆಡಳಿತದಲ್ಲಿ ಅದು ಬರುವುದಿಲ್ಲ. ಎಲ್ಲಿ ಯಾವುದು ಬರಬೇಕೆಂಬುದೇ ಸಮಸ್ಯೆ. ವಿವಿಧ ಭಾಗಗಳಲ್ಲಿ ಹರಿದು ಹಂಚಿಹೋಗಿದ್ದ ಕರ್ನಾಟಕ ರೂಪುಗೊಂಡ ಉದ್ದೇಶವೇ ಎಲ್ಲವೂ ಏಕಕಾಲದಲ್ಲಿ ನಡೆಯಬೇಕೆಂಬುದೇ ಆಗಿದೆ. ಆಡಳಿತ, ಶಿಕ್ಷಣ, ಜನಜೀವನಗಳನ್ನು ಕನ್ನಡ ತುಂಬಿಕೊಳ್ಳಬೇಕು. ಆಗ ಮಾತ್ರ ಕರ್ನಾಟಕದ ಮೂಲ ಉದ್ದೇಶ ಸಾರ್ಥಕವಾಗುತ್ತದೆ. ತಮ್ಮ ಭಾಷೆ ಸಂಸ್ಕೃತಿಗಳ ಬಗೆಗೆ ಕನ್ನಡಿಗರಂತೆ ಅಭಿಮಾನಶೂನ್ಯರಾದ ಜನ ಭಾರತದಲ್ಲಿ ಬೇರೆ ಯಾರೂ ಇಲ್ಲ. ಕನ್ನಡಿಗರಿಗಿಂತ ಅಸಹಾಯಕರಾದ ಜನ ಇದ್ದಾರು, ಅಭಿಮಾನಶೂನ್ಯರು ಮಾತ್ರ ಖಂಡಿತ ಇಲ್ಲ, ನಿರಭಿಮಾನಿಗಳೂ ಇರಲಾರರು."

ಪುಸ್ತಕಪ್ರಿಯರಾದ ನಾಯಕರು ತಮ್ಮ ಕನಸಿನಲ್ಲೂ ಕೊಡುವ ಪ್ರಾಮುಖ್ಯತೆ ಪುಸ್ತಕ ಸಂಸ್ಕೃತಿಗೇ. ನಾವು ಮೊದಲು ಪುಸ್ತಕ ಕೊಳ್ಳುವ ಪರಿಸರವನ್ನು

ನಿರ್ಮಿಸಬೇಕೆಂಬುದು ಅವರ ಆಶಯ. ಅದಕ್ಕೆ ಅಕ್ಷರಕ್ರಾಂತಿಗೂ ಪುಸ್ತಕ ಪ್ರಕಟಣೆಗೂ ಪರಸ್ಪರ ಸಂಬಂಧವನ್ನು ಕಲ್ಪಿಸುತ್ತಾರೆ. ಈ ನಿಟ್ಟಿನಲ್ಲಿ ಸರ್ಕಾರದ ಪಾತ್ರವೂ ದೊಡ್ಡದು ಎನ್ನುತ್ತಾರೆ. ಸಗಟು ಖರೀದಿ, ಖರೀದಿಗೆ ಇಡುವ ಹಣ, ಕೊಳ್ಳುವ ವ್ಯವಸ್ಥೆ, ಮಧ್ಯವರ್ತಿಗಳ ಹಾವಳಿ, ಮಂತ್ರಿಗಳ ಇಷ್ಟಾಯಿಷ್ಟ – ಇದೆಲ್ಲದರ ಹುಳುಕನ್ನು ಆಡಿ ತೋರಿಸುತ್ತಾರೆ. ಪರಿಹಾರವನ್ನೂ ಸೂಚಿಸುತ್ತಾರೆ. 'ಸರ್ಕಾರ ಫೈಲು' ಸಂಸ್ಕೃತಿಯಿಂದ ಹೊರಬಂದು 'ಪುಸ್ತಕ ಸಂಸ್ಕೃತಿ' ಬೆಳೆಸಬೇಕೆಂಬುದು ಅವರ ಒತ್ತಾಯ. 'ಅಕ್ಷರ ಕಲಿಯಿರಿ' ಎನ್ನುವುದು ಬಹಳ ದೊಡ್ಡ ಮಾತಲ್ಲ; ಕಲಿತ ಅಕ್ಷರ ಮರೆತುಹೋಗದಂತೆ ನೋಡಿಕೊಳ್ಳುವುದೇ ಹೆಚ್ಚಿನ ಜವಾಬ್ದಾರಿ.(ಪುಸ್ತಕೋದ್ಯಮಕ್ಕೆ ಪ್ರೋತ್ಸಾಹ) ಕನ್ನಡದಲ್ಲಿ ಒಳ್ಳೆಯ ಪುಸ್ತಕಗಳು ಬರುತ್ತಿಲ್ಲ ಎಂಬ ನೆಪವೊಡ್ಡಿ ವಿದೇಶೀ ಪುಸ್ತಕಗಳನ್ನು ಕೊಳ್ಳುವವರನ್ನು ಛೇಡಿಸುವ ನಾಯಕರು 'ಜ್ಞಾನ ಯಾವಾಗಲೂ ಆಮದಿನ ವಿಷಯವಾಗಬಾರದು; ರಫ್ತಿನ ವಿಷಯವೂ ಆಗಬೇಕು' ಎಂದು ವಾದಿಸುತ್ತಾರೆ.

'ಕಸಾಪ – ಕೆಲವು ವಿಚಾರಗಳು' ಎಂಬ ಅಂಕಣದಲ್ಲಿ ಹಾಮಾನಾ ಅವರು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ವಿಚಾರಗೋಷ್ಠಿಗಳು, ಕವಿಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ವೇದಿಕೆ, ಭೋಜನದಲ್ಲಿ ಪಾಲು ಪಡೆದ ಭಕ್ಷ್ಯಗಳು, ಸಮ್ಮೇಳನದ ಸಾಧಕ–ಬಾಧಕಗಳು –ಎಂಬ ಬಹುದೊಡ್ಡ ಟಿಪ್ಪಣಿಗಳನ್ನು ಮಂಡಿಸಿದ್ದಾರೆ. ಈ ಅಂಕಣ ಓದಿದರೆ ಸಾಕು ಸಮ್ಮೇಳನ ಸಚಿತ್ರವಾಗಿ ಕಣ್ಣೆದುರು ನಡೆದೇಬಿಡುತ್ತದೆ. ನವಿರಾದ ಹಾಸ್ಯವನ್ನು ಸಿಂಪಡಿಸುತ್ತಲೇ ಸಮ್ಮೇಳನಗಳು ವ್ಯವಸ್ಥಿತವಾಗಿ ಹೇಗೆ ಜರುಗಬೇಕು? ಎಂಬುದನ್ನು ತಿಳಿಯಪಡಿಸುತ್ತಾರೆ.

ಸಾಮಾನ್ಯವಾಗಿ ನಾಯಕರು ತಪ್ಪದೇ ಇಂಥ ಸಮ್ಮೇಳನಗಳಲ್ಲಿ ಭಾಗಿಯಾಗುತ್ತಿದ್ದರು. ಕಾರ್ಯಕ್ರಮಗಳಲ್ಲಿ ಅವರ ಹೆಸರಿರುವುದು ಯಾವಾಗಲೂ ಅವರಿಗೆ ಮುಖ್ಯವಾಗಿರಲಿಲ್ಲ. ಅದೊಂದು ಕರ್ತವ್ಯ ಎಂದು ಭಾವಿಸಿದ್ದರು. 'ಸಮ್ಮೇಳನಗಳು ತಮ್ಮ ಬದುಕಿನ ಭಾಗವೇ ಆಗಿವೆ' ಎಂಬುದು ಅವರ ಧೋರಣೆಯಾಗಿತ್ತು. ಹಾಗೆ ಮಾಡುತ್ತಿದ್ದುದರಿಂದ ಅವರಿಗೆ ಹಿರಿ–ಕಿರಿಯ ಎಲ್ಲ ಸಾಹಿತಿಗಳ ನವೀಕರಣವಾಗುತ್ತಿತ್ತು; ಸ್ನೇಹ ವೃದ್ಧಿಸುತ್ತಿತ್ತು. ಕನ್ನಡ ಪ್ರೀತಿ, ಪುಸ್ತಕ ಪ್ರೀತಿ ಕುಡಿಯೊಡೆಯುವುದು ಇಂಥ ಸಮ್ಮೇಳನದಲ್ಲೇ ಎಂಬುದು ಅವರ ಅಭಿಮತ. ಸಮ್ಮೇಳನಗಳು 'ಜಾತ್ರೆ'ಗಳು ಎಂದು ಟೀಕೆ ಮಾಡುವವರ ಪಕ್ಷಪಾತಿ ಆಗಿರಲಿಲ್ಲ ನಾಯಕರು. 'ನುಡಿಹಬ್ಬ'ಗಳು ಜರುಗಬೇಕು. ಅವುಗಳಿಗೆ ಮಾಡುವ

ಖರ್ಚು ದುಂದುವೆಚ್ಚವಲ್ಲ ಎನ್ನುವುದು ಅವರ ಸ್ಪಷ್ಟ ಅಭಿಪ್ರಾಯ. ಕರ್ನಾಟಕದ ಉದ್ದಗಲಕ್ಕೂ ಇರುವ ಸಾಹಿತಿ ಬಳಗಕ್ಕೆ ಇವೇ ನಿಜವಾದ ವೇದಿಕೆಗಳು ಅವರ ಪ್ರಕಾರ.

'ಕನ್ನಡ ಸಾಹಿತ್ಯ ಪರಿಷತ್ತು' ಸರ್ಕಾರದ ಸಹಾಯಧನದಿಂದ ನಡೆಯುತ್ತಿರುವ ಸಂಸ್ಥೆ. ಅದು ಸ್ವಾಯತ್ತತೆ ಪಡೆಯಬೇಕೆಂಬುದು ಅವರ ಆಶಯ. ಅದಕ್ಕಾಗಿ 'ಒಬ್ಬ ಕನ್ನಡಿಗ ಒಂದು ರೂಪಾಯಿ' ಯೋಜನೆಯನ್ನು ಮುಂದಿಟ್ಟವರು ನಾಯಕರು. ಅದನ್ನು 'ಅಮೃತನಿಧಿ' ಎಂದು ಕರೆಯಲಾಯಿತು. ಕಾಲದ ಅಪೇಕ್ಷೆಗೆ ತಕ್ಕಂತೆ 'ಕಸಾಪ: ನಡೆಯಬೇಕಾದ ದಾರಿ'ಯನ್ನು ನಿಚ್ಚಳವಾಗಿ ಕಾಣಿಸುತ್ತಾರೆ. ಯಾವುದೇ ಕಾರಣಕ್ಕೂ "ಪರಿಷತ್ತು ಸರಕಾರದ ದನಿಯಾಗಬೇಕಿಲ್ಲ; ಆಗಬಾರದು. ಕನ್ನಡದ ಸರ್ವಾಂಗೀಣ ಅಭಿವೃದ್ಧಿಯ ವಿಷಯದಲ್ಲಿ ಸರಕಾರ ತಪ್ಪು ಹೆಜ್ಜೆ ಇಡುವ ಸಂದರ್ಭದಲ್ಲಿ ಅದನ್ನು ಎಚ್ಚರಿಸಿ ಮಾರ್ಗದರ್ಶನ ನೀಡುವ ಶಕ್ತಿಯನ್ನು ಗಳಿಸಿಕೊಳ್ಳಬೇಕು. ಕನ್ನಡ ಭಾಷೆ ಸಾಹಿತ್ಯಗಳ ವಿಷಯದಲ್ಲಿ ಪರಿಷತ್ತಿನದೇ ಕೊನೆಯ ಮಾತಾಗಬೇಕು" ನಾಯಕರ ನೇರ ನುಡಿ ಇವು.

ನಾಯಕರು ತಮ್ಮ ಅಂಕಣ ಬರಹಗಳಲ್ಲಿ ಪುಸ್ತಕ ವಿಮರ್ಶೆಗೂ ಆದ್ಯತೆ ನೀಡಿದ್ದಾರೆ. ಪುಸ್ತಕದ ಎದುರು ನಾನು ತುಂಬಾ ಚಿಕ್ಕವನು ಎಂದು ಭಾವಿಸುವ ಹಾಮಾನಾ ಯಾವತ್ತೂ ಜ್ಞಾನಕ್ಕೆ ತಲೆಬಾಗಿದವರು. ವಿಮರ್ಶೆ ಎಂಬುದು ಆಧುನಿಕ ಪರಿಭಾಷೆಯಂತೆ ಅವರನ್ನು ಕಾಡಿದ್ದಿಲ್ಲ. ಕನ್ನಡ ಸಂಸ್ಕೃತಿಯ ಹೊರನಿಂತು ಅವರು ಪುಸ್ತಕವನ್ನು ವಿಮರ್ಶಿಸುವುದಿಲ್ಲ. ಸಹೃದಯ ಓದುಗನ ಪ್ರತಿಕ್ರಿಯೆ ಅವರದು. ಹೀಗೆ ಮಾಡುವಾಗ ಅವರು ಕೇವಲ ಕೃತಿಗೆ ಮಾತ್ರ ಸೀಮಿತವಾಗುವುದಿಲ್ಲ. ಕೃತಿಕಾರನ ಧೋರಣೆ ಮತ್ತು ಕೃತಿಯ ವಸ್ತುವನ್ನು ಸಮನ್ವಯಿಸಿಕೊಂಡು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಕೃತಿಕಾರನ ವ್ಯಕ್ತಿತ್ವ ದಾಖಲಿಸುವುದನ್ನು ಮರೆಯುವುದಿಲ್ಲ. ಉದಾಹರಣೆಗೆ ಎ.ಎನ್. ಮೂರ್ತಿರಾಯರ 'ಸಂಜೆಗಣ್ಣಿನ ಹಿನ್ನೋಟ' ಕೃತಿಯ ಬಗ್ಗೆ ಬರೆಯುತ್ತಾ, ಅಂಕಣದ ಹೆಸರನ್ನು 'ಸಂಜೆಗಣ್ಣು ಸ್ಪಷ್ಟನೋಟ' ಎಂದು ಕರೆಯುತ್ತಾರೆ. "ಅವರೊಬ್ಬ ವಿಶಿಷ್ಟ ವ್ಯಕ್ತಿ... ತಮ್ಮ ವಯಸ್ಸು, ಜ್ಞಾನ, ಕೀರ್ತಿ, ಅನುಭವಗಳನ್ನೆಲ್ಲಾ ನಿರಾಡಂಬರವಾಗಿ ತಮ್ಮ ಹೆಗಲುಗಳ ಮೇಲೆ ಕೂರಿಸಿಕೊಂಡಿರುವ ಅವರೊಡನೆ ಸಮಯ ಕಳೆಯುವುದೇ ಒಂದು ಅನುಭವ,

ಶಿಕ್ಷಣ, ಮೇಲಾಗಿ ಸಂಸ್ಕಾರ!"(ಸಂಬಲ, ಪು.೭) ಇಲ್ಲೆಲ್ಲ ಮೂರ್ತಿರಾಯರ ಬಗೆಗೆ ಮೆಚ್ಚುಗೆ, ಅಭಿಮಾನ, ಔದಾರ್ಯದ ಪುರಸ್ಕಾರವಿದೆ.

ಹಾಮಾನಾ ಅವರ ಅಂಕಣ ಬರಹಗಳ ಸೊಗಸನ್ನು ಓದಿಯೇ ಅನುಭವಿಸಬೇಕು. ಪುಟ್ಟ ಪುಟ್ಟ ವಾಕ್ಯಗಳ ರಚನೆಯ ಕೌಶಲ ಅವರಿಗೆ ಮಾತ್ರವೇ ಸಿದ್ಧಿಸಿರುವಂಥದು. ಅವರ ಸೂಕ್ಷ್ಮಪ್ರಜ್ಞೆ ಅನೇಕ ವೇಳೆ ಅಚ್ಚರಿ ಮೂಡಿಸುತ್ತದೆ. ಎಚ್ಚೆಸ್ಕೆ ಇನ್ನೊಬ್ಬ ಕನ್ನಡದ ಹೆಸರಾಂತ ಅಂಕಣಕಾರ. ಅವರ 'ಮೇಘಲಹರಿ'ಯನ್ನು ಕುರಿತು "ಇವುಗಳಲ್ಲಿ ಕಲ್ಪನಾ ವಿಲಾಸವಿದೆ; ನವುರಾದ ಹಾಸ್ಯ ವ್ಯಂಗ್ಯಗಳಿವೆ; ಅನಿರೀಕ್ಷಿತವಾದ ತಿರುವುಗಳಿವೆ; ಓದಿ ಮುಗಿಸಿದ ಮೇಲೆ ಅವನ್ನೇ ಕುರಿತು ಯೋಚಿಸುವ ಅಗತ್ಯವಿದೆ. ತೆಳುವಾದ ನಮ್ಮ ಪ್ರಬಂಧ ಸಾಹಿತ್ಯ ಈ ಪ್ರಕಟಣೆಯಿಂದ ಸ್ವಲ್ಪವಾದರೂ ಮೈತುಂಬಿಕೊಳ್ಳುತ್ತದೆ.(ಸೊಗಸಾದ ಪ್ರಬಂಧಗಳು) – ನಾಯಕರ ಈ ಮಾತುಗಳಲ್ಲಿ ಅವರ ರಚನೆ, ಅನುಭವ, ಅಧ್ಯಯನ, ಸ್ಥಾನನಿರ್ದೇಶನ, ಮೂರ್‍ನಾಲ್ಕು ಪದಗಳಲ್ಲೇ ಸೃಷ್ಟಿಸುವ ಪರಿಸರ, ಆತ್ಮೀಯತೆ –ಹೀಗೆ ಹತ್ತಾರು ಅಂಶಗಳು ಓದುಗನ ಗಮನಕ್ಕೆ ಬರುತ್ತವೆ.

ಡಾ. ಹಿರೇಮಲ್ಲೂರ ಈಶ್ವರನ್ ಮತ್ತು ಹಾಮಾನಾ ಆಪ್ತಸ್ನೇಹಿತರು. ಈಶ್ವರನ್ ಸಮಾಜಶಾಸ್ತ್ರಜ್ಞರು. ದೂರದ ಕೆನಡಾದಲ್ಲಿ ವಾಸ್ತವ್ಯ ಹೂಡಿದವರು. ಮಾನವಶಾಸ್ತ್ರ ಕೂಡ ಈಶ್ವರನ್ ಅವರ ತಜ್ಞತೆಯ ವಿಷಯ. ಈ ಹಿನ್ನೆಲೆಯಲ್ಲಿ ಅವರು ವೀರಶೈವ ಧರ್ಮವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ 'ಬಸವಣ್ಣ ಮತ್ತು ಲಿಂಗಾಯತಧರ್ಮ' ಕೃತಿಯನ್ನು ಹೊರತಂದರು. ಇದರಲ್ಲಿ ವೀರಶೈವಧರ್ಮವನ್ನು ಒಂದು ಸ್ವತಂತ್ರ ಧರ್ಮ ಎಂದು ಪ್ರತಿಪಾದಿಸುವ ಪ್ರಯತ್ನ ಮಾಡಿದ್ದಾರೆ. ಆ ಭರದಲ್ಲಿ ಬಸವಣ್ಣ ಕರ್ಮಸಿದ್ಧಾಂತವನ್ನಾಗಲೀ, ಮೋಕ್ಷಸಿದ್ಧಾಂತವನ್ನಾಗಲೀ ಒಪ್ಪಲಿಲ್ಲವೆಂದು ವಾದಿಸುತ್ತಾರೆ. ಬಸವಣ್ಣ ಬಳಸುವ ಮೋಕ್ಷ ಮತ್ತು ಭಕ್ತಿ ಪದಗಳನ್ನು ವಿಶಾಲಾರ್ಥದಲ್ಲಿ ಗ್ರಹಿಸಬೇಕೆನ್ನುತ್ತಾರೆ. ಬಸವಣ್ಣನವರನ್ನು ಭಕ್ತಿಭಂಡಾರಿ ಎಂದು ಕರೆದಿದ್ದರ ಬಗೆಗೆ ಅವರ ತಕರಾರಿದೆ. ಅದೇ ಹೆಸರಿನ ಅಂಕಣ ಬರೆದ ನಾಯಕರು ಈಶ್ವರನ್ ಅವರಿಗೆ ತಾರ್ಕಿಕವಾಗಿಯೇ ಅನೇಕ ಪ್ರಶ್ನೆಗಳನ್ನು ಒಡ್ಡುತ್ತಾರೆ. ಭಕ್ತಿಧರ್ಮಕ್ಕೂ ವರ್ಣಾಶ್ರಮ ಧರ್ಮಕ್ಕೂ ಇರುವ ಸಾವಯವತೆಯನ್ನು ಹೇಳುವ ಮೂಲಕವೇ ಈಶ್ವರನ್ ಅವರ ಧೋರಣೆ ಮತ್ತು ಕಲ್ಪನೆಯನ್ನು ನಿರಾಕರಿಸುತ್ತಾರೆ. ಈಶ್ವರನ್ ಪ್ರತಿಷ್ಠಾಪಿಸಬಯಸುವ ಸಂಗತಿಗೆ ಪುಷ್ಟಿಕೊಡುವಂಥ ಸಮರ್ಥನೆಗಳಿಲ್ಲ ಎನ್ನುತ್ತಾರೆ. ಆ ಕಾರಣಕ್ಕೆ ಪ್ರಸ್ತುತ ಕೃತಿ "ಬೌದ್ಧಿಕ ಪ್ರಚೋದನೆಯನ್ನು

ಉಂಟುಮಾಡುವ ಪುಸ್ತಕ", "ಚಿಂತನೆಗೆ ಅಗತ್ಯವಾದ ಆಹಾರ"ವನ್ನು ಒದಗಿಸುತ್ತದೆ ಎಂಬ ಮೆಚ್ಚಿಗೆಯನ್ನಷ್ಟೇ ಸೂಚಿಸುತ್ತಾರೆ. ಹಾಮಾನಾ ಅವರಿಗೆ ಧರ್ಮ ಮತ್ತು ನಂಬಿಕೆಗಿರುವ ಅನನ್ಯತೆಯ ಸ್ಪಷ್ಟ ಅರಿವಿದೆ. ಆದ್ದರಿಂದಲೇ 'ಬಸವನ ಬೋಧನೆ'ಯ ಮುಂದಿನ ಹೆಜ್ಜೆಗಳನ್ನು ಲೇಖಕರು ಗುರುತಿಸಬೇಕಿತ್ತು. ವಿವೇಚಿಸುವ ಅಗತ್ಯವಿತ್ತು ಎನ್ನುತ್ತಾರೆ. ಮುಂದುವರಿದು "ಒಂದು ಧರ್ಮ ಪ್ರತ್ಯೇಕವಾಗಿ ಸ್ಥಾಪನೆಗೊಳ್ಳುವುದು ಜನರ ನಂಬಿಕೆ ಅನುಷ್ಠಾನಗಳಿಂದಲೇ ಹೊರತು ಆಂತರಿಕ ವಿಚಾರಗಳಿಂದಷ್ಟೇ ಅಲ್ಲ... ಲಿಂಗಾಯತ ಧರ್ಮ ಸ್ವತಂತ್ರ ಅಸ್ತಿತ್ವವನ್ನು ಉಳ್ಳದ್ದೇ ಅಲ್ಲವೇ ಎಂಬುದಕ್ಕಿಂತ, ಇಂದು ಅದು ಬಸವ ಮಾರ್ಗದಲ್ಲಿ ನಡೆದಿದೆಯೇ ಎಂಬುದು ಮಹತ್ವದ ಮಾತು"(ಸಂಬಲ, ಪು. ೧೦೧) ಎಂದು ಹೇಳುತ್ತಾರೆ. ಇಲ್ಲಿ ಹಾಮಾನಾ ಅವರ ವಿಮರ್ಶೆಯ ದಿಕ್ಸೂಚಿ ಇದೆ. ಏಕೆಂದರೆ ಧರ್ಮ ಜೀವಿಯ ಭಾವುಕತೆಗೆ ಸಂಬಂಧಿಸಿದ ವಿಚಾರ. ಆದರೆ ಅದು ಮಾಧ್ಯಮದ ವಸ್ತುವಾದಾಗ ವೈಚಾರಿಕತೆ, ಸಾಮಾಜಿಕ, ಸಾಂದರ್ಭಿಕ, ವರ್ತಮಾನದ ನೆಲೆಯಿಂದಲೂ ವಿಶ್ಲೇಷಿಸುವ ಅಗತ್ಯವಿದೆ. ಒಂದು ಧರ್ಮದ ಹುಟ್ಟಿಗೂ, ಮರುಸ್ಥಾಪನೆಗೂ, ಇಳಿಮುಖಕ್ಕೂ ಸಮಕಾಲೀನವಾದ ಸಾಮಾಜಿಕ ಕಾರಣಗಳು ಇದ್ದೇ ಇರುತ್ತವೆ. ಯಾವುದೂ ಉದ್ಭವವಾಗುವುದಿಲ್ಲ. ಧರ್ಮ ಕಾಲಮಾನದ ಜನರ ಅಪೇಕ್ಷೆಯ ಮೊತ್ತವಾಗಿ ಪರಿಷ್ಕೃತ ರೂಪದಲ್ಲಿ ಬೇರೆ ಬೇರೆ ಸ್ವರೂಪದಲ್ಲಿ ಮರುಹುಟ್ಟನ್ನು ಪಡೆಯುತ್ತಲೇ ಇರುತ್ತದೆ. ಭಾರತದ ಯಾವ ಧರ್ಮಗಳೂ ಇದಕ್ಕೆ ಹೊರತಾಗಿಲ್ಲ.

ಈ ಅಂಕಣವನ್ನು ಮುಂದಿಟ್ಟುಕೊಂಡು ಹೇಳಲೇಬೇಕಾದ ಮಾತು ಎಂದರೆ ಹಾಮಾನಾ ಅವರ ಸ್ನೇಹಕ್ಕೂ ಮತ್ತು ಅವರ ವಸ್ತುನಿಷ್ಠ ಅಭಿವ್ಯಕ್ತಿಗೂ ಸಂಬಂಧ ಕಲ್ಪಿಸುವಂತಿಲ್ಲ ಎಂಬುದನ್ನು ಒಂದು ಮಾನಸಿಕ ದೂರವನ್ನು ಕಾಯ್ದುಕೊಂಡೇ ಪುಸ್ತಕದ ತಿರುಳನ್ನು ಹಾಮಾನಾ ಗ್ರಹಿಸಿರುವುದು. ಕೃತಿ ವಸ್ತು ಅವರಿಗೆ ಮುಖ್ಯವಾಗಿರುವಷ್ಟು ಕೃತಿಕಾರ ಮುಖ್ಯವಾಗುವುದಿಲ್ಲ. ವ್ಯಕ್ತಿಚಿತ್ರದಲ್ಲಿ ವ್ಯಕ್ತಿಯ ವ್ಯಕ್ತಿತ್ವ ಮುಖ್ಯವಾಗುವಷ್ಟು ಕೃತಿ ಮುಖ್ಯವಾಗುವುದಿಲ್ಲ. ಇಂಥ ಅಂತರವನ್ನಿಟ್ಟುಕೊಂಡು ಅಂಕಣ ಬರೆದು 'ಸೈ' ಎನಿಸಿಕೊಳ್ಳುವುದು ಕಷ್ಟ.

ಎಲ್ಲಾ ಅಂಕಣಗಳಿಗೂ ಮೇಲಿನ ಮಾತುಗಳನ್ನು ಅನ್ವಯಿಸಿ ಹೇಳುವುದು ಕಷ್ಟ. ಕೆಲವೊಮ್ಮೆ ಅಂತರ ಮೀರಿ ಹೆಚ್ಚು ಒಲವನ್ನು ವ್ಯಕ್ತಪಡಿಸುವ ಅಂಕಣಗಳೂ ಇವೆ. ಉದಾ: 'ಕವಿಯೊಬ್ಬರ ಸಾಹಿತ್ಯದೃಷ್ಟಿ' ಅಂಕಣ. ಇದು ಕೈಯಾರ ಕಿಞ್ಞಣ್ಣ ರೈ ಅವರನ್ನು ಕುರಿತದ್ದು. ಬಹುಶಃ ಅವರು ಕನ್ನಡದ ನೆಲಕ್ಕೆ

ಎರವಾದವರು ಆದರೂ ಕನ್ನಡಕ್ಕೆ ಅಂಟಿಕೊಂಡಿದ್ದರ ಫಲವೋ, ವಯೋಮಾನದ ಕಾರಣವೋ ಗೊತ್ತಿಲ್ಲ. ಅವರ ಬಗ್ಗೆ ಹೆಚ್ಚು ಎನಿಸುವಷ್ಟು ಮೆಚ್ಚುಗೆ ಸೂಚಿಸಿಬಿಡುತ್ತಾರೆ. ಮುಖ್ಯವಾಗಿ ರೈ ಅವರ ಬರೆಹದಲ್ಲಿ ಹಾಮಾನಾ ಅವರು "ಸ್ವಾತಂತ್ರ್ಯ ಹೋರಾಟಗಾರನೊಬ್ಬನ ದೇಶಪ್ರೇಮ... ಸರ್ವಸಮಾನತೆಯ ಆಧಾರದ ಮೇಲೆ ನವಸಮಾಜ ನಿರ್ಮಾಣಕ್ಕಾಗಿ ಹಂಬಲಿಸುವ ಭಾವಜೀವಿಯೊಬ್ಬನ ಆಶಯ... ಕಾಲಕಾಲಕ್ಕೆ ಬದಲಾಗುತ್ತ ಬಂದ ಸಾಹಿತ್ಯ ಸಂವೇದನೆಗಳಿಗೆ ಕುರುಡಾಗದ ನಿಲುವು"(ಸಂಬಲ, ಪು. ೬೫)ಗಳನ್ನು ಗುರುತಿಸುತ್ತಾರೆ. ಇಲ್ಲೆಲ್ಲಾ ಹಾಮಾನಾ ಅವರ ಪುಸ್ತಕ ವಿಮರ್ಶಾದೃಷ್ಟಿ ನಮಗೆ ಗೋಚರಿಸುವುದಿಲ್ಲ. ಬದಲಾಗಿ ಕೈಯಾರ ಕಿಞ್ಞಣ್ಣ ರೈ ಅವರ ಜೀವನ ದೃಷ್ಟಿಕೋನ ಮತ್ತು ಮನೋಭಾವದ ಮೇಲೆ ವೈಯಕ್ತಿಕವಾದ ಬೆಳಕು ಚೆಲ್ಲುತ್ತಿರುವಂತೆ ಕಾಣುತ್ತದೆ.

ನಾಯಕರು ಮಹಿಳಾ ಕೃತಿಗಳನ್ನು ಕುರಿತು ಹೆಚ್ಚು ವಿಮರ್ಶಿಸುವುದಕ್ಕೆ ಹೋಗಿಲ್ಲ. ಹಾಮಾನಾ ಅವರು ಬರೆಯುತ್ತಿದ್ದ ಕಾಲಕ್ಕೆ ಅವರ ಅಭಿರುಚಿ ಮತ್ತು ಆಯ್ಕೆಗೆ ಹೊಂದುವಂಥ ಲೇಖಕಿಯರ ಕೃತಿಗಳು ಅವರಿಗೆ ಸಿಗದಿರಬಹುದು. ಆದರೂ ಇಳಾ ವಿಜಯಾ ಅವರ 'ಮಾತಿನಿಂದ ಲೇಖನಿಗೆ' ಕುರಿತು ಹಾಮಾನಾ ಅಂಕಣ ಬರೆದಿದ್ದಾರೆ. ವಿಜಯಾ ಅವರು ಸಾಹಿತ್ಯ, ಪತ್ರಿಕೋದ್ಯಮ, ಕಾದಂಬರಿ, ಸಣ್ಣಕಥೆ, ಅಂಕಣ ಬರೆಹಗಳ ಜೊತೆಜೊತೆಗೆ ಬೀದಿ ನಾಟಕಗಳ ರಚನೆಗಳ ಮೂಲಕ ಪ್ರಸಿದ್ಧಿಗೆ ಬಂದವರು. ಇವರ ಬರವಣಿಗೆಯಲ್ಲಿ ನಾಯಕರು ನಾಟಕೀಯತೆ, ಕಲ್ಪನೆಯ ಕುಸುರು... ಜೀವನ ನೋಡುವ ಪ್ರಬುದ್ಧ ದೃಷ್ಟಿಯನ್ನು ಗುರುತಿಸುತ್ತಾರೆ. ವಿಜಯಾ ಅವರ ಅಂಕಣಗಳು ತೋರಿಕೆಯ ತಿಳಿಯನ್ನು ಒಳಗೊಂಡಿಲ್ಲ. ಬದಲಾಗಿ ವಾಸ್ತವದ ಬಗ್ಗಡವನ್ನು ಬಯಲು ಮಾಡಿವೆ... ಎಂಬುದು ಅವರು ಮೆಚ್ಚುಗೆಯ ನುಡಿ. ಮುಂದುವರಿದು "ಕುತೂಹಲದ ಕಣ್ಣು, ತೆರೆದ ಕಿವಿ, ಉದಾರ ಹೃದಯ, ಮರುಗುವ ಮನಸ್ಸು, ಸೃಜನಾತ್ಮಕ ಪ್ರತಿಭೆ – ಈ ಎಲ್ಲದರ ಮಿಶ್ರಣ ಈ ಬರಹಶಿಲ್ಪ" ಎಂದು ಧಾರಾಳವಾಗಿ ಹೊಗಳುವ ಹಾಮಾನಾ ಕೃತಿಯ ಅರೆಕೊರೆಯನ್ನು ತಪ್ಪದೆ, ನೋವಾಗದ ರೀತಿಯಲ್ಲಿ ಸೂಚಿಸುತ್ತಾರೆ.

ಹಾಮಾನಾ ಅಂಕಣ ಬರಹಗಳಲ್ಲಿ ಬಹುಪಾಲು, ಸಿಂಹಪಾಲು ಸಲ್ಲುವುದು ವ್ಯಕ್ತಿಚಿತ್ರಗಳಿಗೆ. ವ್ಯಕ್ತಿಚಿತ್ರಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ದುಡಿದ ಮಹನೀಯರಿದ್ದಾರೆ. ಇವರಲ್ಲಿ ಜಾತಿ, ಭಾಷೆ, ವರ್ಗ, ಗಡಿ, ವಯೋಮಾನವನ್ನು ದಾಟಿ ದೇಶದ,

ನಾಡಿನ ಹಿತಕಾಯ್ದವರಿದ್ದಾರೆ; ಭಾವೈಕ್ಯತೆ ಸಾಧಿಸಿದವರಿದ್ದಾರೆ; ಹುಟ್ಟು ಹೋರಾಟಗಾರರಿದ್ದಾರೆ; ಸಮಾಜದ ವಾರಸುದಾರರಿದ್ದಾರೆ. ಹಾಮಾನಾ ಅವರ ಆತ್ಮೀಯ ವಲಯಕ್ಕೆ ಸೇರಿದವರಿದ್ದಾರೆ; ನಿಕಟ ಪರಿಚಯವಿಲ್ಲದವರೂ ಇದ್ದಾರೆ. ಮುಖ್ಯವಾಗಿ ಮರೆತುಹೋದ ಮಹಾನುಭಾವರಿದ್ದಾರೆ; ಮರೆಯಲಾರದ, ಮರೆಯಬಾರದ ಹಿರಿಯರೂ ಇದ್ದಾರೆ. ವ್ಯಕ್ತಿ ಯಾರೇ ಆಗಿರಲಿ ಅವರನ್ನು ಅವರೊಂದಿಗಿನ ಘಟನೆಯೊಂದನ್ನು ತಮ್ಮ ಸ್ಮೃತಿಪಟಲದ ಮೇಲೆ ತಂದುಕೊಂಡು ಒಂದು ಚೌಕಟ್ಟಿಗೆ ಒಳಪಡಿಸಿ ರೂಪಿಸುವ ಹಾಮಾನಾ ಅವರ ವ್ಯಕ್ತಿಚಿತ್ರಗಳು ನಿರೂಪಣಾ ಧಾಟಿಯಿಂದಲೇ ಓದುಗರನ್ನು ಸೆಳೆಯುತ್ತವೆ; ಆಸಕ್ತಿ ಹುಟ್ಟಿಸುತ್ತವೆ; ಕುತೂಹಲ ಕೆರಳಿಸುತ್ತವೆ. ಏಕೆಂದರೆ ಈ ವ್ಯಕ್ತಿಚಿತ್ರಗಳಲ್ಲಿ ಹಾಮಾನಾ ವ್ಯಕ್ತಿಯ ವ್ಯಕ್ತಿತ್ವದ ಜೊತೆಗೆ ಒಳ–ಹೊರಗಿನ ಬದುಕನ್ನು ಮುಖ್ಯವಾಗಿಸುತ್ತಾರೆ. ಅವರ ಸಾಧನೆಯ ಶ್ರೇಷ್ಠತೆಯನ್ನು ಮೌಲ್ಯೀಕರಿಸಲು ಪ್ರಯತ್ನಿಸುತ್ತಾರೆ.

ನಾಯಕರು ಸೃಜಿಸಿರುವ ವ್ಯಕ್ತಿಚಿತ್ರಗಳನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು. ಮೊದಲನೆಯ ಗುಂಪಿಗೆ ಸೇರುವಂಥವು ನೆನಪಿನ ಚಿತ್ರವಾಗಿ ಬರುವ ಶ್ರದ್ಧಾಂಜಲಿ ಸಲ್ಲಿಸಿದ ವ್ಯಕ್ತಿಚಿತ್ರಗಳು. ಪ್ರಶಸ್ತಿ ಪುರಸ್ಕಾರಗಳು, ಷಷ್ಟ್ಯಬ್ಧಿ, ಪುಸ್ತಕ ಬಿಡುಗಡೆ ಇತ್ಯಾದಿ ಸಂದರ್ಭಗಳ ಹಿನ್ನೆಲೆಯಲ್ಲಿ ಚಿತ್ರಿಸಲ್ಪಟ್ಟ ವ್ಯಕ್ತಿಚಿತ್ರಗಳು ಎರಡನೆಯ ಗುಂಪಿಗೆ ಸೇರಿಸಬಹುದಾದವು. ಇಲ್ಲಿನ ಎಲ್ಲರೂ ಪ್ರಾದೇಶಿಕ ಇಲ್ಲವೇ ರಾಷ್ಟ್ರೀಯಮಟ್ಟದಲ್ಲಿ ಖ್ಯಾತನಾಮರು. ಸಾಹಿತ್ಯ ಸಂಸ್ಕೃತಿಯ ವಕ್ತಾರರು. ಹಾಮಾನಾ ಅವರ ಪಾಲಿಗೆ ಶ್ರದ್ಧಾಂಜಲಿ ಕೇವಲ ಅಶ್ರುತರ್ಪಣವಲ್ಲ; ನೆನಪಿನ ಜರಡಿಯೂ ಅಲ್ಲ. ಆ ನೆಪದಲ್ಲಿ ಅವರ ಸಾಧನೆ ಸಿದ್ಧಿಯ ಪುನರಾವಲೋಕನ; ಸ್ಥಾನ ನಿರ್ದೇಶನ. ಈ ಶ್ರದ್ಧಾಂಜಲಿಯ ಪಟ್ಟಿಯಲ್ಲಿ ಸಮಕಾಲೀನವಾಗಿ ವಿಧಿವಶರಾದವರಲ್ಲದೆ, ಸಾವಿನ ನಂತರವೂ ಶತಮಾನೋತ್ಸವದ ಅಂಗವಾಗಿ ಸಂಸ್ಮರಣ ಗ್ರಂಥ ರೂಪ ಪಡೆದವರೂ ಸೇರಿದ್ದಾರೆ. ಅಂಥವರ ಪಟ್ಟಿ ದೊಡ್ಡದಿದೆ. ಆ ದೊಡ್ಡ ಪಟ್ಟಿಯಲ್ಲಿ ಸಾಹಿತಿಗಳಿದ್ದಾರೆ; ನಾಟಕಕಾರರಿದ್ದಾರೆ; ರಾಜಕೀಯಸ್ಥರಿದ್ದಾರೆ; ಸಂಗೀತಗಾರರಿದ್ದಾರೆ; ಅಧಿಕಾರಿಗಳಿದ್ದಾರೆ; ದೇಶವಿದೇಶಗಳ ಜನರಿದ್ದಾರೆ; ಉದ್ಯಮಿಗಳಿದ್ದಾರೆ; ಮಾಧ್ಯಮದ ಮಿತ್ರರಿದ್ದಾರೆ; ಪ್ರವಾದಿಗಳೂ ಇದ್ದಾರೆ. ಹೀಗೆ ತರಾವರಿ ಜನ, ತರಾವರಿ ಭಾಷೆ, ತರಾವರಿ ಪ್ರಾದೇಶಿಕತೆಯಿಂದ ಬಂದವರಿದ್ದಾರೆ. ಒಂದೇ ಒಂದು ಏಕಸೂತ್ರತೆ ಎಂದರೆ ಬಹುತೇಕ ಜನ, ಪ್ರತ್ಯಕ್ಷ

ಯಾ ಪರೋಕ್ಷವಾಗಿ ನಾಯಕರ ಸಂಪರ್ಕದಲ್ಲಿದ್ದವರೇ, ಒಡನಾಡಿದವರೇ ಆಗಿರುವುದು ವಿಶೇಷ. ಉದಾಹರಣೆಗೆ, ಎಂ. ಮರಿಯಪ್ಪ ಭಟ್ಟ, ಅನುಪಮಾ ನಿರಂಜನ, ಆಶಾಪೂರ್ಣದೇವಿ, ದೌಲತ್‌ಸಿಂಗ್ ಕೊಠಾರಿ, ನೂರುಲ್ ಹಸನ್, ಎ.ಕೆ. ರಾಮಾನುಜನ್, ಜೀಶಂಪ, ಗುಂಡೂರಾವ್ ಚಿದಂಬರ ದೀಕ್ಷಿತ್, ವರದರಾಜ ಹುಯಿಲಗೋಳ, ಮಾಸ್ತಿ, ಗೋಯೆಂಕಾ, ಕಡಿದಾಳ್ ಮಂಜಪ್ಪ, ದೇವರಾಜ ಅರಸು, ಮಲ್ಲಿಕಾರ್ಜುನ ಮನಸೂರ, ಹೊನ್ನಪ್ಪ ಭಾಗವತರ್ – ಮುಂತಾದವರು ನಾಯಕರ ಸ್ಮೃತಿಯ ಮೂಲಕ ಅಂಕಣ ಬರಹಗಳಲ್ಲಿ ಶಾಶ್ವತವಾಗಿದ್ದಾರೆ.

ಹಾಮಾನಾ ಅವರ ವ್ಯಕ್ತಿಚಿತ್ರವೆಂದರೆ ಭೂಪಟಕ್ಕೆ ಕಟ್ಟುಹಾಕಿದಂತೆ. ಸಹಜ–ಸಂಯಮದ ಶಬ್ದಶಿಲ್ಪ. ಯಾರಿಗೆ ಎಷ್ಟು ಹೇಳಿದರೆ ಚೆನ್ನ ಎಂಬ ಅರಿವು, ಹೇಗೆ ಹೇಳಬೇಕು ಎಂಬ ನಿರ್ದಿಷ್ಟತೆ ಅವರಿಗಿತ್ತು. ಇದರಿಂದಾಗಿ ಆತ್ಮೀಯತೆಯ ಜೊತೆಜೊತೆಗೆ ವ್ಯಕ್ತಿಯ ಸಾಧನೆಯ ಅಗಾಧತೆಯ ಅರಿವನ್ನೂ ಮೂಡಿಸುತ್ತಾರೆ. ಅವರ ನಿರೂಪಣೆಯ ರೀತಿಯಿಂದಲೇ ಚಿತ್ರಿತ ವ್ಯಕ್ತಿ ಮತ್ತು ಹಾಮಾನಾ ಅವರ ಸ್ನೇಹ, ಬೌದ್ಧಿಕ ಸಂಬಂಧಗಳು ಓದುಗನಿಗೆ ದಕ್ಕುತ್ತವೆ. ತಾವು ಚಿತ್ರಿಸುತ್ತಲೇ ವ್ಯಕ್ತಿಯ ಬದುಕಿನ ನಿಲುವನ್ನು ಪ್ರಕಟಿಸಲು ಅವಕಾಶ ಕಲ್ಪಿಸಿಕೊಳ್ಳುತ್ತಾರೆ. ಹೀಗಾಗಿ ಸಮಗ್ರತೆಯ ಸ್ಥೂಲ ರೇಖಾಚಿತ್ರ ಲಭ್ಯವಾಗಿಬಿಡುತ್ತದೆ. ಉದಾಹರಣೆಗೆ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದ ಅಧ್ಯಕ್ಷರಾಗಿದ್ದ ಕೊಠಾರಿಯವರು ಗತಿಸಿದಾಗ ಹಾಮಾನಾ ಮನಸ್ಸು ಮಿಡಿಯುವುದು ಹೀಗೆ: "ಕೆಲವರಿರುತ್ತಾರೆ; ನಮಗೆ ಗೊತ್ತಿಲ್ಲದಂತೆಯೇ ಅವರು ನಮ್ಮ ಬದುಕನ್ನು ತುಂಬಿಕೊಳ್ಳುತ್ತಾರೆ; ನಮ್ಮ ಮೇಲೆ ಪ್ರಭಾವ ಬೀರುತ್ತಾರೆ. ಅವರು ವೈಯಕ್ತಿಕವಾಗಿ ನಮಗೆ ಹತ್ತಿರದವರಾಗಿರುವುದಿಲ್ಲ. ಆದರೂ ನಿಕಟ ಎನ್ನಿಸಿಬಿಡುತ್ತಾರೆ. ಅಂಥವರು ತೀರಿಕೊಂಡಾಗ ನಮಗೆ ಏನನ್ನೋ ಕಳೆದುಕೊಂಡೆವು ಎನ್ನಿಸುತ್ತದೆ. ಒಂದು ಬಗೆಯ ವಿಚಿತ್ರ ವ್ಯಥೆಯನ್ನು ಅನುಭವಿಸುತ್ತೇವೆ." ಹೀಗೆ ಪ್ರಾರಂಭವಾಗುವ ಕೊಠಾರಿಯವರ ನೆನಪು ಅವರ ಮೊದಲ ಭೇಟಿಯಿಂದ ತೆರೆದುಕೊಳ್ಳುತ್ತಾ ಹೋಗುತ್ತದೆ. ಟ್ಯೂಟರ್ ಆಗಿ ವೃತ್ತಿಜೀವನದ ಆರಂಭಿಸಿದ ಕೊಠಾರಿ ವಿಶ್ವವಿದ್ಯಾಲಯಗಳನ್ನು ನಿರ್ಮಿಸುವಂಥ ಹುದ್ದೆಗೆ ಏರಿದ್ದರ ಹಿಂದೆ ಅವರ ಸಹಜ ಪ್ರತಿಭೆ, ಸತತ ಪರಿಶ್ರಮ, ದೂರದೃಷ್ಟಿ, ಸಹೋದ್ಯೋಗಿಗಳನ್ನು ನಡೆಸಿಕೊಳ್ಳುತ್ತಿದ್ದ ರೀತಿ, ವಿಜ್ಞಾನದ ಮನಸ್ಸು ಹೇಗೆಲ್ಲ ಕಾರಣವಾದವು ಎಂಬುದನ್ನು ವಿವರಿಸುತ್ತಾರೆ. ದೇಶದ ಪ್ರಗತಿಯ ಬಗ್ಗೆ, ವಿಜ್ಞಾನ ತಾಂತ್ರಿಕತೆಗಳು

ಮನುಷ್ಯ ಜೀವನಕ್ಕೆ ಉಪಯುಕ್ತವಾಗುವ ಬಗೆಗೆ ಅವರ ಒಲವು ನಿಲುವುಗಳೇನು ಎಂಬುದನ್ನು ಪ್ರಕಟಪಡಿಸುತ್ತಾರೆ. ಕೊಠಾರಿಯವರ ಪರಿಚಯದೊಂದಿಗೆ ಅನೇಕ ಇತಿಹಾಸದ ದಾಖಲೆಗಳು ನಮಗೆ ಸಿಗುವುದು ಮುಖ್ಯ ಸಂಗತಿ. ಶ್ರೇಷ್ಠ ಕಾಲೇಜುಗಳಿಗೆ ಸ್ವಾಯತ್ತತೆ ಕೊಡುವುದು, ಶಾಲೆಗಳಲ್ಲಿ ತ್ರಿಭಾಷಾಸೂತ್ರ, ಮಾತೃಭಾಷಾ ಮಾಧ್ಯಮದ ಬಗ್ಗೆ ಒಲವು ತೋರಿದ್ದು, ಸೇವಾ ಆಯೋಗದ ಪರೀಕ್ಷೆಗಳಿಗೆ ಪ್ರಾದೇಶಿಕ ಭಾಷಾ ಬಳಕೆ, ಮಾಧ್ಯಮಿಕ ಶಿಕ್ಷಣವನ್ನು ಉದ್ಯೋಗಮುಖಿಯಾಗಬಯಸಿದ್ದು, ಇವತ್ತಿನ ಸೆಮಿಸ್ಟರ್, ಕ್ರೆಡಿಟ್ ಸಿಸ್ಟಮ್‌ಗಳನ್ನು ತರುವ ಅಗತ್ಯವನ್ನು ನಿರ್ದೇಶಿಸಿದ್ದು –ಇವೆಲ್ಲ ಕೊಠಾರಿಯವರ ಶೈಕ್ಷಣಿಕ ಚಿಂತನೆಯ ಫಲಶ್ರುತಿಗಳು. ಅವರ ಬಗೆಗೆ ಬರೆಯುತ್ತಾ ನಾಯಕರು "ಕೊಠಾರಿ ಅವರು ಮನಸ್ಸು ಮಾಡಿದ್ದರೆ ಗೌರವ ಡಾಕ್ಟರೇಟ್ ಪದವಿಗಳನ್ನು ಅಂಚೆಚೀಟಿಗಳಂತೆ ಸಂಗ್ರಹಿಸಬಹುದಿತ್ತು... ನಾನೊಲ್ಲೆ ಎಂದರು. ಅಂಥವರು ಬಹಳ ಸಿಗುವುದಿಲ್ಲ. ಅಂಥವರ ನೆನಪು ನಮ್ಮನ್ನು ಕಾಯುತ್ತಿರಲಿ"(ಭಾರತಧರ್ಮ, ಸಂ. ೧, ಪು. ೯೬) ಎಂದಿದ್ದಾರೆ. ಈ ಅಂಕಣದಲ್ಲಿ ಲೇಖಕರ ಆತ್ಮೀಯತೆಗಿಂತ ದೇಶದ ಹಿತದೃಷ್ಟಿಯಿದೆ. ಇದು ನಾಯಕರ ಅಂಕಣ ಮಾದರಿಗೊಂದು ನಿದರ್ಶನ.

ಜೀಶಂಪ ಅವರನ್ನು ಕುರಿತ ಅಂಕಣದಲ್ಲೂ ಇದೇ ಬಗೆಯ ನಿರೂಪಣೆಯನ್ನು ಕಾಣಬಹುದು. ಹಾಗೆ ನೋಡಿದರೆ ಜೀಶಂಪ ಅವರು ಹಾಮಾನಾ ಅವರ ಶಿಷ್ಯ, ಸಹೋದ್ಯೋಗಿ, ಒಡನಾಡಿಯಾಗಿದ್ದವರು. ಕನ್ನಡ ಅಧ್ಯಯನ ಸಂಸ್ಥೆ ಕಟ್ಟುವಲ್ಲಿ ನಾಯಕರ ನೆರವಿಗೆ ನಿಂತವರು. ಜಾನಪದ ವಿಭಾಗ, ವಸ್ತು ಸಂಗ್ರಹಾಲಯಗಳಿಗೆ ಕಾಯಕಲ್ಪಿಸಿದವರು. ಜಾನಪದಕ್ಕೆ ಅಂತಾರಾಷ್ಟ್ರೀಯ ಮನ್ನಣೆ ತಂದುಕೊಟ್ಟವರು. ಇಂಥವರ ಬಗೆಗೆ ಬರೆಯುವುದು ನಾಯಕರಿಗೆ ಮುಖ್ಯವಾದದ್ದು ಅವರೊಡನಿದ್ದ ವೈಯಕ್ತಿಕ ಸಂಬಂಧವಲ್ಲ ಬದಲಾಗಿ ಜೀಶಂಪ ಅವರ ಸಾಧನೆ. ಏಕೆಂದರೆ, ಅಂಕಣ ಹಾಮಾನಾ ಅವರ ಪಾಲಿಗೆ ಕೇವಲ ಸ್ಮೃತಿ ಚಿತ್ರವಲ್ಲ; ಶೈಕ್ಷಣಿಕ ಸಾಂಸ್ಕೃತಿಕವಾದ ಆಕರ. ಮಂಡ್ಯ ಜಿಲ್ಲೆಯ, ನಾಗಮಂಗಲ ತಾಲೂಕಿನ ಒಂದು ಕುಗ್ರಾಮ ಅಂಬಲ ಜೀರಹಳ್ಳಿಯಿಂದ ಬಂದ ಜೀಶಂಪ, ತಮ್ಮ ಶ್ರದ್ಧೆ, ಆಸಕ್ತಿ, ಶ್ರಮಸಾಧನೆಯಿಂದ ಮೇಲೆ ಬಂದವರು. ಜಾನಪದ ಎಂದರೆ ಮೂಗುಮುರಿಯುತ್ತಿದ್ದವರ ನಡುವೆ ಅದರ ಮಹತ್ವವನ್ನು ಎತ್ತಿಹಿಡಿದವರು.

ಅದನ್ನು ಕಂಡರಿಸುವುದು ನಾಯಕರಿಗೆ ಮುಖ್ಯವಾಗಿತ್ತು. ಅದನ್ನು ಅಚ್ಚುಕಟ್ಟಾಗಿ 'ಜಾನಪದಕ್ಕಾಗಿ ತೇಯ್ದುಕೊಂಡವರು' ಅಂಕಣದಲ್ಲಿ ರೇಖಿಸಿದ್ದಾರೆ.

ನಾಯಕರಿಗೆ 'ಚಿರವಾದ ನೆನಪು' ಎ.ಕೆ. ರಾಮಾನುಜನ್ ಅವರದು. ಅವರೊಬ್ಬ "ಪ್ರತಿಭಾವಂತ, ಸೂಕ್ಷ್ಮಮತಿ, ಸೋಪಜ್ಞ, ಅಮೆರಿಕನ್ನರಿಗೆ ಹಾಗೂ ಯೂರೋಪಿಯನ್ನರಿಗೆ ತಿಳಿದಿದ್ದುದು ಭಾರತದ ಒಂದು ಮುಖ ಆರ್ಯಮುಖ. ರಾಮಾನುಜನ್ ಅದರ ಇನ್ನೊಂದು ಮುಖವನ್ನು ದ್ರಾವಿಡ ಮುಖವನ್ನು ತುಂಬಾ ಪ್ರಭಾವಶಾಲಿಯಾಗಿ ಪರಿಚಯಿಸಿದರು" ಎಂದು ಹೇಳುವ ಹಾಮಾನಾ ಮಾತಿನಲ್ಲಿ ಪಾಶ್ಚಾತ್ಯರಲ್ಲಿದ್ದ ಭಾರತೀಯರ ಬಗೆಗಿನ ಭಾವನೆಯನ್ನೇ ಬದಲಾಯಿಸಿದ ದಾಖಲೆ ಸಿಗುತ್ತದೆ. ರಾಮಾನುಜನ್ ಅಂಥ ವ್ಯಕ್ತಿ. ರಾಮಾನುಜನ್ ಭಾರತದ ಒಬ್ಬ ಸಾಂಸ್ಕೃತಿಕ ರಾಯಭಾರಿ. ಅವರೊಬ್ಬ ಶತಮಾನದ ಮಹತ್ವದ ಭಾಷಾಂತರಕಾರ; ಸೃಜನಶೀಲ ಲೇಖಕರಾಗಿ, ಕವಿಯಾಗಿಯೂ ಕೂಡ ಅವರದು ದೊಡ್ಡ ಹೆಸರು. ಭಾರತೀಯ ಜಾನಪದವನ್ನು ವಿದೇಶಕ್ಕೆ ಪರಿಚಯಿಸಿ, ವಿಶ್ವದ ಗಮನ ಸೆಳೆದವರು. ಸಂಸ್ಕೃತ, ಇಂಗ್ಲಿಷ್, ತಮಿಳು, ಕನ್ನಡ ಭಾಷೆಗಳಲ್ಲಿ ಪ್ರಖಾಂತ ಪಾಂಡಿತ್ಯ ಸಂಪಾದಿಸಿದ್ದರೂ ಕನ್ನಡ ಪ್ರೀತಿ ಈ ನೆಲಕ್ಕೆ ಅವರನ್ನು ಅಂಟಿಕೊಳ್ಳುವಂತೆ ಮಾಡಿತ್ತು. ಅವರ ಸಾಹಿತ್ಯಕ ಅಭಿವ್ಯಕ್ತಿಯ ಬಗೆಗೆ ಹಾಮಾನಾ ಬರೆಯುವುದು ಹೀಗೆ: "ಶಬ್ದಗಳ ಬಳಕೆಯಲ್ಲಿ ಅವುಗಳಿಂದ ಅರ್ಥ ಹೊರಡಿಸುವಲ್ಲಿ, ಅವುಗಳನ್ನು ಒಡೆಯುವಲ್ಲಿ, ಅವುಗಳ ಬಾಗು ಬಳುಕುಗಳನ್ನು ತೆರೆದು ತೋರಿಸುವಲ್ಲಿ ರಾಮಾನುಜನ್ ಅದ್ವಿತೀಯರು. ಅವರು ಕನ್ನಡ ಕಾವ್ಯಕ್ಕೆ ಹೊಸ ತಿರುವನ್ನೇ ತಂದುಕೊಟ್ಟವರೆಂದು ಹೇಳಬೇಕು. ಅವರು ಯಾರೊಬ್ಬರ ಪ್ರಭಾವಕ್ಕೂ ಒಳಗಾಗಲಿಲ್ಲ. ಆದರೆ ಮಿಕ್ಕವರಿಗೆ ಅವರ ಪ್ರಭಾವದಿಂದ ತಪ್ಪಿಸಿಕೊಳ್ಳುವುದು ಸುಲಭವಾಗಿರಲಿಲ್ಲ. ಇದು ಅವರ ಹೆಚ್ಚುಗಾರಿಕೆ." ಮುಂದುವರಿದು "ಕಾರ್ನಾಡ್ ಕಂಬಾರರಂಥ ಎಷ್ಟೋ ಲೇಖಕರ, ಎಷ್ಟೋ ಕೃತಿಗಳಿಗೆ ರಾಮಾನುಜನ್ನರದೇ ಪ್ರೇರಣೆಯಾಗಿತ್ತು" ಎನ್ನುತ್ತಾರೆ. ಇಲ್ಲಿ ರಾಮಾನುಜನ್ ಅವರ ಶ್ರೇಷ್ಠತೆ ವೈಶಿಷ್ಟ್ಯಗಳು ಧ್ವನಿತವಾಗಿವೆ.

'ಶರಣರ ಮರಣ' ಡಾ. ಎಚ್. ತಿಪ್ಪೇರುದ್ರಸ್ವಾಮಿಯವರಿಗೆ ಸಲ್ಲಿಸಿದ ಶ್ರದ್ಧಾಂಜಲಿ. ಅದೊಂದು ಅಪೂರ್ವವಾದ ಅಶ್ರುತರ್ಪಣ. ನಾಯಕರ ಒಳದನಿಯ ಕೂಗು. ವ್ಯಕ್ತಿಚಿತ್ರ ಹೇಗಿರಬೇಕು ಎಂಬುದರ ಮಾದರಿ. "ಅವರು ಇಲ್ಲವೆಂಬುದನ್ನು ಮನಸ್ಸು ಒಪ್ಪುವುದಿಲ್ಲ. ಸಾವು ಯಾರಿಗಾಗಿಯೂ

ಕಾಯುವುದಿಲ್ಲ. ಅದು ಬರುವ ಹೊತ್ತಿಗೆ ಬಂದೇ ಬರುತ್ತದೆ. ಲೋಕದಲ್ಲಿ ನಿಯತತೆ ಎಲ್ಲಾದರೂ ಇದ್ದರೆ ಅದು ಸಾವಿನಲ್ಲಿ ಮಾತ್ರ" ಎಂದು ಹೃದಯದ ನೋವನ್ನು ವೇದಾಂತಿಯಂತೆ ಹೊರಹಾಕುವ ಹಾಮಾನಾ ಆಮೇಲೆ ಆ ಅಂಕಣವನ್ನು ನಿರ್ವಹಿಸಿರುವ ಪರಿ ಅಸದೃಶವಾದುದು: "ಬಡಕಲು ಶರೀರ; ಕಪ್ಪು ಬಣ್ಣ; ಪಾಯಿಜಾಮ; ಆಗೊಮ್ಮೆ ಈಗೊಮ್ಮೆ ಮಾಸಲು ಬಣ್ಣದ ವೇಸ್ಟ್‌ಕೋಟು. ಅವರದೇ ಎನ್ನಬಹುದಾದ ನಗು. ಆ ನಗು ತೀರಾ ಸಹಜವಾದುದು, ಕೃತಕತೆ ಎಂಬುದಿಲ್ಲ" –ಇದು ತಿಪ್ಪೇರುದ್ರಸ್ವಾಮಿ ಅವರ ಹೊರಚಿತ್ರ. ಒಳಚಿತ್ರದಲ್ಲಿ ಉಕ್ಕಿಹರಿವ ಕನ್ನಡ ಪ್ರೀತಿ, ಅದನ್ನು ಬೆಳೆಸಿದ ಪಂಡಿತ ನರಸಿಂಹಶಾಸ್ತ್ರೀ, ಪೋಷಿಸಿದ ಪರಮೇಶ್ವರ ಭಟ್ಟರು, ಎಂ.ಬಿ.ಬಿ.ಎಸ್.ಗೆ ಸೀಟು ಸಿಕ್ಕಿದರೂ ಅದನ್ನು ತೊರೆದು ಕುವೆಂಪು ಅವರ ಮಾನಸಿಕ ಶಿಷ್ಯತ್ವಕ್ಕೆ ತಲೆಬಾಗಿದ್ದು, ವಿದ್ಯಾರ್ಥಿಜೀವನವನ್ನು ಕನ್ನಡ ತಪೋರಂಗವಾಗಿಸಿದ್ದು, ಇವೆಲ್ಲವನ್ನೂ ಇಂಚಿಂಚಾಗಿ ಅನಾವರಣಗೊಳಿಸಿದ್ದಾರೆ. ವಿದಾಯದ ರೂಪದಲ್ಲಿ ನಾಯಕರು ಆಡಿರುವ ತಿಪ್ಪೇರುದ್ರಸ್ವಾಮಿ ಅವರ ಬಗೆಗಿನ ಮಾತುಗಳಿವು: "ನಾನು ಕಂಡ ಒಬ್ಬ ಸ್ಥಿತಪ್ರಜ್ಞ–ತಿಪ್ಪೇರುದ್ರಸ್ವಾಮಿ. ವಚನಸಾಹಿತ್ಯವನ್ನು ಓದಿದವರು ಅನೇಕರು ಇರಬಹುದು. ಆದರೆ ಅದನ್ನು ಬದುಕಿಗೆ ಅಳವಡಿಸಿಕೊಂಡವರು ಇಲ್ಲವೆನ್ನುವಷ್ಟು ವಿರಳ. ಸ್ವಾಮಿ ಅಂಥ ವಿರಳರಲ್ಲಿ ಒಬ್ಬರು. ವಯಸ್ಸಿಗೆ ಬಂದ ಮಗ ದುರ್ಮರಣಕ್ಕೆ ಒಳಗಾದಾಗ ಸಮಾಧಾನ ಹೇಳಲು ಬಂದವರಿಗೇ ಸಮಾಧಾನ ಹೇಳಿ ಕಳಿಸಿದ್ದನ್ನು ನಾನು ಬಲ್ಲೆ. ತಮ್ಮ ಅನಾರೋಗ್ಯದ ವಿಷಯವನ್ನು ಅವರು ನಗುನಗುತ್ತಲೇ ಹೇಳಿಕೊಳ್ಳುತ್ತಿದ್ದರು. ಕ್ಯಾನ್ಸರಿನಂಥ ರೋಗವನ್ನೂ ಅವರು ಸ್ವೀಕರಿಸಿದ್ದ ರೀತಿ ಅನ್ಯಾದೃಶವಾದುದು. ಸಮಾಧಾನಚಿತ್ತರಾಗಿರುವ ಸ್ಥಿತಿ ಅವರಿಗೇ ವಿಶಿಷ್ಟವಾದದ್ದು, ಅಪರೂಪವಾದದ್ದು"(ಸ್ವಗತ, ಸಂ. ೨; ಪು. ೪೮೪). ತಿಪ್ಪೇರುದ್ರಸ್ವಾಮಿ ಅವರನ್ನು ಬಲ್ಲವರಿಗೆ ನಾಯಕರ ಈ ಮಾತುಗಳಲ್ಲಿ ಎಂಥ ಸತ್ಯ ಅಡಗಿದೆ ಎನ್ನುವುದು ಅರಿವಾಗದಿರದು.

ಹೃದಯ ತುಂಬುವ, ಕಣ್ಣುಗಳನ್ನು ಒದ್ದೆಯಾಗಿಸುವ ಇಂಥ ಹಲವಾರು ಅಂಕಣಗಳು ಕಣ್ಣಮುಂದಿವೆ. ಪತ್ರಿಕೋದ್ಯಮವನ್ನು ಉದ್ಯಮವಾಗಿ ಸ್ವೀಕರಿಸದೆ, ದೇಶದ ಪ್ರಗತಿಯ ಅವಿಭಾಜ್ಯ ಅಂಗವೆಂದು ಸ್ವೀಕರಿಸಿದ ನಿರ್ಭೀತ ನಡೆಯ 'ಗೊಯೆಂಕಾ: ಒಂದು ನೆನಪು'; ಮಲೆನಾಡ ಒಕ್ಕಲಿಗ ಸಮಾಜದ ಸಾಧನೆಯ 'ಜಲಚಿಹ್ನೆ'ಯಾಗಿದ್ದ, ಮಠ ಮತ್ತು ದೇವಾಲಯಗಳಿಗೆ ಸರ್ಕಾರ ಕೊಟ್ಟಿದ್ದ

ಭೂಮಿಯನ್ನು ರದ್ದುಮಾಡಿ ಕ್ರಾಂತಿಕಾರಿ ಹೆಜ್ಜೆ ಇಟ್ಟಿದ್ದ, ರಾಜಕೀಯಕ್ಕೂ ನಿವೃತ್ತಿ ಬೇಕೆಂದು ತಮ್ಮನ್ನೇ ಸಾಕ್ಷಿಯಾಗಿಸಿದ ಕಡಿದಾಳ್ ಮಂಜಪ್ಪನವರನ್ನು ಕುರಿತ 'ಕನಸುಗಾರನೊಬ್ಬನ ಕಣ್ಮರೆ'; ಬದುಕು ಮತ್ತು ಬರೆಹದಿಂದ ಪ್ರಗತಿಶೀಲ ಪಂಥದಲ್ಲಿ ಸಂಚಲನ ಉಂಟುಮಾಡಿದ್ದ 'ನಿರಂಜನರ ನೆನಪು'; ಇನ್ನಷ್ಟು ಕಾಲ ಅವರು ಬದುಕಿರಬೇಕೆಂದು ಜನ ಬಯಸುವ ಹೊತ್ತಿನಲ್ಲೇ, ತಮ್ಮನ್ನು ದ್ವೇಷಿಸಿದವರಿಗೂ ಪ್ರೀತಿ ಹಂಚಿ, ಮುಖ್ಯಮಂತ್ರಿ ಹೇಗೆ ಜೀವನಮುಖಿ, ಸಮಾಜಮುಖಿಯಾಗಬೇಕೆಂದು ತಮ್ಮ ಯೋಜನೆಗಳಿಂದ ದೃಢಪಡಿಸಿ, ತಮ್ಮ ಬದುಕಿಗೇ ವಿದಾಯ ಹೇಳಿಯೂ ಜನಮಾನಸದಲ್ಲಿ ಈ ಹೊತ್ತಿಗೂ ಜೀವಂತವಾಗಿರುವ 'ಅಪರೂಪದ ಅರಸು'; ಶಾಲೆಗೆ ಹೋಗದೆಯೂ ಪರದಾಪದ್ಧತಿಯೊಳಗಿದ್ದೇ ವಿಶ್ವವನ್ನು ತನ್ನೆಡೆಗೆ ಸೆಳೆದು, ತನ್ನ ಅಭಿವ್ಯಕ್ತಿ ಸಾಧ್ಯತೆಯಿಂದಲೇ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ 'ಮೊದಲನೆಯ ಮಹಿಳೆ' ಬಂಗಾಳದ ಆಶಾಪೂರ್ಣಾದೇವಿ –ಎಲ್ಲರೂ ನಾಯಕರ ಲೇಖನಿಯಿಂದ ಓದುಗರನ್ನು ತಲುಪಿದವರೇ. ಇಲ್ಲೆಲ್ಲ ಪ್ರಶಂಸೆ ಪ್ರಧಾನವಾಗಿ ಕಂಡರೂ ಅದಕ್ಕೆ ಸಮರ್ಥನೆಯೂ ಇದೆ; ಸಾಂದರ್ಭಿಕ ಟೀಕೆಗಳೂ ಇವೆ. ಹೀಗಾಗಿ, ಶ್ರದ್ಧಾಂಜಲಿಯ ಮಾತುಗಳಿಗೂ ಅರ್ಥ ತುಂಬುತ್ತದೆ.

ನಾಯಕರ ವ್ಯಕ್ತಿಚಿತ್ರಗಳ ಇನ್ನೊಂದು ಭಾಗದ ಹಾಸು–ಬೀಸು ಬಹಳ ದೊಡ್ಡದು. ಇಲ್ಲಿ ಚಿತ್ರಿತವಾಗಿರುವ ಹೆಚ್ಚಿನವರು ಸಮಕಾಲೀನರು. ಸಮಕಾಲೀನರನ್ನು ಕುರಿತು ಬರೆಯುವುದು ಹಗ್ಗದ ಮೇಲಿನ ನಡುಗೆ. ಸುತ್ತಮುತ್ತ ಅವರನ್ನು ಕಂಡವರು, ಕೇಳಿದವರು, ಬಲ್ಲವರು ಇರುತ್ತಾರೆ. ಆರೋಪಕ್ಕೆ, ಉತ್ಪ್ರೇಕ್ಷೆಗೆ ಅವಕಾಶವಿರುತ್ತದೆ. ಸತ್ಯಕ್ಕೆ ಮಣೆಹಾಕುವ ಅನಿವಾರ್ಯವಿರುತ್ತದೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಬಹು ಎಚ್ಚರಿಕೆಯಿಂದ ಬರೆಯಬೇಕಾಗುತ್ತದೆ. ನಾಯಕರು ಆ ವಿಷಯದಲ್ಲಿ ತುಂಬ ಯಶಸ್ವಿಯಾಗಿದ್ದಾರೆ. ಪ್ರಶಸ್ತಿ ಬಂದದ್ದನ್ನು ನೆಪವಾಗಿಸಿಕೊಂಡು ಇಂಥವರ ವ್ಯಕ್ತಿಚಿತ್ರ ಬಿಡಿಸಲು ಸಿದ್ಧರಾಗುತ್ತಾರೆ. ಅಂಥವರ ಜೀವನ ವಿವರ, ಓದು, ಉದ್ಯೋಗ, ಸಾಧನೆ ಸಿದ್ಧಿ, ಈ ಮೊದಲು ಪಡೆದ ಪ್ರಶಸ್ತಿಗಳು, ಅವರ ನಿವೃತ್ತಿ–ಪ್ರವೃತ್ತಿ ಇತ್ಯಾದಿ ಅಂಶಗಳ ಮೇಲೆ ಬೆಳಕು ಚೆಲ್ಲುತ್ತಾ ಹೋಗುತ್ತಾರೆ. ಈ ಎಲ್ಲಾ ವಿವರಗಳು ಅಂಕಣದಲ್ಲಿ ಬಂದೇ ಬರುತ್ತವೆ. ಅವನ್ನು ಎಷ್ಟರಮಟ್ಟಿಗೆ ನಿರ್ವಹಿಸುತ್ತಾರೆ ಎಂದರೆ, ಅವರೊಳಗೊಬ್ಬ ವೀಕ್ಷಕ ವಿವರಣೆಕಾರನಿದ್ದಾನೆ, ದ್ರಷ್ಟಾರನಿದ್ದಾನೆ, ಶೋಧಕನಿದ್ದಾನೆ, ಭೂಗೋಳಶಾಸ್ತ್ರಜ್ಞನಿದ್ದಾನೆ,

ಬಹುಭಾಷಾತಜ್ಞನಿದ್ದಾನೆ, ಸ್ನೇಹಜೀವಿ ಇದ್ದಾನೆ, ಸಹೃದಯಿ ಇದ್ದಾನೆ. ಇಂತಹ ಕೆಲವು ವ್ಯಕ್ತಿಚಿತ್ರಗಳನ್ನಿಲ್ಲಿ ಗಮನಿಸಬಹುದು:

'ವಿಂದಾಕರಂದೀಕರ್' ಮರಾಠಿಯಲ್ಲಿ ಹೊಸಪಂಥಕ್ಕೆ ದಾರಿ ಮಾಡಿಕೊಟ್ಟ ಕವಿ. "ನನಗೆ ಕಣ್ಣೀರು ಕೊಡುವವನೇ, ಅದನ್ನು ಒರೆಸಿಕೊಳ್ಳಲು ಕೈಯನ್ನೂ ಕೊಡುತ್ತಾನೆ ಎಂಬ ಜೀವನ ದೃಷ್ಟಿಯ ಈ ಕವಿಯ ಕವಿತೆ ಸಾಲುಗಳಿಂದ ಅಂಕಣ ಆರಂಭಿಸುವ ನಾಯಕರು, ಅವರ ಜೀವನ ವಿವರಗಳನ್ನು ಬಿಚ್ಚಿಡುತ್ತಾರೆ. ಬಡರೈತ ಬ್ರಾಹ್ಮಣ ಕುಟುಂಬದಿಂದ ಬಂದದ್ದು, ವಾರಾನ್ನದ ಹುಡುಗನಾಗಿ ಓದಿ ಇಂಗ್ಲಿಷ್ ಸಾಹಿತ್ಯ ಕಲಿತು ಪ್ರಾಧ್ಯಾಪಕನಾದುದು, ಆ ನಿಟ್ಟಿನಲ್ಲಿ ಅವರು ಸವೆಸಿದ ದಾರಿ ಮನಮುಟ್ಟುತ್ತವೆ ನಾಯಕರ ಬರವಣಿಗೆಯಿಂದ. ವಿಂದಾಕರಿಂದೀಕರ್ ದಂತಗೋಪುರದ ಕವಿಯಲ್ಲ. ತಮ್ಮ ಕಾವ್ಯ ಕ್ರಿಯೆಯಲ್ಲಿ ಪ್ರಯೋಗಕ್ಕೆ ಅವಕಾಶ ಕಲ್ಪಿಸಿಕೊಂಡವರು. ಅವರ ಪ್ರಕಾರ 'ಜನರಿಂದ ದೂರವಾದರೆ ಕಾವ್ಯ ಬಹಳ ಕಾಲ ಬದುಕುವುದಿಲ್ಲ. ಕಾವ್ಯ ವಸ್ತುವಿನ ಆಯ್ಕೆ, ಕವಿಯ ನಿರೂಪಣಾ ಕ್ರಮಕ್ಕಷ್ಟೇ ಸಂಬಂಧಿಸಿದ್ದಲ್ಲ. ವಾಚನವೂ ಅಷ್ಟೇ ಮುಖ್ಯ' ಎಂದು ಅವರು ನಂಬುತ್ತಾರೆ. ಕಾವ್ಯ ಮುಖ್ಯ. ವರ್ತಮಾನದ ಬದುಕು ಅದಕ್ಕಿಂತ ಮುಖ್ಯ ಎಂದು ಭಾವಿಸಿದ ಕವಿ. ಅದೇ ರೀತಿಯ ಬದುಕು ಸಾಗಿಸಿ ನಿರ್ಲಿಪ್ತರಾಗಿದ್ದವರು. ಅದು ಅವರಿಗೆ ಸಾಧ್ಯವಾದದ್ದು ಸಾಹಿತ್ಯ ಮತ್ತು ತತ್ವಶಾಸ್ತ್ರಗಳ ಆಳವಾದ ಅಧ್ಯಯನದಿಂದ. ಒಂದು ಕಾಲಕ್ಕೆ ಬದುಕುವುದಕ್ಕೇ ಹೋರಾಟ ನಡೆಸಿದ ವಿಂದ್ಯಾ, ಅದೇ ಬದುಕಿನ ಸಾಧನೆಯಿಂದ ಅನೇಕ ಪ್ರಶಸ್ತಿಗಳ ಸರದಾರ ಎನಿಸಿದರು. ಸೋವಿಯತ್‌ಲ್ಯಾಂಡ್ ನೆಹರು ಪ್ರಶಸ್ತಿ, ಕುಮಾರನ್ ಆಸಾನ್ ಪ್ರಶಸ್ತಿ, ಕೇಶವಸುತ ಪ್ರಶಸ್ತಿ, ಹಿರಿಯ ಫುಲ್‌ಬ್ರೈಟ್ ಗೌರವ, ಹತ್ತು ಬಾರಿ ಲಲಿತ ಪಾರಿತೋಷಕ, ಮೂರು ಬಾರಿ ಭಾರತದ ಶಿಕ್ಷಣಮಂತ್ರಿ ಶಾಖೆಯ ಬಹುಮಾನ –ಹೀಗೆ ಪಟ್ಟಿ ಬೆಳೆಯುತ್ತದೆ. ಪ್ರಶಸ್ತಿಗಳಿಂದ ಇವರು ಹಿಗ್ಗಿದವರೂ ಅಲ್ಲ, ಕುಗ್ಗಿದವರೂ ಅಲ್ಲ. ಮನುಷ್ಯನ ಅನುಭವಗಳಲ್ಲಿ 'ಎಷ್ಟೋ ವಿರೋಧಗಳಿವೆ; ಆಭಾಸಗಳಿವೆ. ಅವನ್ನು ಹೊಂದಿಕೊಳ್ಳುವುದರಲ್ಲಿಯೇ ಜೀವನದ ಅರ್ಥವಿದೆ' ಎಂಬ ಸಿದ್ಧಾಂತ ಅವರದು. ಆ ನಂಬಿಕೆಯೇ ಅವರ ಕಾವ್ಯದ ತಿರುಳು ಹಾಗೂ ಗೆಲುವು. ಇಂಥ ಕವಿಯ ಸಂಪೂರ್ಣ ವಿವರ ಒಂದು ಪುಟ್ಟ ಅಂಕಣದಲ್ಲಿ ನಾಯಕರಿಂದ ವಿನ್ಯಾಸಗೊಂಡಿದೆ.

ಹರಿವಂಶರಾಯ್ ಬಚನ್‌ಗೆ' ಸರಸ್ವತೀ ಸಮ್ಮಾನ್' ಬಂದ ಸಂದರ್ಭದಲ್ಲಿ ಅವರನ್ನು ಕುರಿತು ಬರೆಯುತ್ತ "ನಾನೀಗ ಹೇಳುತ್ತಿರುವುದು ಅಮಿತಾಬ್

ಬಚ್ಚನ್‌ನ ಬಗೆಗಲ್ಲ; ಆತನ ತಂದೆಯ ಬಗೆಗೆ! ಮಗ ತಂದೆಗಿಂತ ಹೆಚ್ಚು ಪ್ರಸಿದ್ಧ. ಆದರೆ ತಂದೆ ಮಗನಿಗಿಂತ ಹೆಚ್ಚು ಶಾಶ್ವತ. ಮಗ ಚಿತ್ರನಟ; ಆಯಶಸ್ವೀ ರಾಜಕಾರಣೀ. ತಂದೆ ಸಾಹಿತಿ, ಕವಿ, ಕಲಾವಿದ" –ಹೀಗೆ ಒಂದೆರಡು ವಾಕ್ಯಗಳಲ್ಲಿಯೇ ತಂದೆ–ಮಗನ ಸಾಧನೆ ಸ್ವರೂಪವನ್ನು ಮನಗಾಣಿಸಿಬಿಡುತ್ತಾರೆ. ಹರಿವಂಶರಾಯ್ ಬಚನ್ 'ಆಧುನಿಕ ಭಾರತೀಯ ಸಾಹಿತ್ಯದ ನಿರ್ಮಾಪಕರಲ್ಲಿ ಒಬ್ಬರು'. ಹಿಂದೀ ಸಾಹಿತ್ಯದಲ್ಲಿ ಬಹುದೊಡ್ಡ ಹೆಸರು. ರಾಷ್ಟ್ರದಲ್ಲಿ ಮೊತ್ತಮೊದಲಿಗೆ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರಾದವರು ಇವರು. ಕೆ.ಕೆ. ಬಿರ್ಲಾ ಪ್ರತಿಷ್ಠಾನದ ಈ ಪ್ರಶಸ್ತಿ ಸುಖಾಸುಮ್ಮನೆ ಸಿಗುವಂಥದಲ್ಲ. ಅದರ ಆಯ್ಕೆ ದಾರಿ ಬಹಳ ಕ್ಲಿಷ್ಟಕರವಾದುದು, ಗೋಪ್ಯವಾದುದು, ಮೌಲ್ಯಯುತವಾದುದು. ಇಂಥ ಮೊದಲ ಪ್ರಶಸ್ತಿಗೇ ಭಾಜನರಾದ ಬಚ್ಚನ್ ಎಷ್ಟು ದೊಡ್ಡ ಸಾಹಿತಿ ಎಂಬುದನ್ನು ನಾಯಕರು ವಿವರಿಸಿದ್ದಾರೆ. ಮುಂದುವರಿದು ಅವರ ಹುಟ್ಟು, ಬೆಳವಣಿಗೆ, ಓದು, ಲೇಖನ ಕೃಷಿ, ಅದರಿಂದ ಬಂದ ೭೫ಕ್ಕೂ ಹೆಚ್ಚು ಮೌಲಿಕ ಕೃತಿಗಳು, ಅವರ ಮೇಲಾದ ಉಮರ್ ಖಯಾಮನ ಪ್ರಭಾವ, ಅವರು ತಮ್ಮ ಕಾವ್ಯದಲ್ಲಿ ಚಿತ್ರಿಸಿರುವ ಪ್ರೀತಿ, ಪ್ರಣಯ, ನೋವು, ನಲಿವು, ಹತಾಶೆ, ಏಕಾಂಗಿತನ, ಹಸಿವು, ಜೀವಕಶಕ್ತಿ –ಇವನ್ನೆಲ್ಲ ಕಣ್ಣಿಗೆ ಕಟ್ಟಿಸುತ್ತಾರೆ.(ಅರವತ್ತರ ಆರಲು, ಪು. ೨೪೨)

'ನಿರ್ಭಯ ಚಿತ್ತ' ಬರ್ಮಾದ ಮಾನವ ಹಕ್ಕು ಹೋರಾಟಗಾರ್ತಿ ಅಂಗಸಾನ್ ಸೂಕಿ ಅವರನ್ನು ಕುರಿತ ಅಂಕಣ. ಎರಡು ವರ್ಷದವಳಿದ್ದಾಗಲೇ ತಂದೆಯನ್ನು ಕಳೆದುಕೊಂಡವಳು ಸೂಕಿ. ಅವಳ ತಂದೆಯ ರಾಷ್ಟ್ರವೀರತ್ವ ಅವಳಲ್ಲಿ ರಕ್ತಗತವಾಗಿತ್ತು. ೧೯೮೮ರ ಸಂದರ್ಭ. ನ್ಯೂಯಾರ್ಕ್, ಭೂತಾನ್, ಸಿಮ್ಲಾಗಳಲ್ಲಿ ಉದ್ಯೋಗಸ್ಥಳಾಗಿ ನೆಮ್ಮದಿ ಬದುಕನ್ನು ಕಂಡಿದ್ದ ಸೂಕಿ, ಕೌಟುಂಬಿಕ ಕಾರಣದಿಂದ ತವರೂರು ಬರ್ಮಾಕ್ಕೆ ಬಂದಾಗ ದೇಶದಲ್ಲಿ ಪ್ರಕ್ಷುಬ್ಧ ವಾತಾವರಣವಿತ್ತು. ರಾಜಕೀಯ, ಆರ್ಥಿಕ ಸಂಕಷ್ಟಗಳಲ್ಲಿ ನರಳುತ್ತಿದ್ದ ದೇಶ ಕ್ರಾಂತಿಗಾಗಿ ತಹತಹಿಸುತ್ತಿತ್ತು. ನಾಯಕನಿಗಾಗಿ ಕಾಯುತ್ತಿತ್ತು. ಸೂಕಿ ಅದರ ನೇತೃತ್ವ ವಹಿಸಿ ಯಶಸ್ವಿಯಾದಳು. ಅತ್ಯಂತ ಜನಪ್ರಿಯತೆ ಪಡೆದಳು. ಮಿಲಿಟರಿ ಸರಕಾರ ಅವಳನ್ನು ಗೃಹಬಂಧನದಲ್ಲಿಟ್ಟಿತು. ಆದರೂ ಆಕೆಯ ಹೋರಾಟಕ್ಕೆ ನೊಬೆಲ್ ಶಾಂತಿ ಪ್ರಶಸ್ತಿ ಲಭಿಸಿತು. ಪ್ರಜಾಪ್ರಭುತ್ವದಲ್ಲಿ ಅಪಾರ ನಂಬಿಕೆ ಇಟ್ಟುಕೊಂಡ ಈಕೆ ದೇಶದ ಪ್ರಗತಿಯ ಬಗೆಗೆ ತಾನು ಕಂಡ ಕನಸನ್ನು ಹೋರಾಟದ ಮೂಲಕವೇ ನನಸಾಗಿಸಿಕೊಂಡವಳು. ಈ ದಾರಿಯಲ್ಲಿ ಅವರು

ಪಟ್ಟ ಶ್ರಮ, ಬವಣೆ, ಅನುಭವಿಸಿದ ಏಕಾಂಗಿತನ, ಮೂಕ ಸಂಕಟ, ಕಳೆದುಕೊಂಡ ಯೌವ್ವನದ ದಿನಗಳು –ಇವನ್ನೆಲ್ಲ ನಾಯಕರು ಅವಳ ಬಗೆಗೆ ಅಭಿಮಾನ ತಳೆಯುವ ಹಾಗೆ ಬಿಂಬಿಸಿದ್ದಾರೆ.

ಎಂ.ವೈ. ಘೋರ್ಪಡೆಯವರನ್ನು ಕುರಿತ ಅಂಕಣ 'ಮೌಲ್ಯಗಳ ಮನುಷ್ಯ'. ಹೆಸರೇ ಸೂಚಿಸುವಂತೆ ನಮ್ಮ ನಡುವೆ ಇರುವ ಬಹುತೇಕ ರಾಜಕಾರಣಿಗಳಿಗಿಂತ ಇವರು ಹೇಗೆ ಭಿನ್ನ ಎಂಬುದನ್ನು ಅಂಕಣದ ಶೀರ್ಷಿಕೆಯೇ ಧ್ವನಿಸುತ್ತದೆ. ಘೋರ್ಪಡೆಯವರ ಜೀವನ ದೃಷ್ಟಿಯನ್ನು ಪರಿಚಯಿಸುತ್ತಾ ರಾಜಕಾರಣಿಯೊಬ್ಬರಿಗಿರಲೇಬೇಕಾದ ವ್ಯಕ್ತಿತ್ವ ಎಂಥದು ಎಂಬುದನ್ನು ತಾಳೆಹಾಕಿ ತೋರಿಸಿದ್ದಾರೆ. "ಮೌಲ್ಯಗಳನ್ನು ಅನುಸರಿಸುವುದು ಸುಲಭವಲ್ಲ. ಅದಕ್ಕೆ ಸತತವಾಗಿ ಒಂದು ಬಗೆಯ ತ್ಯಾಗ ಬೇಕು, ಪ್ರಸಿದ್ಧಿ ಪ್ರತಿಷ್ಠೆಗಳಿಂದ ದೂರವಿರಬೇಕು; ಶುದ್ಧ ಮನಸ್ಸಿರಬೇಕು; ಪ್ರಾಮಾಣಿಕತೆ ಇರಬೇಕು; ಯಾವುದೇ ಬಗೆಯ ನಷ್ಟಕ್ಕೆ, ತೊಂದರೆಗೆ ಸಿದ್ಧವಾಗಿರಬೇಕು. ಇದರಲ್ಲಿ ಯಾವುದೇ ಒಂದರ ಕೊರತೆಯಿದ್ದರೂ ಮೌಲ್ಯಗಳಿಗೆ ಬದ್ಧರಾಗಿರುವುದು ಸಾಧ್ಯವಿಲ್ಲ. ಆದ್ದರಿಂದಲೇ ಮೌಲ್ಯಗಳ ಮನುಷ್ಯರು ಈ ದಿನಗಳಲ್ಲಿ ತುಂಬ ಅಪರೂಪ. ಅದರಲ್ಲಿಯೂ ರಾಜಕೀಯ ಕ್ಷೇತ್ರದಲ್ಲಿ ಈಗ ಇಂಥವರನ್ನು ನೋಡುವುದು ದುರ್ಲಭ. ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ಮರಳುಗಾಡಿನ ಜಲಬುಗ್ಗೆಗಳಂತಿದ್ದಾರೆ. ಈ ವಿರಳಾತಿವಿರಳರಲ್ಲಿ ಈಗಷ್ಟೇ ಅರವತ್ತು ತುಂಬಿದ ಎಂ.ವೈ. ಘೋರ್ಪಡೆ ಅವರು ಒಬ್ಬರು. ತಾವು ನಂಬಿದ ಮೌಲ್ಯಗಳಿಂದಲೇ ದೊಡ್ಡವರೆನ್ನಿಸಿದವರು"(ಅರವತ್ತರ ಆರಲು, ಪು. ೨೨೪). ನಾಯಕರ ಈ ಮಾತುಗಳು ಘೋರ್ಪಡೆಯವರ ವ್ಯಕ್ತಿತ್ವವನ್ನು ದಿಗ್ದರ್ಶಿಸುವಂಥವು.

ಘೋರ್ಪಡೆಯವರ ಬಗೆಗೆ ಈ ಪ್ರಶಂಸೆಯ ಮಾತುಗಳನ್ನಾಡಲು ಕಾರಣವಿದೆ. ಘೋರ್ಪಡೆ ಅರಸು ಮನೆತನದ ಕುಡಿ. ಆದರೆ ಆ ಪ್ರತಿಷ್ಠೆ ಅವರಲ್ಲಿರಲಿಲ್ಲ. ಎಂದೂ ಯಾರಿಗೂ ಅಹಂ ತೋರಿದವರಲ್ಲ. ಎಲ್ಲರನ್ನೂ ಸಮಾನವಾಗಿ ಕಂಡರು, ಆದರಿಸಿದರು. ಸಾರ್ವಜನಿಕ ಜೀವನದಲ್ಲೂ ರುಚಿ–ಶುಚಿತ್ವದಿಂದ ಅಭಿಮಾನಧನರೆನಿಸಿದರು. ೧೯೫೪ರಲ್ಲಿ ಮೊದಲ ಬಾರಿಗೆ ಸಂಡೂರು ಕ್ಷೇತ್ರವನ್ನು ಪ್ರತಿನಿಧಿಸಿ ಶಾಸಕರಾಗಿ ಗೆದ್ದವರು ಮುಂದೆ ತಮ್ಮ ಕರ್ತೃತ್ವಶಕ್ತಿ, ನಡವಳಿಕೆ, ಸಾಮಾಜಿಕ ಕಾಳಜಿಯ ಕಾರಣದಿಂದ ಆಯ್ಕೆಯಾಗುತ್ತಲೇ ಬಂದರು; ಸಚಿವರಾಗಿ ಕಾರ್ಯನಿರ್ವಹಿಸಿದರು. ಅವರು

ಆರ್ಥಿಕ ಸಚಿವರಾಗಿದ್ದ ಕಾಲದಲ್ಲೇ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೆಚ್ಚಿನ ಅನುದಾನ ದೊರೆತದ್ದು. ಅವರು ಮಂಡಿಸಿದ 'ಆಯವ್ಯಯ' ಭಾಷಣಕ್ಕೆ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಯಿತು. ಅವರಿಗೆ ಹಿಂದುಳಿದವರ ಬಗೆಗೆ ವಿಶೇಷ ಮಮತೆ. ಸ್ವತಃ ಸಂಡೂರು ಶಿಕ್ಷಣ ಸಂಸ್ಥೆ, ಶಿವಪುರ ಶಿಕ್ಷಣ ಸಮಿತಿ ಸ್ಥಾಪಿಸಿದರು. ವಸತಿಶಾಲೆಯನ್ನು ಮಾಡಿದರು. ಅವರ ಶ್ರಮ–ಆಸಕ್ತಿಯ ಫಲವಾಗಿ ಗುಲಬರ್ಗಾ ವಿಶ್ವವಿದ್ಯಾನಿಲಯದ ಒಂದು ಸ್ನಾತಕೋತ್ತರ ಕೇಂದ್ರ ಸಂಡೂರಿನ ನಂದಿಹಳ್ಳಿಯಲ್ಲಿ ಅಸ್ತಿತ್ವಕ್ಕೆ ಬಂತು.

ರಾಜಕಾರಣವನ್ನು ಹೇಗೆ ನಡೆಸಬೇಕು ಎಂಬುದಕ್ಕೆ ಘೋರ್ಪಡೆ ಅವರು ನೇರಸಾಕ್ಷಿ. ಅವರೊಬ್ಬ ಹೆಸರಾಂತ ಫೋಟೋಗ್ರಾಫರ್ ಕೂಡ ಆಗಿದ್ದರು. ವನ್ಯಪ್ರಾಣಿಗಳ ಚಿತ್ರ ತೆಗೆಯುವಲ್ಲಿ ಅವರು ಸಿದ್ಧಹಸ್ತರು. ಈ ಬಗೆಗೆ ನಿಜಲಿಂಗಪ್ಪನವರಿಂದ, ಇಂದಿರಾಗಾಂಧಿಯವರಿಂದಲೇ ಮೆಚ್ಚುಗೆ ಪಡೆದಿದ್ದರು. ಕಡೆಗೆ ರಾಜಕೀಯ ಕಚ್ಚಾಟದಿಂದ ದೂರವೇ ಉಳಿದ ಘೋರ್ಪಡೆ ಅವರು ಸಾಂಸ್ಕೃತಿಕವಾಗಿ ಗೌರವ ಗಳಿಸಿದರು. ನಿಜವಾದ ಸಂಸ್ಕೃತಿ–ಸಾಹಿತ್ಯ ಚಿಂತಕ ಯಾವ ಕ್ಷೇತ್ರದಲ್ಲೇ ಇರಲಿ ರಾಡಿಯಾಗುವುದಿಲ್ಲ. ಅಧಿಕಾರದಲ್ಲಿ ಇರಲಿ, ಇಲ್ಲದಿರಲಿ ಜನಪ್ರೀತಿಯಿಂದ ದೂರಾಗುವುದಿಲ್ಲ. ಇದನ್ನೆಲ್ಲ ಅಂಕಣದಲ್ಲಿ ಹಿಡಿದಿಡುವ ನಾಯಕರು, ಅಂಕಣದ ಮುಕ್ತಾಯಕ್ಕೆ ಆಡುವ ಮಾತುಗಳಿವು: "ಸಾರ್ವಜನಿಕ ಜೀವನ ಎಂದರೆ ಕೇವಲ ರಾಜಕಾರಣವಲ್ಲ. ಚುನಾವಣೆಯಲ್ಲ. ಅಧಿಕಾರವಲ್ಲ; ಸಾಹಿತ್ಯ, ಕಲೆ, ಅಧ್ಯಯನ, ಅಧ್ಯಾತ್ಮ ಇವನ್ನೆಲ್ಲ ಅಂಟಿಕೊಂಡೂ ರಾಜಕಾರಣಿಯ ಕೆಲಸ ಮಾಡುವುದು ಸಾಧ್ಯ ಎಂಬುದಕ್ಕೆ ಘೋರ್ಪಡೆ ಅವರು ಸಾಕ್ಷಿಯಾಗಿದ್ದಾರೆ."(ಸ್ವಗತ, ಸಂ. ೧, ಪು. ೨೨೮)

'ಪಂಡಿತ ಪ್ರಧಾನಿ' ಎಂಬುದು ಭಾರತದ ಪ್ರಧಾನಿಯಾಗಿದ್ದ ಪಿ.ವಿ. ನರಸಿಂಹರಾಯರನ್ನು ಕುರಿತ ಅಂಕಣ ಬರಹ. ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದಾಗ ಸದಸ್ಯರಾಗಿ ಅವರೊಡನೆ ಕೆಲಸ ಮಾಡಿದವರು ಹಾಮಾನಾ. ಆಗ ನಾಯಕರು ಹತ್ತಿರದಿಂದ ಅವರ ಓದು, ಅಧ್ಯಯನ, ಬಹುಭಾಷಾ ತಜ್ಞತೆ, ಪಾಂಡಿತ್ಯದ ಬಗೆಗೆ ತಿಳಿದಿದ್ದರು. ರಾಯರ ಮಾತೃಭಾಷೆ ತೆಲುಗು. ಆದರೆ ಅವರಿಗೆ ಉರ್ದು, ಹಿಂದಿ, ಪರ್ಷಿಯನ್, ಅರೆಬಿಕ್, ಇಂಗ್ಲಿಷ್, ಮರಾಠಿ, ತಮಿಳು, ಕನ್ನಡ ಗೊತ್ತಿದ್ದವು. ವ್ಯವಹರಿಸಬಲ್ಲವರಾಗಿದ್ದರು. "ಭಾಷೆ ಸಾಹಿತ್ಯ ಅವರಿಗೆ ಮೊದಲ ಪ್ರೀತಿ, ರಾಜಕೀಯ ಎರಡನೇ ಪ್ರೀತಿ" ಎನ್ನುವಂತಿದ್ದ ರಾಯರನ್ನು ಮನೆಯಲ್ಲಿದ್ದ ರಾಜಕೀಯ ವಾತಾವರಣ ಅವರನ್ನು

ಸೆಳೆಯಿತು. ಪ್ರಧಾನಿಯಾಗಿ ಪ್ರಮಾಣವಚನವನ್ನು ತಮ್ಮ ಮಾತೃಭಾಷೆ ತೆಲುಗಿನಲ್ಲಿ ಸ್ವೀಕರಿಸದೇ ಹೋದ ಬಗೆಗೆ ನಾಯಕರಿಗೆ ನಿರಾಸೆ, ಸಾತ್ವಿಕ ಕೋಪ. "ತನ್ನ ಭಾಷೆ–ನೆಲವನ್ನು ಪ್ರೀತಿಸದವನು ಏನನ್ನು ಯಾರನ್ನು ಪ್ರೀತಿಸಿಯಾನು?" ಎಂಬುದವರ ಪ್ರಶ್ನೆ.

ನರಸಿಂಹರಾಯರು ವಿಶ್ವಪರ್ಯಟನೆ ಮಾಡಿದವರು, ಅನುಭವಬಾಹುಳ್ಯ ಉಳ್ಳವರು, ಆಡಳಿತದಲ್ಲಿ ದಕ್ಷರು –ಇದನ್ನೆಲ್ಲ ಒಪ್ಪುವ ನಾಯಕರು ಹಿಂದಿಯ ಬಗೆಗಿನ ಅವರ ಧೃತರಾಷ್ಟ್ರ ಪ್ರೀತಿಯನ್ನು ಮಾತ್ರ ಟೀಕಿಸದೆ ಬಿಡುವುದಿಲ್ಲ. "ದಕ್ಷಿಣದ ಮೊದಲನೆ ಪ್ರಧಾನಿಯೆಂದು ಸಾಮಾನ್ಯವಾಗಿ ಅವರನ್ನು ವರ್ಣಿಸಲಾಗುತ್ತಿದೆ. ಭೌಗೋಲಿಕವಾಗಿ ಇದು ನಿಜ. ಆದರೆ ಮಾನಸಿಕವಾಗಿ ನಿಜವಲ್ಲ. ನರಸಿಂಹರಾಯರು ಹಿಂದೀವಾದಿ. ಒಂದು ದೇಶ ಒಂದು ಭಾಷೆ ಎಂಬ ಹಳೆಗಾಲದ ರಾಷ್ಟ್ರೀಯ ಭಾವನೆಯವರು ಅವರು. ಹಿಂದೀಯೊಂದೇ ಈ ದೇಶವನ್ನು ಒಗ್ಗೂಡಿಸುವ ಶಕ್ತಿ ಎಂಬ ತಪ್ಪು ಕಲ್ಪನೆ ಅವರಲ್ಲಿ ತುಂಬಿಕೊಂಡಿದೆ. ತಾವು ಹಿಡಿದ ಮೊಲಕ್ಕೆ ಮೂರು ಕೋಡು ಎಂಬಂತೆ ಅವರು ಅದನ್ನು ದೃಢವಾಗಿ ನಂಬಿಕೊಂಡಿದ್ದಾರೆ."(ಪು. ೪೮)

ರಾಷ್ಟ್ರೀಯವಾದಿಗಳಾಗಿದ್ದ ನರಸಿಂಹರಾಯರು ಹಿಂದಿಯ ಕಾರಣಕ್ಕಾಗಿ ನವೋದಯ ವಸತಿಶಾಲೆಗಳನ್ನು ಯೋಜಿಸಿದರು. ಅಂದುಕೊಂಡದ್ದನ್ನು ನಯನಾಜೂಕಿನಿಂದ ಒಲಿಸಿ ಮಾಡಿಯೇ ಮಾಡುತ್ತಿದ್ದರು. ಇದನ್ನು ನಾಯಕರು 'ಸಮಯಸಾಧಕತನ' ಎಂದು ವ್ಯಂಗ್ಯವಾಡಿದ್ದಾರೆ. ಯಾವುದನ್ನೇ ಆಗಲಿ ಹೆಚ್ಚು ಒತ್ತಾಯಿಸುವ ಪ್ರವೃತ್ತಿಯವರಲ್ಲದ ರಾಯರು ಇತರರ ಅಭಿಪ್ರಾಯಗಳಿಗೆ ಬೆಲೆ ಕೊಡುತ್ತಿದ್ದರು ಎಂಬುದನ್ನು ಸ್ವಂತ ಅನುಭವದಿಂದ ನಾಯಕರು ಬಲ್ಲವರಾಗಿದ್ದರು. ಏನೇ ಇರಲಿ ದೇಶ ಕಂಡ 'ಸಜ್ಜನ ಪ್ರಧಾನಿ' ಅವರು ಎಂದು ಹೇಳುವುದನ್ನು ಹಾಮಾನಾ ಮರೆಯುವುದಿಲ್ಲ.

ವ್ಯಕ್ತಿಯ ಬಗ್ಗೆ ಪ್ರೀತಿಗೌರವಗಳನ್ನಿಟ್ಟುಕೊಂಡೇ ಹಾಮಾನಾ ವ್ಯಕ್ತಿವಿಮರ್ಶೆಗೆ ತೊಡಗುತ್ತಾರೆ; ಅಷ್ಟೇ ನಾಜೂಕಾಗಿ ಚಾಟಿ ಏಟು ಕೊಡುತ್ತಾರೆ. ಉದಾಹರಣೆಗೆ: ಇಂದಿರಾಗಾಂಧಿ ಅವರು ಹತ್ಯೆಯಿಂದ ತೀರಿಕೊಂಡಾಗ ತುರ್ತಾಗಿ ಪ್ರಧಾನಿ ಪಟ್ಟವನ್ನು ಅಲಂಕರಿಸಿ, ಅಷ್ಟೇ ತುರ್ತಾಗಿ ಕಾಲನ ಕರೆಗೆ ಓಗೊಟ್ಟ ರಾಜೀವಗಾಂಧಿಯನ್ನು ಕೇಂದ್ರ ಪ್ರಜ್ಞೆಯಲ್ಲಿ ನಿಲ್ಲಿಸಿ, ದೇಶಕ್ಕೆ ನೆಹರು ಮನೆತನ ಕೊಟ್ಟ ಕೊಡುಗೆ ಮತ್ತು ರಾಷ್ಟ್ರದ ಅವನತಿಗೆ ಅದು ಕಾರಣವಾದ ರೀತಿಯನ್ನು 'ರಾಜೀವ್‌ಗಾಂಧಿ: ಸುತ್ತಮುತ್ತ' ಅಂಕಣದಲ್ಲಿ ಕಾಣಬಹುದು. ಹಾಗೆಯೇ

ಜೀವನದುದ್ದಕ್ಕೂ ಸಾಮಾಜಿಕ ನ್ಯಾಯವೆಂದು ಉದ್ಗರಿಸುತ್ತಿದ್ದ ರಾಮಕೃಷ್ಣ ಹೆಗಡೆ ಅವರು ಕೆಲವೊಮ್ಮೆ ಅರ್ಥಹೀನವಾಗಿ ಮಾತನಾಡುತ್ತಿದ್ದುದನ್ನು 'ಮಣ್ಣಿನಮಗ' ಅಂಕಣದಲ್ಲಿ ದಾಖಲಿಸಿದ್ದಾರೆ. ಸಾಂದರ್ಭಿಕ ಅರ್ಥವ್ಯಾಖ್ಯಾನ ಕೊಡದೆ ಕನ್ನಡ ಸಾಹಿತ್ಯವನ್ನು ಬೂಸಾ ಸಾಹಿತ್ಯವೆಂದು ಹೇಳಿ ಮಂತ್ರಿ ಪದವಿಯನ್ನೇ ಕಳೆದುಕೊಂಡ ಬಿ. ಬಸವಲಿಂಗಪ್ಪ ಅವರನ್ನು ಕುರಿತ 'ಬೂಸಾ ಮತ್ತು ಬೋಧಿ'; ಬಹುಶ್ರುತ ಜ್ಞಾನದ, ಕನ್ನಡ ಮರಾಠಿ ಸಾಹಿತ್ಯಗಳ ಕೊಂಡಿಯಾಗಿದ್ದ 'ಗೋಕರ್ಣದ ಬೆಳಕು ಗೌರೀಶ ಕಾಯ್ಕಿಣಿ'; ಕಾದಂಬರಿ ಬರಹದಿಂದಲೇ ಜನಪ್ರಿಯತೆ ಗಳಿಸಿದ 'ಅಪ್ಪಟ ಕನ್ನಡ ಲೇಖಕಿ ಎಂ.ಕೆ. ಇಂದಿರಾ'; ಸತ್ಯ ಹೇಳಿದ ಕಾರಣಕ್ಕಾಗಿ ಮಾನಸಿಕ ಹಿಂಸೆ, ಅವಮಾನ, ಬಹಿಷ್ಕಾರಕ್ಕೆ ಒಳಗಾಗಿ 'ಅಡಗಬಾರದ ದನಿ' ಎನ್ನಿಸಿರುವ ತಸ್ಲೀಮಾ ನಸ್ರೀನ್; 'ಸಾರ್ಥಕ ಬದುಕಿನ ಪ್ರಾಧ್ಯಾಪಕ' ಎಂ. ಮರಿಯಪ್ಪ ಭಟ್ಟರು; ವೃತ್ತಿ ಪ್ರವೃತ್ತಿಯಲ್ಲಿ ನಿಷ್ಠುರತೆಯನ್ನು ಉಳಿಸಿಕೊಂಡು ಸತ್ಯ ಹೇಳುವುದಕ್ಕೆ ಹೆದರದೆ ಎದೆಯೊಡ್ಡುತ್ತಿದ್ದ ಶಾಸನ ತಜ್ಞ 'ಗಾಯಿ: ಎಪ್ಪತ್ತೈದು'; ಧರ್ಮ ಮತ್ತು ರಾಜಕೀಯ ಮನುಷ್ಯನನ್ನು ಭಯಕ್ಕೆ ದೂಡಿದರೆ, ಕಾವ್ಯ ಅವನನ್ನು ನಿರ್ಭೀತನನ್ನಾಗಿ ಮಾಡುತ್ತದೆ ಎನ್ನುವ 'ಶಬ್ಧಯಜ್ಞದ ಕವಿ'; ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹಿಂದಿಯ ನರೇಶ್ ಮೆಹ್ತಾ –ಹೀಗೆ ಒಬ್ಬೊಬ್ಬರನ್ನು ಒಂದೊಂದು ಕಾರಣಕ್ಕೆ ಪ್ರೀತಿಸುತ್ತಾ, ಗ್ರಹಿಸುತ್ತಾ, ಅಧ್ಯಯನ ಮಾಡುತ್ತಾ, ತಮಗೆ ಸರಿಕಾಣದೇ ಹೋದದ್ದನ್ನು ತಪ್ಪದೇ ತೋರಿಸಿಕೊಡುತ್ತಾ ತಮ್ಮ ಅಂಕಣ ಬರಹಗಳಿಗೆ ಶಕ್ತಿ ತುಂಬಿದವರು ಹಾಮಾನಾ.

ನಾಯಕರ ಅಂಕಣ ಬರಹಗಳನ್ನು ಕುರಿತು ಎಚ್.ಎಸ್. ರಾಘವೇಂದ್ರರಾವ್ ಅವರು ಹೀಗೆ ಹೇಳಿದ್ದಾರೆ: "ನಾಯಕರ ಬರವಣಿಗೆಯು ಒಟ್ಟಂದದಲ್ಲಿ ಸಂಸ್ಕೃತಿಕೇಂದ್ರಿತವಾದದ್ದು. ಆ ಸಂಸ್ಕೃತಿ ವೀಕ್ಷಣೆಯ ಪ್ರಾಯೋಗಿಕ ಅಧ್ಯಯನಗಳೆಂಬಂತೆ (Case Studies) ಅನ್ಯವ್ಯಕ್ತಿಕೇಂದ್ರಿತವಾದದ್ದು. ಆ ವ್ಯಕ್ತಿಗಳಾದರೋ ತಮ್ಮ ತಮ್ಮ ಪರಿಮಿತಿಗಳೊಳಗೆ ಸಂಸ್ಕೃತಿ ಕ್ಷೇತ್ರದ ಹಿಂಭಾಗವೊಂದನ್ನು ಶ್ರೀಮಂತಗೊಳಿಸಲು ದುಡಿದವರು. ನಾಯಕರ ಬರವಣಿಗೆಯ ಒಂದು ಸಾಧನೆಯೆಂದರೆ ಎಲೆಯಮರೆಯ ಹೂವುಗಳಂತೆ ಇಡೀ ಜೀವನವನ್ನು ಸಾಂಸ್ಕೃತಿಕ ಕೆಲಸಕ್ಕಾಗಿ ಸವೆಸಿದರೂ ಯಾವುದೇ ಮನ್ನಣೆಯನ್ನು ಪಡೆಯದೆ ಹೋದ ನೂರಾರು ಜನರನ್ನು ಕ್ಷಣಕಾಲವಾದರೂ ಬೆಳಕಿಗೆ ತಂದಿರುವುದು." (ಮಾನ; ಪು. ೬೯–೭೦) ಹೀಗಾಗಿ, ನಾಯಕರು

ಚಿತ್ರಿಸಿರುವ ಎಲ್ಲಾ ಅಂಕಣಗಳೂ ಸಮಗ್ರ, ಸರ್ವಾಂಗ ಸುಂದರ, ಚರ್ಚಾತೀತ ಎನ್ನುವಂತಿಲ್ಲ. ಸಾಂದರ್ಭಿಕ ಒತ್ತಡದಲ್ಲಿ ಬರೆವಾಗ ಮುಖ್ಯವಾದ ಅಂಶಗಳೇ ಬಿಟ್ಟುಹೋಗುವ ಸಾಧ್ಯತೆ ಇದೆ. ಬರೆವ ರೀತಿ ಬದಲಾಗುವ, ಜಾಳಾಗುವ ಸಾಧ್ಯತೆಯೂ ಇರುತ್ತದೆ. ಒಟ್ಟಾರೆ ಅವು ಎಷ್ಟು ಪರಿಣಾಮಕಾರಿ ಮತ್ತು ಉಪಯುಕ್ತ ಎಂಬುದರ ಮೇಲೆ ಅವುಗಳ ಯಶಸ್ಸು ನಿಂತಿರುತ್ತದೆ. ನಾಯಕರಿಗೆ ಆ ಯಶಸ್ಸು ದಕ್ಕಿದೆ.

ಮೂಲತಃ ಸೃಜನಶೀಲ ಮನಸ್ಸು ನಾಯಕರದು. ಅದಕ್ಕೆ ಸೂಕ್ಷ್ಮದರ್ಶಕ ಶಕ್ತಿ ಇದೆ. ಅದು ಸದಾ ಜಾಗೃತಾವಸ್ಥೆಯಲ್ಲಿರುತ್ತದೆ. ನವಿಲ ಕಣ್ಣಂತೆ ಲೋಕವನ್ನು ನಾಲ್ಕಾರು ಮೂಲೆಗಳಿಂದ ನೋಡುತ್ತಿರುತ್ತದೆ. ಮೌಲ್ಯ ನೈತಿಕತೆಯನ್ನು ತೂಗುತ್ತಿರುತ್ತದೆ. ಸಮಾಜ ಸಮುದಾಯದ ಹಿತದ ಬಗ್ಗೆ ಚಿಂತಿಸುತ್ತಿರುತ್ತದೆ. ವರ್ತಮಾನದ ನಿತ್ಯದ ಆಗುಹೋಗುಗಳಿಗೆ ಕ್ರಿಯೆ–ಪ್ರತಿಕ್ರಿಯಿಸುತ್ತಿರುತ್ತದೆ. ಹೀಗಾಗಿ ಎಲ್ಲಾ ವಸ್ತುವಿಷಯಗಳು ಇಂಥ ಮನಸ್ಸಿನ ತೆಕ್ಕೆಗೆ ಬರುತ್ತವೆ. ಹಾಗೆ ಬಂದುದನ್ನು ಆಯ್ದುಕೊಂಡು ತಮ್ಮ ಅಭಿವ್ಯಕ್ತಿಯಲ್ಲಿ ಹಾಮಾನಾ ದಾಖಲು ಮಾಡುತ್ತಾ ಹೋಗುತ್ತಾರೆ. ದೇಶ, ಸರ್ಕಾರ, ಸರ್ವಾಧಿಕಾರ, ರಾಜಕೀಯ ಪಕ್ಷ, ಭಾಷೆ, ಮಾಧ್ಯಮ, ಪತ್ರಿಕೋದ್ಯಮ, ಪ್ರಕಾಶನ, ಭಾರತಧರ್ಮ, ದೇವರು, ಅನುಭಾವ, ಸಿದ್ಧಾಂತ, ಮತಮಾನ್ಯರು, ಮನುಷ್ಯಸ್ವಭಾವ –ಎಲ್ಲವನ್ನು ನೇರವಾಗಿ, ಕೆಲವೊಮ್ಮೆ ಪರೋಕ್ಷವಾಗಿ ತೆಳುವಾಗಿಯಾದರೂ ಹಾಮಾನಾ ಸ್ಪರ್ಶಿಸಿದ್ದಾರೆ. ಓದುಗರಿಗೆ ಇವು ಮುಖ್ಯವೆನಿಸದೆಯೂ ಹೋಗಬಹುದು. ಎಲ್ಲಾ ಕಡೆ ಇವರಿಗೆ ಜನಪ್ರಿಯತೆಯೇ ಮಾನದಂಡವಾಗಬೇಕಿಲ್ಲ. ಮೌಲ್ಯವೇ ಮಾನದಂಡವಾಗಬೇಕೆಂಬ ಆಸೆ, ನಿರೀಕ್ಷೆ ಹಾಮಾನಾ ಅವರಿಗೆ. ಹಾಗಾಗುವುದಕ್ಕೆ ವ್ಯವಸ್ಥೆ ಬಿಡುವುದಿಲ್ಲ. ಅದು ಅವರಿಗೂ ಗೊತ್ತಿದೆ. ಆದರೆ ಅದು ಸೃಷ್ಟಿಸುವ ಅನಾಹುತಗಳನ್ನು ಕಂಡಾಗ ಅವರ ಮನಸ್ಸು ನೋವು ನಿರಾಸೆಯಿಂದ ಮರುಗುತ್ತದೆ. ತಣ್ಣಗಿನ ಆಕ್ರೋಶ ಕಾಣಿಸಿಕೊಳ್ಳುತ್ತದೆ. ಜನಸಮುದಾಯದ ಅಪೇಕ್ಷೆಯನ್ನು ಅರ್ಥಮಾಡಿಕೊಂಡವರಂತೆ ಅವರೆಲ್ಲರ ದನಿಯಾಗಿ ಅಂಕಣವನ್ನು ಕಟ್ಟಿಕೊಡಲು ಪ್ರಯತ್ನಿಸುತ್ತಾರೆ. ಅಂಥ ಕೆಲವನ್ನಿಲ್ಲಿ ದಾಖಲಿಸಬಹುದು:

ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿಯನ್ನು ಕುರಿತೇ ಹಾಮಾನಾ ಮೂರು ಅಂಕಣಗಳನ್ನು (ರಾಜ್ಯ ಪ್ರಶಸ್ತಿ ಬೇಕೆ?, ಒಂದು ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪ್ರಶಸ್ತಿ) ಬರೆದಿದ್ದಾರೆ. ವರ್ಷದಿಂದ ವರ್ಷಕ್ಕೆ ರಾಜಕೀಯ

ಮೇಲಾಟದಿಂದ ಪ್ರಶಸ್ತಿಗಳ ಸಂಖ್ಯೆ ಹೆಚ್ಚುತ್ತಿದೆ. ಅಷ್ಟೇ ಪ್ರಮಾಣದಲ್ಲಿ ಅದರ ಮೌಲ್ಯ ಕುಸಿಯುತ್ತಿದೆ. ಪ್ರತಿಭಾವಂತರನ್ನು ಪ್ರೋತ್ಸಾಹಿಸುವ ಉದ್ದೇಶ ಈ ಪ್ರಶಸ್ತಿಗಳಿಗೆ ಇದ್ದರೂ ಅದು ಸಾರ್ಥಕವಾಗುತ್ತಿಲ್ಲ. ಸರಕಾರ ಆ ಬಗ್ಗೆ ಎಚ್ಚರವಹಿಸುತ್ತಿಲ್ಲ. ವಿವೇಚನೆ ಔಚಿತ್ಯದಿಂದ ಪ್ರಶಸ್ತಿಗಳನ್ನು ಸರಕಾರ ನೀಡುತ್ತಿಲ್ಲ. ಹಂಚಿಕೆ ಮಾಡುತ್ತಿದೆ. ಬೇಡುವವರ ಸಂಖ್ಯೆ ಹೆಚ್ಚಾಗುತ್ತಿರುವುದರ ಹಿಂದೆ ಹಣ, ಚಿನ್ನದ ಆಮಿಷವಿದೆ. ಹೀಗಾಗಿ ಅವು ಮೊದಲಿನ ಯಾವ ಮಹತ್ವವನ್ನೂ ಉಳಿಸಿಕೊಂಡಿಲ್ಲ. ಆಯ್ಕೆ ಸಮಿತಿಯಲ್ಲಿ ವಿಷಯತಜ್ಞರಿಗಿಂತ ಅವಕಾಶವಾದಿಗಳೇ ಪಾತ್ರ–ಸೂತ್ರಧಾರಿಗಳು. ಅಂಥವರಿಂದ "ಪ್ರಶಸ್ತಿಗಳನ್ನು ಪಡೆಯುವುದು ಎಷ್ಟರಮಟ್ಟಿಗೆ ನಿಜವಾದ ಗೌರವ?" ಎಂದು ಪ್ರಶ್ನಿಸುವ ಹಾಮಾನಾ ತರಾತುರಿಯ ಆಯ್ಕೆಯನ್ನು ತೀವ್ರವಾಗಿ ಖಂಡಿಸುತ್ತಾರೆ. "ಗೌರವಗಳು ಗೌರವಯುತವಾಗೇ ಸಲ್ಲಬೇಕು" ಎಂದು ಆಶಿಸುತ್ತಾರೆ. ಸಂಖ್ಯೆಯನ್ನು ನಿರ್ದಿಷ್ಟಪಡಿಸುವಿಕೆ, ಆಯ್ಕೆಯ ಮಾನದಂಡಗಳನ್ನು ಬಿಗಿಗೊಳಿಸುವುದು, ರಾಜಕೀಯಸ್ಥರಿಲ್ಲದ ತಜ್ಞರ ಸಮಿತಿ, ತಿಂಗಳ ಮೊದಲೇ ಆಯ್ಕೆ ಮಾಡಿ ಪ್ರಕಟಿಸುವುದು ಮುಂತಾಗಿ ಸಲಹೆ ಕೊಡುತ್ತಾರೆ. ಅವರ ಪ್ರಕಾರ "ರಾಜ್ಯೋತ್ಸವ ಪ್ರಶಸ್ತಿಗಳು ಭೂಷಣಪ್ರಾಯವಾಗಿರಬೇಕು... ನೀಡುವುದರಲ್ಲಿ ಸರ್ಕಾರಕ್ಕೆ ಗಾಂಭೀರ್ಯವಿರಬೇಕು... ಪಡೆಯುವವರಿಗೆ ಗೌರವ ಎನ್ನಿಸಬೇಕು... ಪಡೆದವರ ಬಗ್ಗೆ ಸಮಾಜಕ್ಕೆ ಅಭಿಮಾನ ಉಕ್ಕುವಂತಿರಬೇಕು (ಅರವತ್ತರ ಆರಲು, ಪು. ೪೨೬). ವಾಸ್ತವವಾಗಿ "ಪ್ರಶಸ್ತಿಗಳನ್ನು ಸ್ಥಾಪಿಸುವುದಷ್ಟೇ ಮಹತ್ವದ ಮಾತಲ್ಲ; ಅವು ಸರಿಯಾದ ಪಾತ್ರರಿಗೆ ಮುಟ್ಟಬೇಕೆಂಬುದು ಅಷ್ಟೇ ಮಹತ್ವದ ವಿಚಾರ."

ನಮ್ಮ ರಾಜ್ಯದ ಪ್ರಶಸ್ತಿಗಳ ಜೊತೆ ಫ್ರಾನ್ಸ್ ದೇಶದ 'ಪ್ರಶಸ್ತಿಯ ಪವಾಡ'ವನ್ನು ಸಮೀಕರಿಸಿ ನೋಡುತ್ತಾರೆ. ಅಲ್ಲಿ ಪ್ರಶಸ್ತಿಗಳು ಸಾಮಾಜಿಕ ಪ್ರತಿಕ್ರಿಯೆಯ ಸಂಕೇತಗಳು. ಪ್ರಶಸ್ತಿಗಳು ಎಷ್ಟೇ ದೊಡ್ಡವು ಇರಲಿ ಸೃಷ್ಟಿಗೆ ಕಾರಣವಾಗುವುದಿಲ್ಲ ಎಂಬ ತಿಳಿವಳಿಕೆ ಅವರಲ್ಲಿದೆ. ಹೀಗಾಗಿ ಸುಮಾರು ೧೫೦೦ ಪ್ರಶಸ್ತಿ ಗೌರವಗಳು ಅಲ್ಲಿವೆ. ಇವೆಲ್ಲಕ್ಕಿಂತ ದೊಡ್ಡದು ಫ್ರೆಂಚ್ ಅಕಾಡೆಮಿಯ ಸದಸ್ಯತ್ವ. ನೊಬೆಲ್ ಪ್ರಶಸ್ತಿ ವಿಜೇತರಿಗೂ ಅಂಥ ಸದಸ್ಯತ್ವ ಸಿಗುವುದು ಕಷ್ಟ. ಏಕೆಂದರೆ ಅದು "ಆ ದೇಶದ ಮಾನ್ಯತೆಯ ಅತ್ಯುಚ್ಚ ಶಿಖರ". ಅಲ್ಲಿನ ಲೇಖಕರು ನೊಬೆಲ್ ಬಹುಮಾನವನ್ನಾದರೂ ಬಿಟ್ಟಾರು ಈ ಸದಸ್ಯತ್ವವನ್ನು ಬಿಡರು ಎನ್ನುವಷ್ಟು ಅದರ ಪ್ರಸಿದ್ಧಿ, ಗೌರವ. ಫ್ರಾನ್ಸ್‌ನಲ್ಲಿ 'ಬೂಕರ್' ಮತ್ತು 'ಪ್ರಿಗಾನ್‌ಕೊ' ಎಂಬೆರಡು ಪ್ರಶಸ್ತಿಗಳಿವೆ. ಮೊದಲನೆಯ

ಪ್ರಶಸ್ತಿಯ ಮೊತ್ತ ಎರಡು ಲಕ್ಷ ಫ್ರಾಂಕುಗಳು. ಎರಡನೆಯದರ ಮೊತ್ತ ಕೇವಲ ಐವತ್ತು ಫ್ರಾಂಕುಗಳು. ಇವರಿಗೆ ಮುಖ್ಯವಾಗುವುದು ಎಷ್ಟು ಸಾಹಿತ್ಯ ರಚಿಸಿದ್ದಾರೆ ಎಂಬುದಲ್ಲ. ಕೃತಿ ವೈಶಿಷ್ಟ್ಯ, ವಸ್ತುನಿರ್ವಹಣೆ, ಪ್ರತಿಭೆ ಸೋಪಜ್ಞತೆ, ಅಭಿವ್ಯಕ್ತಿಯ ದಿಟ್ಟತನಗಳೇ ಮಾನದಂಡಗಳು. ಅವನು ಆ ಹಿಂದೆ ಸಾಹಿತ್ಯ ರಚಿಸಿರಬಹುದು; ರಚಿಸದೆ ಇರಬಹುದು. ಮಾನದಂಡಗಳಿಗನುಸಾರವಾಗಿ ಆಯ್ಕೆ. ಹೀಗೆ ಆಯ್ಕೆಯಾದವರು ಮುಂದೆ ದೇಶದ ಆಸ್ತಿ ಎಂದು ಪರಿಗಣಿತರಾಗುತ್ತಾರೆ. ಆ ಮಾನದಂಡದಿಂದಲೇ ಪತ್ರಿಕೆ ಮಾರುತ್ತಿದ್ದ ರೌಜೌದ್‌ನ (೧೯೯೦) ಮೊದಲ ಮಹಾಯುದ್ಧದಲ್ಲಿ ತನ್ನ ಕುಟುಂಬದಲ್ಲಿ ಘಟಿಸಿದ ಸಾವುನೋವಿನ ಸುತ್ತ ಹೆಣೆದ ಕಾದಂಬರಿಗಾಗಿ ಈ ಎರಡೂ ಪ್ರಶಸ್ತಿಗಳಿಗೂ ಆಯ್ಕೆಯಾದ. ಆದರೆ ಅವನು ಆಯ್ಕೆ ಮಾಡಿಕೊಂಡದ್ದು 'ಪ್ರಿಗಾನ್‌ಕೊ' ಪ್ರಶಸ್ತಿಯನ್ನು. ಇದೇ ನಮಗೂ ಅವರಿಗೂ ಇರುವ ವ್ಯತ್ಯಾಸ.

ನಾಡಿನ ನೆಮ್ಮದಿಯನ್ನು ಕಾಯುವಲ್ಲಿ ಆಯಾಯಾ ರಾಜ್ಯ ಸರ್ಕಾರಗಳ ಪಾತ್ರ ಮಹತ್ವದ್ದು. ಸರ್ಕಾರದ ಆಡಳಿತ ಜನರಿಂದಲೇ ಚುನಾಯಿತರಾದ ಶಾಸಕರಿಂದ ನಡೆಯುತ್ತದೆ. ಆದರೆ ಆಯ್ಕೆಗೊಳ್ಳುವ ಮುನ್ನ, ಆಯ್ಕೆಯಾದ ಮೇಲೆ ಅವರು ನಡೆದುಕೊಳ್ಳುವ ರೀತಿ, ಧರಿಸುವ ಮುಖವಾಡ, ಬೆಚ್ಚಿಬೀಳಿಸುವಂಥವು. ಆ ಬಗೆಗೆ ಹಾಮಾನಾ ಸಾರ್ವಜನಿಕವಾಗಿ ಸಾಕಷ್ಟು ಮಾತನಾಡಿದ್ದಾರೆ. ಬರಹಗಳ ಮೂಲಕ ಎಚ್ಚರಿಸಿದ್ದಾರೆ. 'ದೇಶ ಬೇಕೆ? ಪಕ್ಷ ಸಾಕೆ?', 'ಭಾರತಧರ್ಮ', 'ಅವನತಿಯ ಹಾದಿಯಲ್ಲಿ', 'ಮೋಸ ಹೋದ ದೇಶ' ಮುಂತಾದ ಅವರ ಅಂಕಣ ಬರಹಗಳನ್ನು ಗಮನಿಸಿದಾಗ ಅವರ ನಿಷ್ಠುರತೆ ಅರ್ಥವಾಗುತ್ತದೆ. ಅದರ ಹಿಂದಣ ಸತ್ಯ ಮನದಟ್ಟಾಗುತ್ತದೆ.

"ನಮ್ಮ ದೇಶದ ರಾಜಕೀಯ ಪಕ್ಷಗಳೆಲ್ಲವೂ ಅಧಿಕಾರದಲ್ಲಿದ್ದಾಗ ತಮ್ಮ ಪಕ್ಷವೇ ದೇಶವೆಂದು ಭಾವಿಸುತ್ತವೆ... ಕಾನೂನು ಕಟ್ಟಳೆಗಳು ಅಧಿಕಾರದಲ್ಲಿರುವ ಪಕ್ಷಕ್ಕೆ ಅನ್ವಯವಾಗುವುದಿಲ್ಲ. ಪ್ರಜಾಪ್ರಭುತ್ವ ಚಾಲ್ತಿಯಲ್ಲಿರುವ ದೇಶದ ದುರಂತ ಇದು"(ದೇಶ ಬೇಕೆ? ಪಕ್ಷ ಸಾಕೆ?'). ಇದಕ್ಕೆ ಕಾರಣ ಗೆದ್ದ ಪಕ್ಷಗಳು ತಮ್ಮ ಪ್ರಣಾಳಿಕೆಗೆ ಬದ್ಧವಾಗಿಲ್ಲದಿರುವುದು. ದೇಶದ ಹಿತವನ್ನು ಕಾಯದಿರುವುದು. ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರವಾದರೂ ಪ್ರಜಾಪ್ರಭುತ್ವ ಬಲವಾಗಿಲ್ಲ. ಹೆಚ್ಚುತ್ತಿರುವ ವ್ಯಕ್ತಿ ಸ್ವಾರ್ಥ. ಸಾರ್ವಜನಿಕ ಜೀವನದಲ್ಲಿ ಯಾರ್‍ಯಾರು ಭ್ರಷ್ಟರಿದ್ದಾರೆ ಎಂದು ದೇಶಕ್ಕೆ ತಿಳಿದಿದೆ. ಭ್ರಷ್ಟತೆ ಸಾಬೀತಾಗಿದ್ದರೂ ಶಿಕ್ಷೆಗೆ ಗುರಿಯಾಗುತ್ತಿಲ್ಲ. ಹೀಗಾಗಿ ಭ್ರಷ್ಟರೇ ಹೆಚ್ಚಾಗಿ ಉನ್ನತ ಹುದ್ದೆಗಳನ್ನು ಅಲಂಕರಿಸುತ್ತಾರೆ. ಅಧಿಕಾರ

ನಡೆಸುವವರೇ ದೇಶವನ್ನೇ ದೋಚಿಕೊಂಡು ಹೋಗುವಂತಾಗಿದೆ. ಹಾಗೆ ಆಗಬಾರದು. ಕೇವಲ ಪಕ್ಷದ ಹಿತ ಕಾಯುವವರಿಂದ ನ್ಯಾಯಬದ್ಧ ಆಡಳಿತ ನೀಡುವುದಕ್ಕಾಗುವುದಿಲ್ಲ. ಆದ್ದರಿಂದ "ನಮ್ಮ ದೇಶದಲ್ಲಿ ಹೊಸ ಆಡಳಿತ ಸಂಸ್ಕೃತಿಯೊಂದು ಉದಯವಾಗಬೇಕಿದೆ" ಎನ್ನುವುದು ನಾಯಕರ ಕಳಕಳಿ.

"ಸಾರ್ವಜನಿಕ ಜೀವನದ ಮೌಲ್ಯಗಳು ಬಿಹಾರಿನಲ್ಲಿ ಕುಸಿಯುವಷ್ಟು ತೀವ್ರವಾಗಿ ಇನ್ನೊಂದು ರಾಜ್ಯದಲ್ಲಿ ಕುಸಿಯುತ್ತಿದೆ ಎಂದು ನನಗನಿಸುವುದಿಲ್ಲ" ಎಂದು ಆರಂಭವಾಗುವ 'ಅವನತಿಯ ಹಾದಿಯಲ್ಲಿ' ಎಂಬ ಅಂಕಣದಲ್ಲಿ ಹಾಮಾನಾ ಬಿಹಾರ ರಾಜ್ಯದ ರಾಜಕೀಯ ಅಧಃಪತನಕ್ಕೆ ಕನ್ನಡಿ ಹಿಡಿದಿದ್ದಾರೆ. ಅಲ್ಲಿ ನಿತ್ಯ ನಡೆವ ಕೊಲೆ, ಸುಲಿಗೆ, ಕ್ರೌರ್ಯ, ದರೋಡೆ, ಅತ್ಯಾಚಾರ, ದೌರ್ಜನ್ಯ, ಅನಾಚಾರಕ್ಕೆ ಕೊನೆಮೊದಲಿಲ್ಲ. ಆರೋಗ್ಯ ಇಲಾಖೆಯ ಆಯುಕ್ತ, ಹಿರಿಯ ಐಎಎಸ್ ಅಧಿಕಾರಿ ಟಿ.ಸಿ.ಎ. ರಾಮಾನುಜಂ ಅವರ ಮೇಲೆ ನಡೆದ ದೈಹಿಕ ಮಾನಸಿಕ ಹಲ್ಲೆ ಎಂಥವರನ್ನೂ ನಾಚಿಸುವಂಥದ್ದು. ಹಲ್ಲೆ ನಡೆಸಿದವರು ಅನಾಮಧೇಯರಲ್ಲ. ಲೋಕಸಭೆಯ ಜನತಾದಳದ ಸದಸ್ಯ ರಾಮ್‌ಶರಣ್ ಯಾದವ್, ಅವರ ಮಗ ಭರತ್ ಯಾದವ್ ಮತ್ತವರ ಗೂಂಡಾಪಡೆ. ಈ ಘಟನೆಯ ಸುತ್ತ ಹಾಮಾನಾ ಅವರು ನಡೆಸುವ ರಾಜಕೀಯ ಚಿಂತನೆ ದೇಶ ಸಾಗುತ್ತಿರುವ ದಾರಿಯನ್ನು ನಿಚ್ಚಳವಾಗಿ ತೆರೆದಿಟ್ಟಿದೆ. ಈ ಘಟನೆಗೆ ಕಾರಣವಾದದ್ದು ಕೇವಲ ಒಂದು ಎಂ.ಬಿ.ಬಿ.ಎಸ್. ಸೀಟು. ದುರಂತ ಎಂದರೆ ಹಲ್ಲೆ ನಡೆಸಿದವರೇ ಅಧಿಕಾರಿಯ ಮೇಲೆ ಕ್ರಮಕೈಗೊಳ್ಳಲು ಮುಂದಾಗಿರುವುದು. ಲೋಕಸಭೆಯಲ್ಲಿ ಹಕ್ಕುಚ್ಯುತಿ ನಿರ್ಣಯ ತರಲು ಸಿದ್ಧರಾಗಿರುವುದು. ಇದಕ್ಕಿಂತ ಪ್ರಜಾಪ್ರಭುತ್ವದ ಕಗ್ಗೊಲೆ ಬೇರೊಂದಿಲ್ಲ ಎನ್ನುವುದು ನಾಯಕರ ವಿಷಾದ.

'ಸರ್ಕಾರದ ಕೆಲಸ' ೧೯೯೧ರ ಅಂಕಣವಿದು. ಸರ್ಕಾರದ ನಿಧಾನ ಧೋರಣೆ, ಅವ್ಯವಸ್ಥೆ, ಯಾವುದೇ ನಿರ್ಧಾರ ತೆಗೆದುಕೊಳ್ಳುವಲ್ಲಿ ಹಿಂಜರಿತ ಇತ್ಯಾದಿಗಳನ್ನು ಗಮನಿಸಿದವರಿಗೆ ಸರ್ಕಾರ ಇರುವ ಬಗೆಗೆ ಖಾತ್ರಿಯೇ ಇಲ್ಲ ಎಂಬುದು ನಾಯಕರ ಅಭಿಪ್ರಾಯ. ಹಾಗನ್ನಿಸಲು ಕಾರಣ, ಅವಧಿ ಮುಗಿದರೂ ಪುನರ್‌ರಚಿತವಾಗದ ಅಕಾಡೆಮಿಗಳು, ಅದರ ಸದಸ್ಯತ್ವಕ್ಕಾಗಿ ನಡೆವ, ನಡೆಸುವ, ಪೈಪೋಟಿ, ಶಿಫಾರಸ್ಸುಗಳು, ಕುಲಪತಿಗಳ ನೇಮಕಾತಿಯಲ್ಲಿ ತೆಗೆದುಕೊಳ್ಳುವ ನಿಲುವು, ನಿಗದಿತ ಸಮಯಕ್ಕೆ ಸರಿಯಾಗಿ ಹಂಚಿಕೆಯಾಗದ ಸರ್ಕಾರದ ವಾರ್ಷಿಕ ಪ್ರಶಸ್ತಿಗಳು, ವಿತರಣೆಯಲ್ಲಿ ನಿಧಾನಗತಿ, ಚಲನೆ ಕಳೆದುಕೊಳ್ಳುವ ಫೈಲುಗಳು, ತಜ್ಞರೊಡನೆ ಚರ್ಚಿಸದೆ ತೆಗೆದುಕೊಳ್ಳುವ ಶೈಕ್ಷಣಿಕ ತೀರ್ಮಾನಗಳು

–ಇಂಥವನ್ನೆಲ್ಲ ಗಮನಿಸಿ ನಾಯಕರು ಹೀಗೆ ಪ್ರತಿಕ್ರಿಯಿಸುತ್ತಾರೆ: "ಕರ್ನಾಟಕ ಸರ್ಕಾರ ಸಂಸ್ಕೃತಿ ಸಂಬಂಧವಾದ ವಿಚಾರಗಳಲ್ಲಿ ತೋರುತ್ತಿರುವ ನಿರ್ಲಕ್ಷ ಧೋರಣೆ, ತಾತ್ಸಾರ ಮನೋಭಾವ, ವಿಳಂಬನೀತಿ ಸಂಸ್ಕೃತಿಪ್ರಿಯರನ್ನೆಲ್ಲ ನೋಯಿಸುವಂಥವೂ, ನಿರಾಸೆಗೊಳಿಸುವಂಥವೂ ಆಗಿವೆ... ದೇವರ ಕೆಲಸ ಎಂದರೆ ಮಾಡುವವರ ಕೆಲಸ; ಅಂತಃಸಾಕ್ಷಿಯ ಕೆಲಸ... ಈಗ ಸರಕಾರದ ಕೆಲಸ ದೇವರ ಕೆಲಸವಾಗುವುದು ಸಾಧ್ಯವೇ ಇಲ್ಲ. ಅದು ಸಂಬಳದ ಕೆಲಸ. ಸಂಬಳ ಪಡೆಯುವ ಕೆಲಸ. ಇಂಥವರ ಕೈಯಲ್ಲಿ ಸಿಕ್ಕಿ "ನರತೆ, ಸಂಸ್ಕೃತಿ, ಪ್ರೀತಿ, ದಿವಸ ಬಯಕೆ"ಗಳು ನರಳುತ್ತಿವೆ.(ಅರುವತ್ತರ ಆರಲು, ಪು. ೭೬)

'ಉರಿಯುತ್ತಿರುವ ಕಾವೇರಿ' ವಿಷಯದಲ್ಲಿ ತಮಿಳುನಾಡು ಜನ, ಸರಕಾರ, ರಾಜಕೀಯ ಪಕ್ಷಗಳು, ಎಲ್ಲರಿಗೂ, ಎಲ್ಲಕ್ಕೂ ತಮಿಳು ಗುಣ ಹೇಗೆ ಬಂದುಬಿಡುತ್ತದೆ ಎನ್ನುವ ನಾಯಕರು 'ಕರ್ನಾಟಕ'ದವರನ್ನು ಕುರಿತು ವ್ಯಂಗ್ಯವಾಗಿ ಅಷ್ಟೇ ಸಾರಸ್ಯವಾಗಿ ಹೀಗೆ ನಿರೂಪಿಸುತ್ತಾರೆ: "ಕನ್ನಡಿಗರು ಔದಾರ್ಯದ ಉರುಳಿಗೆ ಸಿಕ್ಕಿಹಾಕಿಕೊಂಡು ನೇತಾಡುವವರು. ಕರ್ನಾಟಕ ರಾಜಕೀಯಸ್ಥರು ತಮ್ಮ ಅಧಿಕಾರ ಲಾಲಸೆಯನ್ನು, ಸ್ವಾರ್ಥವನ್ನು ಎಲ್ಲಕ್ಕಿಂತ ಮಿಗಿಲಾಗಿ ಪೋಷಿಸಿಕೊಂಡು ಬಂದವರು, ಬರುತ್ತಿರುವವರು. ದಿಲ್ಲಿಯಲ್ಲಿ ಟೆಲಿಫೋನ್‌ನಲ್ಲಿ ಕುಕ್ಕಿದರೆ ವಿಧಾನಸೌಧದಲ್ಲಿ ಭೂಕಂಪವಾಗುತ್ತದೆ! ಕರ್ನಾಟಕದ ರಾಜಕೀಯದವರಿಗೆ ಕರ್ನಾಟಕದ ಹಿತ, ಕನ್ನಡಿಗರ ಹಿತ, ಕನ್ನಡದ ಹಿತ –ಎಲ್ಲ ಸಂಕುಚಿತತೆಯ ಸಂಕೇತ. ಅದೊಂದು ಅವರಿಗೆ ಮುಖ್ಯವಾದುದಲ್ಲ. ಅಧಿಕಾರದ ಮುಂದೆ ಯಾವುದೂ ಇಲ್ಲ ಎಂದು ದೃಢವಾಗಿ ಭಾವಿಸಿರುವ ಜನ ಇವರು." ಆದ್ದರಿಂದಲೇ ಕಾವೇರಿ ಪ್ರಕರಣ ಇಂದಿಗೂ ಜೀವಂತವಾಗಿ ಉಳಿದುಕೊಂಡು ಬಂದಿದೆ. ರಾಜಕೀಯದ ಮೇಲಾಟ ತೋರಿಸಬೇಕಾದಾಗ ತಮಿಳುನಾಡು ಕಾವೇರಿಯನ್ನು ಮುಂದಿಟ್ಟು ಕರ್ನಾಟಕವನ್ನು ಕೇಂದ್ರದ ಮೂಲಕವೂ ಬೆದರಿಸುತ್ತದೆ. ಅಧಿಕಾರಕ್ಕೆ ಅಂಟಿಕೊಂಡ ನಮ್ಮವರು ಕನಸಿನಲ್ಲೂ ಕುರ್ಚಿ ಬಿಡಲು ಬೆಚ್ಚುತ್ತಾರೆ. ಅಸಹಾಯಕತೆಯಿಂದ ಕೈಚೆಲ್ಲುತ್ತಾರೆ. ಮಾತಿನ ಅಬ್ಬರ ಮಾತ್ರ ಎಗ್ಗಿಲ್ಲದೆ ಸಾಗುತ್ತದೆ. ಆ ವಿಷಯದಲ್ಲಿ ಇವರು ಕರ್ನಾಟಕವನ್ನು ನಿಷ್ಕ್ರಿಯಗೊಳಿಸಿದ್ದಾರೆ. ನೀರು ನಾಡಿನ ಸಂಪತ್ತು. ದೇಶದ ಸಂಪತ್ತು ಕೂಡ. ಆದರೆ ನದಿಯಲ್ಲಿ ನೀರಿಲ್ಲದಿದ್ದಾಗ ಏನು ಮಾಡಬೇಕು? ತಮಿಳು ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಈ ನಿಟ್ಟಿನಲ್ಲಿ ಸಕಾರಾತ್ಮಕವಾಗಿ ಯೋಚಿಸಬೇಕು ಎಂಬುದು ನಾಯಕರ ಮನವಿ.

ನಾಯಕರ ಸಾಹಿತ್ಯ ಕೃಷಿಯಲ್ಲಿ ಅಂಕಣ ಸಾಹಿತ್ಯವೇ ಪ್ರಧಾನ ಎಂಬುದು ಸರ್ವವಿಧಿತ. ಹಾಗೆಂದು ನಾಯಕರ ಎಲ್ಲ ಅಂಕಣಗಳನ್ನು, ಸಮೀಕ್ಷಿಸುವ, ಚರ್ಚಿಸುವ ಕೆಲಸ ಕಷ್ಟಕರವಾದುದು. ಇದೊಂದು ನಿಬಂಧದ ವಿಷಯ. ಹಾಗೇ ಅವನ್ನೆಲ್ಲ ನಿರ್ದಿಷ್ಟ ವಿಭಾಗದಲ್ಲಿಟ್ಟು ಪರಿಶೀಲಿಸುವುದೂ ಸುಲಭವಲ್ಲ. ಅದರ ರೆಂಬೆಕೊಂಬೆಗಳು ಎಲ್ಲೆಲ್ಲೊ ಚಾಚಿಕೊಂಡಿವೆ. ಇದೇ ಸಂದರ್ಭದಲ್ಲಿ ಹೇಳಲೇಬೇಕಾದ ಮಾತು ಎಂದರೆ ನಾಯಕರ ಅಂಕಣಗಳೆಲ್ಲ ಶ್ರೇಷ್ಠ ದರ್ಜೆಯವು. ಅವುಗಳಲ್ಲಿ ಕೊರತೆಯೇ ಇಲ್ಲ ಎನ್ನುವಂತಿಲ್ಲ. ಹೇಗೆ ಸೃಜನಶೀಲ ಬರಹಗಳಲ್ಲಿಯೂ ಶ್ರೇಷ್ಠತೆಯ ಹಾಗೂ ಅಸಮಗ್ರತೆಯ ಅಂಶಗಳು ಇರುತ್ತವೋ ಹಾಗೆಯೇ ಅಂಕಣಗಳಲ್ಲಿ ಕೂಡ. ಆದರೆ ಇಲ್ಲಿ ಮೌಲಿಕತೆ ಜೀವಂತವಾಗಿರುತ್ತದೆ. ಅದು ಓದುಗನ ಗ್ರಹಿಕೆಯನ್ನು ಅವಶ್ಯಕತೆಯನ್ನು ಅವಲಂಬಿಸಿರುತ್ತದೆ. ಆ ದೃಷ್ಟಿಯಲ್ಲಿ ಹಾಮಾನಾ ಅವರ ಅಂಕಣಗಳು ಅವರ ಬದುಕು ಬರಹದ ಧೋರಣೆಯನ್ನು ವ್ಯಕ್ತಪಡಿಸುತ್ತವೆ. ಜಗತ್ತಿನ ಸಾಂಸ್ಕೃತಿಕ ಸಂಗತಿಯನ್ನು ಪರಿಚಯಿಸುತ್ತವೆ. ಹೊಸ ಸಾಧ್ಯತೆಯನ್ನು ಅರ್ಥಮಾಡಿಸುತ್ತವೆ. ಸಮಷ್ಟಿ ಹಿತವನ್ನು ಕಾಪಾಡುತ್ತವೆ. ವರ್ತಮಾನಕ್ಕೆ ಜನಸಾಮಾನ್ಯರ ಪ್ರತಿಕ್ರಿಯೆಗಳನ್ನು ದಾಖಲು ಮಾಡುತ್ತವೆ. ಸಾಮಾಜಿಕ ಕರ್ತವ್ಯದ ಬಗ್ಗೆ ಓದುಗರನ್ನು ಎಚ್ಚರಿಸುತ್ತವೆ. ವ್ಯಕ್ತಿಗತವಾಗಿ ಅರಿವನ್ನು ಹೆಚ್ಚಿಸುತ್ತವೆ. ಅದಕ್ಕೆ ತಕ್ಕಂತೆ ಇದೆ ಅವರ ಬರಹದ ಮೋಹಕ ಶೈಲಿ. ಎಂಥಾ ಓದುಗರನ್ನೂ ಅದು ಆಕರ್ಷಿಸುತ್ತದೆ. ಈ ಬಗ್ಗೆ ಎಚ್.ಎಸ್. ರಾಘವೇಂದ್ರರಾವ್ ಅವರ ಮಾತುಗಳು ಉಲ್ಲೇಖಾರ್ಹ: "ಜನತಾ ಶಿಕ್ಷಣಕ್ಕೆ ತೀರ ಅಗತ್ಯವಾದ ಆರ್ದ್ರತೆ, ಸರಳತೆ ಮತ್ತು ಪ್ರಸನ್ನತೆಗಳನ್ನು ಒಳಗೊಂಡಿವೆ. ವಿಷಯದ ಅಗತ್ಯಗಳಿಗೆ ತಕ್ಕಂತೆ ಬದಲಾಗಿ, ಅವರ ಶೈಲಿ ಒಂದು ಮಟ್ಟದ ವೈವಿಧ್ಯತೆಯನ್ನು ಪಡೆದಿದೆ. ಕನ್ನಡದ ಗದ್ಯವನ್ನು ಪತ್ರಿಕೋದ್ಯಮದ ತುರ್ತುಗಳಿಗೆ ಒಗ್ಗಿಸಿಕೊಳ್ಳುತ್ತಲೇ ಅದರ ಸಾಹಿತ್ಯಕ ಅನನ್ಯತೆಯನ್ನು ಉಳಿಸಿಕೊಳ್ಳುವ ಕೆಲಸದಲ್ಲಿ ಅವರ ಪಾತ್ರ ಖಂಡಿತವಾಗಿಯೂ ಇದೆ." (ಮಾನ, ಪು. ೭೯)

ಹಾಮಾನಾ ಅವರು ಭಾಷಾಶಾಸ್ತ್ರಜ್ಞರು. ಮಾತು ಮತ್ತು ಬರೆಹ ಎರಡನ್ನೂ ಎಲ್ಲಿ, ಹೇಗೆ, ಎಷ್ಟು ಬೇಕೋ ಅಷ್ಟನ್ನು ಬಳಸುವುದರಲ್ಲಿ ಜಾಣರು. ವಾಚಕರ ಅಭಿರುಚಿಯೊಡನೆ ಬರಹದ ಅಭಿರುಚಿಯನ್ನು ಹೊಂದಿಸಿಕೊಳ್ಳುವ ಅಭಿವ್ಯಕ್ತಿಯ ಕಲೆಗಾರಿಕೆ ಅವರಿಗೆ ಸಹಜವಾಗಿ ಸಿದ್ಧಿಸಿದೆ. ಅಂಕಣಗಳನ್ನು ಸೃಜನಶೀಲಗೊಳಿಸುವ ಕೌಶಲ್ಯ ಅವರಿಗಿತ್ತು. ಹೀಗಾಗಿ ಎಷ್ಟೋ ಅಂಕಣಗಳಲ್ಲಿ

ಕಥನಮಾದರಿಯನ್ನು ಕಾಣುತ್ತೇವೆ. ಕಥನಮಾದರಿ ಜನಸಾಮಾನ್ಯರ ಜೊತೆ ನೇರ ಸಂವಾದ ನಡೆಸಬಲ್ಲದು. ಸುಲಭವಾಗಿ ಸಂವಹನಗೊಳ್ಳಬಲ್ಲದು. ಒಂದು ಬಗೆಯ ಆಪ್ತತೆ, ಆತ್ಮೀಯ ಸ್ಪಂದನ ಉಂಟುಮಾಡಬಲ್ಲದು. ಅಂಥ ಅಂಕಣಗಳು ಹಾಮಾನಾ ಸೃಜನಶೀಲತೆಯ ಅಭಿವ್ಯಕ್ತಿ ಪ್ರತೀಕಗಳು. ಅದಕ್ಕೊಂದು ಉದಾಹರಣೆ 'ಅಸಹಾಯಕರು' ಅಂಕಣ. ಅದರ ಆರಂಭದ ಭಾಗವಿದು: "ಸ್ವಲ್ಪ ದಿನಗಳ ಕೆಳಗೆ ನಾನು ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಿದ್ದೆ. ಆ ದಾರಿಗಳೆಲ್ಲ ಪರಿಚಿತವಾದವು. ಊರುಗಳು ಗೊತ್ತಿದ್ದವು. ಅದೇ ಮುಗ್ಧ ಜನರು! ಬಿಜಾಪುರ ಜಿಲ್ಲೆಯ ಆ ವಿಶಾಲವಾದ ಬಯಲುಗಳಲ್ಲಿ, ಬೇಸಿಗೆಯ ಬಿಸಿಲಿನಲ್ಲಿ, ದಾರಿ ಸವೆಯುವುದೇ ಕಷ್ಟವೆನಿಸುತ್ತಿತ್ತು. ಎತ್ತ ಕಣ್ಣುಹಾಯಿಸಿದರೂ ಊರುಗಳಿಲ್ಲ. ಮನೆಗಳಿಲ್ಲ. ರಾತ್ರಿ ದೀಪಗಳಿಲ್ಲ. ಎಷ್ಟು ಕಾಲದಿಂದ ಈ ದಾರಿಗಳು ಹೀಗೆ ಮಲಗಿವೆ! ದೂರದಲ್ಲಿ ಭೂಮಿಯನ್ನು ಕೂಡುವ ಆಕಾಶವನ್ನು ನೋಡುತ್ತಿದ್ದ ನನಗನ್ನಿಸಿತು –ಈ ದಿಗಂತ ಮನುಷ್ಯನ ಬದುಕಿಗೆ ಎಂಥ ಸಂಕೇತ. ಅಲ್ಲೆಲ್ಲೊ ಈ ಭೂಮಿ ಆಕಾಶಗಳು ಕೂಡುವಂತೆ ತೋರುತ್ತದೆ. ಆದರೆ ಕೂಡುವುದಿಲ್ಲ. ನಮ್ಮ ಜೀವನವಾದರೂ ಅಷ್ಟೇ– ಎಷ್ಟೊಂದು ಆಸೆ, ಆಕಾಂಕ್ಷೆ, ಆದರ್ಶಗಳ ಬೆನ್ನು ಹತ್ತುತ್ತದೆ. ಆದರೆ ಅವು ಸಿಕ್ಕುವುದೇ ಇಲ್ಲ. ಬದುಕಿನ ಯಾತ್ರೆ ಹೀಗೆ ನಡೆದಿದೆ."

"ಬಾಯಾರಿದೆ, ನೀರು ಬೇಕು. ಆದರೆ ನೀರಿಲ್ಲದೆ ಏದುಸಿರುಬಿಡುತ್ತಾ ಎತ್ತು ಎಮ್ಮೆಗಳು ಹೋಗುತ್ತಿವೆ. ಸತ್ತವರಿಗೆ ಜೀವ ಬರುವಂತೆ ತಂಗಾಳಿ ಬೀಸುತ್ತದೆ, ಒಂದೇ ಒಂದು ಕ್ಷಣ. ಅಷ್ಟಕ್ಕೇ ಒಂದು ಸಂತೋಷ; ಒಂದು ಸಮಾಧಾನ. ಜೀವನ ಎಷ್ಟು ವಿಚಿತ್ರ. ಬಿಸಿಲನ್ನು ಸೃಷ್ಟಿಸಿದ ಶಕ್ತಿಯೇ ಬೆಳದಿಂಗಳನ್ನೂ ಸೃಷ್ಟಿಸಿದೆ. ಕಷ್ಟಸುಖಗಳ ಹಾಸುಹೊಕ್ಕುಗಳಲ್ಲಿಯೇ ಬದುಕು ನೇಯ್ಗೆಗೊಂಡಿದೆ. ಹೀಗೆ ಯೋಚಿಸುತ್ತಿರುವಂತೆಯೇ ಹಾದಿ ಸಾಗುತ್ತದೆ. ಕತ್ತಲಾಗುತ್ತದೆ. ಅಲ್ಲಿ ಬಹಳ ದೂರದಲ್ಲಿ ಒಂಟಿ ದೀಪವೊಂದು ಕಾಣಿಸುತ್ತದೆ. ಅದೂ ಕೂಡ ಬಹುಬೇಗನೆ ಮರೆಯಾಗುತ್ತದೆ."

"ಆ ಉರಿ ಸೆಖೆಯಲ್ಲಿಯೂ ಮೌನವನ್ನು ಸೀಳಿಕೊಂಡು ಹಕ್ಕಿಗಳ ಚಿಲಿಪಿಲಿ ಕೇಳಿಸುತ್ತದೆ. ಅದರಲ್ಲಿ ಹಕ್ಕಿಯ ಹಾಡಿನ ಸೊಗಸು ಇಲ್ಲ. ನೋವಿಲ್ಲ. ದುಃಖವಿದೆ. ಅದು ಬಿಸಿಲ ಹಾಡು; ವ್ಯಥೆಯ ಹಾಡು."

ಇದು ಬಿಜಾಪುರದ ಒಂದು ಚಿತ್ರಣ. ಸತ್ಯ ಮತ್ತು ವಾಸ್ತವಗಳ ಮುಖಾಮುಖಿ. ಐಎಎಸ್ ಅಧಿಕಾರಿಗಳ ಕೈಗೆ ಸಿಕ್ಕು ನರಳುತ್ತಿರುವ

ರಾಷ್ಟ್ರಜೀವನವನ್ನು ಕುರಿತದ್ದು. ಅಧಿಕಾರ ನಡೆಸಲು ಕೇವಲ ಬುದ್ಧಿವಂತಿಕೆ ಮಾತ್ರ ಸಾಕಾಗುವುದಿಲ್ಲ. ವಿವೇಕವೂ ಬೇಕು ಎಂಬ ಧ್ವನಿ ಇಲ್ಲಿಯದು. "ತಿಳಿವಳಿಕೆಯಿಲ್ಲದ ರಾಜಕಾರಣಿಗಳ ಮಾರ್ಗದರ್ಶನ, ದೂರದೃಷ್ಟಿಯಿಲ್ಲದ ಅಧಿಕಾರಿಗಳ ಕರ್ತವ್ಯನಿರ್ವಹಣೆ, ಇವರಿಬ್ಬರಿಗೂ ಸಮಾನವಾಗಿರುವ ಸ್ವಾರ್ಥಲಾಲಸೆ, ಅಸಹಾಯಕರಾದ ಸಾರ್ವಜನಿಕರು – ಇದೆಲ್ಲದರ ನಡುವೆ ನಮ್ಮ ಬದುಕು ಅಸ್ವಸ್ಥವಾಗಿದೆ" ಎನ್ನುವುದಕ್ಕೆ ಬಿಜಾಪುರವನ್ನು ಕುರಿತ ನಾಯಕರ 'ಅಸಹಾಯಕರು' ಅಂಕಣ ಸಾಕ್ಷಿಯಾಗಿದೆ.

ತಮ್ಮ ಅಂಕಣ ಬರಹವನ್ನು ಕುರಿತ ಹಾಮಾನಾ ಅವರ ಮಾತುಗಳಿಂದಲೇ ಅವರ ಈ ಬಗೆಯ ಸಾಹಿತ್ಯ ಕೃಷಿಗೆ ಕನ್ನಡಿ ಹಿಡಿಯಬಹುದು: "ಬರೆಹದ ವಸ್ತು ಲಘುವಾದುದಾಗಿರಬಹುದು, ಗಂಭೀರವಾದುದಾಗಿರಬಹುದು, ನಿರ್ದಿಷ್ಟ ವಿಚಾರ ಕುರಿತದ್ದಾಗಿರಬಹುದು, ತಮಾಷೆಯ ಸ್ವರೂಪದ್ದಾಗಿರಬಹುದು. ಅಂಕಣ ಬರೆಹಗಾರನ ವೈಯಕ್ತಿಕ ದೃಷ್ಟಿಕೋನವನ್ನು ಸ್ವಂತ ರುಚಿ ಅಭಿರುಚಿಗಳನ್ನು ಆಧರಿಸಿರುತ್ತದೆ. ಎಲ್ಲೆಡೆ ಲೇಖನ ಧೋರಣೆಗೆ ಆದ್ಯತೆ ಇರುತ್ತದೆ. ಇದು ಅಂಕಣಕಾರನಿಗೆ ಆಯ್ಕೆಯ ಸ್ವಾತಂತ್ರ್ಯವನ್ನೂ, ನಿರೂಪಣೆಯ ವೈವಿಧ್ಯತೆಯನ್ನೂ ಕಲ್ಪಿಸುತ್ತದೆ. ಅಂಕಣಕ್ಕೆ ಸಂಬಂಧಿಸದಿರುವುದೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಅದರ ವ್ಯಾಪ್ತಿ. ಲೋಕವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಅಂಕಣ ಮೂಸೆಯಲ್ಲಿಡುವಾಗ ಸದಾ ತೆರೆದಿರುವುದು ಅಂಕಣಕಾರನ ಒಳಗಣ್ಣು. ಆದ್ದರಿಂದ ಅಂಕಣ ನೂರಕ್ಕೆ ನೂರರಷ್ಟು ಅಂಕಣಕಾರನದೇ ಆಗಿರುತ್ತದೆ. ಈ ಪ್ರಕಾರದಲ್ಲಿ ಸಾಧ್ಯವಿರುವಷ್ಟು ಆತ್ಮನಿಷ್ಠತೆ, ಲಲಿತಪ್ರಬಂಧವನ್ನುಳಿದು ಬೇರೊಂದು ಪ್ರಕಾರದಲ್ಲಿ ಇಲ್ಲ. ಆತ್ಮನಿಷ್ಠತೆ ಎನ್ನುವುದು ವಸ್ತುನಿಷ್ಠತೆಯಾಗಿ ಮಾರ್ಪಡುವುದೇ ಈ ಪ್ರಕಾರದ ಒಂದು ಮಹತ್ವದ ವೈಶಿಷ್ಟ್ಯ."(ಸಿಂಚನ, ಪು. ೧೯)

ಹಾಮಾನಾ ಅವರ ಅಂಕಣಗಳಲ್ಲಿಯೇ ಚಿಂತನೆಯಿದೆ, ವೈಚಾರಿಕತೆಯ ವಿಮರ್ಶೆಯಿದೆ. ಕೆಲವರು ಇವನ್ನು ಬೇರೆ ಬೇರೆಯಾಗಿ ವಿಂಗಡಿಸಿಕೊಂಡೂ ವಿವೇಚನೆ ಮಾಡಿದ್ದಾರೆ. ಹಾಮಾನಾ ಅವರ ಅಭಿನಂದನ ಗ್ರಂಥ 'ಮಾನ'ದಲ್ಲಿಯೂ ಇಂಥ ಒಂದೆರಡು ಲೇಖನಗಳಿವೆ. ಎಂ.ಎಚ್. ಕೃಷ್ಣಯ್ಯ ಅವರು "ಹಾಮಾನಾ: ವೈಚಾರಿಕ ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆ" ಎಂಬ ಲೇಖನ ಬರೆದಿದ್ದಾರೆ. ಅದರಲ್ಲಿ ಪ್ರಸ್ತಾಪಿಸಿರುವುದು ಅಂಕಣ ಬರಹಗಳ ಸಂಕಲನಗಳಲ್ಲಿ ಇರುವ ಇಂಥ ಲೇಖನಗಳನ್ನೇ.

ನಾಯಕರ ಚಿಂತನ ಬರೆಹ ಎಂಬ ಆಶಯವನ್ನು ಹೊತ್ತು ಪ್ರಕಟವಾದದ್ದು 'ಸೂಲಂಗಿ'. ಇದು ಆಕಾಶವಾಣಿಯ ಚಿಂತನ, ಸುಭಾಷಿತ ಬರಹಗಳನ್ನು ಆಧರಿಸಿದ್ದು. ವಿವಿಧ ವಿಷಯಗಳನ್ನು ಕುರಿತು ಐದು ನಿಮಿಷದ ಕಾರ್ಯಕ್ರಮದಲ್ಲಿ ಬಿತ್ತರಿಸಲು ಪೋಣಿಸಿದ ಆಣಿಮುತ್ತುಗಳು ನಾಯಕರ ಈ ಚಿಂತನ ಬರೆಹಗಳು. ಸೂಲಂಗಿಯಲ್ಲಿ ಇಂಥ ಮುವ್ವತ್ತು ಚಿಂತನಗಳಿವೆ.

"ಈ ಬಗೆಯ ಚಿಂತನೆ ವಿಚಾರಸಾಹಿತ್ಯದ ಆಳ, ಗಾಂಭೀರ್ಯ, ವಿಸ್ತಾರವನ್ನು ತೋರುವುದಿಲ್ಲ ಎಂಬುದು ನಿಜ. ಮೂರು ನಾಲ್ಕು ನಿಮಿಷಗಳ ಅವಧಿಯಲ್ಲಿ ಆಡುವ ಮಾತುಗಳಿವು. ಆದರೆ ಚಿಂತನೆಗೆ ಪ್ರಚೋದನೆ ನೀಡಬಲ್ಲುವು. ಏಕೆಂದರೆ ಹಾಮಾನಾ ಅವರ ಬರೆಹ ಎಷ್ಟೇ ಚಿಕ್ಕದಾದರೂ ಶಿಲ್ಪವನ್ನು ಕಡೆದಂತೆ, ಚಿಕಣಿ ಚಿತ್ರದಂತೆ ಒಂದು ರೂಪ, ಬಂಧ, ಸಮತೋಲನವನ್ನು ಹೊಂದಿರುತ್ತವೆ. ಆದ್ದರಿಂದ ಒಂದು ಕಲಾಕೃತಿಯನ್ನು ಪರಿಭಾವಿಸಿದ ಅನುಭವವನ್ನು ನೀಡುತ್ತವೆ. ಅಡಕಗುಣ ಇಲ್ಲಿಯ ವೈಶಿಷ್ಟ್ಯ."(ಮಾನ, ಪು. ೮೪)

'ಸಂವಾದ', 'ಸಂಚಯ', 'ಸಂದರ್ಭ'ಗಳಲ್ಲೂ ನಾಯಕರ ಈ ಬಗೆಯ ವೈಚಾರಿಕ ಲೇಖನಗಳು, ಭಾಷಣಗಳು ಸಂಕಲಿತವಾಗಿವೆ. 'ಸಂದರ್ಭ' ಹದಿನಾಲ್ಕು ಭಾಷಣಗಳ ಸಂಗ್ರಹ. ಈ ಭಾಷಣಗಳೆಲ್ಲ ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದಂಥವು. 'ಸಂಚಯ'ದಲ್ಲಿ ಆಚಾರ್ಯ ತೀನಂಶ್ರೀ, ಕನ್ನಡ ಗದ್ಯದ ಶಿಲ್ಪಿ ದೇಜಗೌ ಮುಂತಾದವರ ಸಾಧನೆ, ಸಿದ್ಧಿಗಳ ವೈಚಾರಿಕ ವಿವೇಚನೆಯಿದೆ. ಇವು ವ್ಯಕ್ತಿಚಿತ್ರಗಳೂ ಹೌದು; ಪರಿಚಯ ಲೇಖನಗಳೂ ಹೌದು. 'ಸ್ಮರಣ', 'ಸ್ತವನ' ಸಂಕಲನಗಳೂ ಇಂಥವೇ. ಹಾಮಾನಾ ಸಾಹಿತ್ಯ ವಿಮರ್ಶೆಯನ್ನು ಕುರಿತ ವಿಷಯಗಳನ್ನು ಹೆಚ್ಚು ಒಳಗೊಂಡಿರುವ ಸಂಕಲನಗಳೆಂದರೆ ಅವರ 'ಸಪ್ತಕ', 'ಸಂಗ್ರಹ', 'ಸಮೀಕ್ಷೆ', 'ಸೃಜನ' ಮುಂತಾದವು. ಇಲ್ಲಿ 'ವಿಮರ್ಶೆಯ ಲೇಖನಗಳೂ ಇವೆ; ವಿಮರ್ಶೆಯನ್ನು ಕುರಿತ ಲೇಖನಗಳೂ ಇವೆ.' ಇಲ್ಲೆಲ್ಲ ನಾಯಕರ ಪಾಂಡಿತ್ಯ, ತಲಸ್ಪರ್ಶಿ ಅಧ್ಯಯನ, ಪರಂಪರೆಯ ಹಾಗೂ ಸಮಕಾಲೀನ ಅರಿವು, ವ್ಯಾಕರಣ, ಸಾಹಿತ್ಯ ಚರಿತ್ರೆ, ಮುಂತಾದ ವಿಷಯಗಳ ಮೇಲಿನ ಪ್ರಭುತ್ವ, ಶಾಸ್ತ್ರಗ್ರಂಥಗಳ ಪರಿಚಯ, ಸಂಶೋಧನ ಪ್ರವೃತ್ತಿ –ಇವೆಲ್ಲ ಹೃದ್ಗೋಚರವಾಗುತ್ತವೆ.

ಲಲಿತ ಪ್ರಬಂಧ ಸಾಹಿತ್ಯಕ್ಕೂ ನಾಯಕರು ಕಾಣಿಕೆ ಇತ್ತಿದ್ದಾರೆ. 'ಬಾಳ್ನೋಟಗಳು' ಅವರು ವಿದ್ಯಾರ್ಥಿ ದಿಸೆಯಲ್ಲಿದ್ದಾಗಲೇ ಪ್ರಕಟಿಸಿದ ಹನಿಗವಿತೆ

ಹಾಗೂ ಕಿರುಚಿತ್ರಣಗಳ ನೈಜ ಪ್ರಬಂಧ ಸಂಕಲನ. ವಾಸ್ತವವಾಗಿ ಇದರಿಂದಾಗಿ ಬಾಲಕನಿದ್ದಾಗಲೇ ಸಾಹಿತಿಯ ಗೌರವವನ್ನು ಸಂಪಾದಿಸಿದವರು ನಾಯಕರು. ಇದಕ್ಕೆ ಕಾರಣ ಅವರು ತಮ್ಮ ಸುತ್ತಮುತ್ತಲಿನ, ಮಲೆನಾಡಿನ, ನೈಜ ಘಟನೆಗಳನ್ನು, ಆಗುಹೋಗುಗಳನ್ನು, ವ್ಯಕ್ತಿಗಳನ್ನು ಕುರಿತು ಬರೆದದ್ದು. ಈ ಸಂಕಲನದಲ್ಲಿ ಬರುವ ಜಲಜಾಕ್ಷಿ, ಪಾರ್ವತಿ, ಸರಸಿ, ಪುಟ್ಟ ಮೊದಲಾದವರ ಜೀವನ ಸಂಗತಿಗಳನ್ನು ಆಧರಿಸಿದ ಚಿತ್ರಗಳು ಇವು. ಕುವೆಂಪು ಅವರ 'ಮಲೆನಾಡಿನ ಚಿತ್ರಗಳು'; ಗೊರೂರರ 'ಹಳ್ಳಿಯ ಚಿತ್ರಗಳು' ಹಾಗೂ ಕಾರಂತರ 'ಹಳ್ಳಿಯ ಹತ್ತು ಸಮಸ್ತರು' ಇವುಗಳನ್ನು ನೆನಪಿಗೆ ತರುವಂಥ ಇನ್ನೊಂದು ಪುಸ್ತಕವೇ ನಾಯಕರ ಈ 'ಬಾಳ್ನೋಟಗಳು' ಪುಟ್ಟ ಪುಸ್ತಕ.

ನಾಯಕರು ಲಲಿತ ಪ್ರಬಂಧದಲ್ಲಿ ವಿಶೇಷ ಕೃಷಿ ಮಾಡದಿದ್ದರೂ ಲಲಿತ ಪ್ರಬಂಧಕಾರನ ಎಲ್ಲ ಲಕ್ಷಣಗಳೂ ಅವರಲ್ಲಿದ್ದವು. ಅವರೇ ಗುರುತಿಸುವಂತೆ "ಯಾವುದಾದರೊಂದು ಸಣ್ಣ ಸಂಗತಿಯ ಸುತ್ತ ತನ್ನ ಕಲ್ಪನೆಯನ್ನು ಹರಿಯಬಿಡುವುದು ಪ್ರಬಂಧಕಾರನ ಕೆಲಸ. ಈ ಸಂಗತಿ ಒಂದು ದೃಶ್ಯವಾಗಿರಬಹುದು; ಒಂದು ಮಾತಾಗಿರಬಹುದು; ಒಂದು ಭಾವವೋ ಭಾವನೆಯೋ ಆಗಿದ್ದಿರಬಹುದು. ಇವಕ್ಕೆ ಕಾವು ಕೊಟ್ಟು ಜೀವ ಬರಿಸಿ ದೈಹಿಕ ರೂಪ ಕೊಡುವ ಕೆಲಸವೇ ಪ್ರಬಂಧದ ರಚನೆ. ಅನುಭವ, ಅಧ್ಯಯನ, ಕಲ್ಪನೆ, ಪ್ರತಿಭೆ –ಇವೆಲ್ಲವೂ ಸೇರಿಕೊಂಡಾಗ ಮಾತ್ರ ಇದು ಸಾಧ್ಯವಾಗುತ್ತದೆ." ಈ ಎಲ್ಲ ಗುಣಗಳೂ ತಮಗಿದ್ದುವು ಎಂಬುದನ್ನು ನಾಯಕರು ತಮ್ಮ ಚೊಚ್ಚಲು ಕೃತಿಯಲ್ಲಿಯೇ ಪ್ರದರ್ಶಿಸಿ ತೋರಿಸಿದ್ದಾರೆ.

ರವೀಂದ್ರನಾಥ ಠಾಕೂರರು ಭಾರತದ ಮಹಾನ್ ಕವಿಗಳಲ್ಲಿ ಒಬ್ಬರು. ಈ ಪ್ರಮುಖ ಕವಿಯ ಜೀವನ ಚರಿತ್ರೆಯನ್ನು ನಾಯಕರು ಬರೆದಿದ್ದಾರೆ. ಐದಾರು ಮುದ್ರಣಗಳನ್ನು ಕಂಡಿರುವುದು ಈ ಕೃತಿ ಓದುಗರಿಗೆ ಇಷ್ಟವಾಗಿರುವುದಕ್ಕೆ ಸಾಕ್ಷಿ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪದವಿ ತರಗತಿಗಳಿಗೆ ಎರಡು ಬಾರಿ ಪಠ್ಯವಾಗಿ ವಿದ್ಯಾರ್ಥಿಗಳಿಗೆ ಪ್ರಿಯವಾಗಿದೆ.

ಹದಿನೈದು ಉಪಶೀರ್ಷಿಕೆಗಳಡಿಯಲ್ಲಿ ನಾಯಕರು ರವೀಂದ್ರರ ಜೀವನದ ವಿವರಗಳನ್ನು ಹರಳುಗಟ್ಟಿಸಿದ್ದಾರೆ. ಠಾಕೂರರಂಥ ಮಹಾನ್ ಲೇಖಕನ ಜೀವನ ಚಿತ್ರವನ್ನು ಎಲ್ಲ ವಿಷಯಗಳೊಡನೆ, ವಿವರಗಳೊಡನೆ ಬಿಡಿಸುವುದು ಸುಲಭದ ಮಾತಲ್ಲ. ನಾಯಕರಿಗೆ ಈ ಬಗ್ಗೆ ಆತಂಕವಿದ್ದದ್ದು ಸಹಜವೇ. ಅದನ್ನವರು ಹೇಳಿಕೊಂಡಿದ್ದಾರೆ ಕೂಡ: "ಠಾಕೂರರಂಥವರ ಜೀವನವನ್ನು ಕುರಿತು

ಬರೆಯುವುದು ಸುಲಭವಲ್ಲ. ಬಹುಮುಖ ಪ್ರತಿಭೆಯ ಅವರ ಜೀವನವು ಚರಿತ್ರೆಯ ಚೌಕಟ್ಟಿಗೆ ಸಿಗುವುದಿಲ್ಲ. ಕವಿಯ ಕಾವ್ಯವೇ ಅವನ ಜೀವನ. ಆದರೆ ಠಾಕೂರರ ಜೀವನವೇ ಕಾವ್ಯವಾಗಿದೆ. ಆದುದರಿಂದಲೇ ಅವರು ತಮ್ಮ ಒಂದು ಕವಿತೆಯಲ್ಲಿ ಹೇಳಿದ್ದಾರೆ: 'ಕವಿಯನ್ನು ನೀನು ಅವನ ಜೀವನ ಚರಿತ್ರೆಯಲ್ಲಿ ಕಾಣಲಾರೆ'." ಈ ಮಾತಿನ ಹಿನ್ನೆಲೆಯಲ್ಲಿ ಸವಾಲಾಗಿ ಸ್ವೀಕರಿಸಿ ಠಾಕೂರರನ್ನು ಕನ್ನಡಕ್ಕೆ ದೊರಕಿಸಿಕೊಟ್ಟವರು ನಾಯಕರು. ಅದರ ಜೊತೆಗೆ ಬಂಗಾಳೀ ಸಾಹಿತ್ಯದ ಆಳ ಅಗಲಗಳನ್ನು ವಿಸ್ತಾರ ವೈವಿಧ್ಯವನ್ನೂ ಪರಿಚಯಿಸುವುದು ಅವರಿಂದಾಯಿತು. 'ಆ ಮೂಲಕ ಭಾರತೀಯ ಸಾಹಿತ್ಯಕ್ಕೆ ಲೋಕಮನ್ನಣೆ ದೊರಕುವಂತಾಯಿತು.'

"ಬಂಗಾಳೀ ಸಾಹಿತ್ಯದ ಆರಂಭದ ಘಟ್ಟದಲ್ಲಿ ಕೃತ್ತಿವಾಸನೆಂಬ ಕವಿಯ ರಾಮಾಯಣ; ಕಾಶೀರಾಮನೆಂಬ ಕವಿಯ ಭಾರತ; ವೈಷ್ಣವ ಸಂತರ ಕೀರ್ತನೆಗಳು, ರಾಜಾರಾಮ ಮೋಹನರಾಯ, ಈಶ್ವರಚಂದ್ರ ವಿದ್ಯಾಸಾಗರ, ಮೈಕೆಲ್ ಮಧುಸೂದನ ದತ್ತ –ಮೊದಲಾದ ವ್ಯಕ್ತಿ ಮತ್ತು ಕೃತಿಗಳಿಂದ ಹೇಗೆ ಸೂಕ್ತವಾದ ವಾತಾವರಣವೊಂದು ನಿರ್ಮಾಣವಾಯಿತೆಂದು ಹೇಳಿ, ಮುಂದೆ ರವೀಂದ್ರನಾಥ ಠಾಕೂರರು, ಬಂಕಿಮಚಂದ್ರ ಚಟರ್ಜಿ, ಶರಶ್ಚಂದ್ರ ಚಟರ್ಜಿ ಆಧುನಿಕ ಬಂಗಾಳೀ ಸಾಹಿತ್ಯದಲ್ಲಿ ಸೂರ್ಯ ಚಂದ್ರರಂತೆ ರಾರಾಜಿಸಿದರೆಂಬುದರತ್ತ ಗಮನ ಸೆಳೆಯುತ್ತಾರೆ. 'ಬಂಗಾಳ ಇಂದು ಏನನ್ನು ಯೋಚಿಸುತ್ತದೆಯೋ ಭಾರತ ಅದನ್ನು ನಾಳೆ ಯೋಚಿಸುತ್ತದೆ' ಎಂಬ ಅನಿಬೆಸೆಂಟರ ಅಭಿಪ್ರಾಯವೊಂದನ್ನು ಉಲ್ಲೇಖಿಸಿ ಆ ಸ್ಥಿತಿಗೆ ಕಾರಣವಾದ ಹಿನ್ನೆಲೆಯನ್ನೂ ಗುರುತಿಸುತ್ತಾರೆ. ಇಲ್ಲಿಯೇ ರವೀಂದ್ರನಾಥರ ಲೋಕಪ್ರಿಯತೆ ಎಷ್ಟೆಂಬ ಬಗ್ಗೆ ಪ್ರಚಲಿತ ಸಂಗತಿಗಳನ್ನು ವಿವರಿಸಿ ಆ ತರುವಾಯ ಠಾಕೂರರ ಮನೆತನ, ಆ ಮನೆತನಕ್ಕಿದ್ದ ಸಾಹಿತ್ಯಕ, ಸಾಂಸ್ಕೃತಿಕ, ಸಾಮಾಜಿಕ ಹಿನ್ನೆಲೆ, ರಾಜರ್ಷಿಯಂತಿದ್ದ ದ್ವಾರಕಾನಾಥರಿಗಿದ್ದ ಗೌರವ–ಪ್ರತಿಷ್ಠೆಗಳ ಪ್ರಭಾವ, ಅದನ್ನು ಕಾಯ್ದುಕೊಳ್ಳುವುದಕ್ಕೆ ಮಾಡಿದ ಸಾಲ, ದೊಡ್ಡ ಕುಟುಂಬದೊಳಗಿನ ಜೀವವಿರೋಧಿಯಾದ ಶಿಸ್ತು, ದೇವೇಂದ್ರನಾಥ, ಗಿರೀಂದ್ರನಾಥ, ನರೇಂದ್ರನಾಥರು ಕಂಡುಂಡ ಬದುಕಿನ ಕಟುವಾಸ್ತವಗಳು, ಸಾಲಸೋಲಗಳು, ಪಿತ್ರಾರ್ಜಿತವಾಗಿ ಬಂದಿದ್ದ ವೈಭವ–ವಿರಕ್ತಿಗಳು ರವೀಂದ್ರರ ಮನಸ್ಸನ್ನು ಮಿದ್ದಿ ಹದಗೊಳಿಸಿದ್ದನ್ನು ವಿವರಿಸುತ್ತಾರೆ."(ಬಾಳಣ್ಣ ಸೀಗೆಹಳ್ಳಿ, ಹಾಮಾನಾ: ವ್ಯಕ್ತಿಚಿತ್ರ ಮತ್ತು ಜೀವನಚರಿತ್ರೆಗಳು, ಲೇಖನ, ಹಾಮಾನಾ ಸಾಹಿತ್ಯಾವಲೋಕನ, ಪು. ೩೫–೩೬)

ನಾಯಕರು ಹಂತ ಹಂತವಾಗಿ ಠಾಕೂರರ ಜೀವನದ ವಿವರಗಳನ್ನು ಬಿಚ್ಚಿಡುತ್ತಾ ಸಾಗುತ್ತಾರೆ. ಅವರು ಕೊಟ್ಟಿರುವ ಉಪಶೀರ್ಷಿಕೆಗಳು ಅದಕ್ಕೆ ಪೂರಕವಾಗಿವೆ. "ಟ್ಯಾಗೂರರ ಜನನ–ಬಾಲ್ಯ, ಅಂದಿನ ಕಲ್ಕತ್ತಾ ನಗರದ ಪರಿಸರ, ಶಾಲೆಯ ಶಿಕ್ಷಣದ ಬಗ್ಗೆ, ಅವರ ಕಾವ್ಯ ಸ್ಫೂರ್ತಿಯ ಬಗ್ಗೆ, ಹಿಮಾಲಯ ದರ್ಶನ, ಸಾಹಿತ್ಯಸೃಷ್ಟಿ–ದೇಶಭಕ್ತಿ, ಇಂಗ್ಲೆಂಡಿಗೆ ಎರಡು ಬಾರಿ, ನಿರ್ಜರಿಯ ಎಚ್ಚರ, ಕಟ್ಟಡ, ಶಾಂತಿನಿಕೇತನ, ವಿಶ್ವಭಾರತಿ, ದಿಗ್ವಿಜಯ, ಕವಿಗೆ ಸಾವಿಲ್ಲ –ಎಂಬ ಪ್ರಭೇದಗಳನ್ನು ಕಲ್ಪಿಸಿಕೊಂಡು ರವೀಂದ್ರರಿಗೆ ಒದಗಿಬಂದ ಜೀವನಾನುಭವದ ಹಿನ್ನೆಲೆಯಲ್ಲಿ ಟ್ಯಾಗೂರರು 'ವಿಶ್ವಕವಿ'ಯಾಗಿ ರೂಪುಗೊಂಡ ಬಗೆಯನ್ನು ದರ್ಶನ ಮಾಡಿಸುವಲ್ಲಿ ಹಾಮಾನಾ ಯಶಸ್ವಿಯಾಗಿದ್ದಾರೆ. ಇಲ್ಲಿಯ ಪ್ರತಿಯೊಂದು ವಿವರಗಳು ಎಷ್ಟು ನಿಖರವಾಗಿವೆ ಎಂದರೆ ಈ ಕೃತಿಯನ್ನು ಓದುವಾಗ ಲೇಖಕರಂತೂ ಸರಿಯೇ ಓದುಗರೂ ಕೂಡ ಆ ಪರಿಸರದಲ್ಲಿ ವಿಹರಿಸುತ್ತಿರುವ ಅನುಭವ ಪಡೆಯುತ್ತಾರೆ. ಕೊನೆಯ ಪುಟಗಳಲ್ಲಿ ಹಾಮಾನಾ ದಾಖಲಿಸಿರುವ ರವೀಂದ್ರರ ವಂಶಾವಳಿ, ಅವರ ಕೃತಿಸೂಚಿ, ನಿಜವಾಗಿಯೂ ಅಪರೂಪದ ದಾಖಲೆಗಳಾಗಿವೆ. ಅಷ್ಟೇ ಅಲ್ಲ, ಅಧ್ಯಯನದ ಶಿಸ್ತು, ಶ್ರಮಕ್ಕೆ ನಿದರ್ಶನಗಳಾಗಿವೆ."(ಪೂರ್ವೋಕ್ತ, ಪು. ೩೬)

ರವೀಂದ್ರರ ಜೀವನ ಚರಿತ್ರೆಯ ಹೊರತಾಗಿ 'ಅಕ್ಕಮಹಾದೇವಿ', 'ಗುರುದೇವ ರವೀಂದ್ರರು' ಮತ್ತು 'ಮಹಮ್ಮದ್ ಪೈಗಂಬರ್' ಎಂಬ ಮೂರು ಕಿರು ಜೀವನಚರಿತ್ರೆಗಳನ್ನೂ ನಾಯಕರು ಬರೆದಿದ್ದಾರೆ. ಇವು ಮಕ್ಕಳಿಗಾಗಿ ಬರೆದ ಪುಸ್ತಕಗಳು. ಹೊಸದಾಗಿ ಓದು ಕಲಿತ ವಯಸ್ಕರನ್ನೂ ಉದ್ದೇಶಿಸಿ ಬರೆದವು. ಇವುಗಳಲ್ಲಿ ಮಕ್ಕಳನ್ನು ರಂಜಿಸುವ ಯಾವ ಉಪಕ್ರಮವನ್ನೂ ನಾಯಕರು ಅನುಸರಿಸಿಲ್ಲ. ಅವರ ಪ್ರಕಾರ ಈ ಮೂರೂ ಜೀವನಚರಿತ್ರೆಗಳೇ. 'ಅಕ್ಕಮಹಾದೇವಿ' ಕರ್ನಾಟಕದ ಹೆಸರಾಂತ ಶಿವಶರಣೆ, ವಚನಕಾರ್ತಿಯನ್ನು ಕುರಿತದ್ದು. ಭಾರತದ ಸುಪ್ರಸಿದ್ಧ ಲೇಖಕ 'ಗುರುದೇವ ರವೀಂದ್ರರು' ಎರಡನೆಯದರ ವಸ್ತು. 'ಮಹಮ್ಮದ್ ಪೈಗಂಬರ್' ಮೂರನೆಯದು. ಇದು 'ಜಾಗತಿಕ ವ್ಯಾಪ್ತಿಯ ಒಬ್ಬ ಪ್ರವಾದಿಯ ವಿಚಾರವನ್ನು ನಿರೂಪಿಸುತ್ತದೆ.'

ಈ ಕಿರು ಹೊತ್ತಗೆಗಳಲ್ಲಿ ನಾಯಕರ ಉದ್ದೇಶ ಆಯಾ ವ್ಯಕ್ತಿಗಳ ಮಹತ್ವವನ್ನು ಪುಟಾಣಿಗಳಿಗೆ ಮನದಟ್ಟು ಮಾಡಿಕೊಡುವುದಷ್ಟೆ. ಓದಿದ ಯಾರಿಗೂ ಹಿಡಿಸುವಂಥ ಸರಳ ಭಾಷೆಯನ್ನು ನಾಯಕರು ಇಲ್ಲೆಲ್ಲ ದುಡಿಸಿಕೊಂಡಿದ್ದಾರೆ. ಮಕ್ಕಳಿಗಾಗಿ ಬರೆದವು ಎಂಬ ಕಾರಣಕ್ಕಾಗಿ ಇವನ್ನು

ಹಗುರವಾಗಿ ಕಾಣಲು ಬರುವುದಿಲ್ಲ. ಏಕೆಂದರೆ ನಾಯಕರು ಏನೇ ಬರೆದರೂ ಅವು ಉದ್ದೇಶಿತ ಗುರಿಯನ್ನು, ನಿರೀಕ್ಷಿತ ಫಲವನ್ನು ಈಡೇರಿಸುವುದರಲ್ಲಿ ಹಿಂದೆ ಬೀಳುವುದಿಲ್ಲ.

ಹೀಗೆ ನಾಯಕರ ಸಾಹಿತ್ಯ ಕೃಷಿ ಬಹುಮುಖವಾದುದು. ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳನ್ನೂ ಸ್ಪರ್ಶಿಸುವಂಥದು. ಅಂಕಣವೇ ಅವರ ಆಡುಂಬೊಲ. ಅದರಲ್ಲಿ ಅವರು ಆಡಿದ್ದೇ ಆಟ. ಸಾಧಿಸಿದ್ದೆಲ್ಲ ವಿಸ್ಮಯ. ನಾಯಕರ ಪ್ರತಿಭೆ, ಅಧ್ಯಯನ, ವಿದ್ವತ್ತು, ಅನುಭವ, ಅಭಿವ್ಯಕ್ತಿ ಕೌಶಲ, ನಿರಂತರ ದುಡಿಮೆಗಳು ಅವರನ್ನು 'ಅಂಕಣ ಅಪರಂಜಿ' ಎನಿಸಿವೆ. ತಮ್ಮ ಚೊಚ್ಚಲ ಕೃತಿ 'ಬಾಳ್ನೋಟಗಳು' ಮೂಲಕವೇ ತಾವೊಬ್ಬ ಕವಿಯಾಗಬಹುದಿದ್ದ, ಪ್ರಬಂಧಕಾರನಾಗಬಹುದಿದ್ದ, ಒಳ್ಳೆಯ ಕಥೆಗಾರನಾಗಬಹುದಿದ್ದ ಸಾಧ್ಯತೆಗಳನ್ನು ತೋರಿಸಿಕೊಟ್ಟವರು. ಅವರ 'ನಮ್ಮ ಮನೆಯ ದೀಪ' ಓದಿದ ಯಾರೂ ಅದರ ಮಾರ್ದವತೆಗೆ, ನವಿರಾದ ಭಾವನೆಗಳಿಗೆ, ಬೆರಗಾಗದಿರರು. ಸೃಜನಶೀಲ ಗುಣಗಳ ಗಣಿಯಾಗಿದ್ದ ನಾಯಕರು ಕಥೆ, ಕವನ, ಕಾದಂಬರಿಗಳನ್ನು ಓದಿ ತಣಿದರೇ ವಿನಃ ಆ ಪ್ರಕಾರಗಳಲ್ಲಿ ತೊಡಗಿಸಿಕೊಳ್ಳಲಿಲ್ಲ. ಆದರೆ ಅವರ ಎಲ್ಲ ಶಕ್ತಿ ಇಡುಗಂಟಾಗಿ ವ್ಯಯಿಸಿದ್ದು ಅಂಕಣ ಪ್ರಕಾರಕ್ಕೆ. ಅದೊಂದು ಸಾಹಿತ್ಯ ಪ್ರಕಾರವೆಂದೇ ಯಾರೂ ಗುರುತಿಸಿರಲಿಲ್ಲ. ನಾಯಕರು ಈ ನಿಟ್ಟಿನಲ್ಲಿ ಮಾಡಿದ ಸಾಧನೆ, ಪಡೆದ ಸಿದ್ಧಿ, ಏರಿದ ಎತ್ತರ ಈ ಪ್ರಕಾರಕ್ಕೂ, ನಾಯಕರಿಗೂ ಜನಪ್ರಿಯತೆಯನ್ನೂ, ಮಾನ್ಯತೆಯನ್ನೂ, ಘನತೆ–ಗೌರವಗಳನ್ನೂ ತಂದುಕೊಟ್ಟವು.

## ೧೦. ಹಾಮಾನಾ ಮತ್ತು ಕನ್ನಡ

ಹಾರೋಗದ್ದೆ ಮಾನಪ್ಪ ನಾಯಕ. ಇದು ಬರೀ ಹೆಸರಲ್ಲ. ಅವರೊಬ್ಬ ಬರೀ ವ್ಯಕ್ತಿಯಲ್ಲ. ಆ ಹೆಸರಿನಲ್ಲಿ ಒಂದು ಕನ್ನಡದ ಕಾರಣಿಕ ಶಕ್ತಿ ಇದೆ. ಆ ವ್ಯಕ್ತಿಯಲ್ಲಿ ಒಬ್ಬ ಕನ್ನಡದ ಮಹಾನಾಯಕನಿದ್ದಾನೆ. ಬಾಲ್ಯದಿಂದಲೇ ನಾಯಕರು ನಾಯಕತ್ವದ ಲಕ್ಷಣಗಳನ್ನು ಮೈಗೂಡಿಸಿಕೊಂಡವರು. ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ 'ಮಿತ್ರರಬಳಗ' ಎಂಬ ಸಾಂಸ್ಕೃತಿಕ ಸಂಘವನ್ನು ಸ್ಥಾಪಿಸಿ ಅದರ ಮುಂದಾಳತ್ವ ವಹಿಸಿದವರು. ಅದರ ಕಾರ್ಯಕ್ರಮಗಳಿಗೆ ನಾಡಿನ ಹಿರಿಯ ಗಣ್ಯ ಸಾಹಿತಿಗಳನ್ನು, ಕಲಾವಿದರನ್ನು ಆಹ್ವಾನಿಸಿ ಬರಮಾಡಿಕೊಂಡವರು. ಇದರಿಂದ ಚಿಕ್ಕವಯಸ್ಸಿನಲ್ಲೇ ಅವರಿಗೆ ಕನ್ನಡದ ಬಗೆಗೆ ಅಭಿರುಚಿ ಆಸಕ್ತಿ ಬೆಳೆಯಿತು. ಮಾಧ್ಯಮಿಕ ಶಾಲೆಯಲ್ಲಿದ್ದ ದಿನಗಳಲ್ಲಿಯೇ ಕರ್ನಾಟಕ ಏಕೀಕರಣ ಸಮಿತಿಯ ನಾಲ್ಕಾಣೆ ಸದಸ್ಯರಾಗಿದ್ದವರವರು. ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್, ಕೆ.ಆರ್. ಕಾರಂತ್, ಕೆ.ಬಿ. ಜಿನರಾಜಹೆಗಡೆ, ಸಿದ್ಧವನಹಳ್ಳಿ ನಿಜಲಿಂಗಪ್ಪ ಮೊದಲಾದ ಕರ್ನಾಟಕವನ್ನು ಕಟ್ಟಿದ ಮಹಾನುಭಾವರ ತಪಶ್ಶಕ್ತಿಯ ಸಂಕೇತವಾದ ಆ ಸಮಿತಿಯು ಅಂದಿನ ದಿನಗಳಲ್ಲಿ ಕನ್ನಡ ಪ್ರೇಮಿಗಳಿಗೆಲ್ಲ ಸ್ಫೂರ್ತಿಯ ಸೆಲೆಯಾಗಿತ್ತು. ನಾಯಕರೂ ಇದಕ್ಕೆ ಹೊರತಾಗಿರಲಿಲ್ಲ. ಕನ್ನಡ ಅಭಿಮಾನ ಅವರಲ್ಲಿ ಜಾಗೃತವಾಯಿತು. ಮುಂದೆ ಈ ಕನ್ನಡದ ಕಾರಣದಿಂದಲೇ 'ನಾಯಕರತ್ನ' ಎನಿಸಿಕೊಂಡರು.

ಬಾಲ್ಯದಲ್ಲಿಯೇ ಕನ್ನಡದ ಕೆಲಸಕ್ಕೆ ಬಂದ ನಾಯಕರು, ಕನ್ನಡಕ್ಕಾಗುವ ಅವಮಾನವನ್ನು ವಿರೋಧಿಸುವುದು, ಕನ್ನಡಕ್ಕೆ ದೊರೆಯಬೇಕಾದ, ನ್ಯಾಯಬದ್ಧವಾದ ಸ್ಥಾನಮಾನಗಳಿಗಾಗಿ ಹೋರಾಡುವುದು ಇವುಗಳನ್ನೇ ಕಾಯಕವಾಗಿಸಿಕೊಂಡರು. ಕನ್ನಡವನ್ನೇ ತಮ್ಮ ಉಸಿರಾಟದ ಭಾಗವಾಗಿಸಿಕೊಂಡರು. 'ಕನ್ನಡವೇ ತಮ್ಮ ಮೊದಲ ಹಾಗೂ ಕೊನೆಯ ಪ್ರೀತಿ' ಎಂದು ನಮ್ರವಾಗಿ ಅರಿಕೆ ಮಾಡಿಕೊಂಡರು. ವಿದ್ಯಾರ್ಥಿಯಾಗಿದ್ದಾಗಲೇ ಕನ್ನಡಪರ ಸಂಘಟನೆಗಳಲ್ಲಿ ಕೆಲಸ ಮಾಡಿದವರು ನಾಯಕರು.

"ಹೀಗೆ ಬಾಲ್ಯದಿಂದಲೇ ತನ್ನನ್ನು ಕನ್ನಡತಾಯಿ ತನ್ನ ತೋಳ ತೆಕ್ಕೆಯಲ್ಲಿ ಎತ್ತಿಕೊಂಡಳು. ತನ್ನ ಪ್ರೀತಿ ಸೂಸಿದಳು. ನನ್ನ ಬದುಕಿನ ಸಾರ್ಥಕತೆ ನನಗೆ ಕನ್ನಡದಿಂದಲೇ ದೊರೆಯಿತು. ಅದರಿಂದ ನಾನು ಧನ್ಯನಾಗಿದ್ದೇನೆ. ಆಗಿನಿಂದಲೂ ನಾನು ಕನ್ನಡದ ಬೆಳವಣಿಗೆಗಾಗಿ ಕೈಲಾದುದನ್ನೆಲ್ಲ ಮಾಡಿದ್ದೇನೆ.

ಕರ್ನಾಟಕದ ಅಭ್ಯುದಯದ ಕನಸು ಕಂಡಿದ್ದೇನೆ" ಎಂದು ನಾಯಕರು ಘಟಿಕೋತ್ಸವ ಭಾಷಣವೊಂದರಲ್ಲಿ ಹೇಳಿಕೊಂಡಿದ್ದಾರೆ.

ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳ ಹೈದ್ರಾಬಾದ್ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ ತುಂಬ ಪ್ರಭಾವಿತರಾದವರು ನಾಯಕರು. ಆ ಭಾಷಣ ಓದಿದ ಕ್ಷಣದಿಂದಲೇ ಕನ್ನಡಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡರು. ಅದರ ಏಳಿಗೆಗಾಗಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಪಣ ತೊಟ್ಟರು. ಈ ವಿಷಯದಲ್ಲಿ ಮುಂದೆಂದೂ ಅವರು ಹಿಂತಿರುಗಿ ನೋಡಲಿಲ್ಲ. ಅವರ ಗುರಿ ನೇರವಾದುದಾಗಿತ್ತು, ನಿಶ್ಚಿತವಾದುದಾಗಿತ್ತು, ಅದು ಕನ್ನಡವೇ ಆಗಿತ್ತು. ತಮ್ಮ ಭಾಷಣದಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳು ಆಡಿದ ಮಾತುಗಳಿವು: "ಕನ್ನಡಿಗರೇ ನಿಮ್ಮ ಕನ್ನಡವನ್ನು ಇಂಡಿಯಾ ದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ. ಅದು ಹೋದರೆ ಹೋಗಲಿ ಎನ್ನುವ ಹಾಗಿದ್ದರೆ ಈ ಕಡೆ ಬಂಗಾಳಕೊಲ್ಲಿ ಇದೆ. ಆ ಕಡೆ ಅರಬ್ಬೀ ಸಮುದ್ರ ಇದೆ. ಗುಡಿಸಿ ಹಾಕಿಬಿಡಿ." ಈ ಮಾತುಗಳು ಎಳೆಯ ಮನಸ್ಸಿನ ನಾಯಕರಲ್ಲಿ ಅಚ್ಚೊತ್ತಿ ನಿಂತವು. "ಕೃಷ್ಣಶಾಸ್ತ್ರಿಗಳು ಕನ್ನಡ ನವೋದಯದ ಹೊತ್ತಾರೆ ಹುಟ್ಟಿದ ಬೆಳ್ಳಿ. ಅವರು ಕನ್ನಡವನ್ನು ಕಟ್ಟಿದರು; ಕನ್ನಡಿಗರನ್ನು ಎಚ್ಚರಿಸಿದರು... ಕನ್ನಡ ಸಾಂಸ್ಕೃತಿಕ ಪಡೆಯನ್ನು ರೂಪುಗೊಟ್ಟು ನಿಲ್ಲಿಸಿದ ಅವರನ್ನು 'ಸೇನಾನಿ' ಎಂದು ವರ್ಣಿಸುವುದಕ್ಕಿಂತ ಉಚಿತ ಶಬ್ದ ಈಗಲೂ ನನಗೆ ತೋರುತ್ತಿಲ್ಲ" ಎಂದಿದ್ದಾರೆ ಅವರನ್ನು ಕುರಿತು ಬರೆಯುತ್ತ.

ನಾಯಕರಲ್ಲಿ ಕನ್ನಡತನವನ್ನು ಉದ್ದೀಪಿಸಿದ ಇನ್ನೊಬ್ಬ ಮುಖ್ಯ ಲೇಖಕರು ಅ.ನ. ಕೃಷ್ಣರಾಯರು. ನಾಯಕರು ತಮ್ಮ ಮೊದಲ ಕೃತಿ 'ಬಾಳ್ನೋಟಗಳು' ಹೊರಬರಲು ಪ್ರೇರಕಶಕ್ತಿಯೇ ಅನಕೃ. 'ನನಗೆ ಬರೆಯಬೇಕೆಂಬ ಆಸೆಯಿದೆ, ಏನನ್ನು ಕುರಿತು ಬರೆಯಲಿ?' ಎಂದು ನಾಯಕರು ಅವರನ್ನು, ಹೈಸ್ಕೂಲು ತರಗತಿಗಳಲ್ಲಿ ಓದುತ್ತಿರುವಾಗ ಕೇಳುತ್ತಾರೆ. ಅದಕ್ಕೆ ಅವರು 'ನಿನ್ನ ಸುತ್ತಮುತ್ತಣ ಪರಿಸರವನ್ನು ಗಮನಿಸು. ಅದರ ನೈಜತೆ, ವಾಸ್ತವತೆಯನ್ನು ಕುರಿತು ಬರಿ' ಎಂದು ಹೇಳಿದರಂತೆ. ಅದನ್ನು ಶ್ರದ್ಧೆಯಿಂದ ಪಾಲಿಸಿದ ನಾಯಕರು ಲೇಖಕರಾಗಿ ಹೊರಹೊಮ್ಮುತ್ತಾರೆ. ಅವರ ಸಾಹಿತ್ಯಸೇವೆ ಅಲ್ಲಿಂದಲೇ ಪ್ರಾರಂಭವಾಗುತ್ತದೆ. ಕನ್ನಡಕ್ಕೊಬ್ಬ ಉತ್ಕೃಷ್ಟ ಲೇಖಕನ ಉದಯವಾಗುತ್ತದೆ.

ಅನಕೃ ಅವರನ್ನು ಕುರಿತು ನಾಯಕರು 'ಅಚ್ಚಗನ್ನಡಿಗ ಅನಕೃ' ಎಂಬ ಅಂಕಣದಲ್ಲಿ ತಮ್ಮ ಗೌರವ ಸಲ್ಲಿಸಿದ್ದಾರೆ: "ಕನ್ನಡದ ಯಾವ ಸಮಸ್ಯೆಯನ್ನೂ

ಅನಕೃ ತಮಗೆ ಸಂಬಂಧಿಸಿದ್ದಲ್ಲವೆಂದು ದೂರ ಇಡಲಿಲ್ಲ. ಪ್ರಾಂತನಿರ್ಮಾಣ, ಕನ್ನಡ ಮಾಧ್ಯಮ, ಹಿಂದಿ ಚಳವಳಿ, ಬಳ್ಳಾರಿ ಸಮಸ್ಯೆ, ರಾಜಾಜಿಯಂಥ ಧುರೀಣರು ಕನ್ನಡಿಗರಿಗೆ ಎಸಗುವ ಅಪಮಾನ, ಕನ್ನಡ ಕಲಾವಿದರ ದುಃಸ್ಥಿತಿ ಪ್ರತಿಯೊಂದನ್ನೂ ಅವರು ನಿಷ್ಠೆಯಿಂದ ಎತ್ತುಕೊಂಡರು, ಹೋರಾಡಿದರು, ನಿಷ್ಠುರ ಕಟ್ಟಿಕೊಂಡರು. ಅವರು ತಮ್ಮನ್ನು 'ಹಲವು ಕಾಳಗಗಳ ಕಲಿ' ಎಂದು ಕರೆದುಕೊಂಡಿರುವುದು ಅಕ್ಷರಶಃ ನಿಜ. ಕನ್ನಡದ ಜಯ ಅಪಜಯಗಳನ್ನು ಮಾನಾಪಮಾನಗಳನ್ನು ತಮ್ಮದೇ ಎಂದು ಭಾವಿಸಿದವರವರು. ಕನ್ನಡದ ಕಾರಣದೊಂದಿಗೆ ಈ ಬಗೆಯ ತಾದಾತ್ಮ್ಯ ಹೊಂದಿದ ಲೇಖಕರು ಮೂವರೋ, ನಾಲ್ವರೋ; ಐದನೆಯವರನ್ನು ಎಣಿಸಲು ಕಷ್ಟಪಡಬೇಕು." ನಾಯಕರಿಗೆ ಅತ್ಯಂತ ಮೆಚ್ಚುಗೆಯಾದ ಅನಕೃ ಅವರ ಮಾತು 'ನನ್ನಂಥವರು ಕನ್ನಡಕ್ಕೆ ಅನೇಕರಿದ್ದಾರೆ; ಆದರೆ ನನಗಿರುವುದು ಒಂದೇ ಕನ್ನಡ' ಎಂಬುದು.

ಆ ಒಂದೇ ಕನ್ನಡವನ್ನು ತಮ್ಮದನ್ನೂ ಆಗಿಸಿಕೊಂಡ ನಾಯಕರು ಅದರ ಶ್ರೀರಕ್ಷೆಗೆ ಕಂಕಣ ಕಟ್ಟಿ ನಿಂತರು. ಬೀದಿಯ ಹೋರಾಟಕ್ಕಿಂತ ಬುದ್ಧಿಮೂಲದ ಹೋರಾಟ ಅವರ ಕ್ರಮ. ಅಂಕಣಗಳೇ ಅವರ ಅಸ್ತ್ರ. ಭಾಷಣಗಳೇ ಅವರ ಈಟಿ. ಸಹಜ ವಾಗ್ಮಿಯಾಗಿದ್ದ ನಾಯಕರ ಮಾತುಗಳನ್ನು, ಅವುಗಳ ಮಾರ್ಮಿಕತೆಯನ್ನು ಅರಗಿಸಿಕೊಳ್ಳುವುದು ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಬಹಳ ಕಷ್ಟವಾಗುತ್ತಿತ್ತು. ಅಲ್ಲೆಲ್ಲ ನಾಯಕರಿಗಿದ್ದುದು ಕನ್ನಡದ ಕಾಳಜಿಯೇ ವಿನಃ ಯಾರ ಮೇಲಿನ ಪೂರ್ವಗ್ರಹವಲ್ಲ.

'ಸಾಹಿತ್ಯ ಸಲ್ಲಾಪ' ಕನ್ನಡಪ್ರಭ ದಿನಪತ್ರಿಕೆಯಲ್ಲಿ ನಾಯಕರು ಬರೆಯುತ್ತಿದ್ದ ಬಹುಜನಪ್ರಿಯ ಅಂಕಣ. ಕನ್ನಡದ ಬಗ್ಗೆ ತಮ್ಮ ಆತಂಕ, ಅಭಿಪ್ರಾಯಗಳನ್ನು ನಾಯಕರು ಆಗಾಗ ಈ ಅಂಕಣದಲ್ಲಿ ಬರೆದು ಪ್ರಸ್ತಾಪಿಸಿದರು. ಹೆಸರನ್ನು 'ಸಾಹಿತ್ಯ ಸಲ್ಲಾಪ' ಎಂದಿಟ್ಟು ಭಾಷೆಯ ಬಗೆಗೆ ಬರೆಯುವುದು ಎಷ್ಟು ಸರಿ? ಎಂದು ಕೆಲವರು ಆಕ್ಷೇಪಿಸಿದರು. ಅದಕ್ಕೆ ನಾಯಕರು ಕೊಟ್ಟ ಉತ್ತರದಲ್ಲಿ ಅವರ ಕನ್ನಡದ ನಿಲುವು ವ್ಯಕ್ತವಾಗಿದೆ: "ನನ್ನ ಪಾಲಿಗೆ ಭಾಷೆ ಸಾಹಿತ್ಯ ಬೇರೆ ಬೇರೆಯಲ್ಲ. ನಮ್ಮ ದೇಶದಲ್ಲಿ ನಮ್ಮ ಭಾಷೆಗಳಿಗೆ ನೆಲೆಯಿಲ್ಲದಾಗ ನಮ್ಮ ಸಾಹಿತ್ಯ ಎಲ್ಲಿ ಉಳಿದೀತು? ಯಾರು ಲಕ್ಷಿಸಿಯಾರು?"

ಹೀಗಾಗಿ ನಾಯಕರ ಅಂಕಣ ಬರಹಗಳಲ್ಲಿ ಕನ್ನಡ ಮತ್ತು ಶಿಕ್ಷಣ ಕುರಿತ ಲೇಖನಗಳು ಹೆಚ್ಚಾಗಿವೆ. 'ಕನ್ನಡ ಮಕ್ಕಳಿಗೆ ಕನ್ನಡವೇ ದಾರಿದೀಪ', 'ತಾಯ್ನುಡಿಯಲ್ಲಿ ಶಿಕ್ಷಣ', 'ಇಂದಿನ ಶಿಕ್ಷಣ ಪದ್ಧತಿ', 'ಕುಸಿಯುತ್ತಿರುವ ಶಿಕ್ಷಣ

ವ್ಯವಸ್ಥೆ', 'ಶಿಕ್ಷಣದಲ್ಲಿ ಕನ್ನಡದ ಸ್ಥಾನ', 'ಕನ್ನಡ ಮಾಧ್ಯಮದ ಸಮಸ್ಯೆ', 'ಶಾಪಹಿಡಿದ ಕನ್ನಡ', 'ಋತುಧರ್ಮ', 'ಶಿಕ್ಷಣ ಋತು' –ಮುಂತಾದ ಲೇಖನಗಳು ಅವರು ನಿರಂತರವಾಗಿ ಕನ್ನಡದ ಬಗ್ಗೆ ಆಲೋಚಿಸುತ್ತಿದ್ದುದರ ಕುರುಹಾಗಿವೆ.

ಕನ್ನಡದ ಕಾಯಕ ಒಬ್ಬಿಬ್ಬರು ಮಾಡಿ ಮುಗಿಸುವಂತದ್ದಲ್ಲ ಎಂಬುದು ನಾಯಕರಿಗೆ ಗೊತ್ತಿತ್ತು. ಅದರ ಪ್ರಗತಿಗೆ ಕುತ್ತು ಬಂದಾಗ ಕನ್ನಡ ಸಮುದಾಯ ಎಚ್ಚೆತ್ತುಕೊಂಡರೆ ಮಾತ್ರ ಅದರ ಉಳಿವು ಸಾಧ್ಯ ಎಂಬುದವರಿಗೆ ತಿಳಿದಿದ್ದರಿಂದ, ಆ ಸಮುದಾಯವನ್ನು ಜಾಗೃತಗೊಳಿಸುವ ಕೆಲಸವನ್ನು ನಾಯಕರು ತಮ್ಮ ಮಾತುಗಳಿಂದ, ಬರೆಹಗಳಿಂದ ಮಾಡುತ್ತಿದ್ದರು. ಕನ್ನಡದ ಏಳಿಗೆಗಾಗಿ ಯಾರು ಏನೇ ಮಾಡಿದರೂ ಅದರಿಂದ ಸಂತೋಷಪಡುತ್ತಿದ್ದರು. ಅಂಥವರನ್ನು ಮತ್ತಷ್ಟು ಹುರಿದುಂಬಿಸುತ್ತಿದ್ದರು. ಅವರೊಡನೆ ಸಂಪರ್ಕ ಬೆಳೆಸುತ್ತಿದ್ದರು. ಕಾರ್ಡುಗಳನ್ನು ಬರೆಯುತ್ತಿದ್ದರು. ನಾಯಕರ ಇಂಥ ಬಳಗ ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋಯಿತು. ನಾಯಕರ ಮಾತು ಎಂದರೆ ಅವರಿಗೆಲ್ಲ ವೇದವಾಕ್ಯವಾಯಿತು. ಇಲ್ಲಿ ಹಿರಿತನ ಕಿರಿತನದ ಭೇದಭಾವ ಇರಲಿಲ್ಲ. 'ಕನ್ನಡ ಕಟ್ಟುವ ಕೆಲಸ' ನಿರಂತರವಾಗಿ ಸಾಗಬೇಕು. ಅದರಲ್ಲಿ ಎಲ್ಲರೂ ಭಾಗಿಗಳಾಗಬೇಕು ಎಂಬುದೇ ನಾಯಕರ ಆಶಯವಾಗಿತ್ತು. ಕುವೆಂಪು ಅವರ ಅಪೇಕ್ಷೆಯಂತೆ 'ಕನ್ನಡ ಡಿಂಡಿಮ' ಮೊಳಗಬೇಕಾದರೆ 'ಕನ್ನಡ ಮನಸ್ಸು' ಎಚ್ಚೆತ್ತುಕೊಳ್ಳಬೇಕು. ಈ ನಿಟ್ಟಿನಲ್ಲಿ ಬರೀ ಸಾಹಿತಿಗಳು ಶಂಖ ಊದಿದರೆ ಸಾಲದು. ಕನ್ನಡ ಚಳವಳಿಗಾರರು ಮುಂದಾಗಬೇಕು. 'ಕನ್ನಡ ಮನಸ್ಸಿನ ಪತ್ರಿಕೆಗಳು' ಹುಟ್ಟಿಕೊಳ್ಳಬೇಕು. ಸಮೂಹ ಮಾಧ್ಯಮಗಳು ಬೆಂಬಲಕ್ಕೆ ನಿಲ್ಲಬೇಕು. ಆಡಳಿತದ ಅಧಿಕಾರಿಗಳು ಕನ್ನಡ ಎಂದರೆ ಮೂಗುಮುರಿಯುವುದನ್ನು ನಿಲ್ಲಿಸಬೇಕು. ಕನ್ನಡಪರವಾಗಿ ತಮ್ಮ ಧೋರಣೆಯನ್ನು ಬದಲಾಯಿಸಿಕೊಳ್ಳಬೇಕು. ಎಲ್ಲ ರಂಗಗಳಲ್ಲೂ ಕನ್ನಡ ಬಳಕೆಯಾಗಬೇಕು. ಬಳಕೆಯಾಗದ ಭಾಷೆ ಉಳಿಯುವುದಿಲ್ಲ ಎಂಬ ಸತ್ಯ ಭಾಷಾವಿಜ್ಞಾನಿಯಾದ ನಾಯಕರಿಗೆ ಗೊತ್ತಿತ್ತು. ಆದ್ದರಿಂದಲೇ ಅವರು ಭಾಷೆ ಬಳಸುವುದರ ಬಗ್ಗೆ ಒತ್ತಿ ಹೇಳಿದ್ದಾರೆ: "ಯಾವುದೇ ಭಾಷೆ ಬೆಳೆಯುವುದು ಬಳಕೆಯಲ್ಲಿದ್ದರೆ. ಅದರ ಬಳಕೆಗೆ ಆಸ್ಪದ ಕೊಡದೆ 'ಭಾಷೆ ಬೆಳೆಯುವ ವೇಗ ಸಾಲದು' ಎಂದು ಭಾಷಣ ಮಾಡುವುದು ಬುದ್ಧಿವಂತಿಕೆಯಲ್ಲ. ಜೀವನದ ಸರ್ವಕ್ಷೇತ್ರಗಳಲ್ಲಿಯೂ ಕನ್ನಡನಾಡಿನಲ್ಲಿ ಕನ್ನಡ ಬಳಕೆಗೆ ಬರಬೇಕು. ಹಾಗೆ ಬಂದಾಗಲೇ ಕನ್ನಡಕ್ಕೆ ಬೆಲೆ ಬರುತ್ತದೆ, ಶಕ್ತಿ

ದೊರೆಯುತ್ತದೆ. ಜನಜೀವನದ ಬಹುಭಾಗವನ್ನು ಆಕ್ರಮಿಸಿಕೊಂಡಿರುವುದು ಸರ್ಕಾರ. ಸರ್ಕಾರ ಕನ್ನಡವನ್ನು ಕೈಗೆ ಎತ್ತಿಕೊಳ್ಳಬೇಕು. ಅದಕ್ಕೆ ಚಾಲನೆ ಕೊಡಬೇಕು. ಮಂತ್ರಿಗಳು, ಅಧಿಕಾರಿಗಳು ಕನ್ನಡವನ್ನು ಬಳಸದೆ, ಅದರ ಬಳಕೆಗೆ ಆಸ್ಪದ ಕೊಡದೆ, ಕನ್ನಡದ ಬೆಳವಣಿಗೆಯ ವಿಷಯವಾಗಿ ಎಷ್ಟು ಮಾತನಾಡಿದರೂ ಪ್ರಯೋಜನವಿಲ್ಲ. ಸಾರ್ವಜನಿಕ ಜೀವನದಲ್ಲಿ ಬೇರೊಂದು ಭಾಷೆಗೆ ಗಣ್ಯಸ್ಥಾನ, ಮೊದಲ ಮಣೆ ಇರುವ ತನಕ ಎಷ್ಟೇ ಉಪಯೋಗವಿದ್ದರೂ ಕನ್ನಡದ ಕಡೆ ಯಾರೂ ಕಣ್ಣು ಹಾಯಿಸುವುದಿಲ್ಲ; ಬರಿಯ ಬಾಯಿಮಾತಾಗಿ ಶಿಕ್ಷಣ ಮಾಧ್ಯಮ ಯಶಸ್ವಿಯಾಗುವುದಿಲ್ಲ" –ಇವು ನಾಯಕರು ಕನ್ನಡದ ಉಳಿವಿನ ಬಗೆಗೆ, ರಕ್ಷಣೆಯ ಬಗೆಗೆ ಆಡಿರುವ ಮಾತುಗಳು.

ಜನ ತಮ್ಮ ಮಾತೃಭಾಷೆಗೆ ಕೊಡುವ ಗೌರವವನ್ನು ನಾಯಕರು ಯಾವಾಗಲೂ ಮೆಚ್ಚುತ್ತಾರೆ. ಕೊಡದೇ ಹೋದವರು ಎಷ್ಟೇ ದೊಡ್ಡವರಿರಲಿ, ಆತ್ಮೀಯರಿರಲಿ ಅವರ ಬಗೆಗೆ ವಿಷಾದ ವ್ಯಕ್ತಪಡಿಸುತ್ತಾರೆ. ಪಿ.ವಿ. ನರಸಿಂಹರಾವ್ ಅವರದು ತೆಲುಗು ಮಾತೃಭಾಷೆ. ಆದರೆ ಅವರು ಪ್ರಧಾನಿಯಾದಾಗ ಅವರು ಪ್ರಮಾಣವಚನ ಸ್ವೀಕರಿಸಿದ್ದು ಹಿಂದಿಯಲ್ಲಿ. ನರಸಿಂಹರಾಯರಿಗೆ ಆಪ್ತರಾಗಿದ್ದ ನಾಯಕರಿಗೆ ಇದರಿಂದ ತುಂಬ ಬೇಸರವಾಗುತ್ತದೆ. ಹಾಗೆಯೇ ಕನ್ನಡ ತಮ್ಮ ಮಾತೃಭಾಷೆಯಲ್ಲದಿದ್ದರೂ ಮೈಸೂರು ರಾಜ್ಯದ ರಾಜ್ಯಪಾಲರಾದಾಗ ಜಿ.ಎಸ್. ಪಾಠಕ್ ಅವರು ಕನ್ನಡ ಕಲಿಯಲು ತೊಡಗಿದ್ದಾರೆ ಎಂಬುದನ್ನು ತಿಳಿದ ನಾಯಕರು ಅಪಾರ ಹರ್ಷ ವ್ಯಕ್ತಪಡಿಸುತ್ತಾರೆ. ಅವರನ್ನು ಕುರಿತು "ಕನ್ನಡ ಮಾತೃಭಾಷೆಯಲ್ಲದ ಪಾಠಕರು ಕನ್ನಡಿಗರ ನಡುವೆ ಕನ್ನಡಿಗರಾಗಿದ್ದಾರೆ. ಕೆಲವು ದಿನಗಳ ಕೆಳಗೆ ಧಾರವಾಡದಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವದಲ್ಲಿ ಕುಲಪತಿಯಾಗಿ ಅವರು ಕಾರ್ಯಕ್ರಮಗಳನ್ನು ಕನ್ನಡದಲ್ಲಿಯೇ ನಡೆಸಿಕೊಟ್ಟಿದ್ದಾರೆ. ಮೊನ್ನೆ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ನಡೆದ ಅಧಿಕೃತ ಸಮಾರಂಭದಲ್ಲಿ ಕನ್ನಡದಲ್ಲಿಯೇ ಭಾಷಣ ಮಾಡಿ ಕನ್ನಡ ಜನತೆಯ ಪ್ರೇಮಾಧರಗಳಿಗೆ ಪಾತ್ರರಾಗಿದ್ದಾರೆ" ಎಂಬ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ. ಕನ್ನಡದ ಬಗೆಗೆ ಇತರರು ತಾಳುವ ಈ ಬಗೆಯ ನಿಲುವುಗಳು, ಒಲವುಗಳು ಮೊದಲು ನಾಯಕರ ಗಮನಕ್ಕೆ ಬರುತ್ತವೆ. ಅವರು ಅದಕ್ಕೆ ಪ್ರತಿಕ್ರಿಯಿಸುತ್ತಾರೆ, ಅಭಿನಂದಿಸುತ್ತಾರೆ. ಸ್ವತಃ ಹರ್ಷತುಂದಿಲರಾಗುತ್ತಾರೆ.

ನಾಯಕರು ಕನ್ನಡಿಗರಿಗೆ ಹೇಳುವ ಮಾರ್ಮಿಕ ಮಾತುಗಳಿವು: "ಕನ್ನಡ ನಾಡಿಗೆ ಕನ್ನಡವೇ ರಕ್ಷೆ; ಕನ್ನಡದಿಂದಲೇ ಮುಕ್ತಿ. ಶಿಕ್ಷಣ–ಆಡಳಿತಗಳಲ್ಲಿ ಕನ್ನಡವನ್ನು ಪ್ರಥಮ ಪ್ರಧಾನವನ್ನಾಗಿಸಿದರೆ ಯಾವ ದಾಳಿಗೂ ನಾವು ಅಂಜಬೇಕಾಗಿಲ್ಲ. ಆದರೆ ಹಿಂದೀ ಬಾಯಿ ತೆರೆದ ಕೇಂದ್ರದ ಭೂತ ಅಧಿಕಾರದ ಎಂಜಲಿಗೆ ಕೈಯೊಡ್ಡಿ ನಿಂತಿರುವ ನಮ್ಮ ಆಡಳಿತ ಪಕ್ಷ, ಅಸಹಾಯಕ ನಿಶ್ಶಕ್ತ ವಿರೋಧಪಕ್ಷ, ಅಪಾಯದ ಅರಿವಿಲ್ಲದೆ ನಿರ್ಲಕ್ಷ್ಯದಿಂದಿರುವ ಮೂಕ ಜನತೆ – ಇವುಗಳ ನಡುವೆ ಕನ್ನಡವನ್ನು ಕೇಳುವರಾರು?' ಅಪಾಯದ ಘಂಟೆಯೇನೋ ಬಾರಿಸುತ್ತಿದೆ. ಆದರೆ ಅದನ್ನು ಕೇಳಲು ಎಚ್ಚರವಿರಬೇಕು" –ನಾಯಕರಿಗಲ್ಲದೆ ಇನ್ನಾರಿಗೆ ಈ ಬಗೆಯ ಎಚ್ಚರಿಕೆ ನೀಡಲು ಸಾಧ್ಯ.

ನಮ್ಮ ಜನ ಕನ್ನಡವನ್ನು ಕಡೆಗಣಿಸಬಾರದು ಏಕೆಂದರೆ: "ಜನತೆಗೆ ಅವರ ಭಾಷೆ ಉಸಿರಾಡುವಷ್ಟೇ ಸ್ವಾಭಾವಿಕ, ಮಿಕ್ಕದ್ದೆಲ್ಲ ಕೃತಕ. ತಮ್ಮ ಭಾಷೆಯ ಬಗೆಗೆ ಇಂಥ ಕಳಕಳಿ ಇಲ್ಲದ ಜನ ಎಂದೂ ಮಹತ್ವವಾದುದನ್ನು ಅಷ್ಟಾಗಿ ಸಾಧಿಸರು. ಅರಿವು ಅಭಿವ್ಯಕ್ತಿಗಳೇ ಅಸಹಜ ಮಾಧ್ಯಮದ ಮೂಲಕ ನಡೆದಾಗ ಎಲ್ಲವೂ ಗಿಣಿಪಾಠವಾಗುತ್ತದೆ ಅಷ್ಟೆ." ಹೀಗೆ ಆಗುವುದಕ್ಕೆ "ಮೂಲಕಾರಣ, ಕನ್ನಡ ಜನ ತಮ್ಮ ಭಾಷೆಯನ್ನು ತೀವ್ರವಾಗಿ ಕೈಗೆ ಎತ್ತುಕೊಂಡಿಲ್ಲ. ಹೀಗಾಗಿರುವುದು ಕನ್ನಡಕ್ಕೆ ಶಿಕ್ಷಣದಲ್ಲಿ ಆಡಳಿತದಲ್ಲಿ ದೊರೆಯಬೇಕಾದ, ನ್ಯಾಯವಾದ ಸ್ಥಾನ ದೊರೆತಿಲ್ಲದಿರುವುದರಿಂದ. ಎಲ್ಲಿಯವರೆಗೆ ಕನ್ನಡ ನಮ್ಮ ಜನಜೀವನವನ್ನೆಲ್ಲ ಆಕ್ರಮಿಸಿಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ವಂಚನೆಯಿಂದ ನಾವು ಮುಕ್ತರಾಗುವಂತಿಲ್ಲ. ನಮಗಿರುವ ಕೋಟೆ ಈಗ ಕನ್ನಡವೊಂದೇ. ಅದನ್ನು ಬಲಪಡಿಸದೆ ಹೋದರೆ ಎಂದಿಗೂ ನಮಗೆ ಎರಡನೆ, ಮೂರನೆ ದರ್ಜೆ ಸ್ಥಾನ ಕಟ್ಟಿಟ್ಟದ್ದೆ" ಎನ್ನುವುದು ನಾಯಕರ ಆತಂಕದ ಕಳಕಳಿ.

ತಮಿಳರನ್ನು ಅನುಸರಿಸಿ 'ವಿಶ್ವಕನ್ನಡ' ಸಮ್ಮೇಳನ ನಡೆಸಿದ್ದು ಗೊತ್ತೇ ಇದೆ. ಆದರೆ ತಮಿಳರಂತೆ ವಿಶ್ವವ್ಯಾಪಿಯಾಗಿರದ ಕನ್ನಡಿಗರು 'ವಿಶ್ವಕನ್ನಡ'ದ ಬಗೆಗೆ ಮಾತಾಡುವುದನ್ನು ನಾಯಕರು ವಾಸ್ತವ ದೃಷ್ಟಿಯಿಂದ ನೋಡುತ್ತಾರೆ. ಕರ್ನಾಟಕದ ಹೊರಗೆ ಕನ್ನಡ ಪಡೆದುಕೊಳ್ಳಬೇಕಾದ ಸ್ಥಾನಮಾನದ ಬಗ್ಗೆ ತಮ್ಮ ಅನೇಕ ಲೇಖನಗಳಲ್ಲಿ ನಾಯಕರು ಚಿಂತಿಸಿದ್ದಾರೆ. 'ಕನ್ನಡ ಮರಾಠಿ ಸೇತುವೆ', 'ಕಾಶಿಯಲ್ಲಿ ಕನ್ನಡಪೀಠ', 'ದೆಹಲಿಯಲ್ಲಿ ಕನ್ನಡ', 'ನಾಡಿನ ಹೊರಗೆ ಕನ್ನಡ ಪೀಠಗಳು', 'ಆಯೋವಾದಲ್ಲಿ ಕನ್ನಡ', 'ಕಾಂಗರೂ ಖಂಡದಲ್ಲಿ ಕನ್ನಡ' ಈ ಮುಂತಾದವು ನಾಯಕರ ಮುಂದಾಲೋಚನೆಯ ಹೊಳಹಿನ ಲೇಖನಗಳು.

'ಕನ್ನಡ ವಿಶ್ವವಿದ್ಯಾನಿಲಯ'ದ ಸ್ಥಾಪನೆಯ ಸಂದರ್ಭದಲ್ಲಿ ನಾಯಕರು ಅದರ ಪರವಾಗಿರಲಿಲ್ಲ. ಕರ್ನಾಟಕದಲ್ಲಿ ಎಲ್ಲಕಡೆಯೂ ಕನ್ನಡಕ್ಕೆ ಮಾನ್ಯತೆ ದೊರಕಬೇಕಾಗಿರುವ ಅನಿವಾರ್ಯತೆ ಇರುವಾಗ, ಕನ್ನಡಕ್ಕೆ ಪ್ರತ್ಯೇಕವಾದ ವಿಶ್ವವಿದ್ಯಾಲಯ ಬೇಕೆ ಎಂಬುದು ಅವರ ಪ್ರಶ್ನೆಯಾಗಿತ್ತು. ಆದರೆ ವಿಶ್ವವಿದ್ಯಾನಿಲಯ ಸ್ಥಾಪನೆ ಆದ ಮೇಲೆ ಅದರ ಘಟಿಕೋತ್ಸವದಲ್ಲಿ ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ಸ್ಪಷ್ಟಪಡಿಸಿ, ಕನ್ನಡಪರವಾದ ಎಲ್ಲ ಕೆಲಸಗಳಿಗೆ ತಮ್ಮ ಬೆಂಬಲ ಇರುವುದಾಗಿ ಹೇಳಿ ಪ್ರೋತ್ಸಾಹಿಸಿದ್ದಾರೆ. ಇದು ನಾಯಕರ ಗುಣ. ಕನ್ನಡಕ್ಕೆ ಒಳಿತಾಗುವುದಾದರೆ ಅವರು ಯಾವ ಬಗೆಯ ಬದಲಾವಣೆಗೂ ಸಿದ್ಧ.

'ಗೋಕಾಕ್ ವರದಿ' ಕನ್ನಡನಾಡಿನಲ್ಲಿ ಒಂದು ಸಂಚಲನವನ್ನೇ ಉಂಟುಮಾಡಿತು. 'ಗೋಕಾಕ್ ಚಳವಳಿ' ಕನ್ನಡಿಗರ ಅಭಿಮಾನದ ಪ್ರತೀಕವೂ ಆಗಿತ್ತು. ಶಿಕ್ಷಣದಲ್ಲಿ ಸಂಸ್ಕೃತದ ಸ್ಥಾನ ಮತ್ತು ಶಿಕ್ಷಣ ಮಾಧ್ಯಮವಾಗಿ ಕನ್ನಡ ಕುರಿತಂತೆ ಪರ–ವಿರೋಧ ಅಭಿಪ್ರಾಯಗಳು ಮೂಡಿಬಂದವು. ಈ ಸಂದರ್ಭದಲ್ಲಿ ನಾಯಕರ ನಿಲುವು ಸ್ಪಷ್ಟವಾಗಿತ್ತು. 'ಗೋಕಾಕ್ ಸಮಿತಿ ವರದಿ', 'ಗೋಕಾಕ್ ವರದಿ ಮತ್ತು ಅಲ್ಪಸಂಖ್ಯಾತರು' ಮೊದಲಾದ ಅಂಕಣಗಳಲ್ಲಿ ಅದನ್ನು ವ್ಯಕ್ತಪಡಿಸಿದ್ದಾರೆ. ಪ್ರೌಢಶಾಲೆಯಲ್ಲಿ ಕನ್ನಡವನ್ನು ೧೫೦ ಅಂಕಗಳ ಏಕೈಕ ಪ್ರಥಮ ಭಾಷೆಯಾಗಿ ಘೋಷಿಸಬೇಕೆಂಬ ಬೇಡಿಕೆಯನ್ನು ಸರಕಾರ ತಳ್ಳಿಹಾಕಿ, ೧೨೦ ಅಂಕಗಳ ಕಡ್ಡಾಯ ಭಾಷೆ ಎಂದು ಘೋಷಿಸಿತು. ಇದನ್ನು ನಾಯಕರು ಸ್ವಾಗತಿಸಿದರು. ಚಳವಳಿಗಾರರು ವ್ಯಗ್ರರಾಗಿ ನಾಯಕರನ್ನು ಬಾಯಿಗೆ ಬಂದಂತೆ ನಿಂದಿಸಿದರು. ನಾಯಕರು ಅದಕ್ಕೆ ವ್ಯಥೆಪಡಲಿಲ್ಲ. ಅವರು ಒಂದೇ ಹೋರಾಟದಿಂದ ಕನ್ನಡದ ಎಲ್ಲ ಸಮಸ್ಯೆಗಳೂ ಬಗೆಹರಿಯುತ್ತವೆ ಎಂದುಕೊಂಡವರಲ್ಲ. ಇಷ್ಟಾದರೂ ಆದದ್ದಕ್ಕೆ ಸಮಾಧಾನಪಟ್ಟುಕೊಳ್ಳಬೇಕು ಎಂದು ಭಾವಿಸಿದ ಅವರು ಸಕಾರಾತ್ಮಕವಾಗಿ ನಡೆದುಕೊಂಡರು. ಅದನ್ನು ಮನವರಿಕೆ ಮಾಡಲು ಪ್ರಯತ್ನಿಸಿದರು. ಆದರೆ ಆಗ ಚಳವಳಿಯ ಕಾವು ತೀವ್ರವಾಗಿತ್ತು. ತಣ್ಣಗಾದ ಮೇಲೆ ವಸ್ತುಸ್ಥಿತಿಯ ಅರಿವು, ಕಾನೂನಿನ ತೊಡಕು, ಇತರರಿಗೆ ನಾಯಕರು ಮಾಡಿದ ಮುಂದಾಲೋಚನೆಯ ಪರಿಯನ್ನು ಅರ್ಥೈಸಿಕೊಳ್ಳಲು ನೆರವಾಯಿತು.

ಈ ಭಾಗದ ನಿರೂಪಣೆಗೆ ಆಕರ ಸಾಮಗ್ರಿಯನ್ನೊದಗಿಸಿದ 'ಹಾಮಾ ನಾಯಕರು ಮತ್ತು ಕನ್ನಡ' ಪಂಡಿತಾರಾಧ್ಯರು ಬರೆದ ಲೇಖನ.(ಹಾಮಾನಾ ಸಾಹಿತ್ಯಾವಲೋಕನ, ಪು. ೧೦೮–೧೧೬) ಲೇಖನದ ಮುಕ್ತಾಯ ಭಾಗದಲ್ಲಿ

ಅವರು ಆಡಿರುವ ಮಾತುಗಳು ಇಲ್ಲಿ ಉಲ್ಲೇಖಾರ್ಹ: "ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ವಿಶ್ವವಿದ್ಯಾನಿಲಯದ ಶಿಕ್ಷಣಮಂಡಲಿಗಳು, ಸಾಹಿತ್ಯ ಅಕಾಡೆಮಿ, ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿ ಮೊದಲಾದ ಕಡೆಗಳಲ್ಲಿ ತಮಗೆ ದೊರೆತ ಸಂದರ್ಭಗಳನ್ನೆಲ್ಲ ನಾಯಕರು ಕನ್ನಡವನ್ನು ಕಟ್ಟುವುದಕ್ಕೆ ಬಳಸಿದರೆನ್ನುವುದು ವಿಶೇಷವಾಗಿ ಗಮನಿಸಬೇಕಾದ ಸಂಗತಿ. ಕನ್ನಡವನ್ನು ಕಟ್ಟುವ ಬಗ್ಗೆ ಹಿರಿಯರಿಂದ ಪಡೆದ ಸಕಾರಾತ್ಮಕ ಪ್ರೇರಣೆಯನ್ನು ಅವರು ಇತರರಿಗೂ ಹರಡುತ್ತ ಹೋದರೆನ್ನುವುದು ಮುಖ್ಯವಾದ ಮಾತು. ಕನ್ನಡದ ಕಾರಣಕ್ಕೆ ತಮ್ಮನ್ನು ಮುಡಿಪಾಗಿ ತೊಡಗಿಸಿಕೊಂಡ ನಾಯಕರ ವಿಚಾರಗಳು ಕನ್ನಡವನ್ನು ಕಟ್ಟುವವರಿಗೆ ದಾರಿದೀಪಗಳಾಗಿವೆ."

ಒಟ್ಟಿನಲ್ಲಿ ನಾಯಕರದು ಕಟ್ಟಾ ಕನ್ನಡಿಗನೊಬ್ಬನ ಬದುಕು. ಕನ್ನಡ ಬೇರೆ ಅಲ್ಲ, ನಾಯಕರು ಬೇರೆಯಲ್ಲ. ನಿಮಿತ್ತಮಾತ್ರವಾಗಿ ಅವರು ಏನೆಲ್ಲ ಕೆಲಸ ಮಾಡಿರಬಹುದು, ಹುದ್ದೆ, ಅಧಿಕಾರಗಳನ್ನು ವಹಿಸಿಕೊಂಡಿರಬಹುದು, ಆಡಳಿತ ನಡೆಸಿರಬಹುದು. ಆದರೆ ಅಲ್ಲೆಲ್ಲ ಕನ್ನಡದ ದನಿ ನಿನದಿಸುತ್ತಿತ್ತು. ಆ ದನಿ ನಾಯಕರದಾಗಿರುತ್ತಿತ್ತು. ಭಾರತದಲ್ಲಿ ಮಾತ್ರವಲ್ಲ, ವಿಶ್ವದಾದ್ಯಂತ ಸ್ನೇಹ ಸಂಪಾದನೆ ಮಾಡಿದ್ದವರು ನಾಯಕರು. ಆ ಸ್ನೇಹ ಕನ್ನಡಕ್ಕೂ ದಕ್ಕಿತ್ತು. ಅಂದರೆ ನಾಯಕರ ಅಸ್ತಿತ್ವದಲ್ಲೇ ಕನ್ನಡವಿತ್ತು, ಅದು ಅವಿನಾಸಂಬಂಧಿಯಾಗಿತ್ತು.

# ಪರಾಮರ್ಶನ ಗ್ರಂಥಗಳು


೧. **ಹಾ.ಮಾ. ನಾಯಕ**

**'ಸಂಗ್ರಹ'**, ಸುರುಚಿ ಪ್ರಕಾಶನ, ಮೈಸೂರು, ೧೯೭೬

**'ಸಂಪದ'**, ಅಪರ್ಣಾ ಪ್ರಕಾಶನ, ಮೈಸೂರು, ೧೯೮೧

**'ಸೃಜನ'**, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ೧೯೮೧

**'ಅಪ್ಪಯ್ಯ'**, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ೧೯೮೪

**'ಕನ್ನಡವನ್ನು ಕಟ್ಟುವ ಕೆಲಸ'**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೭

**'ಸಪ್ತಕ'**, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೮೯

**'ಸಂಪಣ'**, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ೧೯೯೦

**'ಸಂಬಲ'**, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೦

**'ಸೊಡರು'**, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೯೧

**'ಸಿಂಚನ'**, ಸುವಿದ್ಯಾ ಪ್ರಕಾಶನ, ಬೆಂಗಳೂರು, ೧೯೯೧

**'ಸಂಭ್ರಮ'**, ಸುವಿದ್ಯಾ ಪ್ರಕಾಶನ, ಬೆಂಗಳೂರು, ೧೯೯೧

**'ಸಿವುಡು'**, ಶಾರದಾ ಮಂದಿರ, ಮೈಸೂರು, ೧೯೯೧

**'ಸ್ವಂತ'**, ಸುವಿದ್ಯಾ ಪ್ರಕಾಶನ, ಬೆಂಗಳೂರು, ೧೯೯೨

**'ಅರುವತ್ತರ ಆರಲು'**, ಸಂ. ೧, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು–೨, ೧೯೯೫

**'ಭಾರತಧರ್ಮ'**, ಸಂ. ೨, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು–೨, ೧೯೯೯

**'ಕನ್ನಡ ವ್ರತ'**, ಸಂ. ೩, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು–೨, ೨೦೦೩ (ನಿಧನಾನಂತರ)

೨. **ಮಂಜುನಾಥ ಬೇವಿನಕಟ್ಟಿ**

**'ಡಾ. ಹಾ.ಮಾ. ನಾಯಕ'**, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ ವಿದ್ಯಾರಣ್ಯ, ೧೯೯೬.

೩. **ಪದ್ಮಾಶೇಖರ್ – ಸೋಮಶೇಖರಗೌಡ (ಸಂ.)**
**'ನಮ್ಮ ನಾಯಕರು'**, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೮

೪. **ಸ.ಚಿ. ರಮೇಶ್ (ಸಂ)**
**'ಶಬ್ದಾಂಜಲಿ'**, ಅಂಶು ಪ್ರಕಾಶನ, ಹೊಸಪೇಟೆ, ೨೦೦೨

೫. **'ಮಾನ'**, ಹಾಮಾನಾ ಅಭಿನಂದನಾ ಸಮಿತಿ, ಮೈಸೂರು, ೧೯೯೨

೬. **ಪ್ರೊ. ಶಿವರಾಮು ಕಾಡನಕುಪ್ಪೆ (ಸಂ.)**
**'ಹಾಮಾನಾ ಸಾಹಿತ್ಯಾವಲೋಕನ'**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩

೭. **ಎಚ್.ಎಸ್. ಈಶ್ವರ**
**'ಹಾಮಾನಾ ನನ್ನ ದೊಡ್ಡಣ್ಣ'**, ಕರ್ನಾಟಕ ಸಂಘ, ಮಂಡ್ಯ, ೨೦೧೫

೮. **ಡಾ. ರಾಗೌ (ಸಂ.)**
**'ಡಾ. ಹಾಮಾನಾ ಕನ್ನಡಪರ ನಿಲುವುಗಳು'**, ಕರ್ನಾಟಕ ಸಂಘ, ಮಂಡ್ಯ, ೨೦೧೩

೯. **ಡಾ. ಸೋಮಶೇಖರಗೌಡ – ಡಾ. ಪದ್ಮಾಶೇಖರ್**
**'ಕನ್ನಡದ ಕಾರಣಿಕ ಹಾಮಾನಾ'**, ಕರ್ನಾಟಕ ಸಂಘ, ಮಂಡ್ಯ, ೨೦೧೨.

# ಅನುಬಂಧ

## ೧. ಹಾಮಾನಾ ಮಾಹಿತಿ

೧೯೩೧

| | | |
|---|---|---|
| ಜನನ | : | ಸೆಪ್ಟೆಂಬರ್ ೧೨ (ಸರ್ಕಾರಿ ದಾಖಲೆಗಳಲ್ಲಿ ಫೆಬ್ರವರಿ, ೫) : ನಾಲೂರು – ಹೊಸಮನೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. |
| ತಂದೆ | : | ಹಾರೋಗದ್ದೆ ಶ್ರೀನಿವಾಸ ನಾಯಕ |
| ತಾಯಿ | : | ಎನ್.ಡಿ. ರುಕ್ಮಿಣಿಯಮ್ಮ |

೧೯೪೭

ಲೋಯರ್ ಸೆಕೆಂಡರಿ (ಮೇಗರವಳ್ಳಿ ಮತ್ತು ತೀರ್ಥಹಳ್ಳಿ ಮಾಧ್ಯಮಿಕ ಶಾಲೆಗಳು)

೧೯೫೦

ಎಸ್.ಎಸ್.ಎಲ್.ಸಿ. (ತೀರ್ಥಹಳ್ಳಿ ಪ್ರೌಢಶಾಲೆ)
ಮೊದಲನೆಯ ಪುಸ್ತಕ 'ಬಾಳ್ನೋಟಗಳು' ಪ್ರಕಟಣೆ

೧೯೫೨

ಇಂಟರ್ ಮೀಡಿಯೆಟ್ (ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ)

೧೯೫೪

ಹೊನ್ನಶೆಟ್ಟಿ ಬಹುಮಾನ (ಮೈಸೂರು ವಿಶ್ವವಿದ್ಯಾನಿಲಯ)

೧೯೫೫

ಬಿ.ಎ. ಆನರ್ಸ್ ಪದವಿ (ಮೈಸೂರು ವಿಶ್ವವಿದ್ಯಾನಿಲಯ)
ಮೇ, ೧೦: ಬಿ.ಎಸ್. ಯಶೋಧರಮ್ಮ ಅವರೊಡನೆ ಮದುವೆ
ಜುಲೈ, ೮: ತುಮಕೂರಿನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯ ಆರಂಭ

೧೯೫೬

ಜುಲೈ ೧೭: ಮಗಳು ಕವಿತಾ ಜನನ

ಎಂ.ಎ. ಅಧ್ಯಯನಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿವೇತನ

೧೯೫೭

ಡೆಹರಾಡೂನಿನಲ್ಲಿ ಭಾಷಾಶಾಸ್ತ್ರದ ಬೇಸಿಗೆ ಶಾಲೆಯಲ್ಲಿ ಭಾಗವಹಿಸಿದ್ದು

೧೯೫೮

ಎಂ.ಎ. ಪದವಿ (ಕಲ್ಕತ ವಿಶ್ವವಿದ್ಯಾನಿಲಯ)
ಶಿವಮೊಗ್ಗ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಧ್ಯಾಪಕ
ಕಲ್ಕತ್ತ ವಿಶ್ವವಿದ್ಯಾನಿಲಯದ ಚಿನ್ನದ ಪದಕ – ಬಹುಮಾನ

೧೯೫೯

ಸೆಪ್ಟೆಂಬರ್, ೯: ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಭಾಷಾಶಾಸ್ತ್ರದ ರೀಡರ್
ಸೆಪ್ಟೆಂಬರ್, ೧೮: ಮಗ ರವೀಂದ್ರ ಜನನ
ಕೊಯಮತ್ತೂರಿನಲ್ಲಿ ಭಾಷಾಶಾಸ್ತ್ರದ ಬೇಸಿಗೆ ಶಾಲೆಯಲ್ಲಿ ಭಾಗವಹಿಸಿದ್ದು

೧೯೬೧

ಮಾನಸಗಂಗೋತ್ರಿ ಸ್ನಾತಕೋತ್ತರ ಕನ್ನಡ ವಿಭಾಗಕ್ಕೆ ವರ್ಗ

೧೯೬೨

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರ್ಕಾರದ ಗೃಹಖಾತೆಯ ವಿದ್ಯಾರ್ಥಿವೇತನ
ಫುಲ್‌ಬ್ರೈಟ್ ಪ್ರವಾಸ ವೇತನ, ಇಂಡಿಯಾನಾ ವಿಶ್ವವಿದ್ಯಾನಿಲಯಕ್ಕೆ ಪ್ರವೇಶ.

೧೯೬೩

ಇಂಡಿಯಾನಾ ವಿಶ್ವವಿದ್ಯಾನಿಲಯದ ಮೆಷೀನ್ ಟ್ರಾನ್ಸ್‌ಲೇಷನ್ ವಿಭಾಗದಲ್ಲಿ ಸಂಶೋಧನ ಸಹಾಯಕ

೧೯೬೪

ಪಿಎಚ್.ಡಿ. ಪದವಿ (ಇಂಡಿಯಾನಾ ವಿಶ್ವವಿದ್ಯಾನಿಲಯ)–

ಬ್ಲೂಮಿಂಗ್‌ಟನ್ನಿನಲ್ಲಿ ಭಾಷಾವಿಜ್ಞಾನದ ಬೇಸಿಗೆ ಶಾಲೆಯಲ್ಲಿ ಭಾಗವಹಿಸಿದ್ದು.

೧೯೬೫

ಫೆಬ್ರವರಿ, ೧೯: ಮಾನಸಗಂಗೋತ್ರಿಯಲ್ಲಿ ಭಾಷಾಶಾಸ್ತ್ರದ ರೀಡರ್

೧೯೬೬

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಭಾಷಾಶಾಸ್ತ್ರದ ಒಪ್ಪೊತ್ತಿನ ಉಪನ್ಯಾಸಕ

೧೯೬೭

ರುಮಾನಿಯಾದ ಬುಖಾರೆಸ್ಟಿನಲ್ಲಿ ನಡೆದ ಹತ್ತನೆಯ ಅಂತರ‍್ರಾಷ್ಟ್ರೀಯ ಭಾಷಾವಿಜ್ಞಾನಿಗಳ ಸಮ್ಮೇಳನದಲ್ಲಿ ಭಾರತದ ಒಬ್ಬ ಪ್ರತಿನಿಧಿ.

೧೯೬೮

ಜುಲೈ, ೧: ಕನ್ನಡ ಪ್ರಾಧ್ಯಾಪಕ

ಡಿಸೆಂಬರ್, ೪: ಕನ್ನಡ ಪ್ರಾಧ್ಯಾಪಕ ಹುದ್ದೆಯೊಂದಿಗೆ ಭಾಷಾಶಾಸ್ತ್ರ ಪ್ರಾಧ್ಯಾಪಕರಾಗಿಯೂ ಪರಿಗಣಿತ

೧೯೬೯

ನವಂಬರ್, ೧: ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ

ಕನ್ನಡ ವಿಶ್ವಕೋಶದ ಪ್ರಧಾನ ಸಂಪಾದಕ

ಅಖಿಲ ಕರ್ನಾಟಕ ಎರಡನೇ ಜಾನಪದ ಸಮ್ಮೇಳನದ ವಿಚಾರಗೋಷ್ಠಿ ಅಧ್ಯಕ್ಷ (ಮಂಗಳೂರು)

೧೯೭೦

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ (೯ ವರ್ಷ)

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರೀ ಸಮಿತಿ ಸದಸ್ಯ (೧೬ ವರ್ಷ)

ನರಸಿಂಹರಾಜಪುರದಲ್ಲಿ ಸಾರ್ವಜನಿಕ ಸನ್ಮಾನ

೧೯೭೧

ಮೈಸೂರು ವಿಶ್ವವಿದ್ಯಾನಿಲಯದ ಕಲಾ ಮಂಡಲದ ಡೀನ್

ಬೆಳಗಾವಿ ಜಿಲ್ಲಾ ಮೊದಲನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

೧೯೭೨

ಕಾಸರಗೋಡು ಕನ್ನಡಿಗರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

೧೯೭೩

ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯ (೧೫ ವರ್ಷ)
ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ
ನಿಡುಮಾಮಿಡಿ ಜಗದ್ಗುರುಗಳಿಂದ 'ಹೊಂಗನ್ನಡಿಗ' ಪ್ರಶಸ್ತಿ ಮತ್ತು ಚಿನ್ನದ ಪದಕ

೧೯೭೪

ಪೆನ್ಸಿಲ್‌ವೇನಿಯಾ ವಿಶ್ವವಿದ್ಯಾನಿಲಯದ ಸೆಂಟರ್ ಆಫ್ ಸೌತ್ ಏಷಿಯನ್ ಸ್ಟಡೀಸ್‌ನಲ್ಲಿ ಗೌರವ ಸಂದರ್ಶನ ವಿದ್ವಾಂಸ
ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿರಿಯ ಪ್ರಾಧ್ಯಾಪಕ
ಕರ್ನಾಟಕ ರಾಜ್ಯ ಪದವಿಪೂರ್ವ ಶಿಕ್ಷಣ ಮಂಡಳಿ ಸದಸ್ಯ (೩ ವರ್ಷ)
೪೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (ಮಂಡ್ಯ) ಜಾನಪದ ಗೋಷ್ಠಿಯ ಅಧ್ಯಕ್ಷ.

೧೯೭೫

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಆಯ್ಕೆ

೧೯೭೬

ಅಖಿಲ ಭಾರತ ಶರಚ್ಚಂದ್ರ ಶತಮಾನೋತ್ಸವ ಸಮಿತಿ ಸದಸ್ಯ
ಕಲ್ಕತ್ತೆಯ ಜಾನಪದ ಅಕಾಡೆಮಿಯ, ಜಾನಪದ ಅಧ್ಯಯನ ಕಾಲೇಜಿನ ಸಲಹಾ ಸಮಿತಿ ಸದಸ್ಯ

೧೯೭೭

ಭಾರತೀಯ ಜ್ಞಾನಪೀಠ ಕನ್ನಡ ಸಲಹಾ ಸಮಿತಿಯ ಸದಸ್ಯ –
ಸಂಚಾಲಕ ಬೆಂಗಳೂರು ವಿಶ್ವವಿದ್ಯಾನಿಲಯದ ಕಲಾಮಂಡಳಿಯ ಸದಸ್ಯ
ಕರ್ನಾಟಕ ವಿಶ್ವವಿದ್ಯಾಲಯದ ಕಲಾಮಂಡಳಿಯ ಸದಸ್ಯ

೧೯೭೮

ಕೇಂದ್ರ ಸಾಹಿತ್ಯ ಅಕಾಡೆಮಿ ಜನರಲ್ ಕೌನ್ಸಿಲ್ ಸದಸ್ಯ (೧೦ ವರ್ಷ)

ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯಕಾರೀ ಸಮಿತಿ ಸದಸ್ಯ (೧೦ ವರ್ಷ)
ವಿ.ವಿ. ಧನಸಹಾಯ ಆಯೋಗದ ಭಾಷಾಶಾಸ್ತ್ರ ಸಲಹಾ ಸಮಿತಿ ಸದಸ್ಯ
ನ್ಯಾಷನಲ್ ಬುಕ್ ಟ್ರಸ್ಟ್‌ನ ಕನ್ನಡ ಸಲಹಾ ಸಮಿತಿ ಸದಸ್ಯ (೮ ವರ್ಷ)
ನ್ಯಾಷನಲ್ ಬುಕ್ ಟ್ರಸ್ಟ್‌ನ ಟ್ರಸ್ಟಿ (೪ ವರ್ಷ)
ಲಿಯೋ ಟಾಲ್‌ಸ್ಟಾಯ್ ಅವರ ನೂರೈವತ್ತನೆಯ ಜನ್ಮದಿನ
ಸಮಾರಂಭಗಳ ರಾಷ್ಟ್ರೀಯ ಹಾಗೂ ರಾಜ್ಯ ಸಮಿತಿಗಳ ಸದಸ್ಯ.
ಮಾನವಶಾಸ್ತ್ರಗಳ ಹತ್ತನೇ ಅಂತಾರಾಷ್ಟ್ರೀಯ ಸಮ್ಮೇಳನದ ಅಂಗವಾದ
ಜನಪದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷ (ಕಲ್ಕತ್ತ)
ಕರ್ನಾಟಕ ವಿಶ್ವವಿದ್ಯಾಲಯದ ಸಂದರ್ಶನ ಪ್ರಾಧ್ಯಾಪಕರಾಗಿ ಆಹ್ವಾನ
ಮಧುರೈ ಕಾಮರಾಜ್ ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್
ಸದಸ್ಯ
ಅಖಿಲ ಕರ್ನಾಟಕ ಪ್ರಗತಿಪಂಥದ ಮೂರನೆಯ ಸಮ್ಮೇಳನದ ಅಧ್ಯಕ್ಷ
(ಮಹಾಲಿಂಗಪುರ)
೫೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (ನವದೆಹಲಿ)
ಸಾಹಿತ್ಯ ಗೋಷ್ಠಿಯ ಅಧ್ಯಕ್ಷ

೧೯೭೯

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ (೫ ವರ್ಷ)
ಹಿರಿಯೂರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

೧೯೮೦

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯ
(೧೨ ವರ್ಷ)
ಸೋವಿಯೆತ್ ರಷ್ಯಾಕ್ಕೆ ಭೇಟಿ
'ಸಲ್ಲಾಪ'ಕ್ಕೆ ೧೯೭೫ರ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ
ಮಹೋತ್ಸವ ಪ್ರಶಸ್ತಿ
ಕನ್ನಡ ಪಂಡಿತ ಪರೀಕ್ಷೆಗಳ ಪಠ್ಯಕ್ರಮ ಪರಿಷ್ಕಾರ ಸಮಿತಿ ಅಧ್ಯಕ್ಷ
ಚಿಕ್ಕಮಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸನ್ಮಾನ

೧೯೮೧

ವಿಶ್ವ ಕನ್ನಡ ಸಮ್ಮೇಳನ ಸಮಿತಿ ಸದಸ್ಯ
ಕರ್ನಾಟಕ ಜಾನಪದ – ಯಕ್ಷಗಾನ ಅಕಾಡೆಮಿ ಸದಸ್ಯ (೩ ವರ್ಷ)

೧೯೮೨

ಬ್ರಿಟಿಷ್ ಮ್ಯೂಜಿಯಂ ಆಹ್ವಾನದ ಮೇಲೆ, ಪ್ರಥಮ ಭಾರತೋತ್ಸವದಲ್ಲಿ ಭಾಗವಹಿಸಲು ಇಂಗ್ಲೆಂಡಿಗೆ ಹೋದದ್ದು.
ಮೂರನೇ ಹಿಂದೀ ವಿಶ್ವ ಸಮ್ಮೇಳನದ ರಾಷ್ಟ್ರೀಯ ಸಮಿತಿ ಸದಸ್ಯ
ಗೋಕಾಕ್ ವರದಿ ಜಾರಿಗೊಳಿಸುವ ಸಮಿತಿ ಸದಸ್ಯ
ಧರ್ಮಸ್ಥಳದ ಐವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ
ಕರ್ನಾಟಕ ರಾಜ್ಯ ಪ್ರಶಸ್ತಿ

೧೯೮೩

ವಿ.ವಿ. ಧನಸಹಾಯ ಆಯೋಗದ ರಾಷ್ಟ್ರೀಯ ಉಪನ್ಯಾಸಕರಾಗಿ ಆಯ್ಕೆ
ಮದರಾಸ್ ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯ

೧೯೮೪

ನವೆಂಬರ್, ೨: ಗುಲಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿ
ಭಾರತೀಯ ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ (೩ ವರ್ಷ)
ಪದವಿಪೂರ್ವ ಶಿಕ್ಷಣ ಮಂಡಳಿ ಅಧ್ಯಕ್ಷ
ಬಿ.ಡಿ. ಗೊಯೆಂಕಾ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ (೪ ವರ್ಷ)
ವಿ.ವಿ. ಧನಸಹಾಯ ಆಯೋಗದ ಭಾರತೀಯ ಭಾಷೆಗಳ ಸಲಹಾ ಸಮಿತಿ ಸದಸ್ಯ

೧೯೮೫

ಐವತ್ತೇಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (ಬೀದರ್)
ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
ಹೈದರಾಬಾದ್ ಹಿಂದೀ ಪ್ರಚಾರ ಸಭೆಯ ಸುವರ್ಣ ಮಹೋತ್ಸವ ಸನ್ಮಾನ

೧೯೮೬

ಸೆಪ್ಟೆಂಬರ್, ೧೦: ತಾತ್ವಿಕ ಕಾರಣಗಳಿಂದ ಕುಲಪತಿ ಹುದ್ದೆಗೆ ರಾಜೀನಾಮೆ
ಗರುತ್ಮಾನ್ – ಆಜ್ಞೇಯರ ಸಾಹಿತ್ಯ ಸಂಸ್ಥೆಯ ಸಲಹಾಕಾರ
ಕಾಮನ್‌ವೆಲ್ತ್ ವಿ.ವಿ. ಕುಲಪತಿಗಳ ಸಮ್ಮೇಳನದಲ್ಲಿ (ಪೆನಾಂಗ್ –

ಮಲೇಷಿಯಾ) ಭಾಗಿ
ಶಿವಮೊಗ್ಗೆಯಲ್ಲಿ ಸಾರ್ವಜನಿಕ ಸನ್ಮಾನ
ಶಿವಮೊಗ್ಗೆ ಕರ್ನಾಟಕ ಸಂಘದ ಸನ್ಮಾನ

೧೯೮೭

ಫೆಬ್ರವರಿ, ೧೬: ಕುಲಪತಿ ಹುದ್ದೆಗೆ ರಾಜೀನಾಮೆ ಸ್ವೀಕಾರ
ಕನ್ನಡ ಅಧ್ಯಯನ ಸಂಸ್ಥೆ (ಮೈಸೂರು ವಿ.ವಿ.)ಯಲ್ಲಿ ನಿರ್ದೇಶಕರೆಂದು ನೇಮಕ – ಈ ನೇಮಕದ ನಿರಾಕರಣ – ಕನ್ನಡ ಮತ್ತು ಭಾಷಾಶಾಸ್ತ್ರದ ಪ್ರಾಧ್ಯಾಪಕರೆಂದು ಮರುನೇಮಕ.
ಹದಿನಾಲ್ಕನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷ (ದಾವಣಗೆರೆ)
ಐ.ಬಿ.ಎಚ್. ಎಜುಕೇಷನ್ ಟ್ರಸ್ಟ್ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ
'ಗ್ರಂಥಲೋಕ' ವರ್ಷದ ಲೇಖಕ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ
ಎಂ.ಪಿ. ಬಿರ್ಲಾ ಸಂಸ್ಥೆಯ ವಿಶ್ವಕೋಶದ ಕನ್ನಡ ವಿಭಾಗದ ಸಂಯೋಜಕ

೧೯೮೮

ಪಂಪ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ
ಇಲಕಲ್ ಮಠಾಧೀಶರಿಂದ ಸನ್ಮಾನ
ಹುಬ್ಬಳ್ಳಿ – ಧಾರವಾಡ ನಗರಸಭೆಯ ರಾಜ್ಯೋತ್ಸವ ಸನ್ಮಾನ
ದ ಕರ್ನಾಟಕ ಯುನೈಟಡ್ ಅರ್ಬನ್ ಸಿಟಿಜನ್ಸ್ ಫೆಡರೇಷನ್ ಸನ್ಮಾನ

೧೯೮೯

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಉಪಾಧ್ಯಕ್ಷ
ಮೈಸೂರು ಜಿಲ್ಲಾ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ (ನಂಜನಗೂಡು)
'ಸಂಪ್ರತಿ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ
'ಸಂಪ್ರತಿ'ಗೆ ಐಬಿಎಚ್ ಎಜುಕೇಷನ್ ಟ್ರಸ್ಟ್ ಪ್ರಶಸ್ತಿ
'ಪ್ರಣಯ ಪದಾವಳಿ'ಗೆ ವರ್ಧಮಾನ ಪ್ರಶಸ್ತಿ

೧೯೯೦

ಕೊಡುಗ ಜಿಲ್ಲಾ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

(ಸೋಮವಾರಪೇಟೆ)
ಭಾರತೀಯ ಜೀವ ವಿಮಾ ನಿಗಮದ ದಕ್ಷಿಣ ಮಧ್ಯವಲಯದ ಸಲಹಾ ಸಮಿತಿ ಸದಸ್ಯ (೩ ವರ್ಷ)
ಮೊದಲನೆಯ ರಾಷ್ಟ್ರೀಯ ಪ್ರಾಕೃತ ಸಮ್ಮೇಳನದಲ್ಲಿ 'ಪ್ರಾಕೃತ-ಕರ್ನಾಟಕ ಪ್ರಭಾವ' ಗೋಷ್ಠಿ ಉದ್ಘಾಟನೆ (ಬೆಂಗಳೂರು)
ಏಳನೇ ದಿಲ್ಲಿ ಕನ್ನಡಿಗರ ಸಮ್ಮೇಳನ ಉದ್ಘಾಟನೆ (ದಿಲ್ಲಿ)
ಶಿವರಾಮ ಕಾರಂತ ಪ್ರತಿಷ್ಠಾನ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ

೧೯೯೧

ಮಧ್ಯ ಪ್ರದೇಶ ಸರ್ಕಾರದ ತುಲಸೀ ಸಮ್ಮಾನ್ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ
ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದ (ತಂಜಾವೂರು) ಸದಸ್ಯ
ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ (ಐಸಿ.ಸಿ.ಆರ್) ಸದಸ್ಯ
ಫೆಬ್ರವರಿ, ೫: ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತಿ
ಬಳ್ಳಾರಿ ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ (ಸಂಡೂರು)
ಗುಲಬರ್ಗಾದಲ್ಲಿ ನಾಗರಿಕ ಸನ್ಮಾನ
ಕನ್ನಡ ಸಾಹಿತ್ಯ ಪರಿಷತ್ತಿನ ಅಮೃತ ಮಹೋತ್ಸವ ಸನ್ಮಾನ
ತುರುವೇಕೆರೆಯಲ್ಲಿ ಸಾರ್ವಜನಿಕ ಸನ್ಮಾನ

೧೯೯೨

ಕೋಲಾರ ಜಿಲ್ಲಾ ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ (ಚಿಕ್ಕಬಳ್ಳಾಪುರ)
ರಾಯಚೂರು ಜಿಲ್ಲಾ ಎರಡನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ (ರಾಯಚೂರು)
ಸಾಹಿತ್ಯ ಅಕಾಡೆಮಿಯ ಪ್ರಾಚೀನ ಭಾರತೀಯ ಸಾಹಿತ್ಯ ಯೋಜನೆಯ ಮುಖ್ಯ ಸಂಪಾದಕ
ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ
ಅಖಿಲ ಭಾರತ ದ್ರಾವಿಡ ಭಾಷಾವಿಜ್ಞಾನಿಗಳ ಸಮ್ಮೇಳನದ ಅಧ್ಯಕ್ಷ

(ತಿರುವನಂತಪುರ)

ದೇಶದ ಎಂಟು ಗಣ್ಯ ಸಾಹಿತಿಗಳಲ್ಲಿ ಒಬ್ಬರಾಗಿ ಪರಿಗಣಿಸಲ್ಪಟ್ಟು ಕೇಂದ್ರ ಸಾಹಿತ್ಯ ಅಕಾಡೆಮಿ ಜನರಲ್ ಕೌನ್ಸಿಲ್ಲಿಗೆ (೧೯೯೩–೯೮) ಸದಸ್ಯರಾಗಿ ಆಯ್ಕೆ

ಅಭಿನಂದನ ಗ್ರಂಥ 'ಮಾನ' ಸಮರ್ಪಣೆ (ಮೇ ೨೩, ೧೯೯೨)

೨೦೦೦

ನವೆಂಬರ್, ೧೦: ಇಹದ ಬದುಕಿಗೆ ವಿದಾಯ.

**೨. ಹಾಮಾ ನಾಯಕರ ಕೃತಿಗಳು**

**೧. ಕಥೆ, ಚಿತ್ರ, ಪ್ರಬಂಧ**

೧) ಬಾಳ್ನೋಟಗಳು : ಉಷಾ ಸಾಹಿತ್ಯ ಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು, ೧೯೫೦.

೨) ನಮ್ಮ ಮನೆಯ ದೀಪ : ಗೀತಾ ಬುಕ್ ಹೌಸ್, ಕೆ.ಆರ್. ಸರ್ಕಲ್, ಮೈಸೂರು, ೧೯೫೬.

೩) ಹಾವು ಮತ್ತು ಹೆಣ್ಣು : ಉಷಾ ಸಾಹಿತ್ಯ ಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು, ೧೯೬೦.

**೨. ಜೀವನಚರಿತ್ರೆ**

೧) ರವೀಂದ್ರನಾಥ್ ಠಾಕೂರ್ : ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು, ೧೯೬೦.

**೩. ಮಕ್ಕಳ ಸಾಹಿತ್ಯ**

೧) ಮಹಮ್ಮದ್ ಪೈಗಂಬರ್ : ಶ್ರೀ ಲಕ್ಷ್ಮೀ ಬುಕ್‌ಹೌಸ್, ರಾಮಯ್ಯರ್ ರಸ್ತೆ, ಮೈಸೂರು, ೧೯೫೨.

೨) ಗುರುದೇವ ರವೀಂದ್ರರು : ಶ್ರೀ ಲಕ್ಷ್ಮೀ ಬುಕ್‌ಹೌಸ್, ರಾಮಯ್ಯರ್ ರಸ್ತೆ, ಮೈಸೂರು, ೧೯೬೧.

೩) ಅಕ್ಕಮಹಾದೇವಿ : ಭಾರತ ಭಾರತಿ ಪುಸ್ತಕ ಸಂಪದ, ಬೆಂಗಳೂರು, ೧೯೭೫.

೪. **ವಿಚಾರ, ವಿಮರ್ಶೆ**

೧) ಸಂಕೀರ್ಣ : ಸುರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು, ೧೯೬೬.

೨) ಸಮೀಕ್ಷೆ : ಗೀತಾ ಬುಕ್‌ಹೌಸ್, ಕೆ.ಆರ್. ಸರ್ಕಲ್, ಮೈಸೂರು, ೧೯೬೭.

೩) ಸಂಗ್ರಹ : ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು, ೧೯೬೯.

೪) ಸಂವಾದ : ಉಷಾ ಸಾಹಿತ್ಯ ಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು, ೧೯೭೨.

೫) ಸಂದರ್ಭ : ಉಷಾ ಸಾಹಿತ್ಯ ಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು, ೧೯೭೮.

೬) ಸಪ್ತಕ : ಕಾರ್ಯಾಲಯ, ಮೈಸೂರು, ೧೯೭೯.

೭) ಸ್ತವನ : ಮಿತ್ರ ಪ್ರಕಾಶನ, ೨೪, ಸರಸ್ವತೀಪುರಂ, ಹೊಸ ಬಡಾವಣೆ, ಮೈಸೂರು, ೧೯೮೦.

೮) ಬೆಳ್ಳಿ ಕರ್ನಾಟಕ : ಗೋಧೂಳಿ, ಜಯಲಕ್ಷ್ಮಿಪುರಂ, ಮೈಸೂರು, ೧೯೮೧.

೯) ಸಿಂಗಾರ : ಉಷಾ ಸಾಹಿತ್ಯ ಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು, ೧೯೮೧.

೧೦) ಸೃಜನ : ಗೀತಾ ಬುಕ್‌ಹೌಸ್, ಕೆ.ಆರ್. ಸರ್ಕಲ್, ಮೈಸೂರು, ೧೯೮೧.

೧೧) ಸ್ಮರಣ : ಮಿತ್ರ ಪ್ರಕಾಶನ, ೨೪, ಸರಸ್ವತೀಪುರಂ, ಹೊಸ ಬಡಾವಣೆ, ಮೈಸೂರು, ೧೯೮೧.

೧೨) ಕನ್ನಡವನ್ನು ಕಟ್ಟುವ ಕೆಲಸ : ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೭.

೧೩) ಜಾನಪದ ಸ್ವರೂಪ : ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೦.

೧೪) ಸಿವುಡು : ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು, ೧೯೯೧.

೧೫) ಸಂಭ್ರಮ : ಸುವಿದ್ಯಾ ಪ್ರಕಾಶನ, ೭, ಸರ್ವೇಯರ್ ರಸ್ತೆ, ಬಸವನಗುಡಿ, ಬೆಂಗಳೂರು, ೧೯೯೧.

೧೬) ಸೊಡರು : ಕಾವ್ಯಾಲಯ, ಜಯನಗರ, ಮೈಸೂರು, ೧೯೯೧.

೧೭) ಸಿಂಚನ : ಸುವಿದ್ಯಾ ಪ್ರಕಾಶನ, ೭, ಸರ್ವೇಯರ್ ರಸ್ತೆ, ಬಸವನಗುಡಿ, ಬೆಂಗಳೂರು, ೧೯೯೧.

೧೮) ಕನ್ನಡ ಮನಸ್ಸು : ಮಿಂಚಿನ ಬಳ್ಳಿ ಗ್ರಂಥಮಾಲೆ, ಹುಬ್ಬಳ್ಳಿ, ೧೯೯೧.

**೫. ಅಂಕಣ, ಆಕಾಶವಾಣಿ ಬರಹಗಳು**

೧) ಸಾಹಿತ್ಯ ಸಲ್ಲಾಪ : ಸುರುಚಿ ಪ್ರಕಾಶನ, ಮೈಸೂರು, ೧೯೭೦

೨) ಸಲ್ಲಾಪ : ಸುರುಚಿ ಪ್ರಕಾಶನ, ಮೈಸೂರು, ೧೯೭೨

೩) ಸ್ಪಂದನ : ಸುರುಚಿ ಪ್ರಕಾಶನ, ಮೈಸೂರು, ೧೯೭೨

೪) ಸಂಪುಟ : ಅಪರ್ಣಾ ಪ್ರಕಾಶನ, ಮೈಸೂರು, ೧೯೮೦

೫) ಸಂಪದ : ಅಪರ್ಣಾ ಪ್ರಕಾಶನ, ಮೈಸೂರು, ೧೯೮೧

೬) ಸಂಪರ್ಕ : ಮಿತ್ರ ಪ್ರಕಾಶನ, ಮೈಸೂರು, ೧೯೮೨

೭) ಸಮೂಹ : ಮಿತ್ರ ಪ್ರಕಾಶನ, ಮೈಸೂರು, ೧೯೮೨

೮) ಸಂವಹನ : ಮಿತ್ರ ಪ್ರಕಾಶನ, ಮೈಸೂರು, ೧೯೮೩

೯) ಸಾಂಪ್ರತ : ಮಿತ್ರ ಪ್ರಕಾಶನ, ಮೈಸೂರು, ೧೯೮೩

೧೦) ಗ್ರಂಥಲೋಕದ ಸುತ್ತಮುತ್ತ : ಶಾರದಾ ಮಂದಿರ, ಮೈಸೂರು, ೧೯೮೪

೧೧) ಸೂಲಂಗಿ : ಗೀತಾ ಬುಕ್ ಹೌಸ್, ಮೈಸೂರು, ೧೯೮೫

೧೨) ಸಂಗತಿ : ಗೀತಾ ಬುಕ್ ಹೌಸ್, ಮೈಸೂರು, ೧೯೮೭

೧೩) ಸಂಪ್ರತಿ : ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೮

೧೪) ಸಂಬಲ : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೦

೧೫) ಸಂಪಣ : ಗೀತಾ ಬುಕ್ ಹೌಸ್, ಮೈಸೂರು, ೧೯೯೦

೧೬) ಸಂಪ್ರತಿ ೨ : ಗೀತಾ ಬುಕ್ ಹೌಸ್, ಮೈಸೂರು, ೧೯೯೧

೧೭) ಸಂಪ್ರತಿ ೩ : ಗೀತಾ ಬುಕ್ ಹೌಸ್, ಮೈಸೂರು, ೧೯೯೧

೧೮) ಅರುವತ್ತರ ಆರಲು: ಸಂಪುಟ–೧ : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೫

೧೯) ಭಾರತಧರ್ಮ, ಸಂಪುಟ–೨ : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೯

೨೦) ಕನ್ನಡವ್ರತ, ಸಂಪುಟ–೩ : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೦೩

**೬. ಅನುವಾದ**

೧) ಶಾಂತಿಸ್ವರೂಪ ಭಾಟ್ನಾಗರ್ : ಕೆ.ವಿ. ಶ್ರೀನಾಥ್, ಆಹಾರ ಸಂಶೋಧನಾ ಕೇಂದ್ರ, ಮೈಸೂರು, ೧೯೫೪.

೨) ಸುನೇರಿ : ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೬

೩) ಪ್ರಣಯ ಪದಾವಳಿ : ತ.ವೆಂ. ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು, ೧೯೯೪

**೭. ಸಂಪಾದನ ವಿಭಾಗ**

೧) ನಿಸರ್ಗದಡಿಯಲ್ಲಿ : ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೫೧

೨) ರೂಪಾರಾಧಕ : ಉಷಾ ಸಾಹಿತ್ಯಮಾಲೆ, ಮೈಸೂರು, ೧೯೫೩

೩) ದೇಜಗೌ : ವ್ಯಕ್ತಿ ಮತ್ತು ಸಾಹಿತ್ಯ : ದೇಜಗೌ ಗೆಳೆಯರ ಬಳಗ, ಮೈಸೂರು, ೧೯೬೯

೪) ಗಳಗನಾಥ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೦

೫) ಮುದ್ದಣ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦

೬) ಮುಮ್ಮಡಿ ಕೃಷ್ಣರಾಜ ಒಡೆಯರು : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦

೭) ವಿಜ್ಞಾನ ನಿರ್ಮಾಣ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೧

೮) ಗೊರೂರು : ಗೌರವ ಗ್ರಂಥ, ಮೈಸೂರು, ೧೯೭೩

೯) ಚಿನ್ನದ ಗರಿ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೪

೧೦) ಸಿದ್ಧಲಿಂಗ ಶಿವಯೋಗಿ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪

೧೧) ಶ್ರೀನಿವಾಸ ಸಾಹಿತ್ಯ : ಮಾಸ್ತಿ ಸನ್ಮಾನ ಸಮಿತಿ ಪರವಾಗಿ ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೭೪

೧೨) ಬಸವ ಪರುಷ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫

೧೩) ಬಿಡುಗಡೆ ಬೆಳ್ಳಿ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫

೧೪) ಶಾಸ್ತ್ರ ಸಾಹಿತ್ಯ ನಿರ್ಮಾಣ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫

೧೫) ಪ್ರಗತಿಪಥ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೬

೧೬) ಕರ್ನಾಟಕಕ್ಕೆ ಶುಭವಾಗಲಿ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೬

೧೭) ಸರ್ವಜ್ಞ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೬

೧೮) ಕನ್ನಡ ಡಿಂಡಿಮ : ಸುರುಚಿ ಪ್ರಕಾಶನ, ಮೈಸೂರು, ೧೯೭೭

೧೯) ಶರತ್‌ಚಂದ್ರ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೮

೨೦) ಕಾವ್ಯನವರಾತ್ರಿ : ದಸರಾ ಮಹೋತ್ಸವ ಸಮಿತಿ, ಮೈಸೂರು, ೧೯೮೦

೨೧) ಕಾವ್ಯೋತ್ಸವ : ದಸರಾ ಮಹೋತ್ಸವ ಸಮಿತಿ, ಮೈಸೂರು, ೧೯೮೧

೨೨) ಕಾವ್ಯ ಕಾರಂಜಿ : ದಸರಾ ಮಹೋತ್ಸವ ಸಮಿತಿ, ಮೈಸೂರು, ೧೯೮೨

೨೩) ಟಾಲ್‌ಸ್ಟಾಯ್ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೨

೨೪) ಆಲೂರು ವೆಂಕಟರಾಯರು : ಮೈಸೂರು, ೧೯೮೩

೨೫) ಕಾವ್ಯದೀಪ : ದಸರಾ ಮಹೋತ್ಸವ ಸಮಿತಿ, ಮೈಸೂರು, ೧೯೮೩

೨೬) ಗೋವಿಂದ ಪೈ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೩

೨೭) ದಾರ್ಶನಿಕ ಕಾವ್ಯಮೀಮಾಂಸೆ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೩

೨೮) ಶ್ರೀ ಸಾಹಿತ್ಯ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೩

೨೯) ಹಕ್ಕಿಯ ಪಯಣ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೩

೩೦) ಅಪ್ಪಯ್ಯ : ಸ್ವಸಂಪಾದಿತ, ಮೈಸೂರು, ೧೯೮೪

೩೧) ಶ್ರೀವಾಣಿ : ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೪

೩೨) ಕಾವ್ಯಮೇಳ : ದಸರಾ ಮಹೋತ್ಸವ ಸಮಿತಿ, ಮೈಸೂರು, ೧೯೮೪

೩೩) ಡಿ.ವಿ.ಜಿ. ಕೃತಿಶ್ರೇಣಿ ಸಂಪುಟ: ವಿಚಾರ, ವಿಮರ್ಶೆ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೭

೩೪) ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೩೫) ಡಿ.ವಿ.ಜಿ. ಕೃತಿಶ್ರೇಣಿ: ಸಂಪುಟ–೨ : ಜೀವನಧರ್ಮಯೋಗ; ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೦

೩೬) ವೆಂಕಣ್ಣಯ್ಯ ಕೆಲವು ಪ್ರಸಂಗಗಳು : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೧

**೮. ಇತರರೊಡನೆ ಸಂಪಾದಿತ**

೧) ಬಾಗಿನ : ಮಹಾರಾಜ ಕಾಲೇಜ್, ಮೈಸೂರು, ೧೯೫೪

೨) ಭಾಸ್ಕರ ಕವಿಯ ಜೀವಂಧರ ಚರಿತೆಯ ಸಂಗ್ರಹ : ನರೇಶ್ ಆ್ಯಂಡ್ ಕಂಪನಿ(ಎ.ಮು.), ಬೆಂಗಳೂರು, ೧೯೬೩

೩) ಪ್ರಬುದ್ಧ ಕರ್ನಾಟಕ ಚಿನ್ನದ ಸಂಚಿಕೆ (ವಿಜ್ಞಾನ ವಿಭಾಗ) : ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು, ೧೯೬೯

೪) ಪ್ರಬುದ್ಧ ಕರ್ನಾಟಕ ಚಿನ್ನದ ಸಂಚಿಕೆ (ಸಾಹಿತ್ಯ ಸಂಪುಟ) : ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು, ೧೯೬೯

೫) ವಿನಾಯಕ ವಾಙ್ಮಯ : ಸುರುಚಿ ಪ್ರಕಾಶನ, ಮೈಸೂರು, ೧೯೬೯

೬) ಎ.ಆರ್.ಕೃ. ಜೀವನ ಸಾಧನೆ : ಪ್ರಸಾರಾಂಗ, ಮೈಸೂರು, ೧೯೭೧

೭) ಸುವರ್ಣ ಸಂಪುಟ : ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು, ೧೯೮೦

೮) ಭಾರತೀಯ ಕವಿತಾಯೇಂ : ಭಾರತೀಯ ಜ್ಞಾನಪೀಠ, ನವದೆಹಲಿ, ೧೯೮೩

೯) ಸ್ವಸ್ತಿ : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೮೩

೧೦) ಭಾರತೀಯ ಕವಿತಾಯೇಂ : ಭಾರತೀಯ ಜ್ಞಾನಪೀಠ, ನವದೆಹಲಿ, ೧೯೮೪

೧೧) ರತ್ನಸಂಪುಟ : ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು, ೧೯೮೫

೧೨) ಹೊಸ ಸಂವೇದನೆಯ ನಾಟಕಗಳು : ಮೈಸೂರು, ೧೯೮೬

**೯. ಪಠ್ಯಪುಸ್ತಕಗಳ ವಿಭಾಗ**

೧) ಸಾಹಿತ್ಯ ಸುಗ್ಗಿ : ವಿದ್ಯಾ ಇಲಾಖೆ, (ವಿದ್ಯಾ ಸಂಶೋಧನ ಶಾಖೆ), ಮೈಸೂರು, ೧೯೬೯

೨) ಕನ್ನಡ ಭಾರತಿ ೬ : ಕರ್ನಾಟಕ ಸರ್ಕಾರದ ಪಠ್ಯಪುಸ್ತಕಗಳ ಇಲಾಖೆ, ೧೯೭೦

೩) ಕಾವ್ಯಸಂಚಯ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೧

೪) ಕಾವ್ಯವಿಲಾಸ : ಪ್ರಿ ಯೂನಿವರ್ಸಿಟಿ ಶಿಕ್ಷಣ ಮಂಡಳಿಗಾಗಿ, ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು, ೧೯೭೨

೫) ಗದ್ಯಪದ್ಯ ಸಂಗಮ : ಪ್ರಿ ಯೂನಿವರ್ಸಿಟಿ ಶಿಕ್ಷಣ ಮಂಡಳಿಗಾಗಿ, ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು, ೧೯೭೨

೬) ಕಾವ್ಯಸಂಚಯ–೨ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೮

೭) ಕಾವ್ಯಸಂಚಯ–೩ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೩

೮) ಗದ್ಯವಿಹಾರ ೧ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦

೯) ಗದ್ಯವಿಹಾರ ೨ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೨

೧೦) ಗದ್ಯವಿಹಾರ ೩ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೩

೧೧) ಗದ್ಯವಿಹಾರ ೪ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೧೨) ವಿಮರ್ಶೆಯ ಮಾರ್ಗ ೧ : ಗದ್ಯವಿಹಾರ ೧ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪

೧೩) ಸಾಹಿತ್ಯ ಸಂಪುಟ : ಸರ್ಕಾರದ ಪಠ್ಯಪುಸ್ತಕಗಳ ಇಲಾಖೆ, ಮೈಸೂರು, ೧೯೭೩

೧೪) ಆಧುನಿಕ ಕನ್ನಡ ಬರಹಗಾರರು : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೩

೧೫) ಕಚೇರಿ ಕೈಪಿಡಿ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೪

೧೬) ಕನ್ನಡ ಗ್ರಂಥಸೂಚಿ ೨ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪

೧೭) ಕನ್ನಡ ಗ್ರಂಥಸೂಚಿ ೩ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪

೧೮) ಕನ್ನಡ ಗ್ರಂಥಸೂಚಿ ೪ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪

೧೯) ಕನ್ನಡ ಗ್ರಂಥಸೂಚಿ ೫ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯

೨೦) ಕನ್ನಡ ಗ್ರಂಥಸೂಚಿ ೬ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯

೨೧) ಕನ್ನಡ ಗ್ರಂಥಸೂಚಿ ೭ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೨೨) ಕನ್ನಡ ಗ್ರಂಥಸೂಚಿ ೮ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯–೭೧

೨೩) ಕನ್ನಡ ಗ್ರಂಥಸೂಚಿ ೯ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೨–೭೩

೨೪) ಕನ್ನಡ ಗ್ರಂಥಸೂಚಿ ೧೦ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪–೭೬

೨೫) ಕನ್ನಡ ಗ್ರಂಥಸೂಚಿ ೧೧ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೭–೮೦

೨೬) ಕನ್ನಡ ಜಾನಪದ ಗ್ರಂಥಸೂಚಿ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು

೨೭) ಕನ್ನಡ ರತ್ನಕೋಶ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

೨೮) ಗೋಕಾಕ ಗ್ರಂಥಾವಳಿ : ಸುರುಚಿ ಪ್ರಕಾಶನ, ಮೈಸೂರು, ೧೯೮೦

೨೯) ಮಾಸ್ತಿಯವರ ಪುಸ್ತಕಗಳು : ಬೆಂಗಳೂರು ವಿ.ವಿ., ಬೆಂಗಳೂರು, ೧೯೮೩

೩೦) ಭಾರತೀಯ ಕವಿತಾಯೇ : ಭಾರತೀಯ ಜ್ಞಾನಪೀಠ, ೧೮, ಇನ್ಸ್‌ಟಿಟ್ಯೂಷನ್ ಏರಿಯಾ, ೧೯೮೬

೩೧) ಕಾದಂಬರಿ ಲೋಕ : ಗೀತಾ ಬುಕ್ ಹೌಸ್, ಮೈಸೂರು, ೧೯೯೦


**10. In English**


1) Kannada : Literary and Colloquial - A Study of two styles, Rao and Raghavan, Prince of Wales Road, 1967.

2) Epic in Indian Literature (Ed.) 1985, Mysore, Institute of Kannada Studies, University of Mysore, Manasagangotri, Mysore, 1971.

3) Gandhiji in Indian Literature (Ed.) Institute of Kannada Studies, University of Mysore, 1972.

4) Impact of Marxism on Indian life and literature (Ed.), Institute of Kannada Studies, University of Mysore, Mysore, 1972.

5) South Indian Studies (Ed.) Mysore, Geetha Book House, K.R. Circle.